
ಕರ್ನಾಟಕತ್ವ
ಸಮಾಜೋ ಆರ್ಥಿಕ ತಳಹದಿ

ಡಾ. ಬಂಜಗೆರೆ ಜಯಪ್ರಕಾಶ್



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಕರ್ನಾಟಕತ್ವ

ಸಮಾಜೋ ಆರ್ಥಿಕ ತಳಹದಿ

ಡಾ. ಬಂಜಗೆರೆ ಜಯಪ್ರಕಾಶ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

KARNATAKATVA **(SAMAJO ARTHIKA TALAHADI)**
by : **Dr. Banjagere Jayaprakash**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 186 Price : Rs. **55 =00 : 2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ಐವತ್ತೈದು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಪುಂಡಲೀಕ ಹಾಲಂಬಿ
ಡಾ. ಎಚ್.ಜಯಮ್ಮ ಕರಿಯಣ್ಣ
ಡಾ. ಮಧು ವೆಂಕಾರೆಡ್ಡಿ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಡಾ. ಕಮಲಾ ಹಂಪನಾ

ಸಮ್ಮೇಳನಾಧ್ಯಕ್ಷರು
೭೧ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕನ ಮಾತು

ಕರ್ನಾಟಕತ್ವ ಎಂಬುದು ಮುಖ್ಯವಾಗಿ ಒಂದು ಮನೋಭೂಮಿಕೆ. ಅದಕ್ಕೆ ಐತಿಹಾಸಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳಿವೆ.

ಒಂದು ಭಾಷಿಕ ಸಮುದಾಯದ ಸಾಂಸ್ಕೃತಿಕ ಸಂವೇದನೆ ಒಂದು ರಾಜಕೀಯ ಅಸ್ಮಿತೆಯಾಗಿ ಗುರುತಿಸಲ್ಪಡಬೇಕೆಂಬ ಹಂಬಲ ಹಾಗೂ ಹಾಗೆ ಒಂದು ಆಡಳಿತಾತ್ಮಕ ಘಟಕವಾಗಿ ರೂಪುಗೊಂಡು ಮುನ್ನಡೆಯುವ ಅಭೀಪ್ಸೆ - ಇವೇ ಕರ್ನಾಟಕತ್ವದ ಜೀವಾಳ.

ಕನ್ನಡ ಭಾಷಿಕ ಸಮುದಾಯ ಕರ್ನಾಟಕದ ಇತರೆ ಜನ ಸಮುದಾಯಗಳ ಜೊತೆ ಸೇರಿ ಕ್ರಿ.ಶ. ಒಂದರಿಂದ ಹಿಡಿದು ಈ ಇಪ್ಪತ್ತನೇ ಶತಮಾನದ ಆದಿಯವರೆಗೆ ತನ್ನ 'ಕರ್ನಾಟಕತ್ವ'ವನ್ನು ರೂಢಿಸಿಕೊಳ್ಳುವಲ್ಲಿ ಏನೇನು ಸಮಾಜೋ ಆರ್ಥಿಕ ಪ್ರೇರಣೆಗಳು ಹಿನ್ನೆಲೆಯೊದಗಿಸಿವೆ ಎಂಬುದನ್ನು ಈ ಹತ್ತು ಅಧ್ಯಾಯಗಳಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸಲಾಗಿದೆ.

ಈ ಕೃತಿಯನ್ನು ಪ್ರಕಟಿಸಲು ಮುಂದಾದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರೂ, ನಾಡಿನ ಹಿರಿಯ ಸಾಹಿತಿಗಳೂ ಆದ ಶ್ರೀ ಚಂಪಾ ಅವರಿಗೆ ನನ್ನ ಕೃತಜ್ಞತೆಗಳು.

- ಬಂಜಗೆರೆ ಜಯಪ್ರಕಾಶ

ಪರಿವಿಡಿ

ಅಧ್ಯಾಯ -೧

೧೦ನೆಯ ಶತಮಾನದವರೆಗೆ

ಒಡಮೂಡಿದ ಭೌಗೋಳಿಕ ಸೀಮೆಗಳ ಪರಿಕಲ್ಪನೆ

ಕರ್ನಾಟಕದ ರಾಜಕೀಯ ಇತಿಹಾಸವು ಕ್ರಿ.ಪೂ. ೨ನೆಯ ಶತಮಾನದಲ್ಲಿ ದಖಿನ್‌ನೊಳಗೆ ಶಾತವಾಹನರ ಉದಯದೊಂದಿಗೆ ಆರಂಭವಾಗುತ್ತದೆ. ಇವರ ನಂತರ ಬಂದ ಕದಂಬರು ಉತ್ತರ ಕರ್ನಾಟಕದ ವೈಜಯಂತಿಯಲ್ಲಿ ಆಳಿದ ಪ್ರಥಮ ಕನ್ನಡ ದೊರೆಗಳು.

ಶಾತವಾಹನರ ಕಾಲದ ಸಾಮಾಜಿಕ ಸ್ಥಿತಿಗಳನ್ನು ತಿಳಿಯಲು ನೆರವಾಗುವ ಸಹಾಯಕ ಸಾಮಗ್ರಿಗಳು ಬಹಳ ಕಡಿಮೆ. ಸುಮಾರು ೪೫೦ ವರ್ಷಗಳ ಕಾಲ ಆಳಿದ ೩೦ ಮಂದಿ ದೊರೆಗಳು ಇದ್ದ ಈ ಮನೆತನದ ಬಗೆಗೆ ದೊರೆತಿರುವ ಶಾಸನಗಳು ಸುಮಾರು ಮೂವತ್ತರಷ್ಟಿವೆ. ಮೌರ್ಯರ ಕಾಲದ ಪದ್ಧತಿಗಳೇ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಶಾತವಾಹನರ ಕಾಲದಲ್ಲೂ ಉಳಿದಿದ್ದವು. ಕೌಟಿಲ್ಯನ ಅರ್ಥಶಾಸ್ತ್ರದ ಆಧಾರದ ಮೇಲೆ ಸಾರ್ವಜನಿಕ ಆಡಳಿತ ವ್ಯವಸ್ಥೆ ನಡೆಯುತ್ತಿದ್ದಿತು. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ಶೂದ್ರ ಎಂಬ ವರ್ಗಗಳ ಸಂಪ್ರದಾಯವೇ ಚಾಲ್ತಿಯಲ್ಲಿತ್ತು. ವ್ಯಾಪಾರ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಹಲವು ವರ್ಗಗಳು ಆಗ ಇದ್ದುದನ್ನು ನಾವು ಕಾಣಬಹುದು.

ಆ ಕಾಲದಲ್ಲಿ ಧನ್ನಿಕಾ (ಧಾನ್ಯ ವ್ಯಾಪಾರಿ), ಮಾಲಕಾರ (ಹೂವಾಡಿಗ), ಕೋಲಿಕಾ (ನೇಕಾರ), ತಿಲಪಿಸಕ (ಗಾಣದವನು), ಕಾಸಕಾಲ (ಕಂಚುಗಾರ), ಕಮಾರ (ಕಮ್ಮಾರ), ಚಮ್ಮಕಾರ (ಚರ್ಮ ಕೆಲಸದವನು), ಗಾಂಧೀಕ (ಸುಗಂಧಕಾರ), ಸುವರ್ಣಕಾರ (ಅಕ್ಕಸಾಲಿಗ), ಮಣಿಕಾರ (ರತ್ನದ ಕೆಲಸದವನು, ಮಿಥಿಕ (ಹರಳು

ಹೊಳಪುಗಾರ), ಸೆಲವದಕಿ (ಕಲ್ಲುಕುಟಿಗ), ವದಕ (ಬಡಗಿ), ವದಯಂತ್ರಿಕ (ನೀರಿನ ಯಂತ್ರಗಾರ), ದಾಶಕ (ಬೆಸ್ತ) ಇತ್ಯಾದಿ ಕಸುಬುಗಾರರು ಅಥವಾ ವೃತ್ತಿನಿರತ ಗುಂಪುಗಳು ನಮಗೆ ಕಂಡುಬರುತ್ತವೆ.

ಆಡಳಿತ ವರ್ಗದಲ್ಲಿ ಅನೇಕ ಅಧಿಕಾರದ ಹಂತಗಳಿದ್ದವು. ಮಹಾರಥಿ ಮತ್ತು ಮಹಾಭೋಜ ಬಹುಶಃ ಸಾಮಂತರಾಗಿದ್ದುಕೊಂಡು ವಂಶಪಾರಂಪರ್ಯವಾಗಿ ತಾವು ಆಳುವ ನೆಲದ ಒಡೆಯರಾಗಿದ್ದರೆಂದು ಕಾಣುತ್ತದೆ.

ಪ್ರತಿಯೊಂದು ಉದ್ಯೋಗವರ್ಗಕ್ಕೂ ಅನೇಕ ವೃತ್ತಿ ಸಂಘಗಳ ಶ್ರೇಣಿಗಳು ಇದ್ದವು. ನಾಸಿಕದ ಒಂದು ಶಾಸನದಲ್ಲಿ 'ಕೋಲಕನಿಕಾಯ' ಅಥವಾ 'ಶ್ರೇಣಿಯ' (ನೇಕಾರರ ಸಂಘ) ಎಂಬ ಮಾತಿದೆ. ಜುನ್ನಾರಿನ ಒಂದು ದಾಖಲೆಯಲ್ಲಿ 'ಧನ್ನಿಕ ಶ್ರೇಣಿ' (ಧಾನ್ಯ ವರ್ತಕರ ಸಂಘ)ಯ ಪ್ರಸ್ತಾಪವಿದೆ. ಹಾಗೆಯೇ 'ಕಾಸಕಾರ ಶ್ರೇಣಿ' (ಕಂಚುಗಾರರ ಸಂಘ) 'ವಾಸಾಕರ ಶ್ರೇಣಿ' (ಬಿದಿರಿನ ಕೆಲಸಗಾರರ ಸಂಘ) ಗಳನ್ನು ಮತ್ತೊಂದು ದಾಖಲೆಯಲ್ಲಿ ಪ್ರಸ್ತಾಪಿಸಿದೆ.

'' ಈ ಸಂಘಗಳು ಬಹುಕಾಲದಿಂದ ಅಸ್ತಿತ್ವದಲ್ಲಿದ್ದು, ವ್ಯಾಪಾರಗಳನ್ನು ರೂಢಿಸಿಕೊಂಡ ಸಂಸ್ಥೆಗಳಾಗಿದ್ದು, ವ್ಯವಹಾರದಲ್ಲಿ ಪ್ರಾಮಾಣಿಕತೆ 'ದಕ್ಷತೆಯನ್ನು ಹೊಂದಿದ್ದವು. ಇಲ್ಲದಿದ್ದರೆ ಜನರು ಇಷ್ಟೊಂದು ಶಾಶ್ವತ ನಿಧಿಯನ್ನು ಇವುಗಳ ಮೇಲೆ ತೊಡಗಿಸುತ್ತಿರಲಿಲ್ಲ. ಈ ನಿಧಿಗಳಿಂದ ವ್ಯಾಪಾರಿಗಳಿಗೆ ಒಳ್ಳೆಯ ಬಂಡವಾಳ ಒದಗಿ ವಾಣಿಜ್ಯದ ವಹಿವಾಟಿಗೆ ತುಂಬಾ ಪ್ರೋತ್ಸಾಹ ದೊರಕಿತ್ತು ''.[1]

ಸಮಾಜದ ಕೆಲವು ವರ್ಗಗಳಲ್ಲಿ ಅವಿಭಕ್ತ ಕುಟುಂಬ ಪದ್ಧತಿ ಇದ್ದಂತೆ ಕಾಣುತ್ತದೆ. ಪ್ರಾಕೃತವು ರಾಜ್ಯದ ಅಧಿಕೃತ ಭಾಷೆಯಾಗಿತ್ತು ಎಂದುಕೊಳ್ಳಬೇಕಾಗುತ್ತದೆ. ಆ ಸಮಾಜದಲ್ಲಿ ವೈದಿಕ, ಬೌದ್ಧ ಹಾಗೂ ಜೈನ ಧರ್ಮಗಳು ಬಳಕೆಯಲ್ಲಿದ್ದವು. ಕನ್ನಡ ಭಾಷೆಯು ಆಡುಮಾತಾಗಿ ಶಾತವಾಹನರ ಆಳ್ವಿಕೆ ಪ್ರದೇಶದ ಒಂದು ಭಾಗದಲ್ಲಿ ಬಳಕೆಯಲ್ಲಿ ಇತ್ತಾದರೂ ಕ್ರಿ.ಶ. ೩, ೪ನೇ ಶತಮಾನದಲ್ಲಿ ಕನ್ನಡದಲ್ಲಿ ಅಥವಾ ತೆಲುಗು ಭಾಷೆಯಲ್ಲಿ ಲಿಖಿತ ಸಾಹಿತ್ಯವಿದ್ದಿತು ಎಂದು ಹೇಳುವುದು ಕಷ್ಟ.

ಶಾತವಾಹನರ ನಂತರ ರಾಜ್ಯಭಾರ ಮಾಡಿದ ಬನವಾಸಿಯ ಕದಂಬರು ಕ್ರಿ.ಶ. ನಾಲ್ಕನೇ ಶತಮಾನದಿಂದ ಕ್ರಿ.ಶ. ಆರನೇ ಶತಮಾನದವರೆಗೆ ರಾಜ್ಯಭಾರ ಮಾಡಿದರು. ಆ ಸಮಯದಲ್ಲಿ ಕಲೆ ಮತ್ತು ಸಾಹಿತ್ಯ ಪ್ರಕಾರಗಳಲ್ಲಿ ಕರ್ನಾಟಕ ಸಂಸ್ಕೃತಿಯ ಕೆಲವು ಪ್ರಮುಖ ಲಕ್ಷಣಗಳಿಗೆ ಕದಂಬರು ಪ್ರೋತ್ಸಾಹ ನೀಡಿದರೆಂದು ತಿಳಿಯಲಾಗಿದೆ. ಅವರ ರಾಜ್ಯಭಾರದಂದು ಕನ್ನಡಕ್ಕೆ ಆಡಳಿತ ಭಾಷೆಯಾಗಿ ಮಾನ್ಯತೆ ಸಿಕ್ಕಿರಲಿಲ್ಲ. ಪ್ರಾಕೃತ ಭಾಷೆ ಆ ಸ್ಥಾನವನ್ನು ಉಳಿಸಿಕೊಂಡಿತ್ತು. ಕಾಕುತ್ಸವರ್ಮನ ಕಾಲದ ವೇಳೆಗೆ ಶಾಸನದಲ್ಲಿ ಸಂಸ್ಕೃತವನ್ನು ಬಳಸಲಾಗುತ್ತಿತ್ತು.

ಇವರ ನಂತರ ನಾವು ಗಮನಿಸಬೇಕಾದ ರಾಜವಂಶವೆಂದರೆ ತಲಕಾಡಿನ ಗಂಗರು. ಕ್ರಿ.ಶ. ೩೫೦ರಿಂದ ೧೦೫೦ರವರೆಗೆ ಇವರು ಆಳ್ವಿಕೆ ಮಾಡಿದರು.

ಹಾಗೆಯೇ ಬಾಣರು, ಪಲ್ಲವರು ಕೂಡಾ ಕರ್ನಾಟಕದ ನೆಲದಲ್ಲಿ ಆಳ್ವಿಕೆ ನಡೆಸಿದರು. ಇವರಲ್ಲಿ ನೊಳಂಬ ಪಲ್ಲವರು ಕ್ರಿ.ಶ. ೭೫೦ರಿಂದ ೧೦೫೫ರವರೆಗೆ ಆಳ್ವಿಕೆ ನಡೆಸಿದರು. ಜಾತಿ ಹಾಗೂ ಸಾಮಾಜಿಕ ಸಂಪ್ರದಾಯಗಳಲ್ಲಿ ಶಾತವಾಹನರ ಕಾಲದ ಪದ್ಧತಿಗಳೇ ಮುಂದುವರಿದುಕೊಂಡು ಬಂದಿದ್ದವು. ಈ ಸಮಯದಲ್ಲಿ ಅಂದರೆ ೧೦-೧೧ನೇ ಶತಮಾನದ ಹೊತ್ತಿಗೆ 'ಕಿಳ್ಗುಂಟಿ' ಮತ್ತು 'ವೇಳಾವಾಳಿ' ಎಂದು ಉಕ್ತವಾಗಿರುವ ಪದ್ಧತಿಯೊಂದು ಸಮಾಜದಲ್ಲಿ ಜಾರಿಗೆ ಬಂದಿತ್ತು. ಇದರ ಅರ್ಥ ಒಡೆಯನ ಪ್ರಾಣರಕ್ಷಣೆಗೆ ಪಣತೊಟ್ಟ ವೀರಭಂಟನಂತಿದ್ದವರು. ತಮ್ಮ ಒಡೆಯನ ಮರಣದ ನಂತರ ಇಲ್ಲವೇ ತಾವು ಕೈಗೊಂಡ ಪ್ರತಿಜ್ಞೆಯನ್ನು ಪೂರೈಸಲು ಅಸಮರ್ಥರಾದಾಗ ಅವರು ಪ್ರಾಣತ್ಯಾಗಕ್ಕೆ ಸಿದ್ಧರಾಗುತ್ತಿದ್ದರು. ಈ ಬಗೆಯ ಸ್ವಾಮಿನಿಷ್ಠೆ, ಊಳಿಗಮಾನ್ಯ ಅಭ್ಯಾಸಗಳು ಸಮಾಜದಲ್ಲಿ ಬಲವಾಗಿ ಜಾರಿಗೆ ಬಂದಾಗ ಹುಟ್ಟಿಕೊಳ್ಳುತ್ತವೆ ಎಂಬ ಅಂಶವನ್ನು ನಾವಿಲ್ಲಿ ಗಮನಿಸಬೇಕು. ಈ ವೀರ ಮರಣಗಳನ್ನು ಸೂಚಿಸುವ ಹಲವಾರು ಶಾಸನಗಳು ಲಭ್ಯವಾಗಿವೆ. ಮನುಷ್ಯನ ಪ್ರಾಣಕ್ಕಿಂತ ಅನ್ನ ಕೊಟ್ಟ ಧಣಿಯ ನಿಷ್ಠೆಯೇ ಮುಖ್ಯವಾದುದು ಎಂಬಂತಹ ಆಚರಣೆ, ಆಗ ಚಾಲ್ತಿಯಲ್ಲಿದ್ದ ಒಡೆಯರ ಮೇಲಿನ ಆಳುಗಳ ಅತೀ ಅವಲಂಬನೆಯ ಸೂಚಕಗಳಾಗಿ ನಿಲ್ಲುತ್ತವೆ.

ಆದರೆ ಈ ಕಾಲಘಟ್ಟದವರೆಗೆ ಇನ್ನೂ ಸತೀಪದ್ಧತಿ ಅಷ್ಟೊಂದು ಚಾಲ್ತಿಗೆ ಬಂದಿರಲಿಲ್ಲವೆಂಬ ಅಂಶ ವಿಚಿತ್ರದ್ದಾಗಿ ಕಾಣುತ್ತದೆ. 'ರವಿವರ್ಮನ ಹೆಂಡತಿ ಪತಿಯ ಮರಣಾನಂತರ ಆತನ ಚಿತೆಯಲ್ಲಿ ಸಹಗಮನಗೈದು ಮಹಾಸತಿಯಾದಳು'[2] ಎಂಬ ಒಂದು ಅಪರೂಪದ ಉಲ್ಲೇಖ ಈ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ದೊರೆತಿದೆ. ಇದು ಮಹಾಸತಿಯಾದವರ ಬಗ್ಗೆ ಆ ಕಾಲಘಟ್ಟದಲ್ಲಿ ನಮಗೆ ದೊರೆತಿರುವ ಉಲ್ಲೇಖಗಳ ಕೊರತೆಯೇ ಅಥವಾ ವೇಳಾವಾಳಿಗಳ ನಂತರ ಸತೀಪದ್ಧತಿ ಆರಂಭವಾಯಿತೋ ಎಂಬ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಮಾಡಬೇಕಾಗಿದೆ.

ಆ ಕಾಲದ ಶಿಲ್ಪದಲ್ಲಿಯ ಸ್ತ್ರೀ-ಪುರುಷ ವಿಗ್ರಹಗಳಿಂದ ಅಂದಿನ ಜನರು ಧರಿಸುತ್ತಿದ್ದ ಬಟ್ಟೆ ಅತ್ಯಲ್ಪದ್ದಾಗಿತ್ತು, ಅವರು ಹೆಚ್ಚಾಗಿ ಆಭರಣ ಪ್ರಿಯರಾಗಿದ್ದರೆಂದು ತಿಳಿದುಬರುತ್ತದೆ. ಗಂಡಸರು ಬರೀ ಎರಡು ತುಂಡು ಬಟ್ಟೆಗಳನ್ನು ಮಾತ್ರ ಉಡುತ್ತಿದ್ದರು. ಒಂದು ನಡುವಿನಿಂದ ಮೊಳಕಾಲವರೆಗೆ ಸುತ್ತಿಕೊಳ್ಳುವ ಪಂಚೆ, ಇನ್ನೊಂದು ಉತ್ತರೀಯ. ಹೆಂಗಸರು ನಡುವಿನ ಕೆಳಗೆ ಬಟ್ಟೆ ಧರಿಸುತ್ತಿದ್ದರು. ಆ ನಂತರದ ಕಾಲದಲ್ಲಿ ಮೇಲ್ಭಾಗವನ್ನು ಮುಚ್ಚುವುದಕ್ಕೋಸ್ಕರ ಕುಪ್ಪಸಗಳು ಬಳಕೆಯಲ್ಲಿ ಬಂದವೆಂದು ತೋರುತ್ತದೆ.

ಆಗಿನ ಸಮಾಜದಲ್ಲಿ ಸಾಮಾಜಿಕ ಧರ್ಮಪ್ರಜ್ಞೆಯೇ ಜೀವನ ಸ್ವರೂಪದ ಬಹುಮುಖ್ಯ ಅಂಶವಾಗಿದ್ದುದರಿಂದ ಶಿಕ್ಷಣ, ಲಲಿತಕಲೆ, ಸಮಾಜಸೇವೆ ಇವುಗಳ ದೃಷ್ಟಿಯಿಂದ ದೇವಾಲಯವು ದೇವತಾರಾಧನೆಯ ಸ್ಥಳವಾಗಿದ್ದು ಸಮಾಜದ ಜೀವನದಲ್ಲಿ ಬಹು ಮಹತ್ವದ ಸ್ಥಾನವನ್ನು ಆಕ್ರಮಿಸಿತ್ತು.

ಚಕ್ಕಡಿ ಅಥವಾ ಎತ್ತಿನ ಬಂಡಿ ಜನಸಾಮಾನ್ಯರ ಪ್ರಯಾಣದ ಮತ್ತು ಸರಕು ಸಾಗಿಸುವ ಬಹುಮುಖ್ಯ ವಾಹನಸೌಕರ್ಯವಾಗಿತ್ತು. ಪಲ್ಲಕ್ಕಿ ಮತ್ತು ರಥಗಳನ್ನು ಉನ್ನತದರ್ಜೆಯ ಜನರು ಮಾತ್ರ ಬಳಸುತ್ತಿದ್ದರು. ಆನೆ, ಕುದುರೆಗಳ ಬಳಕೆ ಯುದ್ಧ ಭೂಮಿಯಲ್ಲಿ ವಿಶೇಷವಾಗಿತ್ತು.

ಆ ಕಾಲದಲ್ಲಿ ಅರಸರಿಂದ, ಇತರೆ ಶ್ರೀಮಂತರಿಂದ ದಾನದತ್ತಿ ಕೊಡುವ ಪರಿಪಾಠಗಳು ಹೇರಳವಾಗಿದ್ದವು. ಆಗ ಸ್ಥಾನಿಕ ಸಂಸ್ಥೆಯ ಆಡಳಿತವು ಮುಖ್ಯವಾಗಿ ಮಹಾಜನರ ಕೈಯಲ್ಲಿತ್ತು. 'ಮಹಾಜನ' ಎಂಬ ಪದ ಬಹು ಪ್ರಾಚೀನಕಾಲದಲ್ಲಿ ಅಷ್ಟೊಂದು ಪ್ರಚಾರದಲ್ಲಿರಲಿಲ್ಲ. ಮಹಾಜನಕ್ಕೆ ಬದಲಾಗಿ 'ಊರ್' ಎಂಬ ಪದ ಬಳಕೆಯಲ್ಲಿತ್ತು. ದೇವಾಲಯದ ವ್ಯವಸ್ಥೆ, ಗ್ರಾಮನೈರ್ಮಲ್ಯ, ಕೆರೆಕಾಲುವೆಗಳ ನಿರ್ಮಿತಿ, ಶಿಕ್ಷಣ ಸಂಸ್ಥೆಗಳ ಏರ್ಪಾಡು ಇವೇ ಮೊದಲಾದ ಕರ್ತವ್ಯಗಳನ್ನು 'ಮಹಾಜನ' ನಿರ್ವಹಿಸುತ್ತಿತ್ತು.

ಆಗಿನ ಸಮಾಜದ ಆರ್ಥಿಕಜೀವನದಲ್ಲಿ ಒಕ್ಕಲುತನದ ತರುವಾಯ ವಾಣಿಜ್ಯೋದ್ಯಮಗಳ ಸ್ಥಾನವು ಬಹಳ ಮಹತ್ವದ್ದಾಗಿತ್ತು. ಕುಂಬಾರಿಕೆ, ಗಾಣಗಾರಿಕೆ, ನೇಯ್ಗೆಯ ವ್ಯವಹಾರ, ಹಿತ್ತಾಳೆಗಾರನ ಕಸುಬು - ಮುಂತಾದವು ಮಹತ್ವದ ಕೆಲವು ಉದ್ಯೋಗಗಳಾಗಿದ್ದವು. ಶ್ರೇಣಿಗಳು ಬ್ಯಾಂಕಿನ ವ್ಯವಹಾರ ಮಾಡುತ್ತಿದ್ದುವಲ್ಲದೆ, ಉದ್ಯಮಗಳನ್ನು ಪ್ರೋತ್ಸಾಹಿಸುತ್ತಿದ್ದವು. ನಿಜವಾಗಿಯೂ ಶ್ರೇಣಿಗಳು ಬಹು ಸತ್ವಯುತವಾಗಿದ್ದವು. ನಾಡಿನ ಅರಸು ಅಥವಾ ದೊಡ್ಡ ದೊಡ್ಡ ರಾಜ್ಯಾಧಿಕಾರಿಗಳು, ಕರ ಹೇರುವುದಕ್ಕೆ ಮತ್ತು ಕರದಲ್ಲಿ ವಿನಾಯಿತಿ ನಿರ್ಣಯಿಸುವುದಕ್ಕೆ ಮೊದಲು ಈ ಶ್ರೇಣಿಗಳ ಸದಸ್ಯರ ಸಲಹೆ ಕೇಳುತ್ತಿದ್ದರು.

ಕೂಲಿಯಾಳುಗಳಿಗೆ ಹೆಚ್ಚಾಗಿ ಪದಾರ್ಥರೂಪದಲ್ಲಿ ಕೂಲಿ ದೊರೆಯುತ್ತಿತ್ತು. ಈ ಸಮಯದಲ್ಲೇ ಕನ್ನಡ ಭಾಷೆಯು ಪೂರ್ವದ ಹಳಗನ್ನಡದಿಂದ ಹಳೆಗನ್ನಡಕ್ಕೆ ಮಾರ್ಪಾಟಾಗುತ್ತಿದ್ದುದನ್ನು ಸೂಚಿಸುವ ಅಂಶಗಳು ಕವಿರಾಜಮಾರ್ಗ ಕೃತಿಯಲ್ಲಿ ದೊರೆಯುತ್ತವೆ. ಈ ಕೃತಿಯು ಸುಮಾರು ಒಂಬತ್ತನೇ ಶತಮಾನಕ್ಕೆ ಸೇರಿದ್ದುದಾಗಿದ್ದು ಅದಕ್ಕೂ ಎರಡು, ಮೂರು ಶತಮಾನಗಳ ಹಿಂದೆಯೇ ಹಲವಾರು ಲೇಖಕರು ಅಸ್ತಿತ್ವದಲ್ಲಿದ್ದರೆಂಬುದನ್ನು ಕೂಡ ಸೂಚಿಸುತ್ತದೆ.

ಈವರೆಗೆ ನಾವು ಕದಂಬರ, ಗಂಗರ, ಬಾಣರ ಹಾಗೂ ನೊಳಂಬ ಪಲ್ಲವರ ಕಾಲಘಟ್ಟದಲ್ಲಿ ಸಮಾಜವು ಹೇಗಿತ್ತು ಎಂಬುದನ್ನು ಗಮನಿಸಿದ್ದೇವೆ. ಇದೆಲ್ಲ ಹತ್ತನೆಯ ಶತಮಾನಕ್ಕಿಂತ ಹಿಂದಿನ ವಿಷಯ. ಈ ಎಲ್ಲ ರಾಜವಂಶಗಳೂ ಬಹುಮಟ್ಟಿಗೆ ಕರ್ನಾಟಕದ ದಕ್ಷಿಣ ಪ್ರದೇಶಗಳಲ್ಲಿ ಪ್ರಭುತ್ವ ನಡೆಸಿದವು. ಸರಿಸುಮಾರು ದಕ್ಷಿಣದಲ್ಲಿ ಗಂಗರು ಪ್ರಬಲರಾಗಿದ್ದಾಗಲೇ ಕ್ರಿ.ಶ. ೬ನೇ ಶತಕದ ಕೊನೆಗೆ, ಬಾದಾಮಿಯ ಚಾಲುಕ್ಯರು ಆಳ್ವಿಕೆಯನ್ನು ಪ್ರಾರಂಭಿಸಿದರು. ''ಬಾದಾಮಿ ಚಾಲುಕ್ಯರ ಆಳ್ವಿಕೆಯಿಂದಲೇ ದಕ್ಷಿಣ ಪಥ ಮತ್ತು ಕರ್ನಾಟಕದ ಇತಿಹಾಸ ಪ್ರಾರಂಭ ಎಂದು

ಹೇಳಬಹುದು. ತತ್ಪೂರ್ವದಲ್ಲಿ ಕೆಲವೊಂದು ಅರಸು ಮನೆತನಗಳು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅರಸೊತ್ತಿಗೆ ನಡೆಸುತ್ತಿದ್ದವು ಎಂಬ ಮಾತೂ ನಿಜವೆ. ಆದರೆ ಕ್ರಿ.ಶ. ಐದನೆಯ ಶತಮಾನದಲ್ಲಿ ಚಾಲುಕ್ಯರ ಉದಯದಿಂದಾಗಿ ಕರ್ನಾಟಕದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸ್ವರೂಪ ಬಂದಿತು''[3] ಎಂದು ಡಾ. ಎಸ್.ಸಿ. ನಂದೀಮಠ ಬರೆಯುತ್ತಾರೆ. ಬಾದಾಮಿಯ ಚಾಲುಕ್ಯರು ಕರ್ನಾಟಕದ ಇತಿಹಾಸಕ್ಕೆ ಒಂದು ನಿರ್ದಿಷ್ಟ ಸ್ವರೂಪವನ್ನು ತಂದರು ಎಂದು ಹೇಳುವ ಬದಲು ಕರ್ನಾಟಕದ ಜನರ ಜೀವನ ತನ್ನ ಇತಿಹಾಸದಲ್ಲಿ ಒಂದು ವೈಶಿಷ್ಟ್ಯಪೂರ್ಣ ಮಜಲಿಗೆ ತಲುಪುತ್ತಿದ್ದಾಗ ಚಾಲುಕ್ಯರ ರಾಜ್ಯಭಾರ ನಡೆಯುತ್ತಿತ್ತು ಎಂದು ಸೂಚಿಸಬಹುದಾಗಿದೆ.

ಅವರ ವಂಶದ ಹೆಸರಿನಲ್ಲಿಯೇ ಕನ್ನಡ ಮೂಲದ ವ್ಯುತ್ಪತ್ತಿಯಿರುವುದು ಹಾಗೂ ಅವರು ಬಹುಮಟ್ಟಿಗೆ ಒಕ್ಕಲಿಗರ ಬಣಕ್ಕೆ ಸಂಬಂಧಿಸಿದವರಾಗಿದ್ದು ಬಾದಾಮಿಯ ಅಕ್ಕಪಕ್ಕದ ಪ್ರದೇಶದಿಂದ ಬಂದು ಏಳಿಗೆ ಹೊಂದಿದವರಿರ ಬೇಕೆಂಬುದು ಚಾಲುಕ್ಯರ ಬಗ್ಗೆ ಇರುವ ಆಸಕ್ತಿಕರ ಅಂಶವಾಗಿದೆ. ಅವರ ಮೂಲವಾಮವು ಚೆಲುಕಿ, ಚೆಲ್ಕಿ, ಸಲುಕಿ ಅಥವಾ ಸಲ್ಕಿ ಎಂಬ ಕನ್ನಡ ಪದ. ಇದೊಂದು ಕೃಷಿ ಉಪಕರಣದ ಹೆಸರು. ಈ ಮನೆತನದ ಮೂಲಪುರುಷನು ಇದನ್ನು ತನ್ನ ಅಂಕಿತನಾಮವಾಗಿ ಸ್ವೀಕರಿಸಿರಬೇಕು. ಈ ರೀತಿ ಹೆಸರಿಟ್ಟುಕೊಳ್ಳುವುದು ಈಗಲೂ ಕರ್ನಾಟಕದಲ್ಲಿ ಬಳಕೆಯಲ್ಲಿದೆ. ಸಲ್ಕ್ಯಪ್ಪ, ಗುದ್ಲ್ಯಪ್ಪ ಎಂಬ ಹೆಸರುಗಳು ಬಹಳ ಸಾಮಾನ್ಯ.

ಬಾದಾಮಿ ಚಾಲುಕ್ಯರ ಈ ಹೆಸರಿನ ಹಿನ್ನೆಲೆ ಹಾಗೂ ಅವರು ಕೃಷಿಕ ಬಣದವರಿರಬಹುದೆಂಬ ಸೂಚನೆ ಕರ್ನಾಟಕದ ಜನರ ಜೀವನದಲ್ಲಿ ಬಂದಿರಬಹುದಾದ ಒಂದು ವಿಶಿಷ್ಟ ಬೆಳವಣಿಗೆಯನ್ನು ಸೂಚಿಸುತ್ತದಾದ್ದರಿಂದ ಮಹತ್ವ ಪಡೆಯುತ್ತದೆ. ಈ ಹಿಂದೆ ಕರ್ನಾಟಕದ ನೆಲವನ್ನು ಆಳಿದ ಶಾತವಾಹನ ರಾಜರುಗಳ ಹೆಸರುಗಳನ್ನು ಗಮನಿಸಿದರೆ ಅವರು ತಮ್ಮ ನಿಕಟಪೂರ್ವದಲ್ಲಿ ಮಾತೃ ಪ್ರಧಾನ ಬಣಗಳಿಂದ ಮಾರ್ಪಟ್ಟು ರಾಜತ್ವಕ್ಕೇರಿದ ಬಣದಿಂದ ಬಂದಿರುವ ಸೂಚನೆಗಳು ನಮಗೆ ಗೋಚರವಾಗುತ್ತವೆ. ಶಾತವಾಹನರ ವಂಶದ ರಾಜರ ಹೆಸರುಗಳು ಅವರವರ ತಾಯಂದಿರ ಹೆಸರುಗಳೊಂದಿಗೆ ಸೇರಿಕೊಂಡಿವೆ. ಆದ್ದರಿಂದ ಗೌತಮೀಪುತ್ರ ಸಾತಕರ್ಣಿ, ವಾಶಿಷ್ಠಪುತ್ರ ಪುಲಮಾಯಿ, ಹಾರಿತೀಪುತ್ರ ಸಾತಕರ್ಣಿ ಎಂಬ ಹೆಸರುಗಳು ಕಂಡುಬರುತ್ತವೆ. ಕರ್ನಾಟಕದ ಭೂಭಾಗವನ್ನು ಆಳಿದ ಮೊದಲ ವಂಶ ಶಾತವಾಹನರದು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ನಾವು ಸೂಚಿಸ ಬಹುದಾದುದೇನೆಂದರೆ ಪ್ರಾಚೀನ ಬುಡಕಟ್ಟು ವ್ಯವಸ್ಥೆಯಿಂದ ಪೂರ್ತಿಯಾಗಿ ವರ್ಗಾಧಾರಿತ ಶ್ರಮ ವಿಭಜನೆಯುಳ್ಳ ಹಾಗೂ ಅದನ್ನು ಸಂಘಟಿಸಲು ಏರ್ಪಡುವ ಪ್ರಭುತ್ವದ ಉಗಮವೊಂದನ್ನು ನಾವು ಇಲ್ಲಿ ಗುರುತಿಸಬಹುದು. ಕರ್ನಾಟಕದ ಜನಜೀವನ ತನ್ನ ಹಿಂದಿನ ಸಾಮೂಹಿಕತ್ವದ ಕುಲ ಹಾಗೂ ಬುಡಕಟ್ಟುಗಳ ಜೀವನದ ನಡುವೆ, ಹಲವು ಬುಡಕಟ್ಟುಗಳ ಮೇಲೆ ಒಂದು ನಿಶ್ಚಿತ ಪ್ರದೇಶದಲ್ಲಿ ಆಳ್ವಿಕೆ ನಡೆಸುವ

ಪ್ರಭುತ್ವಗಳ ಉಗಮವನ್ನು ಶಾತವಾಹನರ ಆಳ್ವಿಕೆ ಸೂಚಿಸುತ್ತದೆ. ಆ ಸಮಾಜದಲ್ಲಿ ನಾವು ಇಷ್ಟೇ ವರ್ಷಗಳು ಎಂದು ನಿರ್ದಿಷ್ಟವಾಗಿ ಸೂಚಿಸಲಾಗದ, ದೀರ್ಘ ಕಾಲಾವಧಿಯುದ್ದಕ್ಕೂ ಆಂತರಿಕವಾಗಿ ಉಂಟಾಗುತ್ತಲೇ ಬಂದ ಪರಿವರ್ತನೆಯ ಪ್ರಕ್ರಿಯೆಗಳನ್ನು, ಇನ್ನೂ ತಾಯಂದಿರ ಹೆಸರಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ರೂಢಿಯನ್ನಿಟ್ಟುಕೊಂಡಿದ್ದ ಶಾತವಾಹನರ ಆಳ್ವಿಕೆಯು ಸಂಕೇತಿಸುತ್ತದೆ. ಅವರ ನಂತರ ಆಳಿದ ಕದಂಬರೂ ಕೂಡ ಒಂದು ಮರದ ಚಿನ್ಹೆಯನ್ನು ತಮ್ಮ ವಂಶದ ಅಭಿಧಾನವಾಗಿ ಸ್ವೀಕರಿಸಿದ್ದು ಬುಡಕಟ್ಟು ಸಂಸ್ಕೃತಿಯಲ್ಲಿ ಕಂಡುಬರುವ ''ಟೋಟೆಮ್''ಗಳ ಉಳಿಕೆಗೆ ಅಂದರೆ ಇನ್ನೂ ತನ್ನ ಬುಡಕಟ್ಟು ಸ್ವಭಾವದ ಪ್ರಭಾವದಿಂದ ಪೂರ್ಣ ಆಚೆಗೆ ಬಂದಿರದ ಗುಂಪೊಂದರ ಸೂಚನೆಯನ್ನು ನೀಡುತ್ತದೆ. ಈ ಎರಡೂ ರಾಜವಂಶಗಳ ಸಂಕೇತದಲ್ಲಿ ನಾವು ಕರ್ನಾಟಕದ ಜನರ ಜೀವನ, ಬುಡಕಟ್ಟು ಸಂಸ್ಕೃತಿಯೊಂದರಿಂದ, ಪ್ರದೇಶವಾರು ಸಮುದಾಯವಾಗಿ ಮಿಳಿತವಾದ, ಹಲವು ಬುಡಕಟ್ಟುಗಳ ನಡುವೆ ವರ್ಗಾಧಾರಿತವಾಗಿ ಸಂಯೋಜನೆಗೊಂಡ ಹೊಸ ಜೀವನಕ್ರಮವೊಂದರ ಸುಳುಹುಗಳನ್ನು ಗುರುತಿಸಬಹುದು.

ಈ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೆ ಭಾರತದ ಇತರ ಭಾಗಗಳಲ್ಲಿ ಬಂದ ಬೆಳವಣಿಗೆಗೆಗಳನ್ನು ನಾವು ಆಧಾರವಾಗಿ ತೆಗೆದುಕೊಳ್ಳಬಹುದು.

ಆರ್.ಎಸ್. ಶರ್ಮಾ ಕ್ರಿ.ಪೂ. ೬ನೇ ಶತಮಾನದ ನಂತರ ಭಾರತದ ಕೆಲವು ಭಾಗಗಳಲ್ಲಿ ಬಂದ ಬೆಳವಣಿಗೆಯನ್ನು ಹೀಗೆ ವಿವರಿಸುತ್ತಾರೆ. ''ಕ್ರಿ.ಪೂ. ಆರನೇ ಶತಮಾನದ ನಂತರ ಪೂರ್ವ ಉತ್ತರ ಪ್ರದೇಶ ಮತ್ತು ಪಶ್ಚಿಮ ಬಿಹಾರಗಳಲ್ಲಿ ಕಬ್ಬಿಣದ ಬಳಕೆಯು ಬಹಳ ವ್ಯಾಪಕವಾಗಿ ಹರಡುತ್ತಾ ಬಂದು, ವಿಶಾಲವಾದ ಪ್ರಾದೇಶಿಕ ರಾಜ್ಯಗಳು ತಲೆ ಎತ್ತಲು ಸೂಕ್ತ ಸನ್ನಿವೇಶಗಳನ್ನು ಹುಟ್ಟಿಸಿತು. ಕಬ್ಬಿಣದ ಆಯುಧಗಳಿಂದಾಗಿ ಯೋಧವರ್ಗವು ಪ್ರಮುಖ ಪಾತ್ರ ವಹಿಸಲಾರಂಭಿಸಿತು. ನವೀನ ಕೃಷಿವಿಧಾನಗಳಿಂದಾಗಿ ರೈತರು ತಮ್ಮ ಬಳಕೆಗೆ ಅಗತ್ಯವಾದುದಕ್ಕಿಂತ ಬಹಳ ಹೆಚ್ಚಿನ ಪ್ರಮಾಣದಲ್ಲಿ ಧಾನ್ಯಗಳನ್ನು ಬೆಳೆಸುವುದು ಸಾಧ್ಯವಾಯಿತು. ಈ ಹೆಚ್ಚುವರಿಯನ್ನು ರಾಜರು ತಮ್ಮ ಸೈನಿಕ ಹಾಗೂ ಆಡಳಿತದ ಅಗತ್ಯಗಳ ನಿರ್ವಹಣೆಗಾಗಿ ವಸೂಲು ಮಾಡುವುದು ಸಾಧ್ಯವಿತ್ತು. ಈ ಹೆಚ್ಚುವರಿಯು ಆ ಶತಮಾನದಲ್ಲಿ ತಲೆಯೆತ್ತಿದ ನಗರಗಳಿಗೆ ಒದಗಿಬರುವುದೂ ಸಾಧ್ಯವಾಯಿತು. ಈ ಐಹಿಕ ಸವಲತ್ತುಗಳು ಜನರನ್ನು ತಮ್ಮ ಪ್ರದೇಶಗಳಿಗೆ ಅಂಟಿಕೊಳ್ಳಲು ಹಾಗೂ ಇತರರನ್ನು ಅಡಗಿಸಿ ತಮ್ಮ ಪ್ರದೇಶಗಳನ್ನು ವಿಸ್ತರಿಸಿಕೊಳ್ಳಲು ಪ್ರಚೋದಿಸ ತೊಡಗಿದವು. ನಗರಗಳನ್ನು ತಮ್ಮ ಕಾರ್ಯಾಚರಣೆಯ ನೆಲೆಗಳನ್ನಾಗಿ ಮಾಡಿಕೊಂಡು ತಲೆಯೆತ್ತಿದ ರಾಜ್ಯಗಳು ಪ್ರಾದೇಶಿಕ ಭಾವನೆಯನ್ನು ಬಲಪಡಿಸಿದವು. ಜನರ ನಿಷ್ಠೆ ತಮ್ಮ ಜನ ಅಥವಾ ಬಣಕ್ಕೆ ಸಲ್ಲುತ್ತಿದ್ದುದು ಈಗ ತಮ್ಮ ಜನಪದಕ್ಕೆ ಅಥವಾ ವಾಸಿಸುವ ಪ್ರದೇಶಕ್ಕೆ ಸಲ್ಲತೊಡಗಿತು.'' [4]

ಆದರೆ ಕ್ರಿ.ಪೂ. ೨ನೆಯ ಶತಮಾನದವರೆಗೆ ಕಾವೇರಿ ಕೆಳಬಯಲನ್ನು ಕೇಂದ್ರವಾಗಿ ಪರಿಗಣಿಸಬಹುದಾದ ದಕ್ಷಿಣಭಾರತದ ಪರ್ಯಾಯದ್ವೀಪದ ತುತ್ತತುದಿಯ ಪ್ರದೇಶಗಳಲ್ಲಿ ಇವು ಯಾವುವೂ ಕಂಡುಬರುವುದಿಲ್ಲ. ಅಲ್ಲಿನವರೆಗೆ ಪರ್ಯಾಯದ್ವೀಪದ ಗುಡ್ಡಗಾಡು ಪ್ರದೇಶಗಳಲ್ಲಿ ಬೃಹತ್ ಶಿಲಾಸಮಾಧಿಗಳ ನಿರ್ಮಾಪಕರೆಂದು ಹೆಸರಾಗಿರುವ ಜನ ವಾಸಿಸುತ್ತಿದ್ದರು. ಆ ನಂತರದಲ್ಲಿ ಅಂದರೆ ಶಾತವಾಹನರ ಆಳ್ವಿಕೆಯ ಆರಂಭದಿಂದ (ಕ್ರಿ.ಪೂ. ೧೨೧-ಕ್ರಿ.ಶ. ೧೭೪) ಈ ಬಗೆಯ ಬೆಳವಣಿಗೆಗಳು ದಕ್ಷಿಣಭಾರತದ ಈ ಭಾಗದಲ್ಲಿ ಕಂಡುಬಂದಿವೆ ಎಂದು ಗುರುತಿಸಬಹುದಾಗಿದೆ. ಹೀಗೆ ಆರಂಭವಾದ ಪ್ರಭುತ್ವದ ಆಳ್ವಿಕೆಯು ಕರ್ನಾಟಕದ ಜನರ ಜೀವನದಲ್ಲಿ ಬಾದಾಮಿ ಚಾಲುಕ್ಯರ ಉತ್ಕರ್ಷದೊಂದಿಗೆ ಮತ್ತೊಂದು ಮಜಲನ್ನು ಪ್ರವೇಶಿಸಿದ ಸುಳುಹುಗಳನ್ನು ನೀಡುತ್ತದೆ.

ಮೊದಲನೆಯದಾಗಿ, ನಿರ್ವಿವಾದವಾಗಿ ಈ ವಂಶವು ಕರ್ನಾಟಕದ ಪ್ರಾದೇಶಿಕ ನೆಲೆಯಲ್ಲಿ ಉಗಮಗೊಂಡ ಕೃಷಿಕ ಬಣಕ್ಕೆ ಸೇರಿದ ಆಳುವ ವರ್ಗ. ಅಂದರೆ ಈವರೆಗೆ ಇಲ್ಲದಿದ್ದಂತಹ ಒಂದು ಚೈತನ್ಯ ಶೂದ್ರಗುಂಪಿಗೆ ಸೇರಿದ ಒಂದು ರೈತ ಸಮುದಾಯಕ್ಕೆ ಒದಗಿದೆಯೆಂಬುದು, ಕರ್ನಾಟಕದ ಜನಸಮೂಹಗಳ ಪ್ರಮುಖ ಭಾಗವಾಗಿದ್ದ ಕೃಷಿಕರಿಗೆ ಒದಗಿಬಂದ ಸದೃಢೀಕರಣದ ಅಂಶಗಳನ್ನು ಸೂಚಿಸುತ್ತದೆ. ಅಲ್ಲಿಯವರೆಗೆ ಉತ್ತರದಿಂದ ಈ ಕಡೆಗೆ ಪ್ರಭಾವ ಬೀರಿದ ವರ್ಣಾಶ್ರಮಧರ್ಮದ ಪ್ರಧಾನ ಚೌಕಟ್ಟಿನೊಳಗೆ ಉಂಟಾದ ಬಿರುಕುಗಳನ್ನೂ ಇದು ಸೂಚಿಸುತ್ತದೆ. ಯಾಕೆಂದರೆ ಆವರೆಗೆ ಕರ್ನಾಟಕವನ್ನು ಆಳಿದ ರಾಜವಂಶಗಳು ನಾವು ಊಹಿಸಬಹುದಾಗಿರುವಂತೆ ವೈದಿಕ ಧರ್ಮದ ದ್ವಿಜ ಜಾತಿಗೆ ಸೇರಿದವರಾಗಿದ್ದರು. ಉದಾ : ಕದಂಬರು. ಅಥವಾ ವೈದಿಕಧರ್ಮೇತರ ಬೌದ್ಧಧರ್ಮೀಯರಾಗಿದ್ದರು. ಉದಾ: ಬಾಣರು (ಬಹುಶಃ).

ಊಳಿಗಮಾನ್ಯತೆಯು ತನ್ನನ್ನು ಸದೃಢೀಕರಿಸಿಕೊಳ್ಳುವಾಗ ಚಾತುರ್ವರ್ಣ್ಯವೆಂಬ ಬಿಗಿ ಶ್ರಮ ವಿಭಜನೆಯ ತಳಹದಿಯನ್ನು ಆಧರಿಸಿತ್ತು. ಅದರ ಪ್ರಕಾರ ಬ್ರಾಹ್ಮಣ ಅಥವಾ ಕ್ಷತ್ರಿಯರಲ್ಲದ ಸಾಮಾಜಿಕ ಪಂಗಡಗಳು ರಾಜ್ಯಭಾರದಂತಹ ಕೆಲಸಗಳಿಗೆ ಕೈಯಿಕ್ಕುವುದು ನಿಷಿದ್ಧವಾಗಿತ್ತು.

ಆದರೆ ಕೃಷಿಕಬಣಕ್ಕೆ ಸೇರಿದ ಚಾಲುಕ್ಯರು ಅಧಿಕಾರಕ್ಕೆ ಬಂದರೆಂಬುದು ಕರ್ನಾಟಕದ ಜನರ ಜೀವನದಲ್ಲಿ ಊಳಿಗಮಾನ್ಯತೆಯೊಳಗೆ ಕೆಳಹಂತದಿಂದ ಆರಂಭವಾಗುವ ಊಳಿಗಮಾನ್ಯತೆಯ ಪ್ರಕ್ರಿಯೆಯೊಂದರ ಸೂಚನೆಯಾಗಿ ನಮಗೆ ಕಂಡುಬರುತ್ತದೆ.

ಡಿ.ಡಿ. ಕೋಶಾಂಬಿ ವಿಶ್ಲೇಷಿಸುವ ಪ್ರಕಾರ ಕೆಳಹಂತದಿಂದ ಆರಂಭವಾಗುವ ಊಳಿಗಮಾನ್ಯತೆಯ ಪ್ರಕ್ರಿಯೆಯು ಮೇಲುಹಂತದಿಂದ ಆರಂಭವಾದ ಊಳಿಗ ಮಾನ್ಯತೆಯ ಪ್ರಕ್ರಿಯೆಗಿಂತ ಹೆಚ್ಚು ಜನಸಮೂಹಾಧಾರಿತವಾದದ್ದು ಎಂಬುದನ್ನು ಗಮನಿಸಿದರೆ ಕನ್ನಡ ರಾಷ್ಟ್ರೀಯತೆಯ ಜನರ ಜೀವನ ತನ್ನ ಉತ್ಪಾದನಾ ಸಂಬಂಧಗಳ

ವಿಷಯದಲ್ಲಿ, ಈ ಹಂತದಲ್ಲಿ ಒಂದಿಷ್ಟು ಸಮೂಹಾಧಾರಿತಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಹೆಚ್ಚು ಜನಸಮೂಹಗಳು ತಮ್ಮ ಸಾಮರ್ಥ್ಯದೊಳಲ್ಲಿ ಸುಧಾರಿತಗೊಂಡಂತೆಲ್ಲ ಒಂದು ರಾಷ್ಟ್ರೀಯತೆಯ ಬದುಕು ಮತ್ತಷ್ಟು ಸದೃಢಗೊಂಡಿರುತ್ತದೆ ಎಂಬ ಅಂಶದ ಹಿನ್ನೆಲೆಯಲ್ಲಿ ಚಾಲುಕ್ಯರ ಆಡಳಿತವನ್ನು ನಾವಿಲ್ಲಿ ಪರಿಗಣಿಸಬಹುದಾಗಿದೆ.

ಈ ಅಂಶವನ್ನು ಭಾರತದ ಇತರೆ ಬೆಳವಣಿಗೆಗಳೊಂದಿಗೆ ನಾವು ಹೋಲಿಸಿ ಮತ್ತಷ್ಟು ಸಮರ್ಥಿಸಿಕೊಳ್ಳಬಹುದಾಗಿದೆ. ೮ನೆಯ ಶತಮಾನದ (ಅಂದರೆ ಚಾಲುಕ್ಯರು ಪ್ರಾದುರ್ಭಾವಕ್ಕೆ ಬಂದ ಒಂದೆರಡು ಶತಮಾನಗಳ ಆಸುಪಾಸಿನಲ್ಲಿ) ಹಾಗೂ ಆನಂತರದ ತಾಮ್ರಶಾಸನ ಮತ್ತು ಶಿಲಾಶಾಸನಗಳಲ್ಲಿ ರಾಜರ ಗೋತ್ರಗಳು ಕಂಡುಬರುವುದಿಲ್ಲ.

ವೈದಿಕ ಸಂಪ್ರದಾಯದ ಹಿಡಿತ ತಪ್ಪಿಹೋಗಿತ್ತು ಎಂಬುದನ್ನಿದು ವ್ಯಕ್ತಪಡಿಸುತ್ತದೆ. ''ಬಹುಶಃ ತಮ್ಮ ಗೋತ್ರ ಇದೇ ಎಂದು ನಿಶ್ಚಯಿಸಿ ಹೇಳಲಾರದವರು ಕೂಡ ರಾಜರಾಗಿ ಆಳುವವರಾದರು''[5] ಎಂದು ಡಾ. ಎಸ್. ಸಿ. ನಂದೀಮಠ ಅಭಿಪ್ರಾಯ ಪಡುತ್ತಾರೆ. ಎಂಟನೆಯ ಶತಮಾನದ ಹೊತ್ತಿಗೆ ಬಹಳ ಸ್ಪಷ್ಟವಾಗಿ ಸೂಚಿತಗೊಂಡ ಈ ಸಾಮಾಜಿಕ ಪ್ರಕ್ರಿಯೆಯ ಉಗಮವು ೫-೬ನೇ ಶತಮಾನದಲ್ಲಿ ತನ್ನ ಆರಂಭಿಕತೆಯನ್ನು ಸೂಚಿಸತೊಡಗಿದ್ದರೆ ಅಂತಹ ಆಶ್ಚರ್ಯವೇನೂ ಇಲ್ಲ.

ಈ ಬಗೆಯ ಬೆಳವಣಿಗೆ ಭಾರತದ ಬೇರೆ ಬೇರೆ ಪ್ರದೇಶಗಳ ಬೆಳವಣಿಗೆಯ ಗತಿಯೊಂದಿಗೆ ತಾಳೆಯಾಗುತ್ತದೆ. ಆರ್. ಎಸ್. ಶರ್ಮಾ ಹೇಳುವಂತೆ ''ಕ್ರಿ.ಶ. ३೦೦-೭೫೦ರ ಅವಧಿಯು ಪರ್ಯಾಯದ್ವೀಪದ ಉತ್ತರ ಹಾಗೂ ಮಧ್ಯ ಭಾಗಗಳಲ್ಲಿ ರಾಜ್ಯಗಳ ಸ್ಥಾಪನೆ ಹಾಗೂ ಕೃಷಿ ವಿಸ್ತರಣೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದು.''[6]

ಈ ಅವಧಿಯೊಳಗೆ ಬಾದಾಮಿಚಾಲುಕ್ಯರ ಪ್ರಾದುರ್ಭಾವದ ಅವಧಿಯು ಹೊಂದಿಕೊಂಡಿರುವುದನ್ನು ನಾವು ಗಮನಿಸಬೇಕು. ಈ ಬಗೆಯ ಬೆಳವಣಿಗೆ ಭಾರತದ ಬಹಳಷ್ಟು ಪ್ರಾಂತೀಯ ಭಾಷೆಗಳ ಬೆಳವಣಿಗೆಗೆ ಅಂದರೆ ಜನಸಾಮಾನ್ಯರ ಸಾಮಾಜಿಕ ಸಂವಹನದ ಸ್ಪಷ್ಟ ಬೆಳವಣಿಗೆಗೆ ಹಿನ್ನೆಲೆ ಒದಗಿಸುತ್ತದೆ ಎಂಬುದನ್ನು ನಾವು ಹಲವು ಉದಾಹರಣೆಗಳ ಮುಖಾಂತರ ಗುರುತಿಸಬಹುದಾಗಿದೆ.

''ಭಾರತದ ಭಾಷೆಗಳ ಚರಿತ್ರೆಯಲ್ಲಿ ಏಳನೆಯ ಶತಮಾನದಿಂದ ಒಂದು ಮಹತ್ವದ ಬೆಳವಣಿಗೆಯನ್ನು ಕಾಣಬಹುದು. ಪೂರ್ವಭಾರತದ ಬೌದ್ಧ ಬರವಣಿಗೆಗಳಲ್ಲಿ ಬಂಗಾಳಿ, ಅಸ್ಸಾಮಿ, ಮೈಥಿಲಿ, ಒರಿಯಾ ಹಾಗೂ ಹಿಂದಿ ಭಾಷೆಗಳ ಆರಂಭ ಛಾಯೆಗಳನ್ನು ಕಾಣಬಹುದು. ಅಂತೆಯೇ ಜೈನ ಪ್ರಾಕೃತ ಕೃತಿಗಳು ಗುಜರಾತಿ ಮತ್ತು ರಾಜಸ್ಥಾನಿ ಭಾಷೆಗಳ ಆರಂಭವನ್ನು ಸೂಚಿಸುತ್ತವೆ. ದಕ್ಷಿಣದಲ್ಲಿ ತಮಿಳು

ಅತ್ಯಂತ ಪುರಾತನ ಭಾಷೆಯಾದರೆ ಕನ್ನಡ ಭಾಷೆಯು ಬೆಳೆದು ಬಂದುದು ಈ ಕಾಲಾವಧಿಯಲ್ಲಿ. ತೆಲುಗು ಮತ್ತು ಮಲಯಾಳಂ ಆ ನಂತರ ರೂಪುಗೊಂಡ ಭಾಷೆಗಳು. ಪ್ರತಿ ಪ್ರದೇಶವೂ ಇತರೆ ಪ್ರದೇಶಗಳಿಂದ ಒಂದು ಬಗೆಯ ಪ್ರತ್ಯೇಕತೆಯಲ್ಲಿದ್ದುದರಿಂದ ಪ್ರತಿಯೊಂದೂ ತನ್ನ ತನ್ನ ಭಾಷೆಯನ್ನು ರೂಪಿಸಿಕೊಂಡಿರಬೇಕು. ಗುಪ್ತ ಸಾಮ್ರಾಜ್ಯವು ಮುರಿದುಬಿದ್ದ ನಂತರ, ಹಲವಾರು ಸ್ವತಂತ್ರ ರಾಜ್ಯಗಳು ತಲೆ ಎತ್ತಿ ದೇಶಾದ್ಯಂತ ಸಂಪರ್ಕಗಳು ಹಾಗೂ ಸಾರಿಗೆ ಕುಂಠಿತ ಗೊಂಡಿರಬೇಕು.... ಸಾರಿಗೆ ಸಂಪರ್ಕಗಳು ಸಾಕಷ್ಟು ಕಡಿದುಹೋಗಿ ಪ್ರಾದೇಶಿಕ ಭಾಷೆಗಳ ಬೆಳವಣಿಗೆಗೆ ಉತ್ತೇಜನ ದೊರೆತಂತಾಯಿತು''.[7]

೭ನೇ ಶತಮಾನದ ಬಳಿಕ ಪ್ರಾದೇಶಿಕ ಲಿಪಿಗಳು ಸಹ ಪ್ರಾಮುಖ್ಯತೆ ಗಳಿಸಿದವು. ಮೌರ್ಯರಿಂದ ಗುಪ್ತರ ಕಾಲದವರೆಗೆ ಲಿಪಿಯಲ್ಲಿ ಹಲಕೆಲವು ಮಾರ್ಪಾಡು ತೋರಿಬಂದವಾದರೂ ದೇಶಾದ್ಯಂತವೂ ಹೆಚ್ಚೂ ಕಡಿಮೆ ಒಂದೇ ಲಿಪಿಯ ಬಳಕೆಯಾಗುತ್ತಿತ್ತು. '' ಹೀಗಾಗಿ ಯಾವನಾದರೂ ವ್ಯಕ್ತಿಯು ಗುಪ್ತರ ಕಾಲದ ಲಿಪಿಯನ್ನು ಅರಿತವನಾದರೆ, ದೇಶದ ವಿವಿಧ ಭಾಗಗಳ ಶಾಸನಗಳನ್ನು ಓದಬಲ್ಲವನಾಗುತ್ತಾನೆ. ಆದರೆ ೭ನೆಯ ಶತಮಾನದ ನಂತರ ಪ್ರತೀ ದೇಶವು ತನ್ನದೇ ಆದ ಲಿಪಿಯನ್ನು ಪಡೆದುಕೊಂಡಿತು. ಆದ್ದರಿಂದ ಗುಪ್ತರ ನಂತರದ ಶಾಸನಗಳನ್ನು ಓದಬೇಕಾದರೆ ಪ್ರಾದೇಶಿಕ ಲಿಪಿಗಳ ತಿಳುವಳಿಕೆಯು ಅತ್ಯಗತ್ಯ''[8] ಎಂದು ಆರ್.ಎಸ್. ಶರ್ಮಾ ಬರೆಯುತ್ತಾರೆ. ಇದೇ ಅವಧಿಯಲ್ಲಿ ಕರ್ನಾಟಕದ ಪ್ರದೇಶಗಳಲ್ಲಿ ಬಾದಾಮಿ ಚಾಲುಕ್ಯರ ಆಡಳಿತವು ಆರಂಭವಾಗಿತ್ತು ಎಂಬುದನ್ನು ನಾವು ಗಮನಿಸಿದರೆ ಕನ್ನಡ ರಾಷ್ಟ್ರೀಯತೆಯು ತನ್ನ ಭಾಷಾತ್ಮಕ ಸ್ಪಷ್ಟ ರೂಪುರೇಖೆಗಳನ್ನು ಪಡೆದುಕೊಂಡ ಕಾಲಾವಧಿ ಇದಾಗಿತ್ತು ಎಂಬ ಕಾರಣಕ್ಕಾಗಿ ಅವರ ಆಡಳಿತಾವಧಿಯ ಕಾಲಘಟ್ಟ ನಮಗೆ ಮಹತ್ವದ್ದಾಗಿ ಕಾಣಿಸುತ್ತದೆ. ಅಂದರೆ ಆಡಳಿತವು ಪ್ರದೇಶಾವಾರು ಆದ್ದರಿಂದಲೇ ಭಾಷಾವಾರು ನಿಶ್ಚಿತತೆಯನ್ನು ಪಡೆದುಕೊಂಡ ಕಾಲಾವಧಿ ಇದಾಗಿತ್ತಾದ್ದರಿಂದ ಕನ್ನಡ ರಾಷ್ಟ್ರೀಯತೆಯ ಬೆಳವಣಿಗೆಯ ಆರಂಭಿಕ ಹಂತಗಳ ಮಹತ್ವದ ಅವಧಿಯಾಗಿ ನಮ್ಮ ವಿಶೇಷ ಗಮನಕ್ಕೆ ಪಾತ್ರವಾಗುತ್ತದೆ. ಚಾಲುಕ್ಯರ ಆಡಳಿತಾವಧಿಯಲ್ಲಿ ಕಂಡುಬಂದ ಮತ್ತಿತರ ಬೆಳವಣಿಗೆಗಳ ಬಗ್ಗೆ ನಾವು ಈ ಕೆಳಕಂಡ ಅಂಶಗಳನ್ನು ಉಲ್ಲೇಖಿಸಬಹುದಾಗಿದೆ.

ಚಾಲುಕ್ಯರ ಕಾಲದಲ್ಲಿ ಐಹೊಳೆ ಶಾಸನವೊಂದರಲ್ಲಿ 'ಐನೂರ್ವರಿಗೆ' ದತ್ತಿ ಬಿಟ್ಟ ವರ್ಣನೆ ಬಂದಿದೆ. ಐನೂರ್ವರು ಎಂಬ ವಿಶೇಷ ಪದದ ಅರ್ಥದ ಬಗೆಗೆ ತುಸು ವಾದವಿದೆ. ಈ ಗುಂಪು ಐಯಾಹೊಳೆ ಐನೂರ್ವರ ವಣಿಕ ಸಂಘವಾಗಿದ್ದು, ದಕ್ಷಿಣ ಭಾರತದಲ್ಲೆಲ್ಲ ಆನಂತರದ ಶತಮಾನಗಳಲ್ಲಿ ಅನೇಕಾನೇಕ ಶಾಖೆಗಳನ್ನು ಸ್ಥಾಪಿಸಿರಬಹುದಾಗಿದೆ.

ಆ ಕಾಲದ ಸಂಸ್ಥೆಗಳು ಸಾಂಘಿಕ ಸ್ವರೂಪದವಾಗಿದ್ದವು. ಮಹಾಜನರಲ್ಲಿ ಸಾಮಾನ್ಯವಾಗಿ ಬ್ರಾಹ್ಮಣ, ಗೃಹಸ್ಥರು, 'ನಕರ'ರು (ನಾಗರಿಕರು) ಮತ್ತು 'ಪ್ರಜೆ' (ಸಾಮಾನ್ಯ ಜನತೆ) ಮುಂತಾದವರು ಮಹತ್ವದ ಪಾತ್ರವನ್ನು ವಹಿಸುತ್ತಿದ್ದರು. ಲಕ್ಷ್ಮೇಶ್ವರದ ಶಾಸನವು ರಾಜ್ಯಾಧಿಕಾರಿಗಳ ಕ್ರಮ, ಮಹಾಜನ ಹಾಗೂ ನಕರರ ಕರ್ತವ್ಯ ಹೊಣೆಗಾರಿಕೆಗಳನ್ನು ವಿವರಿಸುತ್ತದೆ. ಶಾಸನವೊಂದು ಗ್ರಾಮಾಡಳಿತ ಎಂಬ ಅರ್ಥದಲ್ಲಿ ಬಳಸಿದೆ (ಬಳ್ಳಿಗಾವಿಯ ಶಾಸನ). ಮಹಾಜನರು ಮತ್ತು ಪ್ರಜೆಗಳು ಒಟ್ಟುಗೂಡಿ ಸ್ಥಾನಿಕ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದ ಕೆಲವು ಉದಾಹರಣೆಗಳು ದೊರೆತಿವೆ.

ದೇವಾಲಯಗಳನ್ನು ಕಟ್ಟುತ್ತಿದ್ದ ಶಿಲ್ಪಿಗಳು ರಾಜರಿಂದ ವಿಶೇಷ ಆಶ್ರಯ ಪಡೆಯುತ್ತಿದ್ದು, ಬಲ್ಲುಲಿ ಬಿರುದು ಬಾವಲಿಗಳನ್ನು ಅವರಿಂದ ಪಡೆಯುತ್ತಿದ್ದರು. 'ಚಟ್ಟರಸ - ರೇವಡಿ- ಓವಜ' ಎಂಬುವವನು 'ಕೆಂಕಣದಿಸೆ ಮಾಡಿದೋರ್' ಎಂದು ಪ್ರಸಿದ್ಧನಾಗಿದ್ದ.

ಗುಂಡನೆಂಬಾತನು ತ್ರಿಭುವನಾಚಾರಿ ಎಂದರೆ ಮೂರು ಲೋಕಗಳಲ್ಲಿ ಖ್ಯಾತನಾಗಿದ್ದ ಶಿಲ್ಪಿ ಎಂಬ ಬಿರುದನ್ನು ಧರಿಸಿದ್ದ. ತನ್ನ ಕಲಾಕೃತಿಯ ಮೇಲೆ ತನ್ನ ಹೆಸರನ್ನು ನಮೂದಿಸುವುದು ಕರ್ನಾಟಕದಲ್ಲಿ ೭ನೆಯ ಶತಮಾನಕ್ಕಿಂತ ಮೊದಲು ರೂಢಿಯಲ್ಲಿರಲಿಲ್ಲ. ಚಾಲುಕ್ಯರ ಕೈಕೆಳಗೆ ವಿಶೇಷವಾಗಿ ೮ನೆಯ ಶತಮಾನದಲ್ಲಿ ಈ ಅಭ್ಯಾಸವು ಮನ್ನಣೆ ಪಡೆಯಿತು.

ಈ ಕೆಲವು ಅಂಶಗಳು ಬಾದಾಮಿ ಚಾಲುಕ್ಯರ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ಉತ್ಪಾದನೆ, ಜನರ ಜೀವನದ ಹಲವಾರು ಕ್ಷೇತ್ರಗಳಲ್ಲಿ ಸುಧಾರಣೆ ಮುಂತಾದವು ಗಳು ಬಂದಿರುವುದನ್ನು ಸೂಚಿಸುತ್ತವೆ. ಹಲವಾರು ಉತ್ಪಾದನಾ ನಿರತ ವರ್ಗಗಳು ತಮ್ಮ ಶ್ರಮದ ಕುಶಲತೆಯ ಮೂಲಕ ಮಾನ್ಯತೆ ಪಡೆಯುವುದು, ತಾನು ನಿರ್ಮಿಸಿದ ಕಲಾಕೃತಿಗಳ ಮೇಲೆ ತನ್ನ ಹೆಸರನ್ನು ಹಾಕಿಕೊಳ್ಳುವುದು ಮುಂತಾದವುಗಳೆಲ್ಲ ಸಾಮಾನ್ಯ ಜನವರ್ಗಗಳ ನಡುವೆ ರೂಪುಗೊಳ್ಳತೊಡಗಿದ್ದ 'ಸ್ವಯಂ ಅಸ್ತಿತ್ವ'ದ ಪ್ರಾಮುಖ್ಯತೆಯ ಭಾವನೆಗಳನ್ನು ಪ್ರತಿಬಿಂಬಿಸುತ್ತವೆ. ಇದು ಬಾದಾಮಿ ಚಾಲುಕ್ಯರ ಕಾಲದಲ್ಲಿ ಶಿಲ್ಪಕಾರರ ಮುಖಾಂತರ ವ್ಯಕ್ತವಾಗಿದೆ. ಆ ಸಮಯಕ್ಕೆ ಇತರೆ ಕುಶಲಕರ್ಮಿ ಪಂಗಡಗಳೂ ಕೂಡ ಈ ಅಭ್ಯಾಸ ಚಾಲ್ತಿಗೆ ತಂದುಕೊಂಡಿರಬೇಕೆಂದು ಭಾವಿಸಿದರೆ ಅದು ಸಮರ್ಪಕ ವಾಗಿರುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲಿ 'ಅಚಲನ್' ಎಂಬ ಪ್ರಖ್ಯಾತ ನಟನ ಉಜ್ವಲ ವರ್ಣನೆ ಲಭ್ಯವಿದೆ.

ಈ ರೀತಿಯಲ್ಲಿ ವ್ಯಕ್ತಿಗತ ಸಾಧನೆಗಳ ಪಟ್ಟಿ, ಕಸುಬುದಾರರ ಕೌಶಲ್ಯಕ್ಕೆ ಮಾನ್ಯತೆ, ಇವುಗಳನ್ನು ಸ್ವತಃ ಆಯಾ ಪಂಗಡಗಳು ಭಾವಿಸುವುದು ಹಾಗೂ ಅದನ್ನು ಆಳುವ ವರ್ಗ ಕೂಡ ಮಾನ್ಯ ಮಾಡಿ ಪ್ರೋತ್ಸಾಹಿಸುವುದು ಜನವರ್ಗಗಳ ಸಾಮಾಜಿಕ ಅಸ್ತಿತ್ವದ ಪ್ರಾಮುಖ್ಯತೆ, ಜೀವನದ ವಿವಿಧ ರಂಗಗಳಲ್ಲಿ ಅವರ ಶ್ರಮದ ಮಹತ್ವದ

ಪ್ರಾಮುಖ್ಯತೆ ಮುಂತಾದವುಗಳ ಬೆಳವಣಿಗೆಯನ್ನು ಸೂಚಿಸುತ್ತದೆ. ಬಾದಾಮಿ ಚಾಲುಕ್ಯರ ಕಾಲದಲ್ಲೇ ಬರೆಯಲಾದ ಶಾಸನ ಅಲ್ಲಿನ ಜನರ ಸ್ವಭಾವವನ್ನು ಉದಾತ್ತತೆಯನ್ನು ಕುರಿತು ಹೇಳುತ್ತದೆ. ''ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ, ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್'' ಎಂಬ ಹೇಳಿಕೆ ಕೂಡ ಒಂದು ನಿರ್ದಿಷ್ಟ ಪ್ರಾಂತ್ಯದ ಪ್ರಜೆಗಳ ಸಮೂಹವೊಂದು ನಿರ್ದಿಷ್ಟ ಬಗೆಯ ಔನ್ನತ್ಯಗಳನ್ನು ಹೊಂದಿದೆ ಎಂಬುದನ್ನು ಸೂಚಿಸುವ ಹಾಗೂ ಅದು ಇತರರಿಗಿಂತ ಭಿನ್ನವಾಗಿದೆ ಎಂದು ಗ್ರಹಿಸುವ ಕ್ರಮದ ಅಂಗವಾಗಿ ಬಂದಿದೆ.

ದ್ವಿಜೇತರ ಸಮುದಾಯದವರು ಅರಸರಾಗುವುದು, ಕುಶಲಕರ್ಮಿಗಳ ವ್ಯಕ್ತಿಗತ ಶ್ರಮ ಮಾನ್ಯತೆ ಪಡೆಯುವುದು, ವಣಿಕರ ಸಂಘ ವಿಸ್ತಾರಗೊಂಡು ಹಲವಾರು ಶಾಖೆಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ಸ್ಥಾಪಿಸಿಕೊಳ್ಳುವುದು (ಉದಾ : ಐಯಾಹೊಳೆ ಐನೂರ್ವರು), ಈ ಹಿಂದೆ ಎಂದೂ ಇಲ್ಲದಷ್ಟು ಪ್ರಮಾಣದಲ್ಲಿ ದೇವಸ್ಥಾನಗಳ ಶಿಲ್ಪಕೃತಿಗಳು ನಿರ್ಮಾಣವಾಗುವುದು, ಜನತೆಯ ಗುಣಗಳ ಬಗ್ಗೆ ಔನ್ನತ್ಯದ ಭಾವನೆಯನ್ನು ಪ್ರಕಟಪಡಿಸುವುದು ಮುಂತಾದ ಎಲ್ಲ ಅಂಶಗಳು ಕರ್ನಾಟಕದ ಈ ಪ್ರದೇಶದಲ್ಲಿ ಉಂಟಾದ ಒಟ್ಟಾರೆ ಬದುಕಿನ ಒಂದು ಬಗೆಯ ಬೆಳವಣಿಗೆಯನ್ನು ಸೂಚಿಸುತ್ತವೆ. ಇದನ್ನು ಕರ್ನಾಟಕದ ಸಮಾಜದೊಳಗೆ ಮೂಡಿಬಂದ ಊಳಿಗಮಾನ್ಯತೆಯ ಕೆಳಮುಖೀ ಉಪಬೆಳವಣಿಗೆಗಳ ಅವಧಿ ಎಂಬುದಾಗಿ ಸೂಚಿಸಬಹುದಾಗಿದೆ. ಇದನ್ನು ಆರ್. ಎನ್. ನಂದಿ 'ಸಬ್-ಇನ್-ಫ್ಯೂಡೇಷನ್' ಎಂಬ ಹೆಸರಿನಲ್ಲಿ ಎಂಟನೇ ಶತಮಾನದ ನಂತರ ಗುರುತಿಸುತ್ತಾರೆ. ಇದು ಊಳಿಗಮಾನ್ಯ ಕರ್ನಾಟಕದ ಹಲವು ಜನಸಮೂಹಗಳು, ಉತ್ಪನ್ನದಲ್ಲಿ ಉಂಟಾಗುತ್ತಿದ್ದ ಹೆಚ್ಚುವರಿಯನ್ನು ಆಧರಿಸಿ ತಮ್ಮ ಸಾಮುದಾಯಿಕ ಮೇಲ್ಮುಖ ಚಲನೆಯನ್ನು ಆರಂಭಿಸಿದ ಕಾಲಘಟ್ಟವಾಗಿರುತ್ತದೆ.

ಊಳಿಗಮಾನ್ಯತೆ ಎಂಬುದು ಇತರೆ ಎಲ್ಲಾ ಸಾಮಾಜಿಕ ಅವಸ್ಥೆಗಳ ರೀತಿಯಲ್ಲೇ ಒಂದು ಸಮಾಜದ ಉತ್ಪಾದಕ ಚಟುವಟಿಕೆಗಳನ್ನು ಸಂಯೋಜಿಸಲು ಏರ್ಪಟ್ಟ ಒಂದು ವ್ಯವಸ್ಥೆ. ಅದರ ಭದ್ರ ನೆಲೆಗೊಳ್ಳುವಿಕೆ ಒಂದು ಪ್ರದೇಶದ ಸ್ಥಿರ ಬೆಳವಣಿಗೆಗೆ, ಕೃಷಿ ಚಟುವಟಿಕೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಆದರಲ್ಲಿ ಕೆಳಮುಖೀ ವಿಸ್ತರಣೆ ಆರಂಭವಾದಾಗ ಒಂದು ರಾಷ್ಟ್ರೀಯತೆಯ ಜನ ವಿಭಾಗಗಳು ತಮ್ಮನ್ನು ದೃಢಗೊಳಿಸಿಕೊಂಡು ಮೇಲ್ಮುಖ ಚಲನೆ ಆರಂಭಿಸುತ್ತವೆ. ಒಂದು ಹಂತದವರೆಗೆ ತನ್ನ ಅಸ್ತಿತ್ವದ ಸಮೃದ್ಧಿಗಾಗಿಯೇ ಈ ಮೇಲ್ಮುಖ ಚಲನೆಯನ್ನು ಬೆಂಬಲಿಸುವ ಆಳುವ ವರ್ಗಗಳು ಆನಂತರ ಈ ಬೆಳವಣಿಗೆಗೆ ತಡೆಗಲ್ಲಾಗಿ ನಿಲ್ಲುತ್ತವೆ. ಯಾಕೆಂದರೆ ಈ ಮೇಲ್ಮುಖ ಚಲನೆ ಆರಂಭಿಸಿದ ವಿವಿಧ ಜನವರ್ಗಗಳು ಆಳುವ ವರ್ಗಗಳ ಆಧಾರಭೂತ ವ್ಯವಸ್ಥೆಯೊಳಗೆ ಸಡಿಲೀಕರಣವನ್ನು, ಮಾರ್ಪಾಡನ್ನು ನಿರೀಕ್ಷಿಸುತ್ತವೆ. ಅಂದರೆ, ಉತ್ಪನ್ನದ ಹೆಚ್ಚುವರಿಯಲ್ಲಿ ತಮಗೆ ಸಿಗಬೇಕಾದ ಹೆಚ್ಚುವರಿ ಪಾಲಿಗಾ

ಆಗ್ರಹಿಸುತ್ತವೆ. ಇಂತಹ ಸನ್ನಿವೇಶದಲ್ಲಿ ಸಂಘರ್ಷಗಳು ರೂಪುಗೊಂಡು ಸಮಾಜವೊಂದು ಹೊಸ ಬಗೆಯ ಸಾಮರಸ್ಯಗಳನ್ನು ರೂಪಿಸಿಕೊಳ್ಳುತ್ತದೆ.

ಬಾದಾಮಿ ಚಾಲುಕ್ಯರ ಕಾಲಘಟ್ಟವು ಕರ್ನಾಟಕದಲ್ಲಿ ಮುಂದೆ ಬರಲಿರುವ ಸರಕು ಉತ್ಪಾದನೆಯ ಹೆಚ್ಚಳ, ಕುಶಲಕರ್ಮಿ ಹಾಗೂ ಕಸುಬುದಾರ ವರ್ಗಗಳ ಸಂಘಟನೆ, ಹಳೆಯ ಊಳಿಗಮಾನ್ಯ ಮೌಲ್ಯಗಳ ಹಾಗೂ ಪದ್ಧತಿಗಳ ನಿರಾಕರಣೆಯ ಪ್ರಯತ್ನ, ಜನರ ಸಾಂಸ್ಕೃತಿಕ ಅಭಿವ್ಯಕ್ತಿ ಅವರದೇ ಭಾಷೆಯಲ್ಲಿ ಅಭಿವ್ಯಕ್ತಗೊಳ್ಳುವ ಕ್ರಿಯಾಶೀಲತೆ ಮುಂತಾದ ಬೆಳವಣಿಗೆಗಳಿಗೆ ಪೂರ್ವಪೀಠಿಕೆಯ ಯುಗವಾಗಿತ್ತು. ಈ ಬಗೆಯ ಬೆಳವಣಿಗೆಗಳು ಉಂಟಾಗುವುದಕ್ಕೆ ಅಗತ್ಯವಾದ ತಳಹದಿ ಚಟುವಟಿಕೆಗಳನ್ನು ಆರಂಭಿಸಿದ ಕಾಲಘಟ್ಟವನ್ನು ಇದು ಸೂಚಿಸುತ್ತದೆ.

೮ನೆಯ ಶತಮಾನದ ಹೊತ್ತಿಗೆ ಕೊನೆಗೊಂಡ ಬಾದಾಮಿಯ ಚಾಲುಕ್ಯರ ಪ್ರಭುತ್ವದ ನಂತರ ಕರ್ನಾಟಕವನ್ನು ರಾಷ್ಟ್ರಕೂಟರು ಆಳತೊಡಗಿದರು. ರಾಷ್ಟ್ರಕೂಟರು ಅವರ ಹೆಸರೇ ಸೂಚಿಸುವ ಹಾಗೆ ಮೌರ್ಯ ಸಾಮ್ರಾಜ್ಯದ ಆಡಳಿತದಲ್ಲಿ ಕೆಳಹಂತದ ಅಧಿಕಾರಿಗಳಾಗಿದ್ದವರು ನಂತರ ಒಂದು ರಾಜ್ಯದ ಅರಸರಾಗಿ ರೂಪುಗೊಂಡವರು. ರಾಷ್ಟ್ರಕೂಟರ ಅಗ್ಗಳಿಕೆಯೆಂದರೆ ಇವರು ಆಳಿದಷ್ಟು ಪ್ರಾಂತ್ಯವನ್ನು ಅವರ ಹಿಂದೆ ಅಥವಾ ಅವರ ನಂತರ ಆಳ್ವಿಕೆ ಮಾಡಿದ ಮತ್ತಾವ ಕರ್ನಾಟಕ ರಾಜವಂಶವೂ ಆಳಲಿಲ್ಲ. ಇವರ ಆಳ್ವಿಕೆ ೧೦ನೆಯ ಶತಮಾನದ ಕೊನೆಯ ಭಾಗದಲ್ಲಿ ಕೊನೆಗೊಂಡಿತು. ಇವರ ಆಳ್ವಿಕೆಯ ಕಾಲದಲ್ಲಿ ಕನ್ನಡವು ಪ್ರಧಾನ ಶಾಸನ ಭಾಷೆಯಾಗಿ ಮಾರ್ಪಟ್ಟಿತ್ತು.

ರಾಷ್ಟ್ರಕೂಟರ ಕಾಲದಲ್ಲಿ ನಾವು ಕನ್ನಡ ಭಾಷೆಯು ಒಂದು ಸಾಹಿತ್ಯಿಕ ಭಾಷೆಯಾಗಿ ಕಲಾಭಿವ್ಯಕ್ತಿಯ ಸೂಕ್ಷ್ಮತೆಗಳನ್ನು ರೂಢಿಸಿಕೊಂಡಿದ್ದನ್ನು ಕಾಣುತ್ತೇವೆ. ನಮಗೆ ಉಪಲಬ್ಧವಾಗಿರುವ ಎರಡು ಪ್ರಾಚೀನ ಕನ್ನಡ ಕೃತಿಗಳೂ ಕೂಡ ಇದೇ ಕಾಲಘಟ್ಟಕ್ಕೆ ಸಂಬಂಧಪಟ್ಟವು.

ಈ ಕಾಲದ ಕನ್ನಡ ಭಾಷೆಯ ಸಾಹಿತ್ಯಿಕ ಬಳಕೆಯ ವಿಶೇಷತೆ ಏನೆಂದರೆ ಜನರಿಗೆ ಅರ್ಥವಾಗುವ ರೀತಿಯಲ್ಲಿ ಕೃತಿಯನ್ನು ಬರೆಯಬೇಕು ಎಂಬ ಆಶಯದ ಉಗಮ ಆ ಕಾಲಘಟ್ಟದಲ್ಲಿ ಉಂಟಾಗಿರುವುದನ್ನು ಅದು ಸೂಚಿಸುತ್ತದೆ. ಅದನ್ನು ವಿ. ಸೀತಾರಾಮಯ್ಯ ಹೀಗೆ ಸೂಚಿಸುತ್ತಾರೆ -

'' ಆ ಪ್ರೌಢ ಭಾಷೆಗಳಿಂದ ಜನರ ಭಾಷೆಗೆ ಇವರು ತಿರುಗಬೇಕಾಯಿತು. ಇದು ಅವರ ಬರವಣಿಗೆಗೆ ಒಂದು ಔಚಿತ್ಯವನ್ನೂ ಪ್ರಾಮುಖ್ಯವನ್ನೂ ತಂದುಕೊಟ್ಟು ಹೊಸದಾಗಿ ರೂಪುಗೊಳ್ಳುತ್ತಿದ್ದ ಕನ್ನಡಭಾಷೆಗೆ ಹಿಂದೆ ಇಲ್ಲದಿದ್ದ ಒಂದು ಅರ್ಥವ್ಯಾಪ್ತಿಯನ್ನು ಅಭಿವ್ಯಂಜನೆಯನ್ನು ಜನಮನಸ್ಸನ್ನು ಒಲಿಸುವ ಶಕ್ತಿಯನ್ನು ಪಡೆಯುವಂತೆ ಮಾಡಿತು. ಹೀಗೆ ಕನ್ನಡ ಸಾಹಿತ್ಯ ಮೊದಲ ಬಾರಿಗೆ ರಂಗಪ್ರವೇಶ ಮಾಡಿದುದು ಅತ್ಯುತ್ತಮವಾದ ಸನ್ನಿವೇಶದಲ್ಲಿ. ಪಂಪನಿಗೆ ಹಿಂದೆ ಅನೇಕ ಲೇಖಕರು

ಬರೆದಿರಬಹುದು. ಆದರೂ ಕನ್ನಡಕ್ಕೆ ಆತ ಆದಿಕವಿ. ಆತನು ಕನ್ನಡ ಭಾಷೆಯಲ್ಲಿ ಬರೆದ ಮೊದಲ ಕವಿಯೇನೂ ಅಲ್ಲ. 'ಕವಿರಾಜ ಮಾರ್ಗ' ಗ್ರಂಥವೇ ಇದೆ - ಹಾಗಲ್ಲವೆಂದು ತಿಳಿಸುವುದಕ್ಕೆ. ಆದರೆ ಅಚ್ಚವಾದ ಅಪ್ರತಿಹತವಾದ ಯೋಗ್ಯತೆಯಲ್ಲಿ (ಕನ್ನಡವನ್ನು) ಸ್ಥಾಪಿಸಲು ಶಕ್ತರಾದವರಲ್ಲಿ ಅವನು ಮೊದಲಿಗ''.[9]

ಈ ಸಮಯದಲ್ಲಿ ಸೃಷ್ಟಿಯಾದ, ಸ್ವತಃ ರಾಷ್ಟ್ರಕೂಟ ದೊರೆ ಅಮೋಘವರ್ಷ ನೃಪತುಂಗ ರಚಿಸಿದನೆನ್ನಲಾಗುವ, ಶ್ರೀವಿಜಯ ಎಂಬ ಕವಿ ಬರೆದಿರಬೇಕು ಎಂಬ ಜಿಜ್ಞಾಸೆಯಿರುವ ಕವಿರಾಜಮಾರ್ಗ ಕರ್ನಾಟಕದ ನಾಡುಗಳನ್ನು, ಮೇರು ಸೀಮೆಗಳನ್ನೂ ವಿವರಿಸುವ ಭಾಗಗಳನ್ನು ಒಳಗೊಂಡಿದೆ.

'ಮೊದಲ ಪರಿಚ್ಛೇದದ ಆರಂಭ ಭಾಗದಲ್ಲಿ ನಾಡಿನ ಮೇರೆ ಉತ್ತರದಲ್ಲಿ ಗೋದಾವರಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ ಎಂದು ನಿರ್ದೇಶವಾಗಿದೆ. ಇಂದಿಗೂ ಅವೇ ಕನ್ನಡನಾಡಿನ ಮೇರುಗಳು. ಅದರಲ್ಲಿಯೂ ಕನ್ನಡದ ತಿರುಳು ಕಿಸು ಒಳಲು, ಕೊಪ್ಪಣ, ಪುಲಿಗೆರೆ, ಒಕ್ಕುಂದ ಇವುಗಳ ನಡುವೆ ಎಂದಿದೆ. ಇಂದು ಧಾರವಾಡ, ಬಿಜಾಪುರ, ರಾಯಚೂರು, ಬಳ್ಳಾರಿ, ಬೆಳಗಾಂ ಜಿಲ್ಲೆಗಳ ನಡುವಣ ಪ್ರದೇಶ ಅದು'.

ಇದು ನಾಡಿನ ಮೇರೆಯನ್ನು ಮಾತ್ರವಲ್ಲದೆ ಅಲ್ಲಿಯ ಜನರ ಬುದ್ಧಿವಂತಿಕೆಯ ಬಗೆಗೂ ವರ್ಣನೆಯನ್ನು ಒಳಗೊಂಡಿದೆ.

''ಪದನರಿದು ನುಡಿಯಲುಂ ನುಡಿ
ದುದನರಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್''

- ಎಂಬುದು ಅಲ್ಲಿನ ಒಂದು ಪದ್ಯ.

ಈ ಹಿಂದಿನ ಬಾದಾಮಿ ಚಾಲುಕ್ಯರ ಕಾಲದ ಶಾಸನವೊಂದರಲ್ಲಿ ಅವರ ಪ್ರದೇಶದ ಜನಸಮುದಾಯಗಳ ಸಾಮಾನ್ಯ ಗುಣಗಳ ಬಗ್ಗೆ ವರ್ಣನೆ ಇದ್ದು ಕವಿರಾಜ ಮಾರ್ಗದ ಕಾಲದ ಹೊತ್ತಿಗೆ ತನ್ನನ್ನು ಒಂದು ನಿರ್ದಿಷ್ಟ ಮೇರೆಗಳುಳ್ಳ ಪ್ರದೇಶವನ್ನಾಗಿಯೂ, ಅದರಲ್ಲಿ ವಾಸಿಸುತ್ತಿರುವ ಜನತೆ ಎಲ್ಲೆಲ್ಲಿ ಈ ಭಾಷೆಯ ತಿರುಳನ್ನು ಸಂರಚಿಸಿದ್ದಾರೆ ಹಾಗೂ ಆ ಜನರ ಪಾಂಡಿತ್ಯದ ವಿಶೇಷತೆಗಳೇನು ಎಂಬ ಅಂಶವನ್ನು ವರ್ಣಿಸುವ ಹಂತಕ್ಕೆ ಇದು ತಲುಪಿದೆ. ಭಾಷಾ ಸಮುದಾಯವೊಂದು ತನ್ನನ್ನು ಒಂದು ನಿರ್ದಿಷ್ಟ ಮೇರೆಯಲ್ಲಿ ಬಾಳುತ್ತಿರುವ, ನಿರ್ದಿಷ್ಟ ಗುಣಸ್ವಭಾವಗಳ ಪರಸ್ಪರ ಸಂಬಂಧಿತವಾದ ಒಂದು ಸಮುದಾಯವೆಂದು ಭಾವಿಸಿಕೊಳ್ಳ ತೊಡಗುವುದು, ಅದನ್ನು ಗುರುತಿಸುವ ಶಾಸನಗಳು, ಕೃತಿಗಳು ಹೊರಹೊಮ್ಮುವುದು ಮುಂತಾದವೆಲ್ಲ ಆ ರಾಷ್ಟ್ರೀಯತೆಯ ಮುಂದಿನ ಬೆಳವಣಿಗೆಗೆ ಅಗತ್ಯವಾಗುವ

ತಳಹದಿಗಳ ಆರಂಭಿಕತೆಯನ್ನು ಸೂಚಿಸುತ್ತದೆ. ಈ ಪದ್ಯದಲ್ಲಿ ಬರುವ ಕರ್ನಾಟಕದ ಗಡಿಗಳ ವರ್ಣನೆ, ಅಷ್ಟು ಪ್ರಾಂತ್ಯಗಳ ನಡುವಿನ ಜನತೆಯ ನಡುವೆ ಸಾಮಾಜಿಕ ವಹಿವಾಟುಗಳ ಪ್ರಮಾಣ ಒಂದು ನಿರ್ದಿಷ್ಟ ವ್ಯಾಪ್ತಿಯಲ್ಲಿ ಮತ್ತೆ ಮತ್ತೆ ಪುನರಾವರ್ತಿತವಾಗುವುದನ್ನು, ಹಾಗೆ ಪುನರಾವರ್ತಿತವಾಗುವುದಕ್ಕೆ ಅಗತ್ಯವಾದಷ್ಟು ಕೃಷಿ ಹಾಗೂ ವಾಣಿಜ್ಯಗಳ ಬೆಳವಣಿಗೆಯಾಗಿರುವುದನ್ನು ಸೂಚಿಸುತ್ತದೆ.

ನಾವು ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ಕವಿರಾಜಮಾರ್ಗದಲ್ಲಿ ನಾವೆಲ್ಲ ಕನ್ನಡಿಗರು, ಒಂದಾಗಿಯೇ ಬಾಳಲಿರುವವರು ಎಂಬಂತಹ ಪ್ರಕಟ ಇಚ್ಛೆಯನ್ನು ಅದು ಪ್ರತಿಬಿಂಬಿಸುತ್ತಿಲ್ಲವಾದರೂ 'ನಾವೆಲ್ಲ ಕನ್ನಡದವರು ಜೊತೆಯಾಗಿ ಬಾಳಿದವರು' ಎಂಬ ಗ್ರಹಿಕೆಯ ಮಂಡನೆಯನ್ನಂತೂ ಸ್ಪಷ್ಟವಾಗಿ ಮಾಡುತ್ತಿದೆ.

ಸಾಮಾನ್ಯವಾಗಿ ಒಂದು ಕೃತಿಯು ಒಂದು ಸಮಾಜದ, ಒಂದು ಸಂದರ್ಭದ ಆಶೋತ್ತರಗಳನ್ನು ಕೃತಿಕಾರನಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ವ್ಯಕ್ತಪಡಿಸುತ್ತಿರುತ್ತದೆಯಾದ್ದರಿಂದ ಅದರಲ್ಲಿ ಹೀಗೆ ಕ್ವಚಿತ್ತಾಗಿಯಾದರೂ ವ್ಯಕ್ತವಾಗುವ ಧೋರಣೆಗಳು ನಮಗೆ ಆಕರ ಮೂಲಗಳಾಗುತ್ತವೆ. ಇದರ ಜೊತೆಗೆ ಈಗಾಗಲೇ ನಾವು ಗಮನಿಸಿರುವಂತೆ ಯಾವುದೇ ಕೃತಿ ತನ್ನ ಸಮಕಾಲೀನ ವಸ್ತುಸ್ಥಿತಿಯ ಐತಿಹಾಸಿಕ ಆಧಾರದೊಂದಿಗೆ ತಾಳೆಯಾಗುವಂತೆ ಕೂಡ ಇರಬೇಕು. ಈ ಅರ್ಹತೆ ಕವಿರಾಜಮಾರ್ಗಕ್ಕೆ ಬಹುಪಾಲು ಅಂಶಗಳಲ್ಲಿ ಇದೆಯಾದುದರಿಂದ 'ಕಾವೇರಿಯಿಂದಮಾ ಗೋದಾವರಿ'ಎಂದು ಉಲ್ಲೇಖಿಸಿರುವ ಭಾಗವು ನಮ್ಮ ಗಮನಕ್ಕೆ ಹಾಗೂ ಪರಿಶೀಲನೆಗೆ ತಕ್ಕುದಾಗಿ ಪರಿಣಮಿಸಿ, ಆಗಿನ ಕನ್ನಡ ಭಾಷೆಯ ಜನಸಮುದಾಯವು ಗಳಿಸಿಕೊಳ್ಳತೊಡಗಿದ್ದ ಒಂದು ಪ್ರಜ್ಞೆಯ ಪ್ರತೀಕವಾಗಿ ನಿಲ್ಲುತ್ತದೆ. ಕವಿರಾಜಮಾರ್ಗದ ರಚನೆ, ಆ ಕಾಲಘಟ್ಟದಲ್ಲಿ ಕನ್ನಡ ಭಾಷೆಯ ಸೂತ್ರೀಕರಣಕ್ಕೆ ಪ್ರಭುತ್ವವು ಕೈಗೊಂಡ ಪ್ರಯತ್ನದ ರೂಪವಾಗಿದೆ. ಆವರೆಗೆ ಜನಪದೀಯವಾಗಿ ಹರಡಿಕೊಂಡಿದ್ದ ಕನ್ನಡದ ಹಲವು ದೇಸೀ ರೂಪಗಳನ್ನು ಪರಿಷ್ಕರಿಸಿ, ವ್ಯಾಕರಣವೊಂದನ್ನು ರಚಿಸಿ, ಕನ್ನಡಕ್ಕೆ ಶಾಸ್ತ್ರಾಭಿವ್ಯಕ್ತಿಯ ಸಾಮರ್ಥ್ಯ ತಂದುಕೊಡಲು ಆಗಿನ ಆಳುವ ವರ್ಗ ನಡೆಸಿದ ಪ್ರಯತ್ನವೆಂಬುದು ಬಹಳ ಮುಖ್ಯ ಕೆಲಸವಾಗಿದೆ.

ಕೆರೆ, ಕಟ್ಟೆ, ವ್ಯವಸಾಯ ಸಾಧನಗಳ ನಿರ್ಮಾಣ ಮುಂತಾದ ಚಟುವಟಿಕೆಗಳನ್ನು ಕವಿರಾಜಮಾರ್ಗದ ಕಾಲಘಟ್ಟಕ್ಕಿಂತ ಹಿಂದಿನ ರಾಜವಂಶಗಳು ಹೇರಳವಾಗಿ ಕೈಗೊಂಡವು. ಅದರ ಹಿನ್ನೆಲೆಯಲ್ಲಿ ಕನ್ನಡ ಸಮುದಾಯವು ತನ್ನ ಆದಿಮ ಸ್ವಭಾವದಿಂದ ಪ್ರಧಾನವಾಗಿ ಊಳಿಗಮಾನ್ಯ ಸಮಾಜವಾಗುವ ಹಂತವನ್ನು ತಲುಪಿತು. ಜನವಿಭಾಗಗಳ ನಡುವೆ ಕೃಷಿ ಉತ್ಪಾದನೆ ಹಾಗೂ ವಹಿವಾಟು ಸಂಚಿತಗೊಳ್ಳತೊಡಗಿದ ನಂತರ, ಆ ಸಮುದಾಯವನ್ನು ಉದ್ದೇಶಿಸಲು, ಅವರದೇ ಭಾಷೆಯಲ್ಲಿ ವ್ಯವಹರಿಸಲು ಹಾಗೂ ಆ ಭಾಷೆಯನ್ನು ಬೇರೆ ಬೇರೆ ಕ್ಷೇತ್ರಗಳ ಅಭಿವ್ಯಕ್ತಿಗೆ

ತಕ್ಕುದಾಗುವಂತೆ ನಿರ್ಮಿಸಲು ಪ್ರಭುತ್ವ ಕ್ರಿಯಾಶೀಲವಾಗಿದೆ ಎಂಬುದನ್ನು ಕವಿ ರಾಜಮಾರ್ಗ ಕೃತಿಯ ರಚನೆಯು ನಿದರ್ಶಿಸುತ್ತಿದೆ.

ಒಂದು ಭಾಷೆಯ ಲಾಕ್ಷಣಿಕ ಕೃತಿ ರೂಪುಗೊಂಡಿರುವುದು ಮಾತ್ರವಲ್ಲದೆ, ಅದರಲ್ಲಿ ಪ್ರಕಟವಾಗಿರುವ ಕಾವ್ಯಸಂಬಂಧಿ ರಚನಾಸೂತ್ರಗಳಿಗೆ ಆಗಿನ ರಾಜರ ಅಂಗೀಕಾರವಿದೆಯೆಂಬುದನ್ನೂ ('ನೃಪತುಂಗ ದೇವಾನುಮತಮಪ್ಪ')ಸೂಚಿಸುವ ಕವಿರಾಜಮಾರ್ಗದ ಪದ್ಯಗಳು ಸಮಾಜ ಹಾಗೂ ಆ ಸಮಾಜದ ಸಂಯೋಜನೆಗೆ ಸಾಧನವಾದ ಭಾಷೆಯನ್ನು ಸುಸಂಘಟಿತಗೊಳಿಸಲು ಪ್ರಭುತ್ವ ನಡೆಸಿದ ಮೊದಲ ಪ್ರಯತ್ನಕ್ಕೆ ನಿದರ್ಶನವಾಗಿ ನಿಂತಿವೆ.

'ಕವಿರಾಜಮಾರ್ಗ' ಕೃತಿ ಕೆ. ವಿ. ಸುಬ್ಬಣ್ಣನವರ ಪ್ರಕಾರ 'ಕನ್ನಡತ್ವ'ದ ಅಭಿವ್ಯಕ್ತಿ.[10] ಅದನ್ನು ಪೂರ್ತಿಯಾಗಿ ಹಾಗೇ ಸಮೀಕರಿಸಲಾಗದಿದ್ದರೂ, ಪ್ರಭುತ್ವವೊಂದು ಕನ್ನಡತ್ವ ನಿರ್ಮಾಣಕ್ಕೆ ಕೈಗೊಂಡ ಭಾಷಿಕ ಪ್ರಯತ್ನದ ಅಭಿವ್ಯಕ್ತಿ ಎಂದಂತೂ ನಾವು ಗಮನಿಸಬೇಕು.

ಇದೇ ರಾಷ್ಟ್ರಕೂಟರ ಅವಧಿಯಲ್ಲಿ ಕನ್ನಡದ ಮತ್ತೊಂದು ಮಹಾಕೃತಿಯಾದ ಪಂಪಭಾರತ ಹೊರಬಂದಿದೆ. ಪಂಪನು ವಿಕ್ರಮಾರ್ಜುನವಿಜಯವನ್ನು ಮಾತ್ರವಲ್ಲದೆ ಆದಿಪುರಾಣ ಎಂಬ ಮತ್ತೊಂದು ಕೃತಿಯನ್ನು ಬರೆದಿದ್ದಾನೆ. ವಿಕ್ರಮಾರ್ಜುನ ವಿಜಯವು ತನ್ನ ಒಡೆಯನಾಗಿದ್ದ ಅರಿಕೇಸರಿಯನ್ನು ಕಥಾನಾಯಕನಾಗಿ ಕಲ್ಪಿಸಿಕೊಂಡಿರುವ, ಅದನ್ನು ಮಹಾಭಾರತದ ಕಥೆಯ ಮೂಲಕ ಮಂಡಿಸಿರುವ ಕೃತಿ. ಪಂಪನಿಗೆ ಅಸಾಧಾರಣ ಕವಿತಾಶಕ್ತಿ ಇದೆ. ಆತನ ಬಗ್ಗೆ ವಿ. ಸೀತಾರಾಮಯ್ಯ, ''ಒಂದು ಮಾತಿನ ಎರಕ, ಒಂದು ಪದ್ಯದ ಕೆಲಸವನ್ನು ಮಾಡುತ್ತದೆ; ಒಂದು ಪದ್ಯ ಒಟ್ಟು ಒಂದು ಪ್ರಸಂಗವನ್ನು ಚಿತ್ರಿಸಿ ಮುಗಿಸುತ್ತದೆ. ಪಂಪನ ಕಾವ್ಯರಚನೆ ಅಷ್ಟು ಅಡಕವಾದದು, ಅಷ್ಟು ಕಾರ್ಯಕಾರಿ. ಅವನ ಭಾಷೆ ನಿಶಿತವಾದ ಒಂದು ಆಯುಧ. ಮಾತುಗಳನ್ನೂ ನುಡಿಗಟ್ಟುಗಳನ್ನೂ ಲಯಗಾನಗಳನ್ನೂ ಹೊಮ್ಮಿಸುವುದರಲ್ಲಿ ಅವನ ಪದರಚನಾ ಶಕ್ತಿ ಎಷ್ಟು ಅದ್ಭುತವೆಂಬುದನ್ನು ತೋರಿಸುತ್ತದೆ. ಅಗತ್ಯಕ್ಕೆ ತಕ್ಕಂತೆ ಅದು ಹೇಗೆ ಹೊಂದಿಕೊಳ್ಳುತ್ತದೆ ಎಂಬುದು ಗೊತ್ತಾಗುತ್ತದೆ. ಹಾಗೆಯೇ ಅವನ ಭಾಷಾಸಂಪತ್ತಿ; ಹೇಗೆಂದರೆ ಹಾಗೆ ಅರ್ಥವತ್ತಾಗಬಲ್ಲ ಭಾಷಾಪ್ರೌಢಿಮೆಯಲ್ಲಿ ತಾನೇ ತಾನು. ಕನ್ನಡ ಭಾಷೆ ಇಷ್ಟು ಹೆಚ್ಚು ಶಕ್ತಿಯಿಂದ ಇನ್ನಾರಿಂದಲೂ ಪ್ರಯುಕ್ತವಾಗಿಲ್ಲ''[11] ಎಂದು ಹೇಳುತ್ತಾರೆ.

ಆದಿಕವಿ ಪಂಪ ಕನ್ನಡದಲ್ಲಿ ಮೇರುಕೃತಿಯೊಂದನ್ನು ಬರೆದು ಕನ್ನಡದ ಹಿರಿಮೆಯನ್ನು ಹೆಚ್ಚಿಸಿದ ಎಂಬ ಕಾರಣಕ್ಕೆ ಮಾತ್ರ ಅವನ ಕಾವ್ಯಪ್ರೌಢಿಮೆಯ ಬಗ್ಗೆ ಉಲ್ಲೇಖವನ್ನು ಇಲ್ಲಿ ಕೊಡುತ್ತಿಲ್ಲ. ಇಲ್ಲಿ ಸೂಚಿಸಬಯಸುತ್ತಿರುವುದೇನೆಂದರೆ ಕನ್ನಡ ಭಾಷೆಯ ಕಾವ್ಯಾತ್ಮಕ ಶಕ್ತಿ ಎಷ್ಟು ಸತ್ವಶಾಲಿಯಾಗಿತ್ತು ಎಂಬ ಅಂಶ. ಕವಿ ಎಂಬುವವನು ಭಾಷೆಯ ನಿರ್ಮಾಪಕನಲ್ಲ, ಬದಲಾಗಿ ಶಬ್ದ ಗಾರುಡಿಗ. ಅವನು

ಜನರ ನಡುವೆ ಪ್ರಚಲಿತದಲ್ಲಿರುವ ಆಡುಮಾತಿನ ನುಡಿಗಟ್ಟುಗಳನ್ನು, ಅನುಭವದ ಗಾದೆಗಳನ್ನು , ಸೌಂದರ್ಯದ ವರ್ಣನೆಗಳನ್ನು, ಪಾರಿಭಾಷಿಕಪದಸಂಪತ್ತನ್ನು ಬಳಸಿಕೊಂಡು, ತನ್ನ ಕಾವ್ಯಪ್ರತಿಭೆಯ ಮೂಸೆಯಲ್ಲಿ ಅವುಗಳನ್ನು ಒಂದು ಕ್ರಮದಲ್ಲಿ ವಿಶೇಷ ಸೌಂದರ್ಯದಿಂದ ಕೂಡಿರುವ ಹಾಗೆ ರಚಿಸುತ್ತಾನೆ.

ಒಂದು ಭಾಷೆ ಆ ಪ್ರಮಾಣಕ್ಕೆ ಬೆಳೆದು ಬಂದಿಲ್ಲವಾದರೆ ಮಹಾಭಾರತದಂತಹ ಪೌರಾಣಿಕ ಕಥೆಯನ್ನೂ, ಸಮಕಾಲೀನ ವರ್ತಮಾನದ ಅರಿಕೇಸರಿಯ ಶೌರ್ಯಪ್ರತಾಪಗಳನ್ನೂ ಅಷ್ಟು ಚಿತ್ರವತ್ತಾಗಿಸಲು ಸಾಧ್ಯವಾಗುವುದಿಲ್ಲ. ಚಾಲುಕ್ಯರ ಕಾಲದ ಅದ್ಭುತಶಿಲ್ಪಕಲೆಯ ವಾಸ್ತುಗಳಾಗಲೀ, ರಾಷ್ಟ್ರಕೂಟರ ಕಾಲದ ಅದ್ಭುತ ಪದಸಂಪತ್ತಿನ ಕೃತಿಗಳಾಗಲೀ ಸೂಚಿಸುತ್ತಿರುವುದು ಒಟ್ಟಾರೆಯಾಗಿ ಕರ್ನಾಟಕದ ಜನಸಮೂಹಗಳಲ್ಲಿ ಉಂಟಾಗುತ್ತಿದ್ದ ಒಂದು ನಿರ್ದಿಷ್ಟ ಪರಿಸ್ಥಿತಿಯನ್ನು. ಯಾವ ಸಮಾಜ ತನ್ನ ಉತ್ಪಾದನೆಯಲ್ಲಿ ಸಾಕಷ್ಟು ಹೆಚ್ಚುವರಿಯನ್ನು ಸಾಧಿಸಿರುವುದಿಲ್ಲವೋ ಅಂತಹ ಸಮಾಜದಲ್ಲಿ ಈ ಬಗೆಯ ಮಹತ್ತರ ಕಲಾಕೃತಿಗಳು ಹೊರಹೊಮ್ಮುವುದಿಲ್ಲ. ಒಂದು ಸಮಾಜ ಉತ್ಪಾದನೆಯಲ್ಲಿ ಹೆಚ್ಚುವರಿಯನ್ನು ತಕ್ಕಮಟ್ಟಿಗೆ ಗಳಿಸಿದ ಮೇಲೆಯೇ ಆ ಸಮಾಜದೊಳಗೆ ಮಹತ್ ಸಾಹಿತ್ಯಕೃತಿಗಳ ಹಾಗೂ ಕಲಾಕೃತಿಗಳ ಅಸ್ತಿತ್ವ ಕೈಗೂಡುತ್ತದೆ.

ಉತ್ಪಾದನೆಯ ಹೆಚ್ಚುವರಿಯೆಂಬುದು ಸಹಜವಾಗಿ ಉತ್ಪಾದಕ ಶಕ್ತಿಗಳಲ್ಲಿ ಬಂದಿರುವ ಒಂದು ನಿಶ್ಚಿತ ಹಂತದ ಅಭಿವೃದ್ಧಿಯನ್ನು ಸೂಚಿಸುತ್ತದೆ. ಉತ್ಪಾದಕ ಶಕ್ತಿಗಳ ಅಭಿವೃದ್ಧಿ ಎಂಧರೆ ಒಂದು ಸಮಾಜದ ಜನಸಮುದಾಯಗಳ ನಡುವೆ ಚಾಲ್ತಿಗೆ ಬಂದಿರುವ ಉತ್ಪಾದಕತೆಯ ಹೆಚ್ಚಳ. ಇಂತಹ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ನಮಗೆ ದೊರೆತಿರುವ ಅತ್ಯುತ್ತಮ ಭಾಷಾಪ್ರೌಢಿಮೆಯ ಸಾಹಿತ್ಯ ಕೃತಿ ಎನ್ನುವುದು, ತನ್ನಷ್ಟಕ್ಕೆ ಅದರ ಆಕೃತಿಯಿಂದ ಇಂತಹ ಒಂದು ಐತಿಹಾಸಿಕ ಸನ್ನಿವೇಶವನ್ನು ಸೂಚಿಸಲು ಶಕ್ತವಾಗುಳ್ಳ ಆಕರ ಮೂಲವಾಗುತ್ತದೆ.

ಯಾಕೆಂದರೆ ಭಾಷೆಯೆಂಬುದು ಜನರ ಜೀವನದೊಂದಿಗೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರುವ, ಅವರ ಒಟ್ಟಾರೆ ಸಾಮಾಜಿಕ ಸ್ಥಿತಿಗತಿಗಳನ್ನು ಪ್ರತಿಬಿಂಬಿಸುವ ಸಾಮಾಜಿಕ ಅರಿವು, ಕಲ್ಪನೆ, ಭಾವನಾತ್ಮಕ ಗ್ರಹಿಕೆ ಅವುಗಳ ಅಭಿವ್ಯಕ್ತಿ ಮುಂತಾದವುಗಳನ್ನು ಒಳಗೊಂಡಿರುವ ಒಂದು ಶಬ್ದ ಭಾಂಡಾರ. ಪ್ರತಿ ಶಬ್ದದ ಬೆಳವಣಿಗೆಯೂ ಒಂದು ಅವಿರತ ಶ್ರಮ, ಅನುಭವ ಹಾಗೂ ಕಲ್ಪನೆಗಳ ಸಮ್ಮಿಳನ. ಒಂದೊಂದು ಪಾರಿಭಾಷಿಕಶಬ್ದ ಭಾಷೆಯೊಳಗೆ ರೂಪುಗೊಂಡಾಗಲೂ ಅದರ ಹಿಂದೆ ಎಷ್ಟೋ ದೀರ್ಘಕಾಲದ ಅನುಭವ ನೆಲೆ ಮಾಡಿಕೊಂಡಿರುತ್ತದೆ.

ಆ ದಿಸೆಯಲ್ಲಿ ಪಂಪ ಮಹಾಭಾರತದ ಸಾಹಿತ್ಯಿಕ ಪ್ರೌಢಿಮೆ, ಪಂಪನ ಕಾವ್ಯ ಪ್ರತಿಭೆಗೆ ಸಂದ ಗರಿಯಾದ ಸಮಯದಲ್ಲಿಯೇ ಆ ಸಮಾಜದ ಒಟ್ಟಾರೆ ಸಾಮಾಜಿಕ

ಪರಿಸ್ಥಿತಿಗೆ ಸಂದ ಅಭಿನಂದನೆಯೂ ಆಗಿರುತ್ತದೆ. ರಾಷ್ಟ್ರಕೂಟರ ಕಾಲದಲ್ಲಿ ಕರ್ನಾಟಕದ ಊಳಿಗಮಾನ್ಯ ಸಮಾಜವು ಹಲವು ಬಗೆಯ ವಿಸ್ತೃತ ಚಟುವಟಿಕೆಗಳಲ್ಲಿ, ಅದರ ಒಳಗೆ ಒಡಮೂಡುತ್ತಿದ್ದ ಸಂಘರ್ಷಗಳ ಹಿನ್ನೆಲೆಯಲ್ಲಿ ಮತ್ತಷ್ಟು ರೂಪಾಂತರಗಳಿಗೆ ಸನ್ನದ್ಧವಾಗತೊಡಗಿತ್ತು. ಅವುಗಳಲ್ಲಿ ಅಲ್ಲಿಯವರೆಗೆ ಆಸ್ಥಾನದ ಭಾಷೆಯಾಗಿದ್ದ ಹಾಗೂ ಶಾಸನ ಕಾವ್ಯಗಳ ಮಾಧ್ಯಮವಾಗಿದ್ದ ಸಂಸ್ಕೃತವನ್ನು ಕೈಬಿಟ್ಟು ಕನ್ನಡಕ್ಕೆ ಪ್ರಾಮುಖ್ಯತೆ ಕೊಡತೊಡಗಿದ್ದು, ಸಮಾಜದ ಶೂದ್ರವರ್ಗಗಳಾಗಿದ್ದ ಅನೇಕ ಜನಸಮುದಾಯಗಳು ತಮ್ಮ ಮಹತ್ವವನ್ನು ಪ್ರತಿಪಾದಿಸಬಯಸಿದ್ದು ಮುಂತಾದವುಗಳು ಈ ಬಗೆಯ ಸೂಚನೆಯನ್ನು ನೀಡುತ್ತವೆ.

ಇವು ಮುಂದಿನ ಶತಮಾನಗಳಲ್ಲಿ ಸ್ಪಷ್ಟ ರೂಪದಲ್ಲಿ ಪ್ರಕಟಗೊಂಡವಾದರೂ ಅದಕ್ಕೆ ಅಗತ್ಯವಾದ ಪ್ರಾತಿಪದಕ ಸನ್ನಿವೇಶಗಳು ಕರ್ನಾಟಕದಲ್ಲಿ ಈ ಸಮಯದಲ್ಲಿ ಸಂಚಯಿತಗೊಳ್ಳತೊಡಗಿದ್ದವು ಎಂಬುದನ್ನು ನಾವು ಗುರುತಿಸಬೇಕು.

ಪಂಪ ಮಹಾಭಾರತದಲ್ಲಿ ಭೀಷ್ಮ, ದ್ರೋಣ ಹಾಗೂ ಕರ್ಣರ ನಡುವಿನ ಸಂವಾದ ಪ್ರಸಂಗವೊಂದು ಬಹಳ ಪ್ರಸಿದ್ಧವಾದ ಭಾಗ. ಹಾಗೆಯೇ ಪಂಪನ 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಹೇಳಿಕೆಯೂ ಬಹಳಷ್ಟು ಪ್ರಸಿದ್ಧವಾದುದು. ದ್ರೋಣ ಹಾಗೂ ಕರ್ಣರ ನಡುವಿನ ಪ್ರಸಂಗದಲ್ಲಿ ಜಾತಿಯ ಬಗ್ಗೆ ಬರುವ ಕರ್ಣನ ಮಾತುಗಳು ಬಹಳ ಶಕ್ತಿವತ್ತಾಗಿವೆ. ಭೀಷ್ಮನಿಗೆ ಪಟ್ಟ ಬೇಡ, ಬದಲಾಗಿ ಶತ್ರುಗಳ ಪಡೆಗಳೆಲ್ಲವನ್ನು ಸೋಲಿಸಬೇಕೆಂದರೆ ತನಗೆ ಸೇನಾಧಿಪತ್ಯದ ಪಟ್ಟ ಕಟ್ಟಬೇಕು ಎಂದು ಹೇಳುವಾಗ, ಭೀಷ್ಮನ ವೃದ್ಧತೆ ಅವನ ಶಸ್ತ್ರಗಳ ದುರ್ಬಲತೆ 'ಕಣ್‌ಗೆಟ್ಟ' ಸ್ಥಿತಿ ಮುಂತಾದವುಗಳನ್ನು ಹೆಸರಿಸಿ ಕರ್ಣ ಅಲ್ಲಗಳೆಯುತ್ತಾನೆ. ಈ ಸಂದರ್ಭದಲ್ಲಿ ಮಾತನಾಡುವ ದ್ರೋಣ, 'ನಾಲಿಗೆ ಕುಲಮಂ ಸೂಚಿಸುವಂತೆ' ಎಂದು ಕರ್ಣನ ಜಾತಿಯನ್ನು ಹೀಯಾಳಿಸಿ, ನಿನ್ನ ಕೀಳುಹುಟ್ಟಿನ ಕಾರಣದಿಂದಲೇ ಭೀಷ್ಮನಂತಹ ಮಹಾರಥಿಯನ್ನು ಅವಮಾನಗೊಳಿಸಿದ್ದೀಯ ಎನ್ನುತ್ತಾನೆ. ಇದಕ್ಕೆ ಉತ್ತರವಾಗಿ ಕರ್ಣ, 'ಕುಲಂ ಕುಲಮಲ್ತು, ಛಲಂ ಕುಲಂ, ಗುಣಂ ಕುಲಂ, ಅಭಿಮಾನಂ ಕುಲಂ, ಅಣ್ಮು ಕುಲಂ' ಇತ್ಯಾದಿ ಬಹಳ ಮನೋಜ್ಞವಾಗಿ ಹೇಳಿ, ಕುಲವೆಂಬುದು ಹುಟ್ಟಿನಿಂದಲ್ಲ, ಬದಲು ಪರಾಕ್ರಮ, ವ್ಯಕ್ತಿತ್ವ ಇತ್ಯಾದಿಗಳಿಂದ ನಿರ್ಧರಿತವಾಗುವಂತಿರಬೇಕು ಎಂದು ವಾದಿಸುತ್ತಾನೆ.

ಇದು, ಊಳಿಗಮಾನ್ಯ ಸಮಾಜದ ಜಾತಿಪದ್ಧತಿಯ ವಿರುದ್ಧವಾಗಿ ಒಂದು ವಾದವನ್ನು ಕಾವ್ಯ ಪ್ರಯೋಜನಕ್ಕಾಗಿ ನಿರ್ಮಿಸಿರುವ ಪ್ರಸಂಗ. ಈ ಬಗೆಯ ಜಾತಿವಾದ ವಿರೋಧಿ ಮಾತುಗಳಿಗೆ, 'ಮಾನವ ಜಾತಿ ತಾನೊಂದೆ ವಲಂ' ಎಂಬ ಆಶಯಕ್ಕೆ ಪಂಪನ ವ್ಯಕ್ತಿಗತವಾದ ಜೈನ ಮತಾನುಯಾಯಿ ನಂಬಿಕೆಗಳ ಕಾರಣವನ್ನೂ, ಅದರಿಂದ ಹುಟ್ಟಿದ ವೈದಿಕಶಾಹಿ ವಿರೋಧೀಸ್ವಭಾವವನ್ನೂ ಕಾರಣವನ್ನಾಗಿ ಊಹಿಸಿರುವುದು ಪ್ರಗತಿಪರರಲ್ಲ ನಡೆದುಬಂದ ಒಂದು ಪರಿಪಾಠ.

ಆದರೆ ಎಂಟನೆಯ ಶತಮಾನದ ನಂತರ ಚಾಲ್ತಿಗೊಳ್ಳತೊಡಗಿದ ಸಬ್-ಇನ್-ಫ್ಯೂಡೇಷನ್ ಪ್ರಕ್ರಿಯೆಯು ಸಮಾಜದ ಎರಡನೇ ಹಂತದ ಆಳುವ ವರ್ಗಗಳಲ್ಲಿ ಹಾಗೂ ಅವುಗಳಿಗೆ ನಿಕಟವಾಗಿದ್ದ ಕೆಲವು ಸಾಮಾಜಿಕ ಗುಂಪುಗಳಲ್ಲಿ ಮೂಡಿಸತೊಡಗಿದ್ದ 'ಸ್ವಯಂ ಮಹತ್ವಪ್ರತಿಪಾದನೆ'ಯ ಸಾಮಾಜಿಕ ಆಶಯವನ್ನು ಒಂದು ವಿಸ್ತೃತವಾದ ಹಿನ್ನೆಲೆಯನ್ನಾಗಿ ಆ ಸಾಮಾಜಿಕ ಕಾಲಘಟ್ಟಕ್ಕೆ ನಾವು ಗ್ರಹಿಸಿಕೊಳ್ಳಬೇಕು. ಇದರಲ್ಲಿ ಇಂತಹುದೇ ಗೋತ್ರ ಎಂದು ಹೇಳಿಕೊಳ್ಳಲಾಗದ ಪಂಗಡಗಳವರು ಕೂಡ ರಾಜರಾಗಿ ಹೋಗಿದ್ದರು ಎಂಬ ಎಂಟನೆಯ ಶತಮಾನದ ನಂತರದ ಚಾರಿತ್ರಿಕ ಅಂಶಗಳನ್ನೂ ಜೊತೆಯಲ್ಲಿಟ್ಟುಕೊಂಡು, ಪಂಪನು ಹಾಗೆ ಪ್ರವರ್ಧಮಾನಕ್ಕೆ ಬಂದ ಅರಿಕೇಸರಿ ಎಂಬ ರಾಷ್ಟ್ರಕೂಟ ಸಾಮಂತನ ಆಸ್ಥಾನದಲ್ಲಿ ಸ್ವತಃ ಸೇನಾನಾಯಕನೂ ಆಗಿದ್ದ ಕವಿ ಎಂಬುದನ್ನು ಗ್ರಹಿಸಿಕೊಂಡರೆ ಈ ಪ್ರಸಂಗದ ಚಿತ್ರಣ, ಕರ್ಣನ ಸ್ವಾಭಿಮಾನ ಅಷ್ಟು ಶಕ್ತಿವತ್ತಾಗಿ ಪಂಪನ ಕಾವ್ಯದಲ್ಲಿ ಚಿತ್ರಿತವಾದುದಕ್ಕೆ ಕಾರಣಗಳು ಹೊಳೆಯುತ್ತವೆ.

ಆಧಿಪತ್ಯದಲ್ಲಿದ್ದ, ವೈದಿಕಶಾಹಿಯ ಮಾನ್ಯತೆ ಹೊಂದಿದ್ದ ಆಳುವ ವರ್ಗಗಳಿಗೂ, ಅವುಗಳ ಅಧೀನತೆಯಲ್ಲಿದ್ದು ಈಗ ಆಧಿಪತ್ಯದಲ್ಲಿ ಪಾಲು ಪಡೆಯಲು ಪ್ರಯತ್ನಿಸುತ್ತಿರುವ, ಕೆಳಹಂತದ ದ್ವಿಜ ಜಾತಿಗಳಲ್ಲದ ಕೆಲವು ಆಳುವ ವರ್ಗಗಳಿಗೂ ಸಂಘರ್ಷ ಮೊದಲಾಗತೊಡಗಿದೆ. ಈವರೆಗೆ ವೈದಿಕಶಾಹಿಯ ಚಾತುರ್ವರ್ಣ್ಯದ ಪ್ರಚಲಿತತೆಯ ಮೇಲೆಯೇ ಭಾಷೆ, ಪ್ರಾಂತ್ಯ, ಗಡಿಗಳ ಪರಿಗಣನೆಯಿಲ್ಲದೆ ಏರ್ಪಟ್ಟಿದ್ದ ವಿಸ್ತಾರ ಸಾಮ್ರಾಜ್ಯಗಳು, ಗುಪ್ತರ ನಂತರ ಕಣ್ಮರೆಯಾಗಿ, ಪ್ರಾಂತೀಯ ರಾಜ್ಯಗಳು ಏರ್ಪಟ್ಟು ಒಟ್ಟಾರೆಯಾಗಿ ಚಾತುರ್ವರ್ಣ್ಯಕ್ಕೆ ಅನುಸಾರವಾಗಿದ್ದರೂ ತಮ್ಮ ಸ್ಥಳೀಯ ಅಗತ್ಯಗಳಿಗನುಸಾರವಾಗಿ ಆ ಶ್ರೇಣೀಕರಣಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಳ್ಳುವಂತೆ ಆಡಳಿತವು ಸಂಘಟಿತವಾಗುತ್ತಿದೆ. ಈ ಹಿಂದಿನ ಆಳುವ ವರ್ಗಗಳಿಗೆ ಹೋಲಿಸಿದರೆ ಕೆಳಹಂತದ ಆಳುವ ವರ್ಗಗಳು ಹೆಚ್ಚು ವಿಸ್ತಾರವಾದ ಜಾತಿ ಸಮುದಾಯಗಳೊಳಗಿಂದ ಮೂಡಿ ಬಂದವುಗಳಾಗಿರುವುದರಿಂದ ಅವುಗಳಿಗೆ ಒಂದು ಬಗೆಯ ಸಾಮಾಜಿಕ ಬಲ ಪ್ರಾಪ್ತವಾಗಿದೆ.

ಇಂತಹ ಒಂದು ಸನ್ನಿವೇಶದಲ್ಲಿ ನಿರ್ಮಾಣವಾದ ಸಾಹಿತ್ಯ ಕೃತಿಯು, ಪಂಪನ ಹಾಗೆ ಆ ಆಶಯಗಳ ಅಪರೋಕ್ಷ ಗ್ರಹಿಕೆಯನ್ನು ಕೆಲವು ಸನ್ನಿವೇಶಗಳಲ್ಲಿ ಚಿತ್ರಿಸುವುದು ಸಹಜವಾಗಿದೆ. ಈ ಸಂದರ್ಭದಲ್ಲಿ ಪಂಪನು ಜೈನ ಧರ್ಮೀಯನಾಗಿದ್ದ ಎಂಬ ಅಂಶವು ಆಗ ಸಮಾಜದ ಒಡಲೊಳಗೆ ಒಡಮೂಡುತ್ತಿದ್ದ ಸಾಮಾಜಿಕ ಸನ್ನಿವೇಶಕ್ಕೆ ಪೂರಕವಾದ ಒಂದು ಅಂಶವಾಗಿ ಒದಗಬಲ್ಲುದೇ ಹೊರತು ಅದೇ ಪ್ರಧಾನವಾದುದಾಗಿ ಈ ಕಾರ್ಯವನ್ನು ಪ್ರೇರೇಪಿಸಿರುವುದಿಲ್ಲ.

ಒಟ್ಟಾರೆಯಾಗಿ ಈ ಕೆಲವು ಅಂಶಗಳ ಆಧಾರದಲ್ಲಿ ರಾಷ್ಟ್ರಕೂಟರ ಕಾಲದ ಸಾಮಾಜಿಕ ಪರಿಸ್ಥಿತಿಯು ಕನ್ನಡ ರಾಷ್ಟ್ರೀಯತೆಯ ಕೆಲವು ಜನಸಮುದಾಯಗಳ

ಉತ್ಪಾದಕತೆಯ ಅಭಿವೃದ್ಧಿಯನ್ನೂ, ಕೆಲವು ಶೂದ್ರ ಸಾಮಾಜಿಕ ವರ್ಗಗಳ ಅಥವಾ ಅವುಗಳ ಒಂದು ಭಾಗವಾದ ಕೆಳಹಂತದ ಆಳುವ ವರ್ಗಗಳ 'ಸ್ವಯಂ ಮಹತ್ವ ಪ್ರತಿಪಾದನೆ'ಯನ್ನೂ ಸೂಚಿಸುತ್ತಿದೆ. ಒಂದು ರಾಷ್ಟ್ರೀಯತೆ ತನ್ನನ್ನು ವಿಶಾಲ ಸಮೂಹಾಧಾರಿತ ಪರಸ್ಪರ ಸಂಬಂಧಿತ ಸಮುದಾಯವಾಗಿ ಕಲ್ಪಿಸಿಕೊಳ್ಳುವುದಕ್ಕೆ ಆ ಸಮಾಜದ ಪ್ರಜಾತಾಂತ್ರೀಕರಣ ಬಹಳ ಅಗತ್ಯವಾದುದು. ರಾಷ್ಟ್ರಕೂಟರ ಕಾಲಘಟ್ಟದಲ್ಲಿ ಈ ಪ್ರಜಾತಾಂತ್ರೀಕರಣದ ಪ್ರಕ್ರಿಯೆಯು ಒಂದು ಹಂತದ ಆಳುವ ವರ್ಗಗಳಿಂದ ಮತ್ತೊಂದು ಹಂತದ ಆಳುವ ವರ್ಗಗಳ ಕಡೆಗೆ ಪ್ರವಹಿಸುತ್ತಿದೆ. ಈ ಕೆಳಹಂತದ ಆಳುವ ವರ್ಗಗಳು ತಮ್ಮನ್ನು ಸದೃಢಗೊಳಿಸಿಕೊಳ್ಳುವ ಪ್ರಕ್ರಿಯೆಯಲ್ಲಿ, ಅಲ್ಲಿನ ಸ್ಥಳೀಯ ಜನಸಮೂಹಗಳಲ್ಲಿ ಕೆಲವಕ್ಕೆ ಚೈತನ್ಯ ಕಲ್ಪಿಸಿಕೊಳ್ಳಲು ಅವಕಾಶ ಇರಗೊಡುತ್ತವೆ. ಅದು ಮತ್ತೆ ಸಮಾಜ ಮತ್ತೊಂದು ಹೆಜ್ಜೆ ಮುಂದೆ ಹಾಕಲು ಅನುವು ಮಾಡಿಕೊಡುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಈ ಹಿಂದಿನ ಕಾವ್ಯಾಲಂಕಾರ, ಸಂಸ್ಕೃತ ಹಾಗೂ ಪ್ರಾಕೃತಗಳ ಪೌರಾಣಿಕ ಮಹಾಕಾವ್ಯಗಳ ಕವಿಸಮಯ, ಪ್ರೌಢಿಮೆ, ಕೃತಕತೆ, ಅಭಿವ್ಯಂಜನೆ ಇತ್ಯಾದಿಗಳ ಬದಲಾಗಿ ಮತ್ತಷ್ಟು ಜನರಿಗೆ ಅರ್ಥವಾಗುವಂತೆ ಅಂದರೆ ಕೃತಿಯೊಂದರ ಸಾಮಾಜಿಕ ತಳಹದಿ(ಓದುಗರು) ವಿಸ್ತಾರವಾಗುವಂತೆ ಕನ್ನಡವನ್ನು ಬಳಸತೊಡಗಿದ್ದು, ಅದರಲ್ಲಿಯೂ ಗದ್ಯಪ್ರಕಾರವನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸ ತೊಡಗಿದ್ದು, ರಾಜಾಸ್ಥಾನಗಳ ಪಂಡಿತರ ವಲಯದಾಚೆಗೂ ಜನರನ್ನು ತಲುಪ ಬೇಕೆಂಬ ಆಶಯಗಳನ್ನು ಸೂಚಿಸುತ್ತಿವೆ. ಚಾವುಂಡರಾಯಪುರಾಣ ಪ್ರಧಾನವಾಗಿ ಗದ್ಯಕೃತಿ. ಆ ಕಾಲದ ಸಂಪನ್ನವಾದ ಮತ್ತೊಂದು ಗದ್ಯಕೃತಿ ವಡ್ಡಾರಾಧನೆ. ಇದು ಹತ್ತನೆಯ ಶತಮಾನದ ಆದಿಭಾಗಕ್ಕೆ ಸೇರಿದ ಒಂದು ಕೃತಿ.

ಈ ಬಗೆಯಲ್ಲಿ ಸಾಹಿತ್ಯ ಕೃತಿಗಳ ಧೋರಣೆಯಲ್ಲಿ ಬಂದ ಒಂದು ಪ್ರಮಾಣದ ಜನಮುಖೀ ಧೋರಣೆಯು ಆ ಕಾಲಘಟ್ಟದ ಆಳುವ ವರ್ಗಗಳ ದೋರಣೆಯನ್ನು ಪ್ರತಿನಿಧಿಸುತ್ತಿದೆ. ಅದನ್ನು ಆರ್.ಎನ್. ನಂದಿ ಈ ರೀತಿ ಹೇಳುತ್ತಾರೆ -

''ಈ ಎರಡನೆಯ ಘಟ್ಟವು (ಅಂದರೆ ನಾಲ್ಕನೇ ಶತಮಾನದಿಂದ ೧೨ನೆಯ ಶತಮಾನದವರೆಗಿನ ಅವಧಿಯನ್ನು ಪ್ರಾರಂಭಿಕ ಊಳಿಗಮಾನ್ಯತೆಯ ಕಾಲ ಎಂದು ಕರೆದು, ಅದರಲ್ಲಿ ನಾಲ್ಕರಿಂದ ೭ರವರೆಗಿನ ಶತಮಾನಗಳನ್ನು 'ರೂಪುಗೊಳ್ಳುವಿಕೆಯ ಹಂತ' ಎಂದೂ ೮ ರಿಂದ ೧೦ನೆಯ ಶತಮಾನದ ಅವಧಿಯನ್ನು 'ಸದೃಢೀಕರಣದ ಹಂತ' ವೆಂದೂ ಗುರುತಿಸಲಾಗಿದೆ). ಕೃಷಿ ಉತ್ಪಾದನೆಯ ತಾಂತ್ರಿಕ ಮಟ್ಟದಲ್ಲಿ ಮಹತ್ತರ ಸಾಧನೆಯನ್ನು ಮಾಡಲು ನಡೆಸಿದ ಪ್ರಯತ್ನಗಳೊಂದಿಗೆ ಗುರುತಿಸಲ್ಪಟ್ಟಿದೆ. ಕೆರೆ ನಿರ್ಮಾಣ ತಾಂತ್ರಿಕತೆಯ ಜಾರಿ, ಹೊಸ ಬೆಳೆಗಳ ಹರಡುವಿಕೆ ಮುಂತಾದವು ಅಂತಹ ಪ್ರಯತ್ನಗಳಾಗಿವೆ. ಈ ಎಲ್ಲಾ ಆವಿಷ್ಕಾರಗಳು ಸ್ವತಃ ಊಳಿಗಮಾನ್ಯ ವರ್ಗಗಳ

ಮಹತ್ತರ ಹೆಚ್ಚುವರಿಯನ್ನು ಪಡೆದುಕೊಳ್ಳುವ ಆಸಕ್ತಿಯ ಫಲವಾಗಿಯೇ ಆರಂಭಿಸಲ್ಪಟ್ಟವು."[12]

ಅಡಿಟಿಪ್ಪಣಿಗಳು

1. ಡಿ.ಎಲ್. ನರಸಿಂಹಾಚಾರ್ - ಶಾತವಾಹನರ ಕಾಲದ ಕರ್ನಾಟಕದ ಧರ್ಮ ಮತ್ತು ಸಮಾಜ, ಕರ್ನಾಟಕದ ಪರಂಪರೆ, ಸಂ. ೧, ಪು. ೧೨೯.
2. ಉಲ್ಲೇಖಿತ, ಎಪಿಗ್ರಾಫಿಯಾ ಕರ್ನಾಟಕ, ಡಾ. ಬಿ.ಆರ್. ಗೋಪಾಲ್ - ಸಾಮಾಜಿಕ ಜೀವನ ಮತ್ತು ಆರ್ಥಿಕ ಸ್ಥಿತಿಗತಿ, ಕರ್ನಾಟಕದ ಪರಂಪರೆ, ಸಂ. ೧, ಪು. ೨೧೩.
3. ಡಾ. ಎಸ್.ಸಿ. ನಂದೀಮಠ - ರಾಜಕೀಯ ಇತಿಹಾಸ ಬಾದಾಮಿ ಚಾಲುಕ್ಯರು, ಕರ್ನಾಟಕದ ಪರಂಪರೆ, ಸಂ. ೧, ಪು. ೨೩೭.
4. ಆರ್.ಎಸ್. ಶರ್ಮಾ - ಪ್ರಾಚೀನ ಭಾರತ, ಪು. ೧೦೪, ೧೦೫.
5. ಡಾ.ಎಸ್. ಸಿ. ನಂದೀಮಠ - ಸಾಮಾಜಿಕ ಜೀವನ ಮತ್ತು ಆರ್ಥಿಕ ಪರಿಸ್ಥಿತಿ, ರಾಷ್ಟ್ರಕೂಟ ಹಾಗೂ ಕಡೆಕಡೆಯ ಕಾಲದಲ್ಲಿ, ಕರ್ನಾಟಕದ ಪರಂಪರೆ, ಸಂ. ೧, ಪು. ೩೯೪.
6. ಆರ್.ಎಸ್. ಶರ್ಮಾ - ಪ್ರಾಚೀನ ಭಾರತ, ಪು. ೨೩೯.
7. ಮೇಲಿನದೇ, ಪು. ೨೬೨, ೨೬೩
8. ಮೇಲಿನದೇ, ಪು. ೨೬೩
9. ಎ. ಸೀತಾರಾಮಯ್ಯ - ರಾಷ್ಟ್ರಕೂಟ ಕಾಲದ ಕನ್ನಡ ಸಾಹಿತ್ಯ, ಕರ್ನಾಟಕದ ಪರಂಪರೆ, ಸಂ. ೧, ಪು. ೨೯೭.
10. ಕೆ.ವಿ. ಸುಬ್ಬಣ್ಣ - ಕವಿರಾಜಮಾರ್ಗದ ಮರು ಓದು, ಕನ್ನಡ ವಿಶ್ವವಿದ್ಯಾಲಯದ ವಿಚಾರ ಸಂಕಿರಣದ ಭಾಷಣದ ಪ್ರಸ್ತಾಪ, ೧೯೯೯.
11. ಎ. ಸೀತಾರಾಮಯ್ಯ - ರಾಷ್ಟ್ರಕೂಟ ಕಾಲದ ಕನ್ನಡ ಸಾಹಿತ್ಯ, ಕರ್ನಾಟಕದ ಪರಂಪರೆ, ಸಂ. ೧, ಪು. ೩೦೩.
12. ಆರ್.ಎನ್. ನಂದಿ, ಉಲ್ಲೇಖಿತ, SAKI- Making History, Vol. 1, ಪು. ೨೨೧.

❖ ❖ ❖ ❖

ಅಧ್ಯಾಯ -೨

೧೨ನೆಯ ಶತಮಾನದ ಸಮಾಜ

ಕುಶಲಕರ್ಮಿ ಪ್ರಜಾತಾಂತ್ರಿಕ ಆಶಯಗಳ ಅಭಿವ್ಯಕ್ತಿ

''ಕರ್ನಾಟಕದಲ್ಲಿ ೮ ಮತ್ತು ೧೪ನೆಯ ಶತಮಾನಗಳ ನಡುವಣ ಅವಧಿಯು ಬಹಳ ಮಹತ್ವದ್ದಾಗಿದೆ. ಈಗಿನ ಕರ್ನಾಟಕದ ಉತ್ತರ ಭಾಗಗಳನ್ನೂ ಒಳಗೊಂಡ ದಕ್ಕನ್ ಬಾದಾಮಿ ಚಾಲುಕ್ಯರ ಕೈಕೆಳಗೆ ಆಗಲೇ ತನ್ನ ರಾಜಕೀಯ ಪ್ರಭಾವವನ್ನು ಬೀರತೊಡಗಿದ್ದುದು ಈಗ ವಿಂಧ್ಯದ ದಕ್ಷಿಣಕ್ಕೆ ರಾಜಕೀಯ ಒತ್ತಡವನ್ನು ಹಾಕುವ ಕೇಂದ್ರವಾಯಿತು. ಮೊದಲು ರಾಷ್ಟ್ರಕೂಟರು ಆಮೇಲೆ ಕಲ್ಯಾಣದ ಚಾಲುಕ್ಯರು ಗೋದಾವರಿ ಹಾಗೂ ಕೃಷ್ಣಾ ನದಿಗಳ ನಡುವಣ ಪ್ರದೇಶದಲ್ಲಿ ಆಕ್ರಮಣಶೀಲರೂ ಪ್ರಮುಖರೂ ಆದ ರಾಜಕೀಯ ಶಕ್ತಿಗಳಾಗಿ ಸ್ಥಾಪಿತರಾದರು. ಕೆಲವೊಮ್ಮೆ ದಕ್ಷಿಣಕ್ಕೆ ಕಾವೇರಿಯವರೆಗೆ ಒತ್ತಿಬರುತ್ತಾ ಸಣ್ಣ ದೊಡ್ಡ ರಾಜ್ಯಗಳನ್ನು ಗೆಲ್ಲುತ್ತಿದ್ದರು. ರಾಷ್ಟ್ರಕೂಟರು ಆಗಾಗ ಉತ್ತರಭಾರತದಲ್ಲಿ ತಮ್ಮ ಬಲವನ್ನು ಪ್ರದರ್ಶಿಸಿ ಅಲ್ಲಿ ಉಳಿದುಕೊಳ್ಳದೆ ಹಿಂದಕ್ಕೆ ಬಂದುಬಿಡುತ್ತಿದ್ದ ಪದ್ಧತಿಯು ಅವರಿಗೆ ಬಹುಶಃ ಚಾಲುಕ್ಯರು ಹಾಕಿಕೊಟ್ಟ ಮಾದರಿಯಾಗಿತ್ತು. ಹಾಗೆಯೇ ದಕ್ಷಿಣದ ಪಲ್ಲವರು, ಚೋಳರು ಮತ್ತು ಪಾಂಡ್ಯರ ಮೇಲೆ ಅವರು ಮಾಡಿದ ಯುದ್ಧಗಳೂ ಕೂಡ. ಆದರೆ ಮೂಲತಃ ರಾಷ್ಟ್ರಕೂಟರ ಮತ್ತು ಕಲ್ಯಾಣದ ಚಾಲುಕ್ಯರ ರಾಜಕೀಯ ಹಿತಾಸಕ್ತಿಗಳು ಕರ್ನಾಟಕವೆಂಬ ಹೆಸರಿನಿಂದ ರೂಪುಗೊಳ್ಳುತ್ತಿದ್ದ, ಕವಿರಾಜಮಾರ್ಗದಲ್ಲಿ ನೃಪತುಂಗನು ವರ್ಣಿಸಿದ ಗಡಿಗಳುಳ್ಳ ಪ್ರದೇಶದ ಮೇಲೆ ಕೇಂದ್ರೀಕರಿಸಿ ಕೊಳ್ಳುತ್ತಿದ್ದಂತೆ ತೋರುತ್ತದೆ. ಪ್ರದೇಶದೊಂದಿಗೆ ಖಚಿತವಾದ ಭಾಷಿಕ ಮತ್ತು ಸಾಂಸ್ಕೃತಿಕ ಸ್ವರೂಪಗಳೆರಡೂ ಇಂದು ಕರ್ನಾಟಕದ ಜನತೆಗೆ ಅವರ ಆಶೋತ್ತರಗಳು ಹಾಗೂ ಪ್ರವೃತ್ತಿಗಳು ರಾಜಕೀಯ ಹಾಗೂ ಪ್ರಾದೇಶಿಕ ಹೆಮ್ಮೆಗಳಿಂದ ಪ್ರೇರಿತವಾಗಿರುವುದರಿಂದ, ಏನೋ ವಂಚಿತವಾಗಿದ್ದೇವೆಂಬ ಭಾವನೆಯನ್ನು ಉಂಟುಮಾಡಬಹುದು. ಆದರೆ ಐತಿಹಾಸಿಕ ಶಕ್ತಿಗಳು ಮತ್ತು ರಾಜಕೀಯ

ಸಮೀಕರಣಗಳಲ್ಲಿ ಆಗುವ ವ್ಯತ್ಯಾಸಗಳು ಪ್ರದೇಶದ ಒಂದು ವ್ಯಕ್ತಿತ್ವದಲ್ಲೂ ಬದಲಾವಣೆಯನ್ನು ಉಂಟು ಮಾಡುತ್ತವೆ. ಹಿಂದೊಮ್ಮೆ ಕರ್ನಾಟಕದ ಭಾಗ ಎನಿಸಿದ್ದುದು ಇಂದು ಆಗಿರುವುದಿಲ್ಲ. ಹಿಂದೆ ಅದರ ಪರಿಧಿಯ ಹೊರಗಿದ್ದ ಇತರ ಕೆಲವು ಭಾಗಗಳು ಈಗ ಹೀರಲ್ಪಟ್ಟ ಇದರ ಭಾಗವೆನಿಸಿಬಿಟ್ಟಿರಬಹುದು. ಕರ್ನಾಟಕದ ವ್ಯಕ್ತಿತ್ವವು ಐತಿಹಾಸಿಕವಾಗಿ ಮಹತ್ವದ್ದಾಗಿದೆ. ಕರ್ನಾಟಕವು ಇತಿಹಾಸಿಕವನ್ನು ನಿರ್ಮಿಸಿದ ಎನ್ನುವುದಕ್ಕಿಂತಲೂ ಇತಿಹಾಸವು ಕರ್ನಾಟಕವನ್ನು ನಿರ್ಮಿಸಿದೆ ಎಂದು ಭಾವಿಸುವುದೇ ಹೆಚ್ಚು ಆರೋಗ್ಯಕರವಾಗುತ್ತದೆ''[1] ಎನ್ನುತ್ತಾರೆ ಪ್ರೊ. ಬಿ. ಸುರೇಂದ್ರರಾವ್.

ಅವರೇ ಮತ್ತೆ ಹೀಗೆ ಹೇಳಿದ್ದಾರೆ : ''ಕರ್ನಾಟಕದ ಇತಿಹಾಸದ ೮ ಮತ್ತು ೧೪ನೆಯ ಶತಮಾನಗಳ ನಡುವಣ ಅವಧಿಯು 'ಕರ್ನಾಟಕದ ಒಲವು' ಉತ್ಸಾಹಯುತ ಪ್ರಶಂಸೆಗಳನ್ನು ಗಳಿಸುವಂತಹ ಶಕ್ತಿ ಪ್ರದರ್ಶನದ ಮತ್ತು ಯಶಸ್ಸಿನ ಸಂದರ್ಭಗಳಿಂದ ತುಂಬಿದೆ''[2].

''ಈ ಶತಮಾನಗಳಲ್ಲಿ ಈ ಪ್ರದೇಶವು ಅನುಭವಿಸುತ್ತಿದ್ದ ರಾಜಕೀಯ ಪ್ರಕ್ರಿಯೆಗಳು ಸಾಕಷ್ಟು ಸಂಕೀರ್ಣವಾಗಿದ್ದವು ಎಂಬುದು ಮುಖ್ಯ ವಿಚಾರವೇ ಆಗಿದೆ. ಕೆಲವೊಮ್ಮೆ ಸಾಮ್ರಾಜ್ಯವೆಂದು ವರ್ಣಿಸುತ್ತಿದ್ದು ಬಲವಾದ ಒಂದು ಕೇಂದ್ರೀಯ ಆಡಳಿತ, ಅದರೊಂದಿಗೆ ನೆಲವನ್ನು ಅಧಿಕಾರವನ್ನು ನಿಯಂತ್ರಣದಲ್ಲಿಟ್ಟುಕೊಂಡ ಸಣ್ಣಪುಟ್ಟ ನಾಯಕರಿಗೆ ಸೇರಿದ ಪ್ರದೇಶಗಳು, ಇನ್ನೂ ಆದಿವಾಸಿ ದನಗಾಹಿ ಲಕ್ಷಣಗಳಿಂದ ತಮ್ಮನ್ನು ಕಳಚಿಕೊಂಡಿರದ ಕೆಲವು ಪ್ರದೇಶಗಳು ಈ ಲಕ್ಷಣಗಳಿಂದ ಕೂಡಿರುತ್ತಿದ್ದ ಒಂದು ಭೂಪ್ರದೇಶವನ್ನು ಹೊಂದಿ ಕೃಷ್ಣಾ-ಮಲಪ್ರಭಾ-ಘಟಪ್ರಭಾ ನದಿಗಳ ಆಸುಪಾಸಿನ ಮೂಲ ಪ್ರದೇಶವು ನಗರೀಕೃತವಾಗಿತ್ತು. ಅದಕ್ಕೆ ಕಾರಣ ಚುರುಕಾದ ಅಂತರ್ದೇಶೀಯ ವ್ಯಾಪಾರ ಹಾಗೂ ಸಮೃದ್ಧವಾದ ಕೃಷಿ. ಒಳನಾಡಿನೊಂದಿಗೆ ಸಂಪರ್ಕ, ಪ್ರಬಲ ವರ್ತಕ ವರ್ಗವೊಂದರ ಉದಯವನ್ನು ನಾವು ಕಾಣುವುದು ಏಳಿಗೆ ಹೊಂದುತ್ತಿದ್ದ ಸಂಘಗಳ ಚಟುವಟಿಕೆಗಳಿಂದ ಮಾತ್ರವಲ್ಲ, ಆಕ್ರಮಣಶೀಲವಾದ ಯಾವುದಕ್ಕೂ ಹೊಂದಿಕೊಳ್ಳದ ವೀರಶೈವ ತತ್ವಗಳಲ್ಲೂ ಇದು ಕಂಡುಬರುತ್ತದೆ. ಹೊಯ್ಸಳರ ಬುಡಕಟ್ಟು ಮೂಲ ಮತ್ತು ಕ್ರಮೇಣ ಬಯಲು ಪ್ರದೇಶದ ಮೇಲೆ ತಮ್ಮ ಹತೋಟಿಯನ್ನು ಸಾಧಿಸಿಕೊಂಡುದು ಇವು ಬುಡಕಟ್ಟು ಪ್ರದೇಶಗಳು ಹೆಚ್ಚು ಮುಂದುವರಿದ ಚಕ್ರವರ್ತಿ ಆಡಳಿತ ನೆಲೆಗೆ ಏರಿದ್ದು.....''[3]

''ಸಂಪನ್ಮೂಲಗಳ ಅಸಮಾನ ಹಂಚಿಕೆಯಿಂದಾಗಿ ಸ್ಪರ್ಧೆಯು ಸ್ಥಳಕ್ಕೆ ಸೀಮಿತವಾಗಿದ್ದುದು ಮಾತ್ರವಲ್ಲದೆ ರಾಜಕೀಯ ಹತೋಟಿ ಮತ್ತು ವಿಕಾಸಗಳು ಅಸಮಾನವಾಗಿದ್ದವು.''[4]

''ಈ ಕಾಲಾವಧಿಯಲ್ಲಿ ಬಹು ದೂರಸ್ಪರ್ಶಿಯಾದ ಪರಿಣಾಮಗಳುಳ್ಳ ಸಾಮಾಜಿಕ ಧಾರ್ಮಿಕ ಆಂದೋಲನಗಳು ಕಂಡುಬಂದವು. ಶಂಕರ, ರಾಮಾನುಜ,

ಮಧ್ವ ಮತ್ತು ಬಸವ ಇಂತಹ ಬಹುಶ್ರೇಷ್ಠ ಚಿಂತಕರು, ಸುಧಾರಕರನ್ನು ಈ ಅವಧಿಯಲ್ಲಿ ನೋಡುತ್ತೇವೆ. ಅವರ ಕೃತಿಗಳು ವಿಭಿನ್ನ ರೀತಿಗಳಲ್ಲಿ ಮತ್ತು ಪ್ರಮಾಣಗಳಲ್ಲಿ ಕರ್ನಾಟಕದ ಮೇಲೆ ಪ್ರಭಾವ ಬೀರಿದವು. ಈ ಆಂದೋಲನಗಳ ಪ್ರಚೋದನೆ ಯಾವಾಗಲೂ ಕರ್ನಾಟಕದೊಳಗಿನಿಂದಲೇ ಬಂಧಿರಲಿಲ್ಲವಾದರೂ ಅವರ ಕೃತಿಗಳು ವಿಭಿನ್ನ ರೀತಿಗಳಲ್ಲಿ ಈ ಪ್ರದೇಶದ ಮೇಲೆ ಪ್ರಭಾವ ಬೀರಿದವು.''[5]

ಇಂತಹ ಪೀಠಿಕೆಯೊಂದಕ್ಕೆ ತಕ್ಕುದಾದ ಕಾಲಘಟ್ಟವನ್ನು ನಾವು ಈಗ ಗಮನಿಸುತ್ತಿದ್ದೇವೆ. ಈ ಹಿಂದಿನ ಅಧ್ಯಾಯದಲ್ಲಿ ನಾವು ೧೦ನೇ ಶತಮಾನದವರೆಗಿನ ಪ್ರಕ್ರಿಯೆಗಳು ಕನ್ನಡ ಭಾಷಾಸಮುದಾಯದ ರಾಷ್ಟ್ರೀಯತೆಯ ಪ್ರದೇಶಗಳಲ್ಲಿ ಊಳಿಗ ಮಾನ್ಯತೆಯ ಸದೃಢೀಕರಣಕ್ಕೆ ಕಾರಣವಾಗಿ ಒಟ್ಟಾರೆ ಕೃಷಿ ಉತ್ಪಾದನೆಯಲ್ಲಿ ಬಂದ ಹೆಚ್ಚಳವನ್ನು, ಅದಕ್ಕಾಗಿ ಆರಂಭಗೊಂಡ ತಾಂತ್ರಿಕತೆಯ ಆವಿಷ್ಕಾರಗಳ ಚಾಲ್ತಿಯನ್ನು ಗಮನಿಸಿದ್ದೇವೆ.

ಹೊಸ ಬೆಳೆಗಳ ಪರಿಚಯ, ಕೆರೆಗಳ ನಿರ್ಮಾಣ ಮುಂತಾದ ಕ್ರಿಯೆಗಳು ಕೃಷಿ ಉತ್ಪಾದಕತೆಯಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿದವು. ಆರ್.ಎನ್. ನಂದಿ ವಿಶ್ಲೇಷಣೆಯನುಸಾರ ಈ ೧೦ರಿಂದ ೧೨ನೆಯ ಶತಮಾನದವರೆಗಿನ ಅವಧಿಯು ಆರಂಭಿಕ ಊಳಿಗಮಾನ್ಯತೆಗೆ ಸೇರಿದ ಮೂರನೆಯ ಹಂತವನ್ನು ಪ್ರತಿನಿಧಿಸುತ್ತದೆ. ಆಗಿನ ಸಮಾಜದಲ್ಲಿ ಉಂಟಾದ ಒಂದು ಮುಖ್ಯ ಪ್ರಕ್ರಿಯೆಯೆಂದರೆ ಸಂತೆಗಳ ನಿರ್ಮಾಣ ಹಾಗೂ ನಾಣ್ಯಗಳ ಚಲಾವಣೆಯ ಪ್ರಮಾಣದಲ್ಲಿ ಏರಿಕೆ. ಇವು ಒಂದು ಭಾಷಾಸಮುದಾಯದ ಜನಸಮೂಹಗಳ ನಡುವೆ ಹೆಚ್ಚಲ್ಪಟ್ಟ ಸಾಮಾಜಿಕ ವಹಿವಾಟುಗಳನ್ನು, ಆ ಮೂಲಕ ಅವರ ಸಾಮಾಜಿಕ ಪ್ರಜ್ಞೆಯಲ್ಲಿ ಮೂಡಿಬಂದ ಹೊಸ ನಿಲುವುಗಳನ್ನು ಪ್ರಕಟಪಡಿಸುವುದಕ್ಕೆ ಸೂಕ್ತ ತಳಹದಿಯನ್ನು ಒದಗಿಸಿದ್ದವು. ಈ ಕಾಲಘಟ್ಟದ ಒಟ್ಟಾರೆ ಪರಿಣಾಮವನ್ನು ವಾಣಿಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಾಗೂ ಅದರ ಸಾಮಾಜಿಕ ಸಂಸ್ಥೆಗಳ ಪರಿಣಾಮಕ್ಕೆ ಸಂಬಂಧಿಸಿದಂತೆ ಸಾಕಿ ಹೀಗೆ ವಿವರಿಸುತ್ತಾರೆ :

''ಸಂತೆ ಅಥವಾ ವಾರದ ಗ್ರಾಮೀಣ ನೆರೆಯುವಿಕೆ ಎಂಬುದು ಆರಂಭವಾಗಿದ್ದು ಒಂದು ಗ್ರಾಮೀಣ ಆರ್ಥಿಕತೆಯ ನಡುವೆ ಮಾರುಕಟ್ಟೆಯ ಉಗಮವನ್ನು ಸೂಚಿಸುವ ಶಕ್ತಿಶಾಲಿ ಮಾನದಂಡವಾಗಿದೆ. ೧೧ ಮತ್ತು ೧೨ನೇ ಶತಮಾನದ ಶಾಸನಗಳು ಸಂತೆಗಳ ಬಗ್ಗೆ ಪುನರಾವರ್ತಿತ ಹಾಗೂ ನಿರ್ದಿಷ್ಟ ಉಲ್ಲೇಖಗಳನ್ನು ನೀಡುತ್ತವೆ. ಮಾರುಕಟ್ಟೆಯ ಉಗಮವೆಂಬ ಈ ಹೊಸ ಅಂಶದ ಪ್ರಾಮುಖ್ಯತೆಯು ವಿಶಿಷ್ಟ ಗಮನಕ್ಕೆ ಅರ್ಹವಾಗಿದೆ. ಈ ಸಂತೆಗಳೆಂಬುವು ರೈತರು ಹಾಗೂ ಕಸುಬುದಾರ ಉತ್ಪಾದಕರು ತಮ್ಮ ಉತ್ಪನ್ನಗಳನ್ನು ಮಾರುವುದಕ್ಕೆ ಹಾಗೂ ಮಧ್ಯವರ್ತಿ ವ್ಯಾಪಾರಿಗಳು ಅವರೊಂದಿಗೆ ವ್ಯವಹರಿಸುವುದಕ್ಕಾಗಿ ಉಂಟುಮಾಡಿದ ಒತ್ತಾಯದ ಫಲಿತಾಂಶವಾಗಿವೆ. ಇವು ದುಡಿಯುವ ಸಮೂಹಗಳಿಗೆ ತಮ್ಮ ಜೀವನಮಟ್ಟವನ್ನು ಹೆಚ್ಚಿಸಿ

ಕೊಳ್ಳಲು ಹಾಗೂ ಆರ್ಥಿಕ ದಿಗ್ಬಂಧನಗಳಿಂದ ಬಿಡುಗಡೆಯಾಗಲು ನಡೆಸಿದ ಸಾಮೂಹಿಕ ಪ್ರಯತ್ನಗಳ ಆಶಯಾತ್ಮಕ ಸಾಕಾರರೂಪಗಳಾಗಿವೆ. ಅಗ್ರಹಾರ ಮತ್ತು ಮಠಗಳಲ್ಲಿ ಹೆಚ್ಚುತ್ತಲೇ ಹೋದ ಜನಸಂಖ್ಯೆಯ ಕೇಂದ್ರೀಕರಣ ಹಾಗೂ ಅವರ ವೈವಿಧ್ಯಮಯ, ವಿಶಿಷ್ಟೀಕೃತ ಭೌತಿಕ ವಸ್ತುಗಳ ಅಗತ್ಯಗಳು ಉತ್ಪಾದಕರಲ್ಲಿ ಒಂದು ಸಿದ್ಧ ಪ್ರತಿಕ್ರಿಯೆಯನ್ನು ಈ ಅಗತ್ಯಗಳನ್ನು ಪೂರೈಸುವ ದಿಸೆಯಲ್ಲಿ ಹುಟ್ಟು ಹಾಕಿತು. ಬ್ರಾಹ್ಮಣ ಒಡೆಯರಿಗೆ ಹಾಗೂ ಊಳಿಗಮಾನ್ಯ ಮುಖ್ಯಸ್ಥರಿಗೆ ಈ ಸಂತೆಗಳ ರಚನೆಯನ್ನು ಗುರುತಿಸುವುದು ಹಾಗೂ ಅವುಗಳ ಕಾರ್ಯಾಚರಣೆಯನ್ನು ಮಾನ್ಯಮಾಡುವುದು ಅನಿವಾರ್ಯವಾಯಿತು. ಈ ಮೂಲಕವಾಗಿ ಅವರು ರೈತರ ಮತ್ತು ಕುಶಲಕರ್ಮಿಗಳ ಒಂದು ವಿಭಾಗದ ಹೊಸ ಬಗೆಯ ಅಸ್ತಿತ್ವವನ್ನು ಅನುಮತಿಸುವ ನಿರ್ಬಂಧಕ್ಕೆ ಗುರಿಯಾದರು.''[6]

ಆರ್.ಎನ್.ನಂದಿ ಹೇಳುವಂತೆ :

''ಸ್ಪಷ್ಟವಾಗಿ ರೈತರ ಸರಕು ಉತ್ಪಾದಕರ ಒಂದು ವಿಭಾಗವು ತಮ್ಮ ಉತ್ಪಾದನೆಯನ್ನು ಬಿಕರಿ ಮಾಡುವ ಜವಾಬ್ದಾರಿಯನ್ನು ತಾನೇ ಕೈಗೆತ್ತಿಕೊಂಡಿತು... ಕೆಲವು ಪ್ರಕರಣಗಳಲ್ಲಿ ಹಿಂದುಳಿದ ಮಾರುಕಟ್ಟೆ ಪದ್ಧತಿಯ ತೊಂದರೆಯನ್ನು ನಿವಾರಿಸಿಕೊಳ್ಳಲಿಕ್ಕಾಗಿ ಕೆಲವು ವೃತ್ತಿನಿರತ ವ್ಯಾಪಾರೀ ಗುಂಪುಗಳು ಸರಕು ವಿನಮಯದ ಉದ್ದೇಶಗಳೊಂದಿಗೆ ಹಳ್ಳಿಗಳಲ್ಲೇ ನೆಲೆಗೊಂಡವು.... ಒಂದು ಮಾರುಕಟ್ಟೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಬಹಳ ಅನಿವಾರ್ಯವಾದ ಕೆಲಸವಾಗಿತ್ತು ಎಂಬುದನ್ನು ರೈತರು, ವ್ಯಾಪಾರಿಗಳು ಹಾಗೂ ಪ್ರಾಂತ್ಯಗಳ ಒಡೆಯರು ಪರಸ್ಪರ ಸಹಕರಿಸಿ ಮಾರುಕಟ್ಟೆಗಳನ್ನು ಮತ್ತು ಪಟ್ಟಣ ಕೇಂದ್ರಗಳನ್ನು ಏರ್ಪಡಿಸಿದ ಹಲವು ನಿದರ್ಶನಗಳಿಂದ ನಿರ್ಣಯಿಸಿಕೊಳ್ಳಬಹುದಾಗಿದೆ. ರೈತರಿಗೆ ಹೋಲಿಸಿದರೆ ಸ್ವತಃ ಊಳಿಗಮಾನ್ಯಪ್ರಭುಗಳು ಮಾರುಕಟ್ಟೆ ಪಟ್ಟಣಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸಿದ್ದು ಬಹಳ ಹೆಚ್ಚಿನ ಪ್ರಮಾಣದಲ್ಲಿದೆ. ಇದು ತೆರಿಗೆ ವಿನಾಯಿತಿಗಳು ಹಾಗೂ ವ್ಯಾಪಾರಿಗಳಿಗೆ, ವ್ಯಾಪಾರಿಸಂಘಗಳಿಗೆ ಆಡಳಿತಾತ್ಮಕ ಅಧಿಕಾರಗಳನ್ನು ಸ್ವಯಂ ರಾಜರೇ ನಿಯುಕ್ತಗೊಳಿಸಿದ ಹಲವು ನಿದರ್ಶನಗಳಿಂದ ಸುವ್ಯಕ್ತವಾಗುತ್ತದೆ. ಈ ವಿನಾಯಿತಿಗಳನ್ನು ಆ ವರ್ತಕರು ಮಾರುಕಟ್ಟೆ ಪ್ರದೇಶಗಳ ಅಭಿವೃದ್ಧಿಯಲ್ಲಿ ಒದಗಿಸಿದ ಸಹಾಯವನ್ನು ಪರಿಗಣಿಸಿ ಅನಿವಾರ್ಯವಾಗಿ ನೀಡಲಾಗಿತ್ತು. ಮುಖ್ಯವರ್ತಕರನ್ನು ಪಟ್ಟಣ ಒಡೆಯರೆಂದು ಅಥವಾ ಪಟ್ಟಣ ಸ್ವಾಮಿಗಳೆಂದು ಎಲ್ಲಾ ದಾಖಲೆಗಳಲ್ಲು ಚಿತ್ರಿಸಿರುವುದು, ಪ್ರಭುಗಳ ಮತ್ತು ವರ್ತಕರ ನಡುವಿನ ಹೊಸ ಸಹಯೋಗೀ ಸಂಬಂಧಗಳ ಮೇಲೆ ಒತ್ತನ್ನು ಹಾಕುತ್ತದೆ. ವರ್ತಕರು ತಮ್ಮ ಕಡೆಯಿಂದ ವಸ್ತು ಹಾಗೂ ನಗದು ರೂಪದಲ್ಲಿ ಸುಂಕಗಳನ್ನು ಪಾವತಿ ಮಾಡುವುದರ ಮೂಲಕ ಖಜಾನೆಯನ್ನು ಶ್ರೀಮಂತಗೊಳಿಸಲು ಪ್ರಯತ್ನಿಸಿದರು.''[7]

ಈ ಸಂತೆಗಳ ಬೆಳವಣಿಗೆಯೊಂದಿಗೆ, ಜಾತ್ರೆಗಳೆಂಬ ವಾರ್ಷಿಕ ಸಮ್ಮಿಳನಗಳು ಕೂಡ ಈ ಅವಧಿಯಲ್ಲಿ ರೂಪುಗೊಂಡಿರಬೇಕು. ಈ ಜಾತ್ರೆಗಳೂ ಕೂಡ ನಿರ್ದಿಷ್ಟ ಬಗೆಯ ಸರಕುಗಳ ಮಾರಾಟಕ್ಕೆ ಒಂದು ಸಂದರ್ಭವಾಗಿ ಹಾಗೂ ಸಾಮಾಜಿಕ ವಹಿವಾಟಿನ ಒಂದು ವಿಸ್ತೃತ, ಧಾರ್ಮಿಕಾಧಾರಿತ ಘಟನೆಯಾಗಿ ಕಾರ್ಯ ನಿರ್ವಹಿಸಿದವು. ಇದರೊಂದಿಗೆ ಕೆಲವು ನಿರ್ದಿಷ್ಟ ಕುಶಲಕರ್ಮಿ ಶ್ರಮಿಕರಿಗೆ ಠಂಕಿತ ನಾಣ್ಯಗಳಲ್ಲಿ ಕೂಲಿಯನ್ನು ಕೊಡುವುದು ಆರಂಭವಾಗಿ ಅದು ಸರಕು ಉತ್ಪಾದನೆಯ ಹೆಚ್ಚಳದಲ್ಲಿ ಪ್ರಮುಖ ಪಾತ್ರ ವಹಿಸಿತು. ಚಿಕ್ಕ ಕಸುಬುದಾರ ಗುಂಪುಗಳಾದ ಚಾಪೆ ಹೆಣೆಯುವವರು, ಬುಟ್ಟಿ ಹೆಣೆಯುವವರು, ಹೂಗಾರರು, ಹೈನು ಮಾರಾಟಗಾರರು ಕೂಡ ಒಂದು ಶ್ರೇಣಿ ಸಂಘವಾಗಿ ತಯಾರಾಗಿ, ನಿರ್ದಿಷ್ಟ ಮೊತ್ತದ ಹಣವನ್ನು ತೆರಿಗೆಯಾಗಿ ಪಾವತಿ ಮಾಡುತ್ತಿದ್ದುದನ್ನು ಈ ಸಮುದಾಯದಲ್ಲಿ ನಾವು ಗುರುತಿಸ ಬಹುದಾಗಿದೆ.

ಅಗ್ರಹಾರಗಳನ್ನೂ ಹಾಗೂ ಮಠಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಬ್ರಾಹ್ಮಣ ರಿಗೆ ಸಿಕ್ಕ ಪ್ರೋತ್ಸಾಹವು ಈ ಮೊದಲು ರೈತ ಒಡೆತನದಲ್ಲಿದ್ದ ಹಳ್ಳಿಗಳನ್ನು ಬ್ರಾಹ್ಮಣರ ಉಂಬಳಿಯಾಗಿ ಮಾರ್ಪಡಿಸಿತು.

ಈ ಬಗೆಯಲ್ಲಿ ಬೆಳೆದ ಬ್ರಾಹ್ಮಣರ ಉತ್ಕರ್ಷವು ಅವರನ್ನು ಆಳುವ ವರ್ಗಗಳ ಮುಖ್ಯ ಭಾಗವನ್ನಾಗಿ ಮಾಡಿತಲ್ಲದೆ, ರೈತಾಪಿಯ ಜೀವನಾಧಾರದಲ್ಲಿ ಕೊರತೆ ಯನ್ನುಂಟುಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿತು. ಅದೇ ಸಮಯದಲ್ಲಿ ಅಗ್ರಹಾರಗಳು ಮತ್ತು ಮಠಗಳು ಪ್ರಭುತ್ವಕ್ಕೆ ಸಲ್ಲಿಸಬೇಕಾದ ತೆರಿಗೆಗಳಿಂದ ವಿನಾಯಿತಿ ಯನ್ನು ಪಡೆದರು. ಈ ಮುಖಾಂತರ ವರ್ಷಾಂತರಗಳಲ್ಲಿ ಈ ಅಗ್ರಹಾರಗಳು ಹೆಚ್ಚುವರಿ ಉತ್ಪನ್ನ ಹಾಗೂ ಮೌಲ್ಯಕ್ಕಾಗಿ ಮತ್ತಷ್ಟು ಆಗ್ರಹವನ್ನಿಡುವುದು ಮತ್ತು ಹೊಸ ಬಗೆಯ ಕೃಷಿ ಉತ್ಪನ್ನಗಳ ಮೇಲೆ ಹೆಚ್ಚಿನ ಬೇಡಿಕೆಯನ್ನಿಡುವುದು ಆರಂಭವಾಯಿತು.

ಬ್ರಾಹ್ಮಣ ಆಳುವ ವರ್ಗಗಳು ತಮ್ಮ ಸ್ವಂತ ಅಗತ್ಯಗಳಿಗಾಗಿ ಏರ್ಪಟ್ಟ ಅನಿವಾರ್ಯತೆಗಳಿಂದ ಕೃಷಿಯ ಉತ್ಪಾದಕತೆ ಹಾಗೂ ವಿಧಾನದಲ್ಲಿ ಒಂದು ಬದಲಾವಣೆ ಯನ್ನು ಪ್ರೋತ್ಸಾಹಿಸಬೇಕಾಯಿತು. ಅದನ್ನು ಈ ಕೆಳಕಂಡ ಅಂಶಗಳ ಮೂಲಕ ಸಾಧಿಸಲಾಯಿತು.

ಅರಣ್ಯ, ಬರಡುಭೂಮಿ, ಹುಲ್ಲುಗಾವಲುಗಳನ್ನು ಸಾಗುವಳಿಗೆ ಒಳಪಡಿಸಿ ಕೃಷಿಕ್ಷೇತ್ರಗಳನ್ನು ವಿಸ್ತರಿಸುವುದು ;

ನೀರಾವರಿಯ ಹೊಸ ತಂತ್ರಗಳನ್ನು ಅಭಿವೃದ್ಧಿಪಡಿಸುವುದು ;

ಸಾಗುವಳಿಯಲ್ಲಿ ಹೊಸ ಬಗೆಯ ಬೆಳೆಗಳನ್ನು ಪರಿಚಯಿಸುವುದು ;

ಈ ಯುಗದಲ್ಲಿ ಏರ್ಪಟ್ಟ ಬ್ರಾಹ್ಮಣ ಸಾಂಸ್ಥಿಕ ಸ್ವರೂಪಗಳ ಅಗತ್ಯಗಳನ್ನು ಈಡೇರಿಸುವುದಕ್ಕಾಗಿ ಈ ಬಗೆಯ ಕೃಷಿಕ್ಷೇತ್ರದ ಬದಲಾವಣೆಗಳನ್ನು ಜಾರಿಗೊಳಿಸಿ ದ್ದನ್ನು ೧೧ ಹಾಗೂ ೧೨ನೇ ಶತಮಾನಗಳಲ್ಲಿ ಕಾಣಬಹುದಾಗಿದೆ.

ಒಂದು ಕಡೆ ಕೃಷಿ ಉತ್ಪನ್ನಗಳಲ್ಲಿ ಹೆಚ್ಚಳ ತರುವುದಕ್ಕಾಗಿ ಜಾರಿಗೊಂಡ ಪ್ರಯತ್ನಗಳು ಇನ್ನೊಂದು ಕಡೆ ಕುಶಲಕರ್ಮಿಗಳ ವಿಶಿಷ್ಟ ಉತ್ಪಾದನೆಗಳಿಗಾಗಿ ಮಠ, ಅಗ್ರಹಾರ ಹಾಗೂ ಉಂಬಳಿಗಮಾನ್ಯ ಪ್ರಭು ವರ್ಗಗಳಿಂದ ಹೆಚ್ಚುತ್ತಿದ್ದ ಬೇಡಿಕೆಗಳು, ಈ ಬೆಳವಣಿಗೆಗಳನ್ನು ೧೧ ಮತ್ತು ೧೨ನೇ ಶತಮಾನಗಳಲ್ಲಿ ಕಾಣಬಹುದಾಗಿದೆ. ಆಳುವ ವರ್ಗಗಳ ಈ ಅಗತ್ಯಗಳೇ ಶ್ರಮಜೀವಿ ವರ್ಗದ ಕೆಲವು ವಿಭಾಗಗಳ ಉತ್ಕರ್ಷಕ್ಕೆ ಅನಿವಾರ್ಯವಾಗಿ ಹಾದಿಯನ್ನು ನಿರ್ಮಿಸಿತ್ತು.

ಕುಶಲಕರ್ಮಿ ಸರಕುಗಳಿಗಾಗಿ ಹೆಚ್ಚುತ್ತಲೇ ಹೋದ ಬೇಡಿಕೆ ಒಂದು ವಿಭಾಗದ ಜನತೆಯನ್ನು ತನ್ನ ಕೃಷಿಕ್ಷೇತ್ರದ ಮೇಲೆ ಶ್ರಮಹಾಕಲು ಬಿಡುವಿಲ್ಲದಂತೆ ಮಾಡಿತು. ೧೨ನೇ ಶತಮಾನದ ಹೊತ್ತಿಗೆ ಒಂದು ವಿಭಾಗದ ಕುಶಲಕರ್ಮಿಗಳು ಕೃಷಿ ಕ್ಷೇತ್ರದಿಂದ ಸಂಪೂರ್ಣವಾಗಿ ಬೇರ್ಪಟ್ಟು ತಮ್ಮ ಉತ್ಪನ್ನಗಳ ಮಾರಾಟದಿಂದಲೇ ಜೀವನ ನಿರ್ವಹಣೆಯನ್ನು ನಿರ್ವಹಿಸುತ್ತಿದ್ದಂತಹ ಪರಿಸ್ಥಿತಿಯೊಂದನ್ನು ನಿರ್ಮಿಸಿತ್ತು. ಇದರ ಅರ್ಥವೇನೆಂದರೆ ಈ ಬಗೆಯ ಕುಶಲಕರ್ಮಿಗಳು ಆರ್ಥಿಕವಾಗಿ ಇನ್ನು ಎಷ್ಟು ಮಾತ್ರಕ್ಕೂ ಭೂಮಾಲೀಕನನ್ನು ಅವಲಂಬಿಸಿಲ್ಲ ಹಾಗೂ ಅವನಿಗೆ ಸೇವೆ ಒದಗಿಸುತ್ತಿಲ್ಲ. ಆದರೆ ಭೂಮಾಲೀಕ ಮಾತ್ರ ಈ ವರ್ಗದ ಮೇಲೆ ಹಲವಾರು ಬಗೆಯ ನಿಬಂಧನೆಗಳನ್ನು ಹೇರಿ ಹಳೆಯ ಉಂಬಳಿಗಮಾನ್ಯ ವಿಧಾನದ ಶ್ರಮಕ್ಕೆ ಅವರನ್ನು ಒಳಪಡಿಸಲು ಪ್ರಯತ್ನಿಸುತ್ತಿದ್ದಾನೆ. ಆದರೆ ಮಾರುಕಟ್ಟೆಯ ಬೆಳವಣಿಗೆಯು ಹೆಚ್ಚು ಹೆಚ್ಚು ಸರಕು ಉತ್ಪಾದನೆಗೆ ಕುಶಲಕರ್ಮಿಯನ್ನು ಪ್ರಚೋದಿಸತೊಡಗಿತ್ತು. ಆದರೆ ಈ ಬಗೆಯ ಪ್ರಚೋದನೆಯೇ ಉಂಬಳಿಗಮಾನ್ಯ ವರ್ಗಗಳ ಅಡಿಪಾಯಕ್ಕೆ ಪೆಟ್ಟು ನೀಡಲೂ ಆರಂಭಿಸಿತ್ತು.

ಈ ನಡುವೆ ಅಗ್ರಹಾರದ ಭೂಮಾಲೀಕರು ಹಾಗೂ ವರ್ತಕರ ನಡುವಿನ ವೈರುಧ್ಯಗಳು ಕೂಡ ಒಂದು ಕಡೆಯಲ್ಲಿ ವೃದ್ಧಿಗೊಳ್ಳುತ್ತಿದ್ದವು. ವರ್ತಕ ವರ್ಗದ ಕೈಯಲ್ಲಿ ಸಂಚಯಿತಗೊಳ್ಳುತ್ತಿದ್ದ ಚಲನಾತ್ಮಕ ಬಂಡವಾಳ ಹಾಗೂ ನಗರ ಮಾರುಕಟ್ಟೆಗಳ ಮೇಲಿನ ಅವರ ಆಡಳಿತಾತ್ಮಕ ನಿಯಂತ್ರಣದಿಂದಾಗಿ ಹೆಚ್ಚುತ್ತಿದ್ದ ಅವರ ಅಂತಸ್ತು, ಬ್ರಾಹ್ಮಣ ಭೂಒಡೆಯರಿಗೆ ಗಂಭೀರ ಸವಾಲನ್ನು ಒಡ್ಡಿದ್ದವು. ಈ ವರ್ತಕ ವರ್ಗದ ಮೇಲೆ ಈ ಭೂಮಾಲೀಕ ವರ್ಗವು ತಮ್ಮ ಕೈಯಲ್ಲಿದ್ದ ಅಧಿಕಾರ ಬಲದಿಂದ ಹೆಚ್ಚೆಚ್ಚು ಸುಂಕಗಳನ್ನು ಹಾಗೂ ತೆರಿಗೆಗಳನ್ನು ಹೇರತೊಡಗಿತ್ತು.

ಇಂತಹ ಪರಿಸ್ಥಿತಿಯೊಂದರಲ್ಲಿ ಶ್ರೇಣಿಗಳು ಕುಶಲಕರ್ಮಿ ಹಾಗೂ ಕಸುಬುದಾರ ವರ್ಗಗಳ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವುದಕ್ಕೋಸ್ಕರ ಹುಟ್ಟಿಕೊಂಡವು. ಪಟ್ಟಣವಾಸಿ ಉತ್ಪಾದಕರು ತಮ್ಮ ನಡುವೆ ರಚಿಸಿಕೊಂಡ ಮೊದಲ ಸಂಘಟನೆ ಇದಾಗಿತ್ತು. ಅಂತಹ ಸಮಯದಲ್ಲಿ ಈ ಶ್ರೇಣಿಗಳು (ಮುಂದೆ ನಾವು ನೋಡಲಿರುವಂತೆ ಎಡಗೈ, ಬಲಗೈ ಗುಂಪುಗಳು ತಮ್ಮ ತಮ್ಮ ಹಿತಾಸಕ್ತಿ ರಕ್ಷಣೆಗಾಗಿ ರಚಿಸಿಕೊಂಡ ಶ್ರೇಣಿಗಳ ಹಾಗೆ) ಉತ್ಪಾದಕರ ಹಾಗೂ ವ್ಯಾಪಾರೀ ವರ್ಗಗಳ ನಡುವೆ

ಅವರ ಸೌಹಾರ್ದತೆಯನ್ನು ಸೂಚಿಸುವಂತಹ ವಿಶಾಲ ತಳಹದಿಯ ಒಕ್ಕೂಟ ಗಳಾಗಿದ್ದವು. ತಮ್ಮ ಉದ್ಯೋಗದ ಭದ್ರತೆ ಹಾಗೂ ಸ್ಥಾನಮಾನಗಳ ನಿರ್ಬಂಧತೆಯ ಬಿಡುಗಡೆಗಾಗಿ ಅದು ಒಂದು ಧಾರ್ಮಿಕ ದಂಗೆಯಾಗಿ ರೂಪುಗೊಂಡಿತು. ಅದನ್ನು ನಾವು ವಚನಕಾರರ ಚಳುವಳಿಯೆಂದು ಸಾಹಿತ್ಯಿಕ ಅರ್ಥದಲ್ಲಿ, ವೀರಶೈವರ ಆಂದೋಲನವೆಂದು ಧಾರ್ಮಿಕ ಅರ್ಥದಲ್ಲಿ, ಕಾಯಕ ಜೀವಿಗಳ ಚಳುವಳಿಯೆಂದು ಆರ್ಥಿಕ ಪರಿಭಾಷೆಯಲ್ಲಿ ಕರೆಯುತ್ತಿದ್ದೇವೆ. ಈ ಚಳುವಳಿಯ ಮುಖ್ಯ ಬೆಂಬಲಿಗರು ಕುಶಲಕರ್ಮಿಗಳು, ವ್ಯಾಪಾರಿಗಳು ಹಾಗೂ ಸರಕು ಉತ್ಪಾದನೆಯಲ್ಲಿ ತೊಡಗಿದ್ದ ಒಂದು ವಿಭಾಗದ ರೈತರೂ ಆಗಿದ್ದರು.

ಆ ಸಮಯದಲ್ಲಿ ಕಲಚೂರಿಗಳು ಕಲ್ಯಾಣವನ್ನು ಕೇಂದ್ರವನ್ನಾಗಿರಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಈ ವಂಶದ ರಾಜಕೀಯ ಚಟುವಟಿಕೆಗಳು ಪ್ರಾರಂಭ ವಾಗುವುದು ೧೧ನೇ ಶತಮಾನದ ಬಿಜ್ಜ ಎಂಬುವವನ ಆಡಳಿತದಿಂದ. ಅವನು ಮಂಗಲಿವೇಡ ಪ್ರಾಂತ್ಯವನ್ನು ಆಳುತ್ತಿದ್ದನು. ಶಾಸನಗಳು ಅವನನ್ನು ಚಾಲುಕ್ಯರ 'ಮಹಾಮಂಡಲೇಶ್ವರ' ಎಂದು ಕರೆದಿವೆ. ಕಲಚೂರಿಗಳಲ್ಲಿ ಅತ್ಯಂತ ಪ್ರಸಿದ್ಧನಾದ ರಾಜ ಎರಡನೆಯ ಬಿಜ್ಜಳ. ಅವನ ಆಳ್ವಿಕೆಯು ಕ್ರಿ.ಶ. ೧೧೩೦ರಲ್ಲಿ ಪ್ರಾರಂಭಗೊಂಡು ಕ್ರಿ.ಶ. ೧೧೬೭ರ ಮಧ್ಯದಲ್ಲಿ ಕೊನೆಗೊಂಡಿತು. ಸಾಮಂತರಾಗಿದ್ದ ತನ್ನ ಕುಟುಂಬದ ಸ್ಥಾನಮಾನಗಳನ್ನು ಸ್ವತಂತ್ರ ಚಕ್ರವರ್ತಿಗಳ ಸ್ಥಾನಮಾನಕ್ಕೆ ಏರಿಸಿದವನು ಇವನೇ.

ಬಿಜ್ಜಳ ಹಾಗೂ ಬಸವ ಸಮಕಾಲೀನರು. ಬಿಜ್ಜಳನು ಬಸವಣ್ಣನ ಸಹೋದರಿ ಪದ್ಮಾವತಿಯನ್ನು ಮದುವೆಯಾದನು. ಕೆಲವೇ ವರ್ಷಗಳಲ್ಲಿಬಿಜ್ಜಳ ಮತ್ತು ಬಸವಣ್ಣನ ನಡುವಿನ ಸಂಬಂಧ ಕೆಟ್ಟಿತು. ಧಾರ್ಮಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಅವರ ಆದರ್ಶಗಳು ಭಿನ್ನವಾಗಿದ್ದವು, ಆದ್ದರಿಂದ ಅವರ ನಡುವೆ ಸಂಘರ್ಷ ಏರ್ಪಟ್ಟಿತು.

ಬಸವಣ್ಣ ೧೨ನೇ ಶತಮಾನದಲ್ಲಿ ನಡೆದ ವೀರಶೈವ ಆಂದೋಲನದ ನೇತಾರ. ಈ ಆಂದೋಲನವು ಏಕಾಂತದ ರಾಮಯ್ಯನಿಂದ ಪ್ರಾರಂಭವಾಯಿತು ಎಂದು ಫ್ಲೀಟರು ಅಭಿಪ್ರಾಯಪಟ್ಟಿದ್ದಾರೆ. ಈ ವೀರಶೈವಆಂದೋಲನದ ಲೌಕಿಕ ಹಿನ್ನೆಲೆಯನ್ನು ಕುರಿತು ಆರ್.ಎನ್. ನಂದಿ ಅಧ್ಯಯನ ಮಾಡಿದ್ದು , ಅವರ ಪ್ರಕಾರ ಈ ಆಂದೋಲನವು ಮುಖ್ಯವಾಗಿ ನಗರ ಕೇಂದ್ರಿತವಾಯಿತು. ವರ್ತಕ ಜನಾಂಗ ಗಳಿಂದಲೂ (ಜಂಗಮ ಮತ್ತು ಪಂಚಮಸಾಲಿಗಳೊಂದಿಗೆ), ವಿವಿಧ ರೈತಾಪಿ ವರ್ಗ ಹಾಗೂ ಕುಶಲಕರ್ಮಿ ವರ್ಗಗಳಿಂದಲೂ ಬೆಂಬಲ ಪಡೆಯಿತು. ಇವರಿಗೆ ಪಂಚಮಸಾಲಿಗಳಲ್ಲದವರು ಎಂದು ಹೆಸರಿತ್ತು. ಉತ್ತರ ಕರ್ನಾಟಕದಲ್ಲಿ ಬೆಳೆಯುತ್ತಿದ್ದ ವ್ಯಾಪಾರ, ಅದನ್ನು ಕುದುರಿಸುವ ನಗರ ಕೇಂದ್ರಗಳು ಮತ್ತು ೧೦-೧೩ನೆಯ ಶತಮಾನದ ನಡುವೆ ಬೆಳೆಯುತ್ತಿದ್ದ ಮಾರುಕಟ್ಟೆಯ ಆರ್ಥಿಕ ಸ್ವರೂಪ ಇವು ವರ್ತಕ ಮತ್ತು ಕೃಷಿಕ ವರ್ಗಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿದವು. ಅವರ ಹಿತಾಸಕ್ತಿಗಳಿಗೂ ಹಿಂದಿನ ಜಮೀನ್ದಾರ ವರ್ಗದ ಹಿತಾಸಕ್ತಿಗಳಿಗೂ ಸಂಘರ್ಷ ವುಂಟಾಯಿತು. ನಂದಿ

ಹೇಳುತ್ತಾರೆ : ''ಭೂಮಿಯನ್ನು ಹೊಂದಿದ್ದ ಆನುವಂಶಿಕ ಮಧ್ಯವರ್ತಿಗಳು ಮತ್ತು ಮುಖ್ಯ ಉದ್ಯಮಿಗಳು ಭಾರೀ ಪ್ರಮಾಣದ ಭೂಮಿಯನ್ನು ಇತರ ಸವಲತ್ತುಗಳನ್ನು ಪಡೆದಿದ್ದುದು, ಉತ್ಪಾದಕರ, ಕುಶಲಕರ್ಮಿಗಳ ಮತ್ತು ವರ್ತಕರ ಹಿತಗಳಿಗೆ ಹೊಂದಿಕೊಳ್ಳದಾದವು. ಹತ್ತು ಮತ್ತು ಹದಿಮೂರನೆಯ ಶತಮಾನಗಳ ನಡುವೆ ವಾಣಿಜ್ಯ ಮತ್ತು ಆರ್ಥಿಕ ವ್ಯವಹಾರವು ವಿಸ್ತಾರಗೊಂಡದ್ದರಿಂದ ಅವರ ಸ್ಥಾನಮಾನಗಳು ಉತ್ತಮಗೊಂಡಿದ್ದವು. ಜೊತೆಗೆ ಹೊಲಗದ್ದೆಗಳ ಹಾಗೂ ಉದ್ಯಮಗಳ ಕೆಲಸಗಾರರನ್ನು ಗುಲಾಮರಂತೆ ನಡೆಸಿಕೊಳ್ಳುತ್ತಿದ್ದುದಲ್ಲದೆ ಭೂಮಾಲೀಕರಾಗಿದ್ದ ಗಣ್ಯ ಜನರು ಕೃಷಿ ಭೂಮಿಯ ಬಹುಭಾಗವನ್ನು ಅನುತ್ಪಾದಕ ವಿಷಯಗಳಿಗೆ ತಿರುಗಿಸಿದ್ದರು. ಹಾಗಾಗಿ ಗಣನೀಯ ಕೃಷಿ ಮತ್ತು ಉದ್ಯಮ ಕಾರ್ಮಿಕ ವರ್ಗವನ್ನು ದಾಸ್ಯಕ್ಕೆ ನೂಕಿದ್ದ ದೇವಾಲಯಗಳು ಹಾಗೂ ಸಾಂಪ್ರದಾಯಿಕ ಬ್ರಾಹ್ಮಣ ಧರ್ಮ ಇವು ವರ್ತಕರಲ್ಲಿ, ಉತ್ಪಾದಕ ವರ್ಗದಲ್ಲಿ ಜನಪ್ರಿಯತೆ ಕಳೆದುಕೊಂಡವು. ಅಂತಿಮವಾಗಿ ಅವರು ಸಮಾಜದಿಂದ ಸಿಡಿದು ಬೇರೆಯೇ ಆದ ನೂತನ ಸಮಾಜ ವ್ಯವಸ್ಥೆಯೊಂದನ್ನು ರೂಪಿಸಿಕೊಂಡರು. ಈ ಆಧಾರ ಸಂಗತಿಗಳನ್ನು ಒಪ್ಪಿಕೊಂಡ ಪಕ್ಷದಲ್ಲಿ ಕ್ರಿ.ಪೂ. ಆರನೆಯ ಶತಮಾನದಲ್ಲಿ ಜೈನಧರ್ಮ ಮತ್ತು ಬೌದ್ಧಧರ್ಮಗಳ ಉದಯಕ್ಕೆ ಕಾರಣವಾದ ಪರಿಸ್ಥಿತಿಯು ವಿಶ್ಲೇಷಣೆಯಿಂದ ಹೊರಬೀಳುತ್ತದೆ. ಸಾಮಾಜಿಕ ಧಾರ್ಮಿಕ ಆಂದೋಲನಗಳನ್ನು ಅವರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಮಾತುಗಳಲ್ಲಿ ಅರ್ಥಮಾಡಿಕೊಳ್ಳಬೇಕು ಮತ್ತು ವಿವರಿಸಬೇಕು. ನಾಯಕರ ವರ್ಚಸ್ಸು, ಬೋಧನೆಯ ಗಹನತೆ ಇವು ಮಾತ್ರವೇ ಜನರು ಒಪ್ಪಿಕೊಳ್ಳುವಂತೆ ಮಾಡಲು ಸಾಧ್ಯವಾಗುವುದಿಲ್ಲ. ಅಂದ ಮಾತ್ರಕ್ಕೆ ನಾಯಕರು ಮತ್ತು ಅವರ ಬೋಧನೆಗಳ ಮಹತ್ವಕ್ಕೆ ಕುಂದೇನೂ ಇಲ್ಲ. ಅವು ವಾಸ್ತವವಾಗಿ ಇತಿಹಾಸದಲ್ಲಿ ಸಾಂದರ್ಭಿಕ ವಾಗುತ್ತವೆ.''[8]

ಬಸವಣ್ಣನ ಜೀವನ ವೃತ್ತಾಂತವನ್ನು, ಅದರಲ್ಲಿನ ಪವಾಡಗಳನ್ನು ಧರ್ಮ ಪರತೆಯ ಬೆಳವಣಿಗೆಯನ್ನು ಬಿಟ್ಟು ಸಂಕ್ಷೇಪವಾಗಿ ಹೀಗೆ ನಿರೂಪಿಸಬಹುದು: ಬಾಗೇವಾಡಿಯಲ್ಲಿ ಗೌರವಯುತ ಸ್ಥಾನಮಾನವಿದ್ದ ಬ್ರಾಹ್ಮಣ (?) ಕುಟುಂಬದಲ್ಲಿ ಆತ ಜನಿಸಿದನು. ಬ್ರಾಹ್ಮಣ ಆಚಾರಗಳು ಮತ್ತು ಧಾರ್ಮಿಕ ನಡಾವಳಿಗಳಿಗೆ ಜಿಗುಪ್ಸೆ ಪಟ್ಟು, ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿ ಚಿಕ್ಕವನಿರುವಾಗಲೇ ಪ್ರತಿಭಟಿಸಿದನು. ಯಜ್ಞೋಪವೀತವನ್ನು ಕಿತ್ತುಹಾಕಿ ಕೂಡಲಸಂಗಮಕ್ಕೆ ಹೋಗಿ, ಅಲ್ಲಿ ಈಶಾನ್ಯ ಗುರುಗಳಿಂದ ದೀಕ್ಷೆಯನ್ನು, ಶೈವ ಸಿದ್ಧಾಂತಗಳ ಪರಿಜ್ಞಾನವನ್ನು ಪಡೆದನು. ಈಶಾನ್ಯರು ಬಹುಶಃ ಪಾಶುಪತಪಂಥಕ್ಕೆ ಸೇರಿದವರು. ಬಸವನ ಪ್ರೌಢಿಮೆ, ವಿದ್ಯೆ, ಸಾಮರ್ಥ್ಯಗಳು ಆಗ ಮಂಗಳವಾಡದ ಬಲಿಷ್ಠ ಅರಸನಾಗಿದ್ದ ಕಲಚೂರಿ ಬಿಜ್ಜಳನ ಬಳಿ ಕೆಲಸಕ್ಕೆ ಸೇರಲು ಸಹಾಯಕವಾದವು. ಅವನ ಸೇವೆಯಲ್ಲಿ ಕೋಶಾಧಿಕಾರಿಯಾಗಿದ್ದ ಸಿದ್ಧ ದಂಡಾಧಿಪನ ಗಮನ ಸೆಳೆಯಿತು. ಅವನು ಬಸವನನ್ನು ತನ್ನ ಆಶ್ರಯಕ್ಕೆ

ಕರೆದುಕೊಂಡನು. ಸಿದ್ಧ ದಂಡಾಧಿಪನು ಮೃತನಾದ ನಂತರ ಅವನ ಪದವಿ ಮತ್ತು ಆಸ್ತಿಪಾಸ್ತಿಗಳೆಲ್ಲವೂ ಬಸವಣ್ಣನಿಗೆ ಸೇರಿದವು. ಅವನನ್ನು ಬಿಜ್ಜಳನು ಆಸ್ಥಾನದ ಕೋಶಾಧಿಕಾರಿಯನ್ನಾಗಿ ನೇಮಿಸಿಕೊಂಡನು. ಬಿಜ್ಜಳನೊಂದಿಗೆ ಬಸವಣ್ಣನಿಗೆ ಅಪಾರವಾದ ನಂಬಿಕೆ ಮತ್ತು ವಿಶ್ವಾಸಗಳು ಬೆಳೆದವು. ಆದರೆ ಬಸವನ ವಿರೋಧಿಗಳು ಕತೆಗಳನ್ನು ಕಟ್ಟಿ ರಾಜನ ಮನಸ್ಸನ್ನು ಕೆಡಿಸಲು ಅವರಿಬ್ಬರ ನಡುವೆ ವಿಶ್ವಾಸ ಕ್ರಮೇಣ ಕ್ಷಯಿಸಿತು. ಅವನ ಧಾರ್ಮಿಕ ವೈಚಾರಿಕತೆ, ಬ್ರಾಹ್ಮಣ ವ್ಯವಸ್ಥೆಗಳ ಬಗೆಗೆ ಅಸಮಾಧಾನ ಮತ್ತು ಅವನ ಅರಮನೆಗೆ ಆತಿಥ್ಯ ಸ್ವೀಕರಿಸಲು ಹಿಂಡು ಹಿಂಡಾಗಿ ಬಂದು ಸೇರುತ್ತಿದ್ದ ಶಿವಶರಣರ ನಡುವೆ ಬಸವಣ್ಣನಿಗೆ ಬೆಳೆದ ಜನಪ್ರಿಯತೆ, ಇವು ಅವನ ಶತ್ರು ಶಿಬಿರವನ್ನು ಬಲಪಡಿಸಿದ್ದವು.

ಬಿಜ್ಜಳನು ಚಾಲುಕ್ಯ ಸಿಂಹಾಸನವನ್ನು ವಶಪಡಿಸಿಕೊಂಡು ಕಲ್ಯಾಣ ಚಕ್ರವರ್ತಿಯಾಗಲು , ಬಸವಣ್ಣ ತನ್ನ ಪ್ರಭುವಿನೊಂದಿಗೆ ನೂತನ ರಾಜಧಾನಿಗೆ ತೆರಳಿದನು. ಈಗ ಕಲ್ಯಾಣವು ವೀರಶೈವ ಆಂದೋಲನದ ಮುಖ್ಯ ಕೇಂದ್ರವಾಯಿತು. ಬಿಜ್ಜಳನಿಗೂ ಬಸವಣ್ಣನಿಗೂ ನಡುವೆ ಭಿನ್ನಾಭಿಪ್ರಾಯ ಬೆಳೆದುದು ಇಲ್ಲಿ. ಅಸ್ಪೃಶ್ಯತೆಯನ್ನು ಬಸವಣ್ಣ ನಿರಾಕರಿಸಿದ್ದು, ಕಂಬಳಿಯ ನಾಗಿದೇವನ ಮನೆಯಲ್ಲಿ ಊಟ ಮಾಡಿದ್ದು, ಅರಸನಿಂದ ತೀವ್ರ ಖಂಡನೆಗೆ ಎಡೆಮಾಡಿಕೊಟ್ಟಿತು. ಸ್ಥಾಪಿತವಾಗಿರುವ ವ್ಯವಸ್ಥೆಯನ್ನು ಮುರಿಯುವುದರಿಂದ ಜನರಲ್ಲಿ ತೀವ್ರ ಅಶಾಂತಿಯುಂಟಾಗಿ ಇದನ್ನು ಹತೋಟಿಯಲ್ಲಿಡುವುದು ಬಹಳ ಕಷ್ಟವಾಗುತ್ತದೆಂದು ಬಿಜ್ಜಳನು ಹೆದರಿದನು. ಬಸಣ್ಣನು ಹೇಗೋ ವಾದ ಮಾಡಿ ರಾಜನನ್ನು ಒಪ್ಪಿಸಿ ಆಗಿನ ಬಿಕ್ಕಟ್ಟನ್ನು ನಿವಾರಿಸಿದನು. ಆದರೆ ಮುಂದಿನ ಒಂದು ಘಟನೆಯು ಕಲ್ಯಾಣದಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿತು. ಮಧುವಯ್ಯ ಎಂಬ ಬ್ರಾಹ್ಮಣನ ಮಗಳಿಗೂ ಅಸ್ಪೃಶ್ಯನಾಗಿದ್ದ ಹರಳಯ್ಯನ ಮಗನಿಗೂ ನಡುವೆ ಅಂತರ್ಜಾತೀಯ ವಿವಾಹವು ನಡೆಯಿತು. ಇದಕ್ಕೆ ಬಸವಣ್ಣನ ಹಾಗೂ ಅವನ ಅನುಯಾಯಿಗಳ ಆಶೀರ್ವಾದವಿತ್ತು. ಇದು ಧರ್ಮಶಾಸ್ತ್ರಕಾರರು ನಿಷೇಧಿಸಿದ್ದ ಪ್ರತಿಲೋಮ ವಿವಾಹ. ಕ್ರೋಧತಪ್ತನಾದ ಬಿಜ್ಜಳನು ಹರಳಯ್ಯ ಮತ್ತು ಮಧುವಯ್ಯರನ್ನು ಹಿಡಿತರಿಸಿ ಅವರ ಕಣ್ಣುಗಳನ್ನು ಕೀಳಿಸಿ ಅವರನ್ನು ಶೂಲಕ್ಕೇರಿಸಿದನು. ಈ ಅತ್ಯಾಚಾರವು ಇಡೀ ವೀರಶೈವಸಮುದಾಯವನ್ನು ಸಿಡಿದೇಳುವಂತೆ ಮಾಡಿತು. ಅವರಲ್ಲಿ ಹೆಚ್ಚು ತೀವ್ರಗಾಮಿಗಳಾಗಿದ್ದವರು ಜಗದೇವನ ಮುಖಂಡತ್ವದಲ್ಲಿ ಬಿಜ್ಜಳನನ್ನು ಕೊಲೆಮಾಡಿ ಸೇಡು ತೀರಿಸಿಕೊಂಡರು. ಈ ಘಟನೆಯು ಪ್ರಚೋದಿಸಿದ ಪ್ರತೀಕಾರಗಳಿಂದಾಗಿ ಆಂದೋಲನವು ವಿಸರ್ಜನೆಗೊಂಡಿತು. ಬಸವಣ್ಣನು ಕಲ್ಯಾಣವನ್ನು ತೊರೆದು ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಶಿವನಲ್ಲಿ ಐಕ್ಯವಾದನು ಎಂದು ಪ್ರತೀತಿಯಿದೆ. ಸಕ್ರಿಯ ರಾಜಕಾರಣಿಯಾಗಿದ್ದರೂ, ಬಿಜ್ಜಳನ ಕೊಲೆಯ ಹಿಂದೆ ಬಸವಣ್ಣನ ವೈಯಕ್ತಿಕ ಕೈವಾಡವಿತ್ತೆಂಬುದನ್ನು ವಿದ್ವಾಂಸರು ನಿರಾಕರಿಸುತ್ತಾರೆ. ಏಕೆಂದರೆ ಅದು ಅವನ ತತ್ವಗಳಿಗೂ , ನಡವಳಿಕೆಗೂ ಆತ ಪಡೆದಿದ್ದ ಸ್ಥಾನಮಾನಕ್ಕೂ ಹೊಂದಿಕೆಯಾಗುವುದಿಲ್ಲ.

ಬಸವಣ್ಣ ಒಬ್ಬ ಮುಕ್ತ ಚಿಂತಕನಾಗಿದ್ದನೆಂಬುದು ನಿಸ್ಸಂದೇಹ. ಪ್ರಚಲಿತ ವೀರಶೈವಧರ್ಮವನ್ನು ಸಾಮಾಜಿಕ ವಿಮರ್ಶೆ ಮತ್ತು ಪರಿವರ್ತನೆಯನ್ನು ಸಾಧಿಸುವ ಹರಿತವಾದ ಆಯುಧವನ್ನಾಗಿ ಪರಿವರ್ತಿಸಿದನು. ಅವನಿಗೆ ಇದ್ದ ಅಧಿಕಾರ ಸ್ಥಾನವು ಸಾಂಪ್ರದಾಯಿಕತೆಯ ವಿರುದ್ಧ ಹೋರಾಟವನ್ನು ನಡೆಸಲು ಸಹಾಯ ಮಾಡಿತೇನೋ ನಿಜ. ಅವನ ಆಂದೋಲನದಲ್ಲಿ ಅಡಕವಾಗಿದ್ದ ಬಲವಾದ ರಾಜಕೀಯ ಅಂಶವನ್ನು ವೀರಶೈವ ಧರ್ಮ ಅಥವಾ 'ಪರಾಕ್ರಮಯುತ ಶೈವಧರ್ಮ' ಎಂಬ ಪದವೇ ಸೂಚಿಸುತ್ತದೆ. ಏಕೆಂದರೆ ಬಸವನು ಅತ್ಯಂತ ಶ್ರೇಷ್ಠ ಪ್ರಗತಿಪರ. ಶಾಸ್ತ್ರಗಳನ್ನು ಮತ್ತು ಆಚರಣೆಗಳನ್ನು ಕುರುಡಾಗಿ ನಂಬುವುದು ಸರಿಯಲ್ಲ, ಅದು ವ್ಯಕ್ತಿಯನ್ನು ಭಗವಂತನಿಂದಲೂ ನೆರೆಯವರಿಂದಲೂ ದೂರ ಸರಿಯುವಂತೆ ಮಾಡುತ್ತದೆ. ದಯೆಯೇ ಧರ್ಮದ ಮೂಲ ತಳಹದಿ. ಸಮಾಜದ ಜಾತಿ ವಿಭಜನೆಗಳು ಭಗವಂತನಿಗೆ ಮಾಡುವ ಅಪಮಾನ ಎಂದು ನಂಬಿದವನು. ಜಾತಿ ವಿಭಜನೆಗಳು ಜನರನ್ನು ಮೇಲು ಕೀಳು ಎಂದು ವರ್ಗೀಕರಿಸುವುದು ಯಾವಾಗಲೂ ಬಸವಣ್ಣನನ್ನು ಕ್ರುದ್ಧನನ್ನಾಗಿ ಮಾಡುತ್ತಿತ್ತು.

ಬಸವಣ್ಣ ಈ ವೀರಶೈವ ಚಳುವಳಿಯ ಮುಖಂಡನಾಗಿದ್ದ. ಅದೊಂದು ಸಾಮೂಹಿಕ ಆಶಯಗಳ, ಸಮಾನತೆಯ ಆಶಯಗಳ ಚಳುವಳಿಯಾಗಿದ್ದು ಊಳಿಗ ಮಾನ್ಯತೆಯ ಜಾತಿದಮನವನ್ನು ವಿರೋಧಿಸುತ್ತಿತ್ತು. ಯಾಕೆಂದರೆ ಊಳಿಗಮಾನ್ಯ ವ್ಯವಸ್ಥೆಯು ಶ್ರಮದ ಮೌಲ್ಯವನ್ನು ದೋಚುವುದಕ್ಕೆ ಜಾತಿಯನ್ನೇ ಒಂದು ಮಾನದಂಡವಾಗಿ ಬಳಸಿಕೊಂಡಿತ್ತು. ಕಾಯಕವೇ ಕೈಲಾಸ ಎಂಬ ಈ ಚಳುವಳಿಯು ಕರ್ನಾಟಕದ ಇತಿಹಾಸದಲ್ಲಿ ಬಹಳ ಮುಖ್ಯವಾದ ಸಾಮಾಜಿಕ ನಿಲುವೊಂದರ ಪ್ರತಿಪಾದನೆಯಲ್ಲಿ ತೊಡಗಿತ್ತು. ವ್ಯಕ್ತಿಯು ತನ್ನ ಪರಿಶ್ರಮದ ಮೂಲಕ ಮಾತ್ರವೇ ಆಧ್ಯಾತ್ಮಿಕ ಉನ್ನತಿಯನ್ನು ಪಡೆಯಬೇಕು ಎಂಬುದನ್ನು ಒತ್ತಿಹೇಳಿದುದು ಮಾತ್ರ ವಲ್ಲದೇ, ಬದುಕೇ ಒಂದು ಕಠಿಣವಾದ ಪರಿಶ್ರಮ, ಅದನ್ನು ಹಾಗೆಯೇ ಒಪ್ಪಿಕೊಳ್ಳ ಬೇಕು, ಅದೇ ಭಗವಂತನನ್ನು ಮೆಚ್ಚಿಸುವ ರೀತಿ, ಮುಕ್ತಿಗೆ ಅರ್ಹವಾದ ರೀತಿ ಎಂಬುದನ್ನು ಸ್ಥಿರಪಡಿಸಿತು. ಮೇಲಾಗಲೀ, ಕೀಳಾಗಲೀ ಯಾರೂ ಈ ನಿಯಮಕ್ಕೆ ಹೊರತಲ್ಲ. ಇದು ಮಾನವ ಜನಾಂಗದ ಮೂಲಭೂತ ಸರ್ವಸಮಾನತೆಯನ್ನು ಒಳಗೊಳ್ಳುತ್ತದೆ. ವಚನಕಾರರ ಈ ಭಕ್ತಿ ಕ್ರಿಯಾಶೀಲವಾದ ಭಕ್ತಿ. ವೈರಾಗ್ಯ ವನ್ನೋ, ಸನ್ಯಾಸವನ್ನೋ, ಭಗವಂತನ ಸಾಕ್ಷಾತ್ಕಾರಕ್ಕಾಗಿ ಇದು ಪ್ರತಿಪಾದಿಸಲಿಲ್ಲ. ಆರಾಧನೆಗೆ ಒಂದು ದೇವಸ್ಥಾನದ ಅಗತ್ಯವನ್ನು ಹೇಳಲಿಲ್ಲ. ಅದನ್ನು ಸ್ಥಾವರವಾದ, ವಿನಾಶಕ್ಕೆ ಗುರಿಯಾಗುವ ಒಂದು ಸ್ಥಳ ಎಂದು ಗುರುತಿಸಲಾಯಿತು.

ವೈದಿಕಮತದ ಧರ್ಮಶಾಸ್ತ್ರಗಳು ಪ್ರತಿಯೊಬ್ಬ ಮನುಷ್ಯನೂ ಸ್ವರ್ಗ ಪ್ರಾಪ್ತಿಗಾಗಿ ದೈವಭಕ್ತನಾಗಿರಬೇಕು, ಧರ್ಮಶಾಸ್ತ್ರಗಳನ್ನು ಮೀರಬಾರದು ಎಂದು

ಪ್ರತಿಪಾದಿಸಿದ್ದರೆ, ವಚನಕಾರರ ಚಳುವಳಿಯು 'ದೇವಲೋಕ, ಮರ್ತ್ಯಲೋಕ ವೆಂಬುದು ಬೇರಿಲ್ಲ ಕಾಣಿರೋ' ಎಂದು ಸಾರಿತು.

ವಚನಕಾರರ ಚಳುವಳಿಗೆ ನಾಯಕನೆಂದು, ಅದರ ಆದ್ಯ ಪ್ರವರ್ತಕನೆಂದು ಬಸವಣ್ಣನಿಗೆ ಮಾನ್ಯತೆ ಇತ್ತಾದರೂ ಅದನ್ನೊಂದು ಧರ್ಮವನ್ನಾಗಿ, ಆ ಧರ್ಮಕ್ಕೆ ಯಾವುದೇ ಒಂದು ವ್ಯಕ್ತಿಯ ಅಥವಾ ಶಾಸ್ತ್ರಗ್ರಂಥದ ನಿರ್ದಿಷ್ಟ ತತ್ವಗಳೇ ಅನುಲ್ಲಂಘನೀಯ ಆಧಾರಗಳೆಂದಾಗಲೀ ಭಾವಿಸಿರಲಿಲ್ಲ. ಬದಲಾಗಿ ಅನುಭವ ಮಂಟಪ ಎಂಬ ಹೆಸರಿನ ಒಂದು ಕಾಯಕ ಜೀವಿಗಳ ಗೋಷ್ಠಿಯಲ್ಲಿ ಪರಸ್ಪರ ವಿನಿಮಯಿಸಿಕೊಂಡ ಆಲೋಚನೆ ಹಾಗೂ ನಿಲುವುಗಳನ್ನೇ ಮೌಲ್ಯಾದರ್ಶಗಳನ್ನಾಗಿ ರೂಪಿಸಿಕೊಂಡ ಒಂದು ಸಾಮೂಹಿಕತೆಯಾಗಿತ್ತು ಆ ಚಳುವಳಿ. ಅದರಲ್ಲಿ ಹೆಣ್ಣು ಗಂಡೆಂಬ ಭೇದವಿಲ್ಲದೆ, ಆ ಜಾತಿ ಈ ಜಾತಿಗಳೆಂಬ ಪರಿಗಣನೆಯಿಲ್ಲದೆ ಎಲ್ಲರ ಪಾಲ್ಗೊಳ್ಳುವಿಕೆಗೂ ಅವಕಾಶವಿತ್ತು.

ವೈದಿಕಧರ್ಮವನ್ನು ಅಪೌರುಷೇಯವಾದ ಶಾಸ್ತ್ರಾಧಾರಿತ ಚಾತುರ್ವರ್ಣ್ಯ ವಿಭಾಜಿತ ಜೀವನ ಪದ್ಧತಿಯನ್ನಾಗಿ ನಾವು ಪರಿಗಣಿಸಿದರೆ ಅದಕ್ಕೆ ಸಮಾನಾಂತರವಾಗಿ ವಚನಕಾರರು ಲೌಕಿಕ ಅನುಭವ ಆಧಾರಿತವಾದ ಸರ್ವರನ್ನು ಸಮನಾಗಿ ಪರಿಭಾವಿಸುವ ತತ್ವವೊಂದರ ಅನುಸರಣೆಯಲ್ಲಿದ್ದರು.

ಎಸ್.ಸಿ. ನಂದೀಮಠರು ಹೇಳುವಂತೆ ವೀರಶೈವಧರ್ಮವು ಧಾರ್ಮಿಕ ಆಚರಣೆಯನ್ನು ನಿರಾಕರಿಸಿತು ಎಂಬುದು ನಿಜವಲ್ಲ; ವಾಸ್ತವವಾಗಿ ಅದು ಬ್ರಾಹ್ಮಣ ಆಚರಣೆಗಳನ್ನು ಖಂಡಿಸಿತು. ಹಾಗೆ ಮಾಡುವಾಗ ಸಾಂಪ್ರದಾಯಿಕ ಶಕ್ತಿಯ ಮತ್ತು ಶಾಸನಬದ್ಧತೆಯ ಕೆಲವು ಮೂಲಗಳನ್ನು ನಿರಾಕರಿಸಿತು. ಪ್ರಚಲಿತ ವ್ಯವಸ್ಥೆಯ ಶಾಸನ ಬದ್ಧತೆಯನ್ನು ಪ್ರಶ್ನಿಸಿ ಅದು ಒಂದು ನೂತನ ಸಮಾಜ ವ್ಯವಸ್ಥೆಯ ಶಾಸನ ಬದ್ಧತೆಯನ್ನು ಮುಂದಾಗಿ ಸಾರಿತು.

ಈ ವಚನಕಾರರ ಚಳುವಳಿಯಲ್ಲಿ ಪಾಲ್ಗೊಂಡ ಎಲ್ಲ ವಚನಕಾರರು ಉತ್ಪಾದನೆಯಲ್ಲಿ ತೊಡಗಿದ್ದ ಕಾಯಕ ಜೀವಿಗಳಾಗಿದ್ದರು ಎಂಬ ಅಂಶವನ್ನು ನಾವು ಇಲ್ಲಿ ಗುರುತಿಸಬೇಕು. ಅದರ ಮುಖ್ಯ ಹೆಸರಾಂತರನ್ನು ಗಮನಿಸಿದರೆ ಅವರೆಲ್ಲ ವಿವಿಧ ಉತ್ಪಾದಕ ವೃತ್ತಿ ಹಾಗೂ ಕುಲಗಳಿಂದ ಬಂದವರೆಂಬುದು ಗೋಚರವಾಗುತ್ತದೆ.

ಅಮುಗಿ ದೇವಯ್ಯ, ಅಂಬಿಗರ ಚೌಡಯ್ಯ, ಅವಸರದ ರೇಚಣ್ಣ, ಆಯ್ದಕ್ಕಿ ಮಾರಯ್ಯ, ಕಾಮಾಟದ ಭೀಮಣ್ಣ, ಕೋಲಶಾಂತಯ್ಯ, ಜೋದರ ಮಾಯಣ್ಣ, ಡಕ್ಕೆಯ ಬೊಮ್ಮಯ್ಯ, ತುರುಗಾಹಿ ರಾಮಣ್ಣ , ದೇವರ ದಾಸಿಮಯ್ಯ, ನುಲಿಯ ಚಂದಯ್ಯ, ಬಹುರೂಪಿ ಚೌಡಯ್ಯ, ಮಾದಾರ ಧೂಳಯ್ಯ, ಮೇದಾರ ಕೇತಯ್ಯ, ಹಡಪದ ಅಪ್ಪಣ್ಣ, - ಹೀಗೆ ಅವರ ಹೆಸರಿನೊಂದಿಗೆ ಅವರ ವೃತ್ತಿಗಳನ್ನು ಸೂಚಿಸುತ್ತಿದ್ದ ವಚನಕಾರರ ಪಟ್ಟಿಯನ್ನು ಕೊಡುತ್ತಾ ಹೋಗಬಹುದು.

ಮಹಿಳಾ ವಚನಕಾರರ ಸಂಖ್ಯೆಯೂ ನಮಗೆ ಸಾಕಷ್ಟು ಪ್ರಮಾಣದಲ್ಲಿ ಗೋಚರವಾಗುತ್ತದೆ. ಅಕ್ಕಮಹಾದೇವಿ, ಅಕ್ಕನಾಗಮ್ಮ, ಕದಿರೆ ರೆಮ್ಮವ್ವೆ, ಮುಕ್ತಾಯಕ್ಕ, ಲಕ್ಕಮ್ಮ, ಲಿಂಗಮ್ಮ, ಸತ್ಯಕ್ಕ, ಸೂಳೆಸಂಕವ್ವ ಇತ್ಯಾದಿ.

ವಚನಕಾರರ ಚಳುವಳಿಯು ಆಗ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ನಡೆದ ಕಾಯಕ ಜೀವಿಗಳ ಪ್ರಜಾತಾಂತ್ರಿಕ ಆಶಯಗಳ ಪ್ರಕಟರೂಪದ ಸಂಘರ್ಷ ಎಂದು ನಾವು ಕರೆಯಬಹುದು.

ಆರಂಭಿಕ ಊಳಿಗಮಾನ್ಯತೆಯ ಎರಡನೆಯ ಹಂತದಲ್ಲೂ ಅಂದರೆ ೮ರಿಂದ ೧೧ನೇ ಶತಮಾನದವರೆಗಿನ ಅವಧಿಯಲ್ಲಿ ವಿಸ್ತೃತಗೊಂಡ ಕೃಷಿ ಉತ್ಪಾದನೆಯ ಹೆಚ್ಚಳವನ್ನು, ಅದರಿಂದಾಗಿ ೧೧-೧೨ನೇ ಶತಮಾನಗಳ ಕಾಲಘಟ್ಟದಲ್ಲಿ, ವಿಸ್ತೃತವಾಗಿ ಏರ್ಪಟ್ಟ ಸಂತೆಗಳು ಇತ್ಯಾದಿ ಮಾರುಕಟ್ಟೆ ಸಂರಚನೆಯನ್ನು ನಾವು ಈ ಹಿಂದೆ ಗಮನಿಸಿದ್ದೇವೆ. ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಈ ಬಗೆಯ ಚಟುವಟಿಕೆಗಳು ಬಹಳ ಸಾಂದ್ರವಾಗಿದ್ದ ಮತ್ತು ಬಹಳ ಬೇಗನೆ ಪ್ರೌಢಸ್ಥಿತಿಗೆ ಮುಟ್ಟಿದ ಪ್ರದೇಶ ಗಳಿಂದ ಈ ಕಾಯಕ ಜೀವಿಗಳೆಲ್ಲ ಬಂದವರಾಗಿದ್ದರು. ಸರಕು ಉತ್ಪಾದನೆಯ ತಮ್ಮ ಶ್ರಮಕ್ಕೆ ಸೂಕ್ತ ಪ್ರತಿಫಲ ಹಾಗೂ ಸ್ವತಂತ್ರ ಮಾನ್ಯತೆಯನ್ನು ನಿರಾಕರಿಸುತ್ತಿದ್ದ ಮಠ, ಅಗ್ರಹಾರ ಹಾಗೂ ಊಳಿಗಮಾನ್ಯ ಪಾಳೇಗಾರರು ಮುಂತಾದವರ ಆಧಿಪತ್ಯವನ್ನು ಅವರೆಲ್ಲ ಒಂದಾಗಿ ಕಿತ್ತೊಗೆಯಲು ಪ್ರಯತ್ನಿಸಿದರು.

ಇದು ಕರ್ನಾಟಕದಲ್ಲಿ ಮೊದಲ ಬಾರಿಗೆ ಸಮಾಜದ ಒಂದು ಜನವರ್ಗದಿಂದ ಪ್ರಜಾತಾಂತ್ರಿಕ ಆಶಯಗಳು ಸಾಮೂಹಿಕವಾಗಿ ಅಭಿವ್ಯಕ್ತಗೊಂಡ ಪರಿಸ್ಥಿತಿಯನ್ನು ಸೂಚಿಸುತ್ತದೆ. ಅನುಭವಮಂಟಪವೆಂಬ ಅವರ ಸಮ್ಮೇಳನದ ಕೇಂದ್ರಸ್ಥಳವು ಕಾಯಕ ಜೀವಿಗಳ ಸಂಸತ್ತಿನಂತಿದೆ. ಪ್ರತೀ ವ್ಯಕ್ತಿಯ ಮಹತ್ವವನ್ನು, ಅವನ ಶ್ರಮದ ಗೌರವವನ್ನು, ಶಾಸ್ತ್ರಾಚಾರಗಳ ಮೌಢ್ಯತೆಯ ವಿರುದ್ಧ ಧಿಕ್ಕಾರವನ್ನು , ಈ ಚಳುವಳಿ ಪ್ರಬಲವಾಗಿ ಪ್ರತಿಪಾದಿಸಿದ್ದಕ್ಕೆ ಬಹಳ ಮುಖ್ಯವಾದ ಕಾರಣ ಅವರು ಈವರೆಗೆ ತುಳಿತಕ್ಕೆ ಒಳಗಾಗಿದ್ದ ಶ್ರಮಜೀವಿ ವರ್ಗದಿಂದ ಬಂದವರಾಗಿದ್ದರು ಎಂಬುದಾಗಿದೆ.

ಕರ್ನಾಟಕದಲ್ಲಿ ೧೦ನೆಯ ಶತಮಾನದ ಪಂಪ ಭಾರತದಲ್ಲಿಯೇ ಜಾತಿ ವ್ಯವಸ್ಥೆ ವಿರೋಧಿಯಾದ ಆಶಯಗಳು ವ್ಯಕ್ತವಾಗಿದ್ದುದನ್ನು, ಅದಕ್ಕೆ ಇದ್ದಿರಬಹುದಾದ ಸಾಮಾಜಿಕ ಸಂದರ್ಭದ ಹಿನ್ನೆಲೆಯನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಆಗ ಊಳಿಗಮಾನ್ಯತೆಯ ಕೆಳಹಂತದ ಆಳುವ ವರ್ಗಗಳಲ್ಲಿ ಮೂಡಿಬಂದ ತಮ್ಮ ಆಶೋತ್ತರಗಳ ಪ್ರತಿಪಾದನೆಯ ತುರ್ತು ಅಂತಹ ಒಂದು ಸಂಘರ್ಷಾತ್ಮಕ ಸಿಲುವುಗಳಿಗೆ ಕಾರಣವಾಗಿದ್ದು, ಕನ್ನಡ ರಾಷ್ಟ್ರೀಯತೆಯ ಸಮಾಜವು ಮತ್ತೊಂದು ಹಂತದ ಸಾಮಾಜಿಕ ತಳಹದಿಯಲ್ಲಿ ಕ್ರಿಯಾಶೀಲತೆಯನ್ನು ಕಂಡುಕೊಂಡು ತನ್ನ ಸಾಮಾಜಿಕ ತಳಹದಿಯನ್ನು ವಿಸ್ತರಿಸಿಕೊಳ್ಳುವ ಕಡೆಗೆ ಮುಖ ಮಾಡಿತ್ತು ಎಂಬುದನ್ನು ಕೂಡ ಗಮನಿಸಿದ್ದೇವೆ.

ವಚನಕಾರರ ಚಳುವಳಿಯು ಇದರ ಮುಂದಿನ ಹಂತವನ್ನು, ಈ ಹಿಂದೆ ಇರದಿದ್ದ ಜನವ್ಯಾಪಕತೆಯನ್ನು, ಆಶಯುಗಳ ಸ್ಪಷ್ಟತೆಯನ್ನು ಮಾತ್ರವಲ್ಲದೆ ಒಂದು ಹೊಸ ಹಂತವನ್ನು ಕೂಡ ಪ್ರತಿನಿಧಿಸುತ್ತಿದೆ. ಊಳಿಗಮಾನ್ಯತೆಯ ಆಳುವ ವರ್ಗದಲ್ಲಿ ಈವರೆಗೆ ಪಾಲು ಪಡೆದಿರದ ಲಕ್ಷಾಂತರ ಉತ್ಪಾದಕ ಕಸುಬುದಾರ ಜನರು ತಮ್ಮದೇ ಒಂದು ವ್ಯವಸ್ಥೆಯನ್ನು ಹೊಸದಾಗಿ ನಿರ್ಮಿಸಲು ಪ್ರಯತ್ನಿಸುತ್ತಿದ್ದುದನ್ನು ನಾವಿಲ್ಲಿ ಗಮನಿಸುತ್ತಿದ್ದೇವೆ. ವಚನಕಾರರೆಲ್ಲ ತಮ್ಮ ಕಸುಬಿನ ಹಿನ್ನೆಲೆಯಲ್ಲಿ ಅದನ್ನು ಮತ್ತಷ್ಟು ಸುಭದ್ರಗೊಳಿಸಲು, ಅದಕ್ಕೆ ಅಗತ್ಯವಾಗಿ ಸಮಾಜ ವಿನ್ಯಾಸವನ್ನು ಬದಲಿಸಲು ಪ್ರಯತ್ನಿಸುತ್ತಿದ್ದುದನ್ನು ನಾವು ಇಲ್ಲಿ ಗುರುತಿಸಬೇಕಾಗಿದೆ. ಅಂದರೆ ಯೂರೋಪ್‌ನಲ್ಲಿ ಮುಂದೆ ನಡೆದ ಊಳಿಗಮಾನ್ಯ ವಿರೋಧಿ ಪ್ರಜಾತಾಂತ್ರಿಕ ಕ್ರಾಂತಿಗಳ ಆಶಯಾತ್ಮಕ ಅಭಿವ್ಯಕ್ತಿ ಇಲ್ಲಿ ಭ್ರೂಣರೂಪಿಯಾಗಿರುವುದನ್ನು ಗಮನಿಸಬಹುದಾಗಿದೆ.

೧೨ನೆಯ ಶತಮಾನದಲ್ಲಿ ಈ ವಚನಕಾರರು ನೂರಾರು ಸಂಖ್ಯೆಯಲ್ಲಿ ಸಾಹಿತ್ಯಾಭಿವ್ಯಕ್ತಿಯನ್ನು ಜನರ ಆಡುಮಾತಿನಲ್ಲಿ ಪ್ರಕಟಿಸಿದ್ದಾರೆ. ಇದನು ಅವರ ನಡುವೆ ನಿತ್ಯ ಚಾಲ್ತಿಗಾಗಿ, ಎಲ್ಲರ ನಡುವೆ ಸಾಮಾನ್ಯ ಸಂವಹನಕ್ಕಾಗಿ ರೂಪಿಸಿಕೊಂಡದ್ದರಿಂದ ಆಡುಮಾತಿನ ಬಳಕೆ ಮಾತ್ರವಲ್ಲದೆ ವಚನ ಪ್ರಕಾರವೆಂಬ ಹೊಸ ಶೈಲಿಯನ್ನೂ ಅಳವಡಿಸಿಕೊಂಡರು. ಅದು ಗದ್ಯದ ಲಯಕ್ಕೆ ಬಹಳ ಹತ್ತಿರವಾದುದಾಗಿದ್ದು ರಚನೆಗೆ ಯಾವುದೇ ನಿರ್ದಿಷ್ಟ ಪ್ರಕಾರಾತ್ಮಕ ಲಾಕ್ಷಣಿಕತೆಗಳನ್ನು ಪ್ರತಿಪಾದಿಸುತ್ತಿಲ್ಲ. ಅಂದರೆ ವ್ಯಾಪಕವಾದ ಸಾಮೂಹಿಕ ಕ್ರಿಯಾಶೀಲತೆಯನ್ನು ಒಳಗೊಳ್ಳುವುದಕ್ಕೆ ತಕ್ಕುದಾದ ಅಭಿವ್ಯಕ್ತಿ ನಮ್ಯತೆಯನ್ನು, ಅವರ ಬಳಕೆಗೆ ತಕ್ಕುದಾದ ಸುಭಗತೆಯನ್ನು ಅದು ವ್ಯಕ್ತಗೊಳಿಸುತ್ತದೆ. ೧೦ನೆಯ ಶತಮಾನದಲ್ಲಿ ಸಂಸ್ಕೃತದಿಂದ ಕನ್ನಡ ಭಾಷೆಯ ಬಳಕೆಗೆ ಹೊರಳಿದ ಸಾಂಸ್ಕೃತಿಕ ನಿರ್ಮಿತಿಗಳ ಆಶಯವು, ಇನ್ನೂ ಒಂದು ವಲಯಕ್ಕೆ ಮಾತ್ರ ಸೀಮಿತವಾಗಿದ್ದ ಪಾಂಡಿತ್ಯಪೂರ್ಣ ಚಟುವಟಿಕೆಯ ಮಿತಿಯನ್ನು ಒಳಗೊಂಡಿತ್ತಾದರೆ, ೧೨ನೆಯ ಶತಮಾನವು ವಚನಕಾರರ ಆಂದೋಲನದ ಮುಖಾಂತರ ಅದನ್ನು ಸಾವಿರಾರು ಜನಗಳ ಅಭಿವ್ಯಕ್ತಿಗೆ ತಕ್ಕುದಾದ ಒಂದು ಸಾಂಸ್ಕೃತಿಕವಲಯವನ್ನಾಗಿ ಮಾರ್ಪಡಿಸಿತು.

ಅಷ್ಟೊಂದು ಸಂಖ್ಯೆಯಲ್ಲಿ ಜನರು ತತ್ವ, ಸಿದ್ಧಾಂತ, ಅನುಭವ ಹಾಗೂ ಆಲೋಚನೆಗಳನ್ನು ಸಾಹಿತ್ಯವಾಗಿ ಮಂಡಿಸಲು ಶಕ್ತರಾಗಿದ್ದ ಕಾಲಘಟ್ಟವನ್ನು ನಾವು ಈ ಹಿಂದೆ ಕಾಣಲು ಸಾಧ್ಯವಿಲ್ಲ. ಸಾಹಿತ್ಯಾಭಿವ್ಯಕ್ತಿಯೆಂಬುದು ಬಹಳ ಮುಖ್ಯವಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲೊಂದಾದುದರಿಂದ ಅದು ಈ ಸಮಾಜದ ಭೌತಿಕ ಪರಿಸ್ಥಿತಿಗಳ ಪಕ್ವತೆಯನ್ನು ಅವಲಂಬಿಸರುತ್ತದೆ. ಆ ಪಕ್ವತೆ ೧೨ನೆಯ ಶತಮಾನದ ವಚನಕಾರರ ರೂಪದಲ್ಲಿ ಪ್ರಕಟಗೊಂಡು ಕನ್ನಡ ಭಾಷೆಗೆ ಈ ಹಿಂದೆ ಇರದಿದ್ದಷ್ಟು ವ್ಯಾಪಕ ಪ್ರಮಾಣದಲ್ಲಿ ಪರಿಕಲ್ಪನಾತ್ಮಕ ಆಶಯಗಳನ್ನು, ಸಾಮರ್ಥ್ಯವನ್ನು ಒದಗಿಸಲು ನೆರವಾಯಿತು.

ಈ ರೀತಿಯಲ್ಲಿ ಕನ್ನಡ ರಾಷ್ಟ್ರೀಯತೆಯ ಆಶಯಾತ್ಮಕ ಭ್ರೂಣಗಳನ್ನು ಒಳಗೊಂಡಿದ್ದ ಆಂದೋಲನ ಇದಾದುದರಿಂದ, ಈ ರಾಷ್ಟ್ರೀಯತೆಯ ಸಂಕೋಲೆಗಳನ್ನು ಕಳಚುವ ಸುದೀರ್ಘ ಸಾಮಾಜಿಕ ಪ್ರಕ್ರಿಯೆಯ ಆರಂಭ ಬಿಂದುವಾಗಿ ಇದನ್ನು ನಾವು ಪರಿಗಣಿಸಬಹುದು. ವಚನಕಾರರನ್ನು ತಮ್ಮ ಮೌಲ್ಯ, ಆಕೃತಿ ಹಾಗೂ ಸಾಮಾಜಿಕ ಆಚರಣೆಗಳ ಹಿನ್ನೆಲೆಯಲ್ಲಿ ಕನ್ನಡ ರಾಷ್ಟ್ರೀಯತೆಯ ಪ್ರಜಾತಾಂತ್ರಿಕ ಸ್ವರೂಪದ ಆಶೋತ್ತರಗಳ ಆರಂಭಿಕ ಆದ್ಯರೆಂದು ಕರೆಯಬಹುದು.

ಈ ಬಗೆಯ ಪರಿವರ್ತನಾತ್ಮಕ ಸಂಘರ್ಷ, ಕಾಯಕ ಜೀವಿಗಳ ಆಂದೋಲನ ಇಲ್ಲಿ ರೂಪುಗೊಳ್ಳುತ್ತಿದ್ದಾಗ ಇಂದಿನ ಎಷ್ಟೋ ಮುಂದುವರೆದ ಐರೋಪ್ಯ ದೇಶಗಳು ಇನ್ನೂ ಊಳಿಗಮಾನ್ಯತೆಯ ಅಂಧಕಾರದಲ್ಲಿ ಮುಳುಗಿದ್ದವು ಎಂಬ ಅಂಶವು, ಕನ್ನಡ ರಾಷ್ಟ್ರೀಯತೆಯು ತನ್ನ ಚಾರಿತ್ರಿಕ ಪ್ರಗತಿಯಲ್ಲಿ ಬಹಳ ಬೇಗನೆ ಮುಂದುವರೆಯತೊಡಗಿತ್ತೆಂಬುದನ್ನೂ, ಐರೋಪ್ಯರ ಇಂಗ್ಲಿಷ್ ಭಾಷೆ ಸಂಬಂಧವಿಲ್ಲದಿದ್ದಾಗಲೂ ಕನ್ನಡ ರಾಷ್ಟ್ರೀಯತೆಯ ಸಾಮಾಜಿಕ ವಿಕಾಸವು ವ್ಯಕ್ತಿಸ್ವಾತಂತ್ರ್ಯ, ಹೆಣ್ಣುಗಂಡಿನ ಸಮಾನತೆ, ಆಲೋಚನಾ ಸ್ವಾತಂತ್ರ್ಯ, ಕಂದಾಚಾರ ವಿರೋಧೀ ಧೋರಣೆ, ಜಾತಿ ಕುಲ ಸಂಬಂಧೀ ತಾರತಮ್ಯವಿಲ್ಲದಿರುವಿಕೆ, ಸಾಮೂಹಿಕ ಪಾಲ್ಗೊಳ್ಳುವಿಕೆಯ ಮುಖಾಂತರ ವಿದ್ಯಮಾನಗಳ ನಿರ್ವಹಣೆ ಮುಂತಾದ ಪ್ರಜಾತಾಂತ್ರಿಕ ಪದ್ಧತಿ ಹಾಗೂ ಮೌಲ್ಯಗಳನ್ನು ಪ್ರತಿಪಾದಿಸಿ, ಅವುಗಳನ್ನು ತಮ್ಮ ನಡುವೆ ಅನುಮಾನಕ್ಕೆಡೆಯಿಲ್ಲದಂತೆ ಆಚರಿಸಿ, ಈ ಮೌಲ್ಯಗಳನ್ನೇ ಸಾರ್ವತ್ರಿಕಗೊಳಿಸಲು ಅಧಿಕಾರಾರೂಢ ವ್ಯವಸ್ಥೆಯೊಂದಿಗೆ ಸಂಘರ್ಷಿಸಿತ್ತೆಂಬುದು ಅದೇ ರಾಷ್ಟ್ರೀಯತಾಪರಂಪರೆಯ ಜನರಾದ ನಮಗೆ ಹೆಮ್ಮೆಯ ವಿಷಯವಾಗಿದೆ.

ಕಾಯಕಜೀವಿಗಳ ಆಂದೋಲನ ಈ ಬಗೆಯಲ್ಲಿ ಕನ್ನಡ ಸಮಾಜದ ಒಂದು ಮುಖ್ಯ ಕಾಲಘಟ್ಟವನ್ನು ಪ್ರತಿನಿಧಿಸುತ್ತ ಅದಕ್ಕಾಗಿ ಸಂಘಟಿತವಾಗುತ್ತಿರಬೇಕಾದರೆ, ಅದೇ ಬಗೆಯ ಬೆಳವಣಿಗೆಗಳು ಅಂದಿನ ಕನ್ನಡ ರಾಷ್ಟ್ರೀಯತೆಯ ಮೇರೆಗಳ ಎಲ್ಲ ಭಾಗಗಳಲ್ಲಿ ಉಂಟಾಗಿರಲಿಲ್ಲವೆಂಬ ಅಂಶವನ್ನು ನಾವು ಇಲ್ಲಿ ಮರೆಯಬಾರದು. ಒಂದು ಭಾಷಾ ಸಮುದಾಯದ ಸಮಾಜವು ಬೇರೆ ಬೇರೆ ಕಾರಣಗಳ ಹಿನ್ನೆಲೆಯಲ್ಲಿ ಇನ್ನೂ ಅಸಮಾನ ಪ್ರಮಾಣದ ಬೆಳವಣಿಗೆಯ ಹಂತದಲ್ಲೇ ಉಳಿದುಕೊಂಡಿತ್ತು. ಬೆಳವಣಿಗೆಯ ಒಂದು ನಿರ್ದಿಷ್ಟ ಹಂತವನ್ನು ಅದರ ಸಾಂದ್ರಿತ ರೂಪದಲ್ಲಿ ಪಡೆದುಕೊಂಡ ವಚನಕಾರ ಚಳುವಳಿಯು ಸಹಜವಾಗಿ ಊಳಿಗಮಾನ್ಯ ಆಳುವ ವರ್ಗಗಳ ದಮನವನ್ನು ಎದುರಿಸಿತು.

ಕಲ್ಯಾಣದ ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ಈ ಬಗೆಯ ಚಟುವಟಿಕೆಗಳು ಕೇಂದ್ರೀಕರಣಗೊಳ್ಳುತ್ತಿರುವಾಗ, ಈ ಮೊದಲು ಸಾಮಂತನಾಗಿದ್ದು ಈಗ ಚಕ್ರವರ್ತಿಯಾಗಲು ತನ್ನ ಪ್ರದೇಶವನ್ನು ಬಲಪಡಿಸಿಕೊಳ್ಳತೊಡಗಿದ್ದ ಬಿಜ್ಜಳನ ನೇತೃತ್ವದ ಆಳುವ ವರ್ಗವು ತನ್ನ ಊಳಿಗಮಾನ್ಯತೆಯ ಸ್ವಭಾವವನ್ನು ಪರಿವರ್ತಿಸಿ

ಕೊಂಡಿದ್ದುದಾಗಿರಲಿಲ್ಲವಾದ್ದರಿಂದ, ಕಾಯಕ ಜೀವಿಗಳ ಸಂಘಟನೆ ಒಂದು ಹಂತಕ್ಕೆ ತಲುಪಿ ಅದು ತನ್ನ ಉತ್ಪಾದಕ ಚಟುವಟಿಕೆಗಳ ಸಕ್ರಿಯತೆಯನ್ನು ಮೀರಿ, ಸಾಮಾಜಿಕ ಬುನಾದಿಗಳ ಬದಲಾವಣೆಯೆಡೆಗೆ ಪ್ರಯತ್ನಗಳನ್ನು ತೋರಿಸಿಕೊಳ್ಳತೊಡಗಿದೊಡನೆ, ಕೆಳಹಂತದ ಊಳಿಗಮಾನ್ಯ ಆಳುವ ವರ್ಗಗಳು ಹಾಗೂ ಸರಕು ಉತ್ಪಾದನೆಯ ಕಸಬುದಾರ ವರ್ಗಗಳ ನಡುವೆ ಇದ್ದ ವೈರುಧ್ಯವು ಸಂಘರ್ಷವಾಗಿ ಮಾರ್ಪಟ್ಟಿತು. ಅದು ಕಲ್ಯಾಣದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಉಂಟುಮಾಡಿ ಸ್ವತಃ ಬಿಜ್ಜಳನ ಕೊಲೆಗೆ, ಹಲವಾರು ಶರಣರ ಸಾವು, ಚಿತ್ರಹಿಂಸೆಗೆ, ಬಸವಣ್ಣನ ಕಲ್ಯಾಣ ನಿರ್ಗಮನಕ್ಕೆ ಕಾರಣವಾಯಿತು. ಪ್ರಭುತ್ವವು ಬಲಗೊಳ್ಳುತ್ತಿದ್ದ ಸರಕು ಉತ್ಪಾದಕ ವರ್ಗಗಳ ಪ್ರಭಾವವನ್ನು ದಮನಿಸಿತು. ಇದರಿಂದ ಕಲ್ಯಾಣದಲ್ಲಿ ಆರಂಭಗೊಂಡ ವಚನಕಾರರ ಪ್ರಜಾತಾಂತ್ರಿಕ ಆಶಯಗಳ ಆಂದೋಲನವು ತನ್ನ ಮೊದಲ ನೆಲೆಯನ್ನು ಕಳೆದುಕೊಂಡಿತು.

ಕಾಯಕಜೀವಿಗಳ ಆಂದೋಲನಧ ಪ್ರವರ್ತಕರು ಪ್ರಭುತ್ವದ ಈ ದಮನಕ್ಕೆ ಗುರಿಯಾಗಿ ತಮ್ಮ ನೆಲೆಯನ್ನು ತೊರೆದರು. ಇದನ್ನು ತುರುಗಾಹಿ ರಾಮಣ್ಣ ತನ್ನ ವಚನವೊಂದರಲ್ಲಿ ಹೀಗೆ ಸೂಚಿಸಿದ್ದಾನೆ.

''ಬಂದಿತು ದಿನ ಬಸವಣ್ಣ ಕಲ್ಲಿಗೆ
ಚೆನ್ನಬಸವಣ್ಣ ಉಳಿವೆಯಲ್ಲಿಗೆ
ಪ್ರಭು ಅಕ್ಕ ಕದಳಿ ದ್ವಾರಕ್ಕೆ
ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ
ನಾನು ತರುವಿನ ಬೆಂಬಳಿಯಲ್ಲಿ ಹೋದ ಮರೆಯಲ್ಲಿ ಅಡಗಿಹರೆಲ್ಲರೂ..''

ಹೀಗೆ ಚದುರಿಹೋದ ಕಾಯಕಜೀವಿಗಳ ಚಳುವಳಿ ಅಲ್ಲಿಗೆ ನಿಂತು ಹೋಗಲಿಲ್ಲ. ಬದಲಾಗಿ ಕನ್ನಡ ರಾಷ್ಟ್ರೀಯತೆಯ ಇತರ ಪ್ರದೇಶಗಳಲ್ಲಿ ಊಳಿಗಮಾನ್ಯ ವ್ಯವಸ್ಥೆಯ ವಿರುದ್ಧ ಹಲವು ರೂಪಗಳಲ್ಲಿ ಹರಳುಗಟ್ಟಿಕೊಳ್ಳುತ್ತಿದ್ದ ಉತ್ಪಾದಕ ವರ್ಗದ ಹಾಗೂ ಕೃಷಿ ಸರಕು ಉತ್ಪಾದಕರ ಪ್ರಯತ್ನಗಳಲ್ಲಿ ಸಮ್ಮಿಳನ ಗೊಂಡಿತು. ಬೇರೆ ಬೇರೆ ಪ್ರಾಂತ್ಯಗಳು ಈ ಬಗೆಯ ಜೀವನ ಪರಿಸ್ಥಿತಿಯ ಸಾಮಾಜಿಕ ವಿಕಾಸಕ್ಕಾಗಿ ತಮ್ಮ ನಡಿಗೆಯನ್ನು ಆರಂಭಿಸಿದ್ದವು.

ಇಲ್ಲಿ ನಾವು ಗಮನಿಸಬೇಕಾಗಿರುವ ಒಂದು ಅಂಶವೇನೆಂದರೆ ಸಾಮಾನ್ಯವಾಗಿ ವಚನಕಾರ ಚಳುವಳಿಯ ಬಗ್ಗೆ ಮಾತನಾಡುವಾಗ ಕಲ್ಯಾಣದ ಕ್ರಾಂತಿಯ ನಂತರ ಅದು ಖಿಲವಾಗಿ ಹೋಯಿತು ಎಂಬಂತೆ ಅರ್ಥೈಸುವ ಪರಿಪಾಠಗಳನ್ನು ಕಾಣುತ್ತೇವೆ.

ವಾಸ್ತವವಾಗಿ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದವರೆಲ್ಲರ ನೇತೃತ್ವದಲ್ಲಿ ಸಂಘಟಿತಗೊಂಡಿದ್ದ ಶರಣ ಚಳುವಳಿ ಕಲ್ಯಾಣದ ಕ್ರಾಂತಿಯ ನಂತರ

ಅದರ ಸ್ವರೂಪದಲ್ಲಿ ಪೆಟ್ಟು ತಿಂದಿತು. ಆದರೆ ಆ ಶರಣ ಚಳುವಳಿಯ ಸತ್ವಾಂಶವಾಗಿದ್ದ ಸರಕು ಉತ್ಪಾದಕ ವರ್ಗಗಳ ಪ್ರಜಾತಾಂತ್ರಿಕ ಆಶೆಯುಗಳ ಪ್ರತಿಪಾದನೆಯೆಂಬುದು ಕೊನೆಗೊಳ್ಳಲಿಲ್ಲ. ಊಳಿಗಮಾನ್ಯತೆಯ ವಿರುದ್ಧ ಆರಂಭಿಸಿದ್ದ ಒಂದು ಸುದೀರ್ಘ ಸಂಘರ್ಷದ ಆರಂಭ ಬಿಂದುವಾಗಿ, ಅದರ ಆಶಯುಗಳ 'ಸ್ಪಷ್ಟಸಾಂದ್ರೀಕೃತ' ರೂಪವಾಗಿ ವಚನಕಾರರ ಚಳುವಳಿಯು ಆ ನಿರ್ದಿಷ್ಟ ಕಾಲಘಟ್ಟದಲ್ಲಿ ಹೊಳೆಯಿತು. ಅದೊಂದು ಸ್ವತಂತ್ರ ಸಾಮಾಜಿಕ ಪ್ರಕ್ರಿಯೆಯಲ್ಲ. ಕನ್ನಡದ ಸಮಾಜದಲ್ಲಿ ಬೆಳೆಯುತ್ತಿದ್ದ ಸರಕು ಉತ್ಪಾದಕ ಹಾಗೂ ವ್ಯಾಪಾರೀ ವರ್ಗಗಳ ಹಿತಾಸಕ್ತಿಗಳಿಗೂ, ಆಡಳಿತಾರೂಢವಾಗಿದ್ದ ಊಳಿಗಮಾನ್ಯ ಶಕ್ತಿಗಳಿಗೂ ನಡುವೆ ಆರಂಭಗೊಂಡ ಸಂಘರ್ಷದ ಒಟ್ಟಾರೆ ಪ್ರಕ್ರಿಯೆಯ ಒಂದು ಭಾಗ. ಅದನ್ನು ಸರಿಯಾಗಿ ಅರ್ಥೈಸಬೇಕೆಂದರೆ ವಚನಕಾರರ ಚಳುವಳಿಯು ಕನ್ನಡ ರಾಷ್ಟ್ರೀಯತೆಯ ಪ್ರಜಾತಾಂತ್ರೀಕರಣ ಸಂಘರ್ಷದ ಒಂದು ಉಜ್ವಲ ಉದ್ಘಾಟನೆ.

ಈ ಸಾಮಾಜಿಕ ಪ್ರಕ್ರಿಯೆಯ ಆಶೋತ್ತರಗಳು ಕನ್ನಡ ಭಾಷಿಕ ಜನ ಸಮೂಹಗಳಲ್ಲಿ, ಹಲವಾರು ರೂಪಾಂತರಗಳಲ್ಲಿ ಆ ನಂತರವೂ ಮುಂದುವರೆದವು.

ಅಡಿಟಿಪ್ಪಣಿಗಳು

1. ಪ್ರೊ. ಬಿ. ಸುರೇಂದ್ರರಾವ್ - ಪ್ರವೇಶ, ಕರ್ನಾಟಕ ಚರಿತ್ರೆ, ಸಂ. ೨, ಪು. ೧
2. ಅದೇ - ಪು. ೨
3. ಅದೇ - ಪು. ೪
4. ಅದೇ ಪು. - ೪
5. ಅದೇ - ಪು. ೪
6. SAKI- Making History, Vol. 1, ಪು. ೨೨೬.
7. ಆರ್.ಎನ್. ನಂದಿ ಉಲ್ಲೇಖಿತ SAKI- Making History, Vol. 1, ಪು. ೨೨೬.
8. ಆರ್.ಎನ್. ನಂದಿ ಉಲ್ಲೇಖಿತ , ಪ್ರೊ. ಬಿ. ಸುರೇಂದ್ರರಾವ್ - ಸಾಮಾಜಿಕ ಪ್ರಕ್ರಿಯೆಗಳು ಮತ್ತು ಧಾರ್ಮಿಕ ಆಂದೋಲನಗಳು, ಕರ್ನಾಟಕ ಚರಿತ್ರೆ, ಸಂ. ೨, ಪು. ೨೩೨-೨೩೩

✤ ✤ ✤ ✤

ಅಧ್ಯಾಯ -೩

೧೩-೧೪ನೇ ಶತಮಾನಗಳು

ಸಾಮಂತೀಕರಣ ಹಾಗೂ ವಾಣಿಜ್ಯ ಕೇಂದ್ರಗಳ ಆರಂಭ

ಕಲ್ಯಾಣದಲ್ಲಿ ಬಿಜ್ಜಳನ ಕಲಚೂರಿ ವಂಶದ ಆಳ್ವಿಕೆ ಕೊನೆಗೊಂಡದ್ದರಿಂದ ತಾವು ಸ್ವತಂತ್ರರಾಗಬೇಕೆಂದು ಬಯಸಿದ್ದ ಅನೇಕ ಸಣ್ಣಪುಟ್ಟ ರಾಜವಂಶಗಳು ಸ್ವತಂತ್ರರಾಗಲು ಅವಕಾಶವಾಯಿತು. ಹಾಗೆ ಬೆಳಕಿಗೆ ಬಂದವರು ಸೇವುಣರು. ಇವರನ್ನು ಸಾಮಾನ್ಯವಾಗಿ ದೇವಗಿರಿಯ ಯಾದವರು ಎಂದು ಕರೆಯಲಾಗುತ್ತದೆ. ಇವರ ಆಳ್ವಿಕೆಯ ಕಾಲದಲ್ಲಿ ಕರ್ನಾಟಕಕ್ಕೆ ಒದಗಿದ ಒಂದು ಸನ್ನಿವೇಶವನ್ನು ನಾವು ಗಮನಿಸಬೇಕಾಗಿದೆ. ಈ ಬಗ್ಗೆ ಡಾ. ಶ್ರೀನಿವಾಸ ರಿತ್ತಿ ಹೀಗೆ ಹೇಳಿದ್ದಾರೆ :

''ಚಾಲುಕ್ಯ ಸಾಮ್ರಾಜ್ಯವು ನರ್ಮದೆಯಿಂದ ಕಾವೇರಿವರೆಗೆ ಬಹು ವಿಶಾಲವಾದ ಪ್ರದೇಶವನ್ನು ಒಳಗೊಂಡಿತ್ತು. ಇಡೀ ಕನ್ನಡ ಪ್ರದೇಶವು ಒಂದು ಆಳ್ವಿಕೆಯಲ್ಲಿತ್ತು. ಆದರೆ ಸೇವುಣರು ಪ್ರಬಲರಾದಾಗ ಈ ಅಖಂಡ ಕರ್ನಾಟಕವು ಎರಡಾಗಿ ಒಡೆಯಿತು. ಸೇವುಣ ಮತ್ತು ಹೊಯ್ಸಳ ಎಂದು. ಎರಡೂ ಕನ್ನಡ ರಾಜ್ಯಗಳೇ ಆಗಿದ್ದವು. ತುಂಗಭದ್ರಾ ನದಿಯು ಅವುಗಳ ನಡುವಣ ಗಡಿಯಾಗಿತ್ತು. ಕನ್ನಡ ಭಾಷೆ ಮತ್ತು ಸಾಹಿತ್ಯಗಳು ಎರಡು ರಾಜ್ಯಗಳಲ್ಲೂ ಅಭಿವೃದ್ಧಿ ಹೊಂದಿದವು. ಆದರೆ ಬೇರೆ ಬೇರೆ ಆಡಳಿತಗಳಿಂದಾಗಿ ಜನಸಾಮಾನ್ಯರ ನಡುವೆ ಒಂದು ತೆರಪು ಬೆಳೆಯುತ್ತಾ ಹೋಯಿತು. ಮುಂದಿನ ಕಾಲಗಳಲ್ಲೂ ಈ ಪರಿಸ್ಥಿತಿ ಮುಂದುವರಿಯಿತು. ವಿಜಯನಗರ ಸಾಮ್ರಾಜ್ಯವು ಎಷ್ಟೇ ಅಗಾಧವಾಗಿದ್ದರೂ ಉತ್ತರ ದಿಕ್ಕಿನಲ್ಲಿ ಕೃಷ್ಣೆಯಿಂದಾಚೆಗೆ ಹೋಗಲಿಲ್ಲ.....

ತುಂಗಭದ್ರೆಯಿಂದ ಮೇಲಿದ್ದ ಗಣನೀಯವಾದ ಭಾಗವು ಮುಸ್ಲಿಮರು, ಮರಾಠರು ಆಮೇಲೆ ಬ್ರಿಟಿಷರು ಇವರ ಅಧೀನದಲ್ಲಿಯೇ ಉಳಿಯಿತು.

ತುಂಗಭದ್ರೆಯಿಂದ ಕೆಳಗಿನ ಪ್ರದೇಶವು ಮೈಸೂರಿನ ಅರಸರ ವಶವಾಯಿತು. ಕ್ರಮೇಣ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಬೆಳವಣಿಗೆಯು ಉತ್ತರ ದಿಕ್ಕಿನಲ್ಲಿ ಕುಂಠಿತವಾಯಿತು. ದಕ್ಷಿಣದಲ್ಲಿ ಪರಿಸ್ಥಿತಿ ಸ್ವಲ್ಪ ಉತ್ತಮವಾಗಿತ್ತು. ಎರಡೂ ಭಾಗಗಳ ಜನಸಾಮಾನ್ಯರ ನಡುವೆ ಸಂಪರ್ಕ ಕಡಿಮೆಯಾಗುತ್ತಾ ಹೋಯಿತು. ಎರಡೂ ಬೇರೆ ಬೇರೆಯಾದವು....

ಬ್ರಿಟಿಷರ ಆಳ್ವಿಕೆಯಲ್ಲಿ ತುಂಗಭದ್ರೆಯ ಮೇಲಿನ ಕನ್ನಡ ಪ್ರದೇಶವು ಇನ್ನಷ್ಟು ತುಂಡುಗಳಾಗಿ ಬೇರೆ ಬೇರೆ ಆಡಳಿತಗಳಿಗೆ ಸೇರಿಹೋಯಿತು. ಇಲ್ಲಿ ಗಮನಿಸ ಬೇಕಾದ ಸಂಗತಿಯೆಂದರೆ ಒಂದು ಕಟ್ಟಿಗೆ ಒಳಪಟ್ಟ ಜನರ ನಡುವೆ ಭಿನ್ನತೆಗಳಿರುವು ದನ್ನು ಕ್ರಿ.ಶ. ೧೨ನೇ ಶತಮಾನದಷ್ಟು ಹಿಂದಿನಿಂದಲೇ ಒಂದು ಐತಿಹಾಸಿಕ ಬೆಳವಣಿಗೆಯಾಗಿ ಗುರುತಿಸಬಹುದು''. [1]

ಒಂದು ಭಾಷಿಕ ಸಮುದಾಯದ ಜನ ತಮ್ಮ ಸ್ವಾಭಾವಿಕ ಗತಿಯಲ್ಲಿ ಅಭಿವೃದ್ಧಿ ಹೊಂದುತ್ತಾ ಬಂದು ತಮ್ಮ ಭೌಗೋಳಿಕ ಸೀಮೆಯೊಳಗಿನ ಜನರೆಲ್ಲರ ನಡುವೆ ಒಂದು ಸಾಮಾನ್ಯ ಮಟ್ಟದ ಬೆಳವಣಿಗೆಯನ್ನು ತಂದುಕೊಳ್ಳುವುದು, ಆ ಮೂಲಕ ರಾಷ್ಟ್ರೀಯತೆಯ ಸಮಾಜವನ್ನು ಮತ್ತಷ್ಟು ಸಂಯೋಜನೆಗೊಳಿಸಿಕೊಂಡು ಮುಂದಿನ ಹಂತಕ್ಕೆ ಮುನ್ನಡೆಯುವುದು, ಕರ್ನಾಟಕದ ಸಂದರ್ಭದಲ್ಲಿ ಈ ಸೇವುಣರ ಅವಧಿಯಲ್ಲಿ ನಾವು ಕಾಣುತ್ತಿರುವಂತೆ ಒಂದು ರಾಜಕೀಯ ಶಕ್ತಿಯ ಬಾಹ್ಯ ಪ್ರಭಾವದಿಂದ ಏರುಪೇರಿಗೆ ಒಳಗಾಯಿತು. ಈ ಬಗೆಯ ಬಾಹ್ಯ ಪ್ರಭಾವವು ಅಲ್ಲಿ ಆವರೆಗೆ ಉಂಟಾಗಿದ್ದ ಪ್ರಗತಿಯನ್ನು ಪೂರ್ತಿ ತಿರುಗಾಮುರುಗಾ ಮಾಡಲು ಸಾಧ್ಯವಿಲ್ಲವಾದರೂ ಆವರೆಗಿನ ಬೆಳವಣಿಗೆಯ ಫಲಗಳನ್ನು ಸರಿಯಾಗಿ ಸಂಚಯೀಕರಿಸಿಕೊಳ್ಳುವುದಕ್ಕೆ ಅಥವಾ ಅದರಿಂದ ಸಹಜ ಕ್ರಮವಾದ ಮುಂದಿನ ಹಂತಕ್ಕೆ ಹೋಗುವುದನ್ನು ಅಡೆತಡೆಗೊಳಪಡಿಸಬಹುದು, ಅಥವಾ ಪಕ್ಕದಾರಿಗೆ ಹೊರಳಿಸಬಹುದು. ಇಂತಹ ಅನಪೇಕ್ಷಿತ ಪರಿಣಾಮಗಳನ್ನು ತನ್ನ ಚರಿತ್ರೆಯಲ್ಲಿ ಅನುಭವಿಸಿದ ಭಾಷಿಕ ಸಮುದಾಯವು ತನಗೆ ತಕ್ಕ ಬಲ ಕೂಡಿಕೊಂಡೊಡನೆ ಒಂದೇ ಆಡಳಿತದಲ್ಲಿ ಬರುವ ಮಹತ್ತರ ಅಪೇಕ್ಷೆಯನ್ನು ಮುಂದಿಟ್ಟುಕೊಂಡು ಹೋರಾಡುತ್ತದೆ.

ತುಂಗಭದ್ರೆಯ ಮೇಲಿನ ಕನ್ನಡ ಪ್ರದೇಶವು ವಾಸ್ತವವಾಗಿ ೧೨ನೆಯ ಶತಮಾನದವರೆಗಿನ ಕನ್ನಡ ಭಾಷಿಕ ಸಮುದಾಯದ ಹಲವು ಬಗೆಯ ಕ್ರಿಯಾ ಶೀಲತೆಗಳಿಗೆ ಕೇಂದ್ರತಾಣವಾಗಿತ್ತು. ಕೃಷಿಯಲ್ಲಿ, ಆಡಳಿತದಲ್ಲಿ, ನಾಣ್ಯ ಚಲಾವಣೆ ಪದ್ಧತಿಯಲ್ಲಿ, ಕಲಾಕೃತಿಗಳ ನಿರ್ಮಿತಿಯಲ್ಲಿ ಅದು ಐತಿಹಾಸಿಕ ಮಾದರಿಗಳನ್ನು ನಿರ್ಮಿಸುವಷ್ಟು ಶಕ್ತಿಶಾಲಿಯಾಗಿತ್ತು. ಇಂದಿಗೂ ಕನ್ನಡ ಸಾಹಿತ್ಯಕ್ಕೆ ಅನರ್ಘ್ಯ ಕೊಡುಗೆಯಾಗಿರುವ ವಚನಸಾಹಿತ್ಯ ರಾಶಿಯಾಗಲೀ, ಮಹತ್ತರ ಸ್ಮಾರಕಗಳಾಗಿರುವ ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಕಲಾ ನಿರ್ಮಿತಿಗಳಾಗಲೀ, ಕಾಯಕಜೀವಿಗಳ

ಪ್ರಜಾತಾಂತ್ರಿಕ ಮೌಲ್ಯಪ್ರತಿಪಾದನೆಯಂತಹ ಹೊಸ ಸಾಮಾಜಿಕ ಆಶಯಗಳಾಗಲೀ ಮೂಡಿ ಬಂದದ್ದು ಆ ನೆಲದಿಂದಲೇ.

ವಾಸ್ತವವಾಗಿ ಡಕ್ಕನ್ ಪ್ರಸ್ಥಭೂಮಿಯ ಭಾಗವಾಗಿರುವ ತುಂಗಭದ್ರೆಯಾಚಿನ ಕನ್ನಡ ನೆಲಗಳು ಬಹಳ ಫಲವತ್ತಾದುದರಿಂದಲೂ, ಸಮತಟ್ಟಾಗಿದ್ದು ಸಡಿಲ ಮಣ್ಣಿನಿಂದ ಕೂಡಿದ್ದು, ವಿರಳವಾಗಿ ಅರಣ್ಯವನ್ನು ಹೊಂದಿದ್ದರಿಂದಲೂ ಕನ್ನಡ ಭಾಷಾ ಸಮುದಾಯವು ಕೃಷಿ ಚಟುವಟಿಕೆಯ ಆರಂಭಿಕ ವಿಸ್ತರಣೆಯು ಈ ಭಾಗದ ಪ್ರದೇಶಗಳಲ್ಲೇ ಉಂಟಾಯಿತು. ಈ ರೀತಿ ನಿಸರ್ಗವು ಒದಗಿಸಿದ ಅನುಕೂಲತೆಗಳನ್ನು ಬಳಸಿಕೊಂಡು ಕನ್ನಡ ರಾಷ್ಟ್ರೀಯತೆಯ ಆದಿಮ ಸಮುದಾಯದ ಜನ ಇಲ್ಲಿ ಉತ್ಪಾದನೆಯನ್ನು ಅವಿರತವಾಗಿ ಬೆಳೆಸುತ್ತಾ ಮುಂದಿನ ಉಜ್ವಲ ಸಿದ್ಧಿ ಸಾಧನೆಗಳಿಗೆ ತಕ್ಕ ಭೌತಿಕ ಸನ್ನಿವೇಶಗಳನ್ನು ನಿರ್ಮಿಸತೊಡಗಿದರು. ಬಹಳ ಶಕ್ತಿಯುತವಾದ ಚಂದದ ಕನ್ನಡ ಭಾಷೆ ತನ್ನ ಸಾಹಿತ್ಯಿಕ ಗರಿಗಳನ್ನು ಮೂಡಿದುಕೊಂಡದ್ದು ಕೂಡ ಈ ಭಾಗದ ನೆಲದಿಂದಲೇ.

ಇಂತಹ ಪರಂಪರೆಯ ನೆಲ ೧೨ನೆಯ ಶತಮಾನದ ನಂತರ ಪುನರಾವರ್ತಿತವಾಗಿ ಅನ್ಯಭಾಷೆಯ, ಅನ್ಯಸಂಸ್ಕೃತಿಗಳ ಅಥವಾ ಅನ್ಯರಾಷ್ಟ್ರೀಯತಾ ಸಮುದಾಯಗಳಿಗೆ ಸೇರಿದವರ ಆಡಳಿತದಡಿಯಲ್ಲಿ ಅವರ ಪ್ರಭಾವಗಳಿಗೆ ಪಕ್ಕಾಗುತ್ತಾ ಬಂದಿದ್ದರಿಂದ ಒಂದು ಅಸಹಜ ತಿರುಚುವಿಕೆಗೆ ಗುರಿಯಾಯಿತು. ಇದು ಬಹಳ ಮೊದಲೇ ಸಂಭವಿಸಿದ್ದರೆ ಪರಿಸ್ಥಿತಿ ಏನಾಗುತ್ತಿತ್ತೆಂದು ನಾವು ಈಗ ಹೇಳಲಾರೆವಾದರೂ, ಆಗಲೇ ಸ್ಪಷ್ಟ ಸ್ವರೂಪವನ್ನು ಭಾಷಾತ್ಮಕ ವಿಷಯದಲ್ಲಿ ಹಾಗೂ ಸಾಂಸ್ಕೃತಿಕ ವಿಷಯಗಳಲ್ಲಿ ರೂಪಿಸಿಕೊಂಡಿದ್ದ, ಕೃಷಿಯೊಳಗೆ ಸರಳ ಸರಕು ಉತ್ಪಾದನೆಯ ಹಂತಕ್ಕೆ ಬಂದು ತಲುಪಿದ್ದ ಭಾಷಿಕ ಸಮುದಾಯವೊಂದರ ಮೇಲೆ, ಅನ್ಯ ಭಾಷಿಕ ಹಾಗೂ ಸಾಂಸ್ಕೃತಿಕ ಪ್ರಭಾವಗಳು ಹೆಚ್ಚುತ್ತಲೇ ಹೋದರೆ ಅವರ ಸಾಂಸ್ಕೃತಿಕ ಕ್ರಿಯಾಶೀಲತೆ ವಿಚಿತ್ರ ವರ್ತನೆಗಳಿಗೆ ಗುರಿಯಾಗುತ್ತದೆ. ಹತ್ತನೆಯ ಶತಮಾನದ ರಾಷ್ಟ್ರಕೂಟರ ಆಳ್ವಿಕೆಯ ಹೊತ್ತಿಗೆ ಕನ್ನಡವನ್ನು ತಮ್ಮ ಆಡಳಿತಾತ್ಮಕ ಶಾಸನಾತ್ಮಕ ಭಾಷೆಯನ್ನಾಗಿ ರೂಪಿಸಿಕೊಂಡು ವ್ಯವಹರಿಸುತ್ತಿದ್ದ ಒಂದು ಸಮುದಾಯದ ಮೇಲೆ ಅನ್ಯಭಾಷೆಯ ಶಾಸನಗಳು, ಫರ್ಮಾನುಗಳು, ಖಾತೆಖಿರ್ದಿಗಳು ಸಹಜವಾಗಿ ಆಡಳಿತವೊಂದರಲ್ಲಿ ಪಾಲ್ಗೊಳ್ಳುವ ಅವರ ಕ್ರಿಯಾಶೀಲತೆಯನ್ನು ಹಿಂಜರಿಸಿ ಬಿಡುತ್ತವೆ. ಆಗ ಮತ್ತೆ ಆ ಸಮುದಾಯವು ತನ್ನ ಆವರೆಗಿನ ಭಾಷೆ ಬಳಕೆಯ ಸಹಜ ಸಾಮರ್ಥ್ಯಕ್ಕೆ ಬದಲಾಗಿ, ಆ ಸಮುದಾಯದೊಳಗೆ ಚಾಲ್ತಿಗೆ ಬಂದ ಅನ್ಯಭಾಷೆಯ ಬಳಕೆ ಹಾಗೂ ರೀತಿ ರಿವಾಜುಗಳನ್ನು ಅರಿತುಕೊಂಡ ಸಣ್ಣ ಹೊಸವರ್ಗವೊಂದನ್ನು ಹುಟ್ಟು ಹಾಕಿಕೊಂಡು, ಅದರ ಮೂಲಕ ತಮ್ಮ ಸ್ವಭಾವಕ್ಕೆ ಹೊರಗಿನದಾದ ಭಾಷೆಯೊಂದನ್ನು ತನ್ನ ಮೇಲೆ ಮೇಲಿನ ಪದರವಾಗಿ ಹೇರಿಕೊಳ್ಳಲು ಸಿದ್ಧವಾಗಬೇಕಾಗುತ್ತದೆ.

ಇತರ ಭಾಷೆ ಹಾಗೂ ಸಂಸ್ಕೃತಿಗಳ ನಡುವಿನ ನಿಕಟ ಒಡನಾಟ, ಪುನರಾವರ್ತಿತ ವಹಿವಾಟು ಮುಂತಾದ ಸಹಜ ಪ್ರಕ್ರಿಯೆಗಳಾದರೆ ಅವು ಎರಡೂ ಭಾಷೆ ಹಾಗೂ ಎರಡೂ ಸಂಸ್ಕೃತಿಗಳನ್ನು ಹೊಸ ಕಸುವಿನಿಂದ ರೂಪಿಸಬಲ್ಲವು. ಆದರೆ ಒಂದು ಸಾಮಾಜಿಕ ಸನ್ನಿವೇಶದ ಮೇಲೆ ಅಧಿರಚನೆಯ ಅಂಶಗಳಾದ ಪ್ರಭುತ್ವದ ಕಾರ್ಯಾಚರಣೆಯ ಮೂಲಕ ಏರ್ಪಡಿಸಿರುವ ಈ ಬಗೆಯ ಭಾಷಾತ್ಮಕ, ಸಾಂಸ್ಕೃತಿಕ ಕಾರ್ಯಾಚರಣೆಗಳು ಒಂದು ಸುದೀರ್ಘ ಕಾಲದ ದಿಗ್ಭ್ರಾಂತಿಯನ್ನು ಹಾಗೂ ಸ್ಮೃತಿಯನ್ನು ಉಂಟುಮಾಡುತ್ತವೆ. ಆ ನಂತರದಲ್ಲಿ ಅದು ಮತ್ತೆ ಹೊಸ ಕಸುವಿನಿಂದ ಚೇತರಿಸಿಕೊಂಡು ತನ್ನ ಆಶೋತ್ತರಗಳಿಗಾಗಿ ಹೋರಾಡುವುದು ಹೇಗೂ ಚಾರಿತ್ರಿಕ ...ಯಾಗಿ ಇದ್ದದ್ದೆ.

ಇಲ್ಲಿ ನಾವು ಗಮನಿಸಬೇಕಾಗಿರುವ ಮುಖ್ಯವಾದ ಅಂಶವೆಂದರೆ ತುಂಗಭದ್ರೆಯ ಮೇಲಿನ ಕನ್ನಡಪ್ರದೇಶಗಳಲ್ಲಿ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳು, ಶೈಕ್ಷಣಿಕ ಪ್ರಗತಿಗಳಲ್ಲಿ ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ, ಸಾಮಾನ್ಯವಾಗಿ ಗ್ರಹೀತವಾಗುವ ಹಿಂದುಳಿದಿರುವಿಕೆಗೆ ಕಾರಣವಾಗಿರುವುದು, ಹನ್ನೆರಡನೇ ಶತಮಾನದಿಂದಲೂ ಮುಂದುವರೆದುಕೊಂಡೇ ಬಂದ ಒಂಬೇ ರಾಷ್ಟ್ರೀಯತೆಯ ಎರಡು ಭೂಪ್ರದೇಶಗಳ ನಡುವಿನ ರಾಜಕೀಯ ವಿಭಾಗೀಕರಣ. ಈ ಅಂಶವನ್ನು ನಾವು ವಸಾಹತುಶಾಹಿ ಆಳ್ವಿಕೆಯ ಪರಿಣಾಮಗಳ ಚರ್ಚೆಯಲ್ಲಿ ಮತ್ತಷ್ಟು ಗಮನಿಸಲಿರುವುದರಿಂದ ೧೨ನೆಯ ಶತಮಾನದ ನಂತರ ಕನ್ನಡ ಭಾಷಿಕ ಸಮಾಜದಲ್ಲಿ ಉಂಟಾದ ಬೆಳವಣಿಗೆಗಳ ಪರಿಶೀಲನೆಗೆ ಈಗ ಮತ್ತಷ್ಟು ವಿವರಗಳನ್ನು ಗಮನಿಸೋಣ.

''ರಾಜಕೀಯ ಪರಮಾಧಿಕಾರವು ತುಂಡುತುಂಡಾಗಿ ಒಡೆದುಹೋಗುವುದು ಕರ್ನಾಟಕದ ಮಧ್ಯಯುಗ ಪ್ರಾರಂಭದ ಮತ್ತು ಮಧ್ಯಯುಗದ ರಾಜಕೀಯ ವಿನ್ಯಾಸದ ಅಸಾಧಾರಣ ಲಕ್ಷಣಗಳಲ್ಲಿ ಒಂದಾಗಿತ್ತು. ಅದು ಭೂಮಿಯ ಹಿಡುವಳಿ ಮತ್ತು ನಿಯಂತ್ರಣದ ಆಧಾರದಲ್ಲಿ ನಡೆಯುವ ಒಂದು ಆಡಳಿತ ವಿನ್ಯಾಸವು ಉದಯಿಸಲು ಹಾದಿಯನ್ನು ಹಾಕಿಕೊಟ್ಟಿತ್ತು. ಈ ಪ್ರಕ್ರಿಯೆ ಚುರುಕುಗೊಂಡದ್ದು ಎರಡು ಕಾರಣಗಳಿಂದ. ವೇತನಗಳನ್ನು ಪಾವತಿ ಮಾಡಲು ನಗದು ಹಣದ ಕೊರತೆಯ ಮೇಲೆ ಹಾಗೂ ರಾಜನಿಗೆ ಕಪ್ಪಕಾಣಿಕೆ ಕೊಡುವ ಸಾಮಂತರಾಜರ ವಲಯವು ಎಷ್ಟು ದೊಡ್ಡದು ಎನ್ನುವುದರ ಮೇಲೆ ರಾಜರ ಪ್ರತಿಷ್ಠೆ ಹಾಗೂ ಗೌರವಗಳು ನಿಂತಿವೆ ಎಂಬ ಹೊಸ ವಿಚಾರ. ಹೀಗೆ ಇದು ಸಾಮಂತೀಕರಣ ಪ್ರಕ್ರಿಯೆ ಅಥವಾ ರಾಜಕೀಯ ವಲಯವನ್ನು ತುಂಡು ತುಂಡಾಗಿ ಒಡೆಯುವುದು. ಇದನ್ನು ಒಕ್ಕೂಟ ವ್ಯವಸ್ಥೆಯ ಒಂದು ಭಾಗವೆಂದು ನಾವು ಪರಿಗಣಿಸಬಹುದು. ಇದರ ಪರಿಣಾಮವಾಗಿ ಕೇಂದ್ರದಲ್ಲಿ ಅರಸನ ಶಕ್ತಿಯ ತಳಹದಿ ಪೂರ್ತಿಯಾಗಿ ಸವೆದುಹೋಯಿತು. ಚಕ್ರವರ್ತಿಯ ಶಕ್ತಿ ಕುಂದುತ್ತಾ ಹೋದಂತೆ ಸಾಮಂತನು ಸ್ವಾತಂತ್ರ್ಯವನ್ನು ಪಡೆಯಲು

ಹವಣಿಸುತ್ತಿದ್ದನು. ತಾನೇ ಚಕ್ರವರ್ತಿಯಾಗಬೇಕೆಂಬ ಕನಸನ್ನು ಕಾಣುತ್ತಿದ್ದನು. ಇದು ಬೃಹತ್ ಸಾಮ್ರಾಜ್ಯಗಳ ಏಳ್ಗೆಗೂ ಅವನತಿಗೂ ಎಡೆಮಾಡಿಕೊಟ್ಟಿತು. ಹೀಗೆ ಒಬ್ಬರಲ್ಲಾ ಇನ್ನೊಬ್ಬರಿಗೆ ನಿಷ್ಠೆಯನ್ನು ತೋರಿಸುತ್ತಿದ್ದ ಸ್ಥಳೀಯ ನಾಯಕರ ಸ್ಥಾನಮಾನವು ಜಾಗರೂಕತೆಯಿಂದ ಅಧ್ಯಯನ ಮಾಡುವುದಕ್ಕೆ ಅರ್ಹವಾಗಿದೆ. ಕರ್ನಾಟಕ ಇತಿಹಾಸದ ಸ್ಥಿತಿಯೂ ಈ ಪರಂಪರೆಗೆ ಅಪವಾದವಲ್ಲ''.[2]

ಇಂತಹ ಒಂದು ಸನ್ನಿವೇಶದಲ್ಲಿ ಕರ್ನಾಟಕದಲ್ಲಿ ಹೊಯ್ಸಳರು ಪ್ರವರ್ಧಮಾನಕ್ಕೆ ಬಂದರು. ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲಾವಧಿಗೆ ವಿಸ್ತರಿಸುವ ಹೊಯ್ಸಳರ ಆಳ್ವಿಕೆಯು ಮಧ್ಯಕಾಲೀನ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ತುಂಬ ಮುಖ್ಯವಾದ ಅಧ್ಯಾಯವಾಗಿದೆ. ರಾಜಕೀಯವಾಗಿ ಕಲ್ಯಾಣದ ಚಾಲುಕ್ಯರು ಅವನತಿ ಹೊಂದಿದಾಗ ಇವರು ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡರು. ಪ್ರೊ. ಎಚ್. ವಿ. ಶ್ರೀನಿವಾಸಮೂರ್ತಿ ಈ ಕಾಲಘಟ್ಟದ ಬಗ್ಗೆ ಹೀಗೆ ಉಲ್ಲೇಖಿಸಿದ್ದಾರೆ :

''ಹೊಯ್ಸಳರ ಆಳ್ವಿಕೆಯು ಕರ್ನಾಟಕದ ಸಂಸ್ಕೃತಿಯ ಅತೀ ಎತ್ತರದ ಜಲಚಿನ್ಹೆಯಾಗಿದೆ. ಟಾಯ್ನ್‌ಬಿಯ ಸೂತ್ರದಂತೆ ಕರ್ನಾಟಕ ಸಂಸ್ಕೃತಿಯ ಅಧ್ಯಯನ ಮಾಡಿದರೆ ಸುಮಾರು ಕ್ರಿ.ಶ. ೧೩೦೦ರವರೆಗಿನ ಅವಧಿಯನ್ನು ಪ್ರಕೃತಿಯ ಸವಾಲುಗಳಿಗೆ ಪ್ರತಿಕ್ರಿಯೆ ಎಂದು ಹೇಳಬಹುದು. ಅದರ ಮುಂದಿನ ಹಂತವನ್ನು ಅದು ನಾಗರಿಕತೆಯ ಯುಗವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಬಹುದು. ಆಗ ಭಾರತದ ಉಸಿರೇ ಆದ ವಿಧಿವಾದವು ತನ್ನ ಸಾಮರ್ಥ್ಯವೆನ್ನೆಲ್ಲವನ್ನು ತೋರಿಸಿತು. ಕರ್ನಾಟಕ ಸಂಸ್ಕೃತಿಯು ವಸಂತ ಮತ್ತು ಗ್ರೀಷ್ಮಗಳು ಕಳೆದು ನೂತನ ಕೈಗಾರಿಕೋದ್ಯಮದ ನಾಗರಿಕತೆಯು ಕಾಲಿಟ್ಟಿತು. ಹಾಗೆಯೇ ಬೃಹತ್ ರಾಷ್ಟ್ರ ಸಂಸ್ಕೃತಿಯುಳ್ಳ ಚಕ್ರಾಧಿಪತ್ಯಗಳು ಕಾಣಿಸಿಕೊಂಡವು. ವಿಜಯನಗರವು ಅದನ್ನು ಪ್ರತಿನಿಧಿಸುತ್ತದೆ. ವಿಜಯನಗರವು ಉಳಿಸಿ ಕಾಪಾಡುವ ಲಕ್ಷಣವನ್ನು ತೋರುವ ಅವಧಿಯಾದರೆ, ಹೊಯ್ಸಳರದು ರಚನಾತ್ಮಕತೆ, ಸುಧಾರಣೆ ಮತ್ತು ವಿಸ್ತರಣೆಗಳ ಅವಧಿ. ಹೊಯ್ಸಳರು ಚಾಲುಕ್ಯರ ಅಥವಾ ಅವರಿಗಿಂತ ಹಿಂದಿದ್ದವರ ಸಾಂಸ್ಕೃತಿಕ ಲಕ್ಷಣಗಳನ್ನು ಉಳಿಸಿಕೊಳ್ಳಲಿಲ್ಲ. ಅಥವಾ ಮುಂದೆ ಸಂಪರ್ಕಕ್ಕೆ ಬಂದ ತಮಿಳು ದೇಶದಿಂದಲೂ ಪಡೆದುಕೊಳ್ಳಲಿಲ್ಲ. ಬದಲು ಅವರೇ ಹೊಸ ದಾರಿಯೊಂದನ್ನು ನಿರ್ಮಿಸಿದರು. ಹೊಯ್ಸಳರ ಪ್ರತಿಭೆಯು ಸಂಸ್ಕೃತಿಯ ಎಲ್ಲಾ ಕ್ಷೇತ್ರಗಳಲ್ಲೂ ವ್ಯಕ್ತವಾಗಿದೆ. ಅದು ಧಾರ್ಮಿಕವಾಗಿ ಬಹಳ ಚಟುವಟಿಕೆಯ ಕಾಲವಾಗಿತ್ತು. ಜೈನ ಧರ್ಮವು ಅಭಿವೃದ್ಧಿ ಗತಿಯಲ್ಲಿತ್ತು. ವಿಶಿಷ್ಟಾದ್ವೈತ ಮತ ಪ್ರವರ್ತಕ ರಾಮಾನುಜಾಚಾರ್ಯರು ಹೊಯ್ಸಳ ದೇಶದಲ್ಲಿ ಇದ್ದುದರಿಂದ ಶ್ರೀ ವೈಷ್ಣವ ಧರ್ಮವು ತುಂಬಾ ಜನಪ್ರಿಯವಾಯಿತು. ಹೊಯ್ಸಳರು ಹರಿಹರಪಂಥವನ್ನು ಜನಪ್ರಿಯಗೊಳಿಸಿ ಕಟ್ಟಾ ಸಾಂಪ್ರದಾಯಿಕವಾಗಿದ್ದ ಧರ್ಮಗಳ ನಡುವೆ [illegible]

ಧಾರ್ಮಿಕ ಭಿನ್ನಾಭಿಪ್ರಾಯ ತಲೆದೋರದಂತೆ ಮಾಡಿದರು. ಇದಕ್ಕಾಗಿ ಅವರು ಹರಿಹರ ದೇವಾಲಯಗಳನ್ನು ನಿರ್ಮಿಸಿದರು. ಜನರ ಭಾಷೆಯಾದ ಕನ್ನಡದಲ್ಲಿ ಸಾಹಿತ್ಯವು ಶ್ರೀಮಂತವಾಯಿತು. ಕನ್ನಡದಲ್ಲಿ ವ್ಯಾಕರಣ ಮತ್ತು ವಿಜ್ಞಾನ ಬೆಳವಣಿಗೆಗಳು ಭರವಸೆ ತುಂಬಿದ ಪ್ರಾರಂಭವನ್ನು ಕಂಡವು. ಭಾರತೀಯ ಕಲೆ ಮತ್ತು ವಾಸ್ತುಶಿಲ್ಪದ ಇತಿಹಾಸದಲ್ಲಿ ಹೊಯ್ಸಳ ಆಳ್ವಿಕೆಯು ಅಸಾಮಾನ್ಯವಾಗಿತ್ತು. ಅವರದೇ ಒಂದು ವಿಶಿಷ್ಟಶೈಲಿ ರೂಪುಗೊಂಡಿತ್ತು. ಬೇಲೂರು, ಹಳೇಬೀಡು ಮತ್ತು ಸೋಮನಾಥಪುರಗಳಲ್ಲಿನ ದೇವಾಲಯಗಳು ಅವರ ಶೈಲಿಯ ವೈಭವವನ್ನು ಸಾರುತ್ತಿವೆ. ಈ ಎಲ್ಲ ವಿಷಯಗಳನ್ನೂ ಒಟ್ಟಾಗಿ ನೋಡಿದಾಗ ಹೊಯ್ಸಳರ ಆಳ್ವಿಕೆಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣ ಯುಗವಾಗಿದೆ ಎಂದು ಹೇಳಬಹುದು''.[3]

''ಹೊಯ್ಸಳ ರಾಜ್ಯಾಡಳಿತವು ಅಧೀನ - ಒಕ್ಕೂಟ ಮತ್ತು ಸಾಮಂತ ವ್ಯವಸ್ಥೆಯ ಲಕ್ಷಣಗಳನ್ನು ತೋರಿಸುತ್ತಿದ್ದಿತು. ಅತ್ಯುನ್ನತ ಸ್ಥಿತಿಯಲ್ಲಿ ಹೊಯ್ಸಳ ಸಾಮ್ರಾಜ್ಯವು ಚಕ್ರಗಳನ್ನು ಅಥವಾ ಮಂಡಲಗಳನ್ನು ಹೊಂದಿದ್ದಿತು. ಅವು ವರ್ತುಲಗಳು ಅಥವಾ ಪ್ರಭಾವ ವಲಯಗಳು. ಅವುಗಳ ನೆತ್ತಿಯಲ್ಲಿ ಹೊಯ್ಸಳ ಚಕ್ರವರ್ತಿ ಇದ್ದನು. ಅಧೀನರಾಜರ ನಿಷ್ಠೆ ಸ್ವಯಂಪ್ರೇರಿತವಾಗಿರುತ್ತಿದ್ದಿತು ಅಥವಾ ಬಲಾತ್ಕಾರದ ನಿಷ್ಠೆಯಾಗಿರುತ್ತಿದ್ದಿತು. ಆದರೆ ಹೊಯ್ಸಳರು ಮತ್ತು ಅಧೀನರಾಜರ ಸರಕಾರವು ಏಕರೂಪವಾದರೂ ಒಂದೊಂದೂ ಸ್ವತಂತ್ರವಾದ ಘಟಕವಾಗಿತ್ತು. ಅಂದರೆ ಚಂಗಾಳ್ವ, ಕೊಂಗಾಳ್ವ, ಸಾಂತರ ಮೊದಲಾದ ಸಾಮಂತರಾಜ್ಯಗಳ ಮತ್ತು ಕೇಂದ್ರದ ಹೊಯ್ಸಳರ ರಾಜ್ಯಾಡಳಿತ ತಂತ್ರವು ಒಂದೇ ಆಗಿದ್ದಿತು. ಅನೇಕ ವೇಳೆ ಒಬ್ಬ ಸಾಮಂತನನ್ನು ಇತರ ರಾಜರ ಮೇಲೆ ಹತೋಟಿಯಲ್ಲಿಟ್ಟುಕೊಳ್ಳಲು ಹೊಯ್ಸಳ ಚಕ್ರವರ್ತಿಗಳು ನೇಮಿಸುತ್ತಿದ್ದರು. ಇದೇ ಸಾಮಂತ ವ್ಯವಸ್ಥೆ''.[4]

''ಹೊಯ್ಸಳ ರಾಜ್ಯಾಡಳಿತವು ಊಳಿಗಮಾನ್ಯ ಪದ್ಧತಿಯ ಅಂಶಗಳನ್ನು ಒಳಗೊಂಡಿದ್ದಿತು. ದಂಡನಾಯಕರು ಮತ್ತು ಮನ್ನೆಯರು, ಭೂಮಿ ಕಾಣಿಗಳನ್ನು ಅನುವಂಶೀಯವಾಗಿ ಪಡೆಯುತ್ತಿದ್ದರು. ಅದಕ್ಕೆ ಬದಲಾಗಿ ಕೇಂದ್ರಾಡಳಿತಕ್ಕೆ ನಿರ್ದಿಷ್ಟ ಸೇವೆಯನ್ನು ಸಲ್ಲಿಸುತ್ತಿದ್ದರು. ಇದರ ಜೊತೆಗೆ ಹೊಯ್ಸಳ ಅರಸರು ಅಗ್ರಹಾರ ಅಥವಾ ಬ್ರಾಹ್ಮಣ ನೆಲೆಗಳನ್ನು ನಿರ್ಮಿಸಿ ಅವುಗಳ ಬೆಂಬಲಕ್ಕಾಗಿ ರಾಜಾದಾಯವನ್ನು ನಿಗದಿಪಡಿಸುತ್ತಿದ್ದರು.''[5]

''ವಿಷ್ಣು ಮತ್ತು ಶಿವ ದೇವಾಲಯ ಸಮುಚ್ಚಯದಲ್ಲಿರುವ ಎಲ್ಲಾ ದೇವಾಲಯಗಳ ಪೂಜೆಗಾಗಿ ಇಂತಿಷ್ಟು ಎಂದು ಹಣವನ್ನು ನಿಗದಿಪಡಿಸಿದ್ದಾಗಲೂ ಕೂಡ ಅವುಗಳ ನಿರ್ವಹಣೆಯನ್ನು ಮಹಾಜನರಿಗೆ, ಆಚಾರ್ಯರಿಗೆ, ನಂಬಿಗಳಿಗೆ ಮತ್ತು ಸ್ಥಾನಿಕರಿಗೆ ವಹಿಸಿಕೊಡಲಾಗಿತ್ತು. ಅಧಿಕಾರಿಗಳು ಅಗ್ರಹಾರಕ್ಕೆ ಪ್ರವೇಶ ಮಾಡಲು ಹೊಯ್ಸಳ ಆಡಳಿತವು ಅನುಮತಿ ನೀಡಿರಲಿಲ್ಲ. ಸರಕಾರದ ಆಡಳಿತೀಯ

ಮತ್ತು ವರಮಾನದ ಹಕ್ಕುಗಳನ್ನು ಹೀಗೆ ವರ್ಗಾಯಿಸುವುದರ ಮೂಲಕ ಅವರು ಆಡಳಿತದಲ್ಲಿ ಊಳಿಗಮಾನ್ಯ ಅಂಶಗಳನ್ನು ಸೃಷ್ಟಿಸಿದ್ದರು.

ಅದೇ ರೀತಿಯಲ್ಲಿ ಮಾಂಡಳಿಕರು ಅಥವಾ ಸಾಮಂತರ ವ್ಯವಸ್ಥೆಯಲ್ಲಿಯೂ ಊಳಿಗಮಾನ್ಯ ಅಂಶಗಳನ್ನು ಗುರುತಿಸಬಹುದು. ಇದು ಹೊಯ್ಸಳನಾಡು, ಹೊಯ್ಸಳ ದೇಶ ಅಥವಾ ಹೊಯ್ಸಳ ರಾಜ್ಯದ ಅಂತರ್ಗತ ಭಾಗವಾಗಿತ್ತು.'' [6]

''ಹೊಯ್ಸಳರು ಪ್ರಮುಖ ರಾಜಕೀಯ ಶಕ್ತಿಯಾಗಿ ಬೆಳಗಿದ ಕಾಲವು, ವಿಶೇಷವಾಗಿ ೧೨ನೆಯ ಮತ್ತು ೧೩ನೆಯ ಶತಮಾನಗಳ ಕಾಲಾವಧಿಯು ಕರ್ನಾಟಕದಲ್ಲಿ ಬೌದ್ಧಿಕ ಕ್ಷೋಭೆಯ ಕಾಲ. ಸಮಾಜದಲ್ಲಿ ಸುಧಾರಣೆಯ ಮತ್ತು ಕ್ರಾಂತಿಯ ಅಗಾಧವಾದ ಅಲೆಯು ಬೀಸುತ್ತಿದ್ದಿತು. ಸಾಮ್ರಾಜ್ಯದಲ್ಲಿ ಪ್ರಭಾವ ಶಾಲಿಯೂ ಸಾಮಾಜಿಕವಾಗಿ ಸತ್ವಯುತವೂ ಆದ ಮೂರು ಧಾರ್ಮಿಕ ವರ್ಗಗಳಿದ್ದವು. ಅವು ೧) ಬ್ರಾಹ್ಮಣಧರ್ಮ - ಶೈವ ಮತ್ತು ವೈಷ್ಣವತೆಯ ಎರಡು ಮುಖ್ಯ ಪಂಗಡಗಳ ಸಮೇತ. ೨) ಜೈನಧರ್ಮ ೩) ವೀರಶೈವ ಧರ್ಮ''.[7] ಈ ಮೂರು ಧರ್ಮಗಳ ನಡುವೆ ಪರಸ್ಪರ ಮೇಲ್ಗೈಗೆ ಕಿತ್ತಾಟವಿದ್ದು ರಾಜನು ತಮ್ಮ ಬೆಂಬಲಕ್ಕೆ ನಿಲ್ಲಬೇಕೆಂದು ಪ್ರತಿ ಧರ್ಮವೂ ಬಯಸುತ್ತಿತ್ತು.

ಹೊಯ್ಸಳರ ಕಾಲಘಟ್ಟದ ರಾಜಕೀಯ ಆಡಳಿತಾತ್ಮಕ ಹಾಗೂ ಧಾರ್ಮಿಕ ಸನ್ನಿವೇಶವನ್ನು ನಾವು ಸ್ಥೂಲವಾಗಿ ಗ್ರಹಿಸಿದ ಮೇಲೆ ಅವರ ಸಾಮ್ರಾಜ್ಯದ ಭೌತಿಕ ಆಧಾರದ ಅಧ್ಯಯನವನ್ನೂ ಮಾಡಬೇಕು. ಉತ್ಪಾದಕ ವರ್ಗಗಳು ಈ ಭೌತಿಕ ಆಧಾರವನ್ನು ಒದಗಿಸಿದ್ದವು. ಅವುಗಳನ್ನು ಗುರುತಿಸುವುದು ಅಗತ್ಯವಾಗಿದೆ. ಇದಕ್ಕೆ ಪ್ರತಿಯಾಗಿ ಉತ್ಪಾದಕ ವರ್ಗಗಳ ಭೌತಿಕ ಯೋಗಕ್ಷೇಮ ಸರಕಾರದ ಪರಿಣಾಮಕಾರಿಯಾದ ಚಟುವಟಿಕೆಗಳ ಮೇಲೆ ನಿಂತಿದ್ದಿತು. ಹೊಯ್ಸಳ ಸಮಾಜದ ರಚನೆ ಮತ್ತು ಸ್ಥಿರತೆ ರಾಜಕೀಯ ಅಧಿಕಾರ ವಿವೇಚನಾಯುಕ್ತ ನಿರ್ವಹಣೆಯ ಮೇಲೆ ಅವಲಂಬಿಸಿದ್ದಿತು. ಹೊಯ್ಸಳ ಶಾಸನಗಳಲ್ಲಿ ಇದನ್ನು ಅಧಿಕಾರ ಎಂದು ಉಲ್ಲೇಖಿಸಿದೆ.

ಈ ಉತ್ಪಾದಕ ವರ್ಗಗಳನ್ನು ಗುರುತಿಸುವುದಕ್ಕೆ ಮೊದಲು ಆ ರಾಜ್ಯದ ಗಡಿಯೊಳಗೆ ಸಂಪನ್ಮೂಲಗಳು ಹರಡಿಕೊಂಡಿದ್ದ ರೀತಿಯನ್ನು ಸ್ಥೂಲವಾಗಿ ನೋಡುವುದು ಅವಶ್ಯಕ.

''ಸಂಪನ್ಮೂಲ ಹಂಚಿಕೆಯ ದೃಷ್ಟಿಯಿಂದ ರಾಜ್ಯವು ಸಾಕಷ್ಟು ವಿಸ್ತಾರವಾಗಿತ್ತು. ಮುಖ್ಯವಾದ ಮೂರು ಪ್ರದೇಶಗಳಿದ್ದವು. ೧) ಕರಾವಳಿ ಅಥವಾ ಸಮುದ್ರ ತೀರ ಪ್ರದೇಶ ೨) ಮಲೆನಾಡು, ಪಶ್ಚಿಮ ಘಟ್ಟಗಳು ಮತ್ತು ಅವುಗಳ ಕಣಿವೆಗಳ ಬೆಟ್ಟಗಾಡು ಪ್ರದೇಶ, ೩) ಬಯಲುನಾಡು ಅಥವಾ ಬಯಲುಪ್ರದೇಶ.

ಇವು ಕೃಷಿಬೆಳೆಗಳ ಉತ್ಪಾದನೆಯಲ್ಲಿ ಒಂದಕ್ಕೊಂದು ಪೂರಕವಾಗಿದ್ದವು. ಹೊಯ್ಸಳ ಶಕ್ತಿಯು ಉದಯಿಸಿದ್ದು ಮಲೆನಾಡಿನಲ್ಲಿ. ಕಾಲಕಳೆದಂತೆ ಅದು

ಬೈಲುನಾಡಿನ ವಿಶಾಲವಾದ ಬಯಲುಪ್ರದೇಶಗಳನ್ನು ಕಿರಿದಾದ ಕರಾವಳಿ ಬಯಲನ್ನು ಒಳಗೊಂಡಿತು. ಮುಖ್ಯವಾಗಿ ಚಿಕ್ಕಮಗಳೂರು ಜಿಲ್ಲೆ ಮತ್ತು ಹಾಸನ ಜಿಲ್ಲೆಯ ಕೆಲಭಾಗ ಮಲೆನಾಡಿಗೆ ಸೇರುತ್ತವೆ. ಇದು ಹೊಯ್ಸಳ ಸಾಮ್ರಾಜ್ಯದ ಹೃದಯ ಭಾಗವಾಗಿತ್ತು. ಮೈಸೂರು, ಬೆಂಗಳೂರು, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಮುಖ್ಯವಾಗಿ ಬೈಲುನಾಡು ಎನಿಸಿತ್ತು. ಮುಖ್ಯವಾಗಿ ಇಂದಿನ ಕನ್ನಡ ಜಿಲ್ಲೆ ಕರಾವಳಿಗೆ ಸೇರಿತ್ತು. ಮಲೆನಾಡು ಮತ್ತು ಕರಾವಳಿ ಸಮೃದ್ಧವಾಗಿ ಮಳೆ ಬೀಳುವ ಪ್ರದೇಶಗಳು. ಆದ್ದರಿಂದ ಸಹಜವಾಗಿಯೇ ಹೊಯ್ಸಳ ರಾಜ್ಯದ ಅಕ್ಕಿಯ ಉಗ್ರಾಣಗಳಾಗಿದ್ದವು. ಎಲ್ಲಾ ಬಗೆಯ ಅರಣ್ಯ ಉತ್ಪನ್ನಗಳು, ವಿಧ ವಿಧವಾದ ಮರಮುಟ್ಟು, ಮೆಣಸು, ಏಲಕ್ಕಿ ಮತ್ತು ಲವಂಗಗಳಂತಹ ಸಾಂಬಾರ ವಸ್ತುಗಳು ಈ ಪ್ರದೇಶದಿಂದ ಬರುತ್ತಿದ್ದವು. ಕರಾವಳಿಯು ಕೃಷಿ ಉತ್ಪನ್ನಗಳ ರಫ್ತಿಗೂ ಅವಕಾಶವನ್ನು ಒದಗಿಸಿದ್ದಿತು. ಬಯಲುನಾಡಿನಲ್ಲಿ ಮುಖ್ಯವಾಗಿ ಒಣಬೆಳೆ. ಕೆರೆ ನೀರಾವರಿ ಇರುವ ಕಡೆ ಭತ್ತ ಮತ್ತು ಕಬ್ಬುಗಳನ್ನು ಬೆಳೆಯಲಾಗುತ್ತಿತ್ತು. ಅದು ಮುಖ್ಯವಾಗಿ ರಾಜ್ಯದ ರಾಗಿ ವಲಯ. ಕಾವೇರಿ, ತುಂಗಭದ್ರಾ, ಕಪಿಲಾ, ಹೇಮಾವತಿ, ಶರಾವತಿ ಮತ್ತಿತರ ನದಿಗಳು ಹೊಯ್ಸಳ ನೆಲವನ್ನು ಸಮೃದ್ಧಗೊಳಿಸಿದ್ದವು. ಕೃಷಿಕರನ್ನು ಹೊಯ್ಸಳ ಶಾಸನಗಳಲ್ಲಿ ಭೂಮಿಕಾರರೆಂದು ಕರೆದಿದೆ. ನದಿ ಕಣಿವೆಗಳಲ್ಲಿ ಅವರು ಬಗೆ ಬಗೆಯ ನೀರಾವರಿ ಬೆಳೆಗಳನ್ನು ತೆಗೆಯುತ್ತಿದ್ದರು. ಕೃಷಿಕರನ್ನು ಸೂಚಿಸಲು ಒಕ್ಕಲು ಅಥವಾ ಬೆಸವೊಕ್ಕಲು ಎಂಬ ಪದಗಳನ್ನು ಉಪಯೋಗಿಸಲಾಗಿದೆ''.[8]

ಈ ಬಗೆಯಲ್ಲಿ ಹೊಯ್ಸಳ ಸಾಮ್ರಾಜ್ಯದ ಆಳ್ವಿಕೆಯ ಪ್ರಾಂತ್ಯವು ಹಲವು ಬಗೆಯ ಪ್ರಾಂತ್ಯಗಳಲ್ಲಿ ಹರಡಿತ್ತಾದ್ದರಿಂದ ಅವರು ಭೂಕಂದಾಯವನ್ನು, ಬೆಳೆ ಕಂದಾಯವನ್ನು ನಿಗದಿಪಡಿಸಲು ಮಣ್ಣುಗಳ ವಿಧ, ಜಮೀನುಗಳ ಉತ್ಪನ್ನದ ವಿಧಾನ ಇತ್ಯಾದಿಗಳ ಬಗ್ಗೆ ಹಾಗೂ ಅದು ನೀರಾವರಿಯೋ ಒಣ ಬೇಸಾಯವೋ ಎಂಬ ಬಗ್ಗೆ ವಿಂಗಡೀಕರಣವನ್ನು ಆರಂಭಿಸಬೇಕಾಗಿ ಬಂದಿತು.

ಸಾಗುವಳಿಭೂಮಿಯನ್ನು ಗದ್ದೆ, ಬೆದ್ದಲು, ತೋಟ ಎಂದು ವರ್ಗೀಕರಿಸಲಾಗಿತ್ತು. ತೋಟಗಳಲ್ಲೂ, ಮಾವಿನ ತೋಟ, ಹೂವಿನ ತೋಟ, ಅಡಿಕೆ ತೋಟ, ಏಲಕ್ಕಿ ತೋಟ, ಹರಳು ತೋಟ ಮುಂತಾಗಿ ವಿಭಾಗಿಸಬೇಕಾಗಿ ಬಂದಿತು. ಬಿತ್ತನೆಯ ಪ್ರಮಾಣದ ಮೇಲೆ ಖಂಡುಗ, ಕೊಳಗ, ಕಮ್ಮ, ಸಲಗೆ, ಬೇಲಿ, ಮತ್ತರು ಇತ್ಯಾದಿ ಅಳತೆಗಳ ಆಧಾರದಲ್ಲಿ ಹೊಲಗಳ ಉತ್ಪಾದಕತೆಯನ್ನು ನಿರ್ಧರಿಸಲಾಗುತ್ತಿತ್ತು.

ಹೊಯ್ಸಳರ ಕಾಲಘಟ್ಟದಲ್ಲಿ ಆರಂಭವಾಗಿರಬಹುದಾದ ಕೃಷಿಭೂಮಿಗಳ ವಿಧಾನದ ವರ್ಗೀಕರಣವು ಒಂದು ನಿರ್ದಿಷ್ಟ ನೈಸರ್ಗಿಕ ಪರಿಸ್ಥಿತಿಯನ್ನೂ, ಕೃಷಿ ಉತ್ಪನ್ನಗಳಲ್ಲಿ ಬೆಳೆಯುತ್ತಾ ಬಂದಿರುವ ಬಹುಳತ್ವವನ್ನೂ ಸೂಚಿಸುತ್ತದೆ. ಈ ಹಿಂದಿನ ಚಾಲುಕ್ಯ, ರಾಷ್ಟ್ರಕೂಟ, ಕಲಚೂರಿ ಮುಂತಾದವರ ರಾಜ್ಯಗಳಲ್ಲಿ ಬೇರೆ ಬೇರೆ ಬಗೆಯ ನೈಸರ್ಗಿಕ ಸನ್ನಿವೇಶಗಳ ಪ್ರದೇಶಗಳು ಅಷ್ಟಾಗಿ ಸೇರಿರಲಿಲ್ಲ. ಅವುಗಳೆಲ್ಲಾ

ಸಾಮಾನ್ಯವಾಗಿ ಉಚ್ಛ್ರಾಯಕ್ಕೆ ಬಂದಿದ್ದು ದಖನ್ ಪ್ರಸ್ಥಭೂಮಿಯ ಬಯಲು ಗಳಲ್ಲೇ. ಬೇರೆ ಭಾಗಗಳೂ ಕೂಡ ಅವರ ಆಡಳಿತಪ್ರಭಾವದ ವಲಯಕ್ಕೆ ಬಂದಿದ್ದಾಗಲೂ ಅವು ಗಡಿಸೀಮೆಗಳಂತಿದ್ದು ಅವುಗಳು ನಿಶ್ಚಿತ ಸಂಘಟನೆಗೆ ಗಮನವಹಿಸಿದ್ದು ಕಡಿಮೆ. ಅಲ್ಲಿನ ಮಣ್ಣೆಲ್ಲಾ ಪ್ರಧಾನ ಕಪ್ಪು. ವ್ಯವಸಾಯವೆಲ್ಲಾ ಪ್ರಧಾನವಾಗಿ ಬೆದ್ದಲು ಅಥವಾ ಕೆರೆ ನೀರಾವರಿ ಆಧಾರಿತ. ಅದೂ ಕೂಡ ದಕ್ಷಿಣ ಕರ್ನಾಟಕದ ಬಾಹುಳ್ಯತೆಗೆ ಹೋಲಿಸಿದರೆ ತುಂಬಾ ಕಮ್ಮಿ. ಆದರೆ ಹೊಯ್ಸಳ ರಾಜ್ಯವು ಒಮ್ಮೆಗೆ ಕರಾವಳಿಯ, ಮಲೆನಾಡಿನ ಹಾಗೂ ಬಯಲುನಾಡಿನ ಮೂರು ವೈವಿಧ್ಯಮಯ ನೈಸರ್ಗಿಕ ಕೃಷಿ ಸನ್ನಿವೇಶಗಳನ್ನು ಒಳಗೊಂಡು ಸುದೀರ್ಘ ಸಮಯದ ಆಳ್ವಿಕೆಯನ್ನು ನಡೆಸ್ಸಿತು. ಇದ್ದರಿಂದಾಗಿ ಅದು ತನ್ನ ಭೂಕಂದಾಯ, ಬೆಳೆಗಂದಾಯ ವಸೂಲಿ ಮಾಡುವ ಮೊದಲು ಆಯಾ ಸನ್ನಿವೇಶಗಳ ಮಣ್ಣಿನ ಬಗೆ ಹಾಗೂ ಉತ್ಪಾದಕತೆಯ ರೀತಿಯನ್ನು ಅಂದಾಜಿಸಬೇಕಾದ ಅಗತ್ಯಕ್ಕೆ ಗುರಿಯಾಯಿತು.

ಭೂ ಒಡೆತ್ತನದಲ್ಲಿ ಕೆಲವು ಖಾಸಗೀ ಪ್ರವೃತ್ತಿಗಳು ಕಂಡುಬರುತ್ತವೆ. ಶಾಸನಗಳು ಖಾಸಗೀ ಹಿಡುವಳಿಗಳ ಗಡಿಗಳನ್ನು ಗುರುತಿಸಿಕೊಡುತ್ತವೆ. ಹಲವು ಬಗೆಯ ಉದ್ದೇಶಗಳಿಂದ ದಾನ ಕೊಟ್ಟ ಭೂಮಿ, ಗಡಿಗಳನ್ನು ಗುರುತಿಸುವುದಕ್ಕಾಗಿ ಕೊಟ್ಟ ಶುಲ್ಕ, ಗಡಿ ವಿವಾದಗಳು ಮತ್ತು ಅವುಗಳ ಪರಿಹಾರ, ಅಂತಹ ಸಂದರ್ಭಗಳಲ್ಲಿ ಸಂಭವಿಸಿದ ಸಾವು, ಅವರಿಗಾಗಿ ಕೊಟ್ಟ ಪರಿಹಾರ ಧನ ಇತ್ಯಾದಿ ಹಲವು ವಿಷಯಗಳು ಶಾಸನಗಳಲ್ಲಿ ದಾಖಲಾಗಿವೆ. ಭೂಮಿಯ ಖಾಸಗಿ ಒಡೆತನದ ಪ್ರವೃತ್ತಿಗಳನ್ನು ಅವು ಖಚಿತವಾಗಿ ಉಲ್ಲೇಖಿಸುತ್ತವೆ. ಇವೆಲ್ಲ ಕೃಷಿಯಲ್ಲಿ ಸರಕು ಉತ್ಪಾದನೆಯ ಪ್ರವೃತ್ತಿಗೆ ಇಂಬು ಕೊಡುವ ಅಂಶಗಳಾಗಿವೆ. ಕೃಷಿಯನ್ನು ಹೀಗೆ ನಿಶ್ಚಿತ ಪದ್ಧತಿಗಳ ಆಧಾರದಲ್ಲಿ ಅಂದಾಜಿಸುವುದು ರಾಜಾದಾಯವನ್ನು ಸಕ್ರಮಗೊಳಿಸುವ ಹಾಗೂ ವ್ಯವಸ್ಥಿತ ಗೊಳಿಸುವ ಒಂದು ವಿಧಾನವಾಗಿದೆ. ಈ ಪ್ರವೃತ್ತಿಯ ಮುಂದುವರಿಕೆಯನ್ನು ಮುಂದೆ ನಾವು ಚಿಕ್ಕದೇವರಾಯ, ಹೈದರಾಲಿ ಹಾಗೂ ಟಿಪ್ಪೂಸುಲ್ತಾನರ ಕಾಲಾವಧಿಯಲ್ಲಿ ಮತ್ತಷ್ಟು ಸುಸಂಘಟಿತ ಪದ್ಧತಿಗಳಲ್ಲಿ ಕಾಣುತ್ತೇವೆ.

ಹೊಯ್ಸಳರ ರಾಜಬೊಕ್ಕಸಕ್ಕೆ ಕೃಷಿಯಲ್ಲದೆ ಇತರ ವಾಣಿಜ್ಯ ಮೂಲ ಗಳಿಂದಲೂ ಸಂಪನ್ಮೂಲಗಳ ಕ್ರೋಢೀಕರಣವು ಒದಗುತ್ತಿತ್ತು.

ಎಣ್ಣೆ ಮತ್ತು ಬೆಲ್ಲಗಳ ಉತ್ಪನ್ನ, ಬಹುಶಃ ಸಕ್ಕರೆ ಮತ್ತು ಬೇರೆ ಬೇರೆ ಬಗೆಯ ಬಟ್ಟೆಗಳನ್ನು ನೇಯುವಿಕೆ ಇವು ಕೃಷಿ ಆಧಾರಿತ ಉದ್ಯಮಗಳನ್ನು ಸೂಚಿಸುತ್ತದೆ. ಹೊಯ್ಸಳ ಶಾಸನಗಳಲ್ಲಿ ಎಣ್ಣೆಯ ಉತ್ಪಾದನೆ ಪದೇ ಪದೇ ಉಲ್ಲೇಖಗೊಳ್ಳುತ್ತದೆ. ಈ ವೃತ್ತಿಯಲ್ಲಿ ನಿರತವಾದ ಜಾತಿಯನ್ನು ಗಾಣಿಗರು ಅಥವಾ ತೆಲ್ಲಿಗರು ಎಂದು ಕರೆಯುತ್ತಿದ್ದರು. ಅವರು ಎಣ್ಣೆಯ ಗಾಣಗಳನ್ನು ನಡೆಸುತ್ತಾ ಸರ್ಕಾರಕ್ಕೆ ಗಾಣದ ಸುಂಕವನ್ನು ಕೊಡುತ್ತಿದ್ದರು. ಶಾಸನಗಳು ಎತ್ತು - ಗಾಣ ಅಥವಾ ಎತ್ತಿನಿಂದ ಇಲ್ಲವೇ ಎತ್ತುಗಳಿಂದ ಎಳೆಯಲ್ಪಡುವ ಎಣ್ಣೆಗಾಣವನ್ನು ಉಲ್ಲೇಖಿಸುತ್ತವೆ. ಗವುಡರು ಮತ್ತಿತರ

ಸಾಮಾಜಿಕವರ್ಗಗಳು ಗಾಣಗಳನ್ನು ತಯಾರಿಸಿ ಧಾರ್ಮಿಕಸಂಸ್ಥೆಗಳಿಗೆ ದಾನ ಮಾಡುತ್ತಿದ್ದರು. ಎಳ್ಳು, ಹರಳು ಮತ್ತು ತೆಂಗುಗಳಿಂದ ಎಣ್ಣೆ ತೆಗೆಯುತ್ತಿದ್ದರು. ಕಬ್ಬಿನ ಗಾಣದ ಮೇಲೆ ಸರ್ಕಾರವು ಆಲೆದೆರೆ ಎಂಬ ತೆರಿಗೆಯನ್ನು ವಸೂಲು ಮಾಡುತ್ತಿದ್ದಿತು.

ಕಂಬಾರರು, ಬಡಗಿಗಳು, ಅಗಸರು, ನೇಕಾರರು, ಅಕ್ಕಸಾಲಿಗರು, ಕಮ್ಮಾರರು, ನಾಯಿಂದರೂ ಕೂಡ ತೆರಿಗೆಗಳನ್ನು ಕೊಟ್ಟು ಭೂಮಿಯನ್ನು ಹೊಂದಿರುತ್ತಿದ್ದರು. ನರ್ತಕಿಯರು, ಮೃದಂಗದವರು, ಗೊಲ್ಲರು, ನಟರು, ಮತ್ತು ದೇವಾಲಯ ಗಳಲ್ಲಿನ ನರ್ತಕರೂ ಕೂಡ ಭೂಮಿ ಹೊಂದಿದ್ದು ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರಕ್ಕೆ ತೆರಿಗೆಯನ್ನು ಕೊಡುತ್ತಿದ್ದರು.

ವರ್ತಕರು ದೇಶದೊಳಗೆ ಮತ್ತು ಹೊರಗೆ ಸರಕುಗಳ ಸಾಗಣೆ ಮಾಡುತ್ತಿದ್ದರು. ಈ ವಾಣಿಜ್ಯ ಚಟುವಟಿಕೆಗಳು ಸರ್ಕಾರಕ್ಕೆ 'ಪೆಲವರು- ಪೊಲವರು' ಎಂಬ ಸಾಗಣೆ ಸುಂಕವನ್ನು ತೆರುತ್ತಿದ್ದಿತು. ಅದು ಆಮದು - ರಫ್ತು ತೆರಿಗೆಯಾಗಿತ್ತು.

ಸುಂಕ ವಸೂಲಿಯ ಮನೆಯನ್ನು ಸುಂಕದ ಮನೆ ಎಂದು ಕರೆಯುತ್ತಿದ್ದರು. ಅಲ್ಲಿ ಅಧಿಕಾರಿಗಳಿಗೆ ಸುಂಕದ ಹೆಗ್ಗಡೆ ಎಂದು ಹೆಸರು. ಜೈನ ವರ್ತಕರು ದೇವಾಲಯಗಳಿಗೆ ಧಾರಾಳವಾಗಿ ದಾನಮಾಡುತ್ತಿದ್ದರು. ನೀರಾವರಿಗೆ ಅಗತ್ಯವಾದ ಕೆರೆಗಳ ನಿರ್ಮಾಣದಲ್ಲಿ ಹಣವನ್ನು ಹೂಡುತ್ತಿದ್ದರು.

ವಾಸ್ತವವಾಗಿ ನೀರಾವರಿಗೋಸ್ಕರ ಒಂದು ಕೆರೆಯನ್ನು ಕಟ್ಟಿಸುವುದು ಬಹು ಶ್ರೇಷ್ಠವಾದ ಧರ್ಮಕಾರ್ಯವೆಂದು ಅಂದಿನ ಸಮಾಜವು ಪರಿಗಣಿಸುತ್ತಿದ್ದಿತು. ಇಂತಹ ಬೇರುಬಿಟ್ಟ ಧಾರ್ಮಿಕ ನಂಬಿಕೆಯು ಅರಸರಿಗೂ ಇತರರಿಗೂ ಸಮಾನವಾಗಿಯೇ ಲಾಭಕರವಾಗಿದ್ದಿತು.

ಕೆರೆಗಳ ಮೂಲಕವಲ್ಲದೆ ನದಿಗಳಿಗೆ ಮುಖಜ ಭೂಮಿಗಳಲ್ಲಿ ಕಾಲುವೆ ತೋಡಿಸುವ ಮುಖಾಂತರವೂ ಬೇಸಾಯಕ್ಕೆ ನೀರುಣಿಸುವ ಪದ್ಧತಿಗಳನ್ನು ಅವರು ಆರಂಭಿಸಿದ್ದರು. ಕ್ರಿ.ಶ. ೧೩೦೦ರ ಒಂದು ಶಾಸನದಲ್ಲಿ ಹೊಯ್ಸಳ ರಾಜರು ಕಾಲುವೆ ಬೇಸಾಯದಲ್ಲಿ ಆಸಕ್ತಿ ತೆಗೆದುಕೊಂಡಿದ್ದುದಕ್ಕೆ ಉತ್ತಮವಾದ ನಿದರ್ಶನವಿದೆ. ಹಳೇಬೀಡು ಅಥವಾ ಹಿಂದಿನ ರಾಜಧಾನಿ ದೋರಸಮುದ್ರದ ಬಳಿ ಯಗಚಿ ನದಿಯಿಂದ ತೋಡಿದ ಒಂದು ನಾಲೆಯ ವಿಷಯವನ್ನು ಅದು ಹೇಳುತ್ತದೆ. ಅದರ ಕೆಲವು ಭಾಗಗಳಲ್ಲಿ ಅಗ ಕಾಲುವೆಗಾಗಿ ತೋಡಿದ ಅವಶೇಷವನ್ನು ಈಗಲೂ ನೋಡಬಹುದು. ಆಗ ಬೆಳೆದಿದ್ದ ಇಂಜಿನಿಯರಿಂಗ್ ಕೌಶಲ್ಯಕ್ಕೆ ಅದು ಸಾಕ್ಷಿಯಾಗಿದೆ, ಆ ನಾಲೆಯನ್ನು ಎರಡು ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು. ೧. ದೋರಸಮುದ್ರಕ್ಕೆ ಅಗತ್ಯವಾದಷ್ಟು ನೀರನ್ನು ಒದಗಿಸುವುದು ಹಾಗೂ ೨. ರಾಜಧಾನಿಯ ಸುತ್ತ ಬೇಸಾಯ ಮಾಡಲು ನೀರು ಹಾಯಿಸುವುದು. ಮೆಕೆಂಜಿ ಎಂಬ ೧೯ನೇ ಶತಮಾನದ ಬ್ರಿಟಿಷ್ ಪ್ರಜೆಯು ಬೇಲೂರಿನ ಬಳಿ ಹರಿಯುವ ಯಗಚಿ

ನದಿಯ ನೀರನ್ನು ದೋರಸಮುದ್ರಕ್ಕೆ ಕಾಲುವೆಯ ಮೂಲಕ ತರಲಾಗುತ್ತಿತ್ತೆಂದು ಹೇಳುತ್ತಾನೆ. ಹಾಸನ - ಬೇಲೂರು ರಸ್ತೆಯ ೧೬ನೆಯ ಮೈಲಿಗಲ್ಲಿನ ಬಳಿ ಆಳವಾಗಿ ಅಗೆದಿರುವ ಕುರುಹು ಇದ್ದು ಈ ಮಾತನ್ನು ಪುಷ್ಟೀಕರಿಸುತ್ತದೆ. ಈಗ ಇರುವಂತೆ ಕೂಡ ಆ ನಾಲೆಯ ಆಳ ಮತ್ತು ಅಗಲಗಳು ಅದು ಸಾಧಾರಣ ಕೆಲಸವಾಗಿರಲಿಲ್ಲ, ಹೊಯ್ಸಳರ ಕಾಲದ ಎಂಜಿನಿಯರಿಂಗ್ ಕೌಶಲ್ಯಕ್ಕೆ ಕೀರ್ತಿ ತರುವಂತಹದ್ದಾಗಿತ್ತು ಎಂಬುದನ್ನು ಸಮರ್ಥಿಸುತ್ತವೆ.

ಹೊಯ್ಸಳ ಕೃಷಿ ನೀತಿಯ ಇನ್ನೊಂದು ಮುಖ್ಯವಾದ ಅಂಶ ಬಂಜರು ಭೂಮಿಯನ್ನು ಸಾಗುವಳಿಗೆ ತರುವ ಪ್ರಯತ್ನ. ಶಾಸನಗಳ ಅಧ್ಯಯನದಿಂದ ಹೊಯ್ಸಳ ರಾಜರು ಬಂಜರಾಗಿದ್ದ ನೆಲವನ್ನು ಕ್ರಮೇಣ ಕೃಷಿಯೋಗ್ಯವನ್ನಾಗಿ ಮಾಡಿ ಉಳುಮೆಗೆ ಒಳಪಡಿಸುವ ಕೆಲಸವನ್ನು ತೆರಿಗೆ ವಿನಾಯಿತಿಗಳ ಮೂಲಕ ಪ್ರೋತ್ಸಾಹಿಸುತ್ತಿದ್ದರು ಎಂಬುದು ತಿಳಿದುಬರುತ್ತದೆ. ಈ ನೀತಿಯು ಮುಂದೆ ರಾಜಾದಾಯದ ಹೆಚ್ಚಳಕ್ಕೆ ಕಾರಣವಾಗುತ್ತಿದ್ದಿತು.

ಹೊಯ್ಸಳ ಯುಗದಲ್ಲಿ ಹಲವಾರು ನಗರ ಕೇಂದ್ರಗಳ ಹುಟ್ಟು ಹಾಗೂ ಬೆಳವಣಿಗೆಯು ಈ ಎಲ್ಲಾ ಉತ್ಪಾದನಾ ಚಟುವಟಿಕೆಗಳ ಕಾರಣದಿಂದ ಉಂಟಾಯಿತು.

ಈ ಹಿಂದೆಯೇ ಹೊಯ್ಸಳರ ಅಂಕೆಯಲ್ಲಿದ್ದ ಪ್ರದೇಶಗಳು ಬಗೆಬಗೆಯ ನೈಸರ್ಗಿಕ ಲಕ್ಷಣಗಳನ್ನು ಒಳಗೊಂಡಿದ್ದವುಗಳಾಗಿ ಅದರ ಅನುಸಾರ ಬೇರೆ ಬೇರೆ ಬಗೆಯ ಮಣ್ಣಿನ ಗುಣ ಹಾಗೂ ಅದರಿಂದ ಬೇರೆ ಬೇರೆ ಬಗೆಯ ನಿರ್ದಿಷ್ಟ ಬೆಳೆಗಳನ್ನು ಬೆಳೆಯುವ ವಿಶಿಷ್ಟತೆಯನ್ನು ಒಳಗೊಂಡಿದ್ದವು ಎಂಬುದನ್ನು ಪ್ರಸ್ತಾಪಿಸಲಾಗಿದೆ. ಭೂ ಉತ್ಪನ್ನಗಳನ್ನು ಬೆಳೆಯುವ ಸ್ಥಳಗಳಿಂದ ಬೆಳೆಯದ ಸ್ಥಳಗಳಿಗೆ ಸಾಗಿಸುವ, ವಿತರಿಸುವ ಒಂದು ವ್ಯಾಪಾರ ಪ್ರಕ್ರಿಯೆಯನ್ನು ಈ ಭೌಗೋಳಿಕ ಲಕ್ಷಣಗಳು ಸಹಜವಾಗಿಯೇ ಉಂಟುಮಾಡಿದವು. ವಿವಿಧ ಪ್ರದೇಶಗಳ ನಡುವೆ ವಾಣಿಜ್ಯವು ಸಂಪರ್ಕ ಬೆಸೆಯುವ ಕೊಂಡಿಯಾಯಿತು. ರಾಜ್ಯಾದ್ಯಂತ ಉಪಯೋಗದಲ್ಲಿದ್ದ ಅಡಿಕೆ ಮತ್ತು ವೀಳೆಯದೆಲೆಗಳಿಗೆ ಮಾತ್ರವಲ್ಲದೆ ಸರಕಾರವು ಸಂಗ್ರಹಿಸುತ್ತಿದ್ದ 'ಪಣ್ಣಾಯ' ಎಂಬ ಒಂದು ತೆರಿಗೆಯ ಉಲ್ಲೇಖವೂ ಶಾಸನದಲ್ಲಿ ಬರುತ್ತದೆ. ಅಡಿಕೆ ಸುಂಕವು ಅಡಿಕೆಯ ಮೇಲೆ ಹಾಕಿದ ತೆರಿಗೆ. ಹೀಗೆ ಹೊಯ್ಸಳ ಸಾಮ್ರಾಜ್ಯವು ಮೂಲಭೂತವಾಗಿ ಕೃಷಿ ಆರ್ಥಿಕ ರಚನೆಯನ್ನು ಉಳ್ಳದ್ದಾಗಿತ್ತು.

ಕೃಷಿಕ್ಷೇತ್ರದಲ್ಲಿ ವಾಣಿಜ್ಯ ಪ್ರಕ್ರಿಯೆ ಇದ್ದಿತೆನ್ನುವುದು ಪೂರ್ವಾರ್ಗತ್ಯವಾಗಿ ಆ ಕಾಲದ ಕೃಷಿ ವ್ಯವಸ್ಥೆಯಲ್ಲಿ ಮಾರಾಟಮಾಡಬಹುದಾದ ವಸ್ತುಗಳ ಹೆಚ್ಚುವರಿ ಅಥವಾ ಬಾಹುಳ್ಯ ಇದ್ದಿತೆಂಬುದನ್ನು ಸೂಚಿಸುತ್ತದೆ. ಹಾಗೆ ಹೆಚ್ಚುವರಿ ಇರದಿದ್ದರೆ ವಾಣಿಜ್ಯವನ್ನಾಗಲೀ, ಒಂದು ನಗರ ಕೇಂದ್ರದ ಉಗಮವನ್ನಾಗಲೀ ಯೋಚಿಸಲು ಸಾಧ್ಯವಿರಲಿಲ್ಲ.

ರಾಜ್ಯದೊಳಗಿನ ವ್ಯಾಪಾರಕೇಂದ್ರಗಳು ಕರಾವಳಿ ಪ್ರದೇಶದ ಮೂಲಕ ವಿದೇಶೀ ವರ್ತಕರೊಂದಿಗೆ ಸಂಬಂಧಪಟ್ಟಿರುತ್ತಿದ್ದವು. ೧೨ನೆಯ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯವು ಅಭೂತಪೂರ್ವ ರೀತಿಯಲ್ಲಿ ವಿಸ್ತಾರಗೊಂಡಿತು. ಅದೇ ಸಮಯಕ್ಕೆ ವಿದೇಶೀ ವರ್ತಕರ ಸಂಪರ್ಕವು ಅಧಿಕವಾಯಿತು. ೧೨ನೇ ಶತಮಾನದ ವಿದೇಶೀ ವರ್ತಕರು ಕರಾವಳಿ ಬಂದರುಗಳಿಗೆ ತಪ್ಪದೆ ಬರುತ್ತಿದ್ದರು.

ಕೆನರಾ ಕರಾವಳಿಯಲ್ಲಿ ಈ ವರ್ತಕರಿಗೆ ಬೇಕಾಗಿದ್ದ ವಸ್ತುಗಳ ಸ್ವರೂಪದಿಂದಾಗಿ ಅವರು ಒಳನಾಡಿನೊಂದಿಗೆ ಅಂದರೆ ಮಲೆನಾಡು ಹಾಗೂ ಮೈದಾನ ಪ್ರದೇಶದೊಂದಿಗೆ ನಿಕಟವಾದ ಸಂಪರ್ಕವನ್ನು ಇರಿಸಿಕೊಂಡು ಮುತ್ತುಗಳು, ಅಡಿಕೆ, ಸಾಂಬಾರ ವಸ್ತುಗಳು ಮತ್ತು ಹತ್ತಿ - ಇಂತಹ ಸ್ಥಳೀಯ ಉತ್ಪಾದಿತ ವಸ್ತುಗಳನ್ನು ಅಂತಾರಾಷ್ಟ್ರೀಯ ವಿನಿಮಯವುಳ್ಳ ಕರಾವಳಿ ಕೇಂದ್ರಗಳಿಗೆ ತಲುಪುವಂತೆ ಮಾಡಬೇಕಾಗಿತ್ತು. ಹೊಯ್ಸಳರ ಶಾಸನಗಳಿಂದ ಮಲೆನಾಡು ಮತ್ತು ಮೈದಾನದ ಒಳಭಾಗಗಳಲ್ಲಿ ಗಣನೀಯ ಪ್ರಮಾಣದ ವಾಣಿಜ್ಯ ಚಟುವಟಿಕೆ ಇರುತ್ತಿದ್ದುದು, ಸುವ್ಯವಸ್ಥಿತ ವಾಣಿಜ್ಯ ಜಾಲದಿಂದಾಗಿ ವಿದೇಶೀ ವರ್ತಕರ ಅಗತ್ಯ ವಸ್ತುಗಳು ಪೂರೈಕೆಯಾಗುತ್ತಿದ್ದುದು ವ್ಯಕ್ತವಾಗುತ್ತದೆ.

ಹೊಯ್ಸಳ ಸಾಮ್ರಾಜ್ಯದಲ್ಲಿ 'ನಾಡು' ಎಂಬ ಪ್ರತ್ಯೇಕ ಆಡಳಿತ ಘಟಕವಿರುತ್ತಿದ್ದುದನ್ನು ನೋಡುತ್ತೇವೆ. ನಾಡಿನ ಮುಖ್ಯಸ್ಥರು, ವರ್ತಕರು ಹೊಯ್ಸಳ ಪ್ರಭುತ್ವದ ಸಹಯೋಗದಿಂದ ಅನುಕೂಲವಾಗಿದ್ದ ಸ್ಥಳಗಳಲ್ಲಿ ಮಾರುಕಟ್ಟೆ ಕೇಂದ್ರಗಳನ್ನು ಸ್ಥಾಪಿಸುತ್ತಿದ್ದರು. ಪ್ರತಿಯೊಂದು ನಾಡಿನ ಪಟ್ಟಣಗಳು ಅಥವಾ ಮಾರುಕಟ್ಟೆ ಕೇಂದ್ರಗಳು ಐಯಾಹೊಳೆಯ ಐನೂರ್ವರು, ಸ್ವಾಮಿಗಳು, ನಾನಾ ದೇಶೀಗಳು, ದೇಶೀಗಳು, ಮುಮ್ಮರಿ ದಂಡಂಗಳು ಮತ್ತು ಬಣಜಿಗರು ಮುಂತಾದವರೊಂದಿಗೆ ಸಂಬಂಧವಿರಿಸಿಕೊಂಡಿದ್ದುದು ತಿಳಿದುಬರುತ್ತದೆ. ಅವರ ಚಟುವಟಿಕೆಗಳು ಸ್ಥಳೀಯ ನಾಡಿನ ವಣಿಕ ವರ್ಗದಿಂದ ಆಚೆಗೆ ವಿಸ್ತರಿಸಿದ್ದವು.

ಒಂದು ನಗರ ಕೇಂದ್ರದ ಅಭ್ಯುದಯವು ಸುತ್ತಮುತ್ತಣ ಗ್ರಾಮಗಳನ್ನು ಒಂದು ಸ್ಥಳೀಯ ವಿನಿಮಯ ಸಮುದಾಯವಾಗಿ ಮಾರುಕಟ್ಟೆ ಅಥವಾ ಪಟ್ಟಣದ ಜೊತೆ ಪರಸ್ಪರ ಒಂದುಗೂಡಿಸುವ ಸಾಮರ್ಥ್ಯವನ್ನು ಅವಲಂಬಿಸಿದ್ದಿತು. ಮುಖ್ಯವಾದ ವಾಣಿಜ್ಯ ಕೇಂದ್ರಗಳಲ್ಲಿ ವಿವಿಧ ಕುಶಲಕರ್ಮಿಗಳು, ವರ್ತಕರು ಅಥವಾ ಪಂಚವಳರು ಮತ್ತು ಸೆಟ್ಟಿಗಳು ತುಂಬಿರುತ್ತಿದ್ದರು. ಇವರು ಕೃಷಿಕೇಂದ್ರಿತ ವಲಯದಿಂದಾಚೆಗಿನ ಗ್ರಾಹಕರಿಗಾಗಿ ಬೆಲೆಬಾಳುವ ವಸ್ತುಗಳನ್ನು ಉತ್ಪಾದಿಸಿ ಹಳ್ಳಿಯ ಪೋಷಕ - ಗ್ರಾಹಕರ ಸಂಬಂಧವನ್ನು ಮೀರಿ ಬೆಳೆಯಲು ಅನುವಾಗುತ್ತಿದ್ದರು. ಸ್ಥಳೀಯವಾಗಿ ಈ ಪ್ರದೇಶಗಳು ಸ್ವಯಂಪೂರ್ಣವಾಗಿದ್ದರೂ, ಹೊರಗಿನ ಆರ್ಥಿಕ ಸಂಬಂಧಗಳು ವಾಣಿ[illegible] ಸ್ಥಳೀಯ ವ್ಯವಸ್ಥೆಗಳನ್ನು ಬಹುಪ್ರಾದೇಶೀಕ ಹಾಗೂ ಅಂತಾರಾಷ್ಟ್ರೀ[illegible] ಜಾಲ[illegible]ನ್ನಾಗಿ ಕೂಡ ಬೆಳೆಸುತ್ತಿ[illegible]

೧೧ ಹಾಗೂ ೧೨ನೆಯ ಶತಮಾನಗಳ ಕಾಲಾವಧಿಯಲ್ಲಿ ನಾವು ಸಂತೆಗಳ ಹಾಗೂ ಜಾತ್ರೆಗಳ ಉತ್ಕರ್ಷದ ಅವಧಿಯನ್ನು ಗಮನಿಸಿದರೆ ಆ ಅವಧಿಯಲ್ಲಿ ಗ್ರಾಮೀಣ ಮಾರುಕಟ್ಟೆಯ ಉಗಮವಾದುದನ್ನು, ಸ್ಥಳೀಯ ಜನತೆಯ ಜೀವನ ಮಟ್ಟದಲ್ಲಿ ಒಂದು ಬಗೆಯ ಬೆಳವಣಿಗೆಯನ್ನು ಗುರುತಿಸುತ್ತೇವೆ. ಈ ಪ್ರಕ್ರಿಯೆಯು ವಿಸ್ತಾರಗೊಳ್ಳುತ್ತಾ ಹಲವು ಗ್ರಾಮೀಣ ಮಾರುಕಟ್ಟೆಗಳು ಒಂದು ನಗರ ಕೇಂದ್ರಿತ ಮಾರುಕಟ್ಟೆಯೊಂದಿಗೆ ಸಂಬಂಧಿತಗೊಳ್ಳುವುದನ್ನು, ಆ ಮೂಲಕ ಅವು ಪ್ರಾಂತೀಯ ಹಾಗೂ ಅಂತರ್‌ದೇಶೀಯ ಮಾರುಕಟ್ಟೆಗಳೊಂದಿಗೆ ಸಂಯೋಜಿತಗೊಳ್ಳುವುದನ್ನು ೧೪ನೆ ಶತಮಾನದವರೆಗಿನ ಕಾಲಘಟ್ಟದಲ್ಲಿ ನಾವು ಗಮನಿಸುತ್ತೇವೆ. ಹೊಯ್ಸಳರ ಕಾಲಾವಧಿಯಲ್ಲಿನ ಈ ಬೆಳವಣಿಗೆಗಳು ಪ್ರಧಾನವಾಗಿ ಊಳಿಗಮಾನ್ಯ ಕೃಷಿ ಆಧಾರಿತವಾಗಿದ್ದ ಸಮಾಜವು ಒಂದು ಅರೆ ಊಳಿಗಮಾನ್ಯತೆ ಆಧಾರಿತ ವ್ಯಾಪಾರೀ ಹಿತಾಸಕ್ತಿಗಳ ಸಮಾಜವಾಗಿ ರೂಪುಗೊಳ್ಳಲು ಆರಂಭಿಕ ತಳಹದಿಯನ್ನು ನಿರ್ಮಿಸಿಕೊಳ್ಳತೊಡಗಿದ್ದುದನ್ನು ಸೂಚಿಸುತ್ತಿವೆ.

ರಾಷ್ಟ್ರೀಯತೆಯ ಮೊದಲ ಪಾಠಗಳನ್ನು ಬಂಡವಾಳಶಾಹಿಯು ಮಾರುಕಟ್ಟೆಯಲ್ಲಿ ಕಲಿತುಕೊಳ್ಳುತ್ತದೆ. ಹಳ್ಳಿಗಳು, ಹಲವು ಹಳ್ಳಿಗಳ ಗುಚ್ಛದಿಂದ ತಯಾರಾದ ಸಂತೆಗಳು, ಸಂತೆಗಳ ಸಂಯೋಜನೆಯಿಂದ ರೂಪುಗೊಂಡ ನಗರ ವಾಣಿಜ್ಯ ಕೇಂದ್ರಗಳು, ಆ ಮೂಲಕವಾಗಿ ಏರ್ಪಟ್ಟ ವಿದೇಶೀಯ ಹಾಗೂ ಅಂತರ್ದೇಶೀಯ ವಾಣಿಜ್ಯ ಸಂಬಂಧಗಳು ಮುಂತಾದ ಪ್ರಕ್ರಿಯೆಗಳ ಆರಂಭಿಕ ಹಂತವನ್ನು, ಅವುಗಳ ತಳಹದಿಯ ರಚನಾತ್ಮಕ ಹಂತವನ್ನು, ಈ ಹೊಯ್ಸಳ ಯುಗವೆಂದು ನಿರ್ದೇಶಿತವಾಗಿರುವ ಕಾಲಘಟ್ಟದಲ್ಲಿ ಗುರುತಿಸಬಹುದಾಗಿದೆ. ಸಂತೆಗಳು, ನಗರ ವಾಣಿಜ್ಯ ಕೇಂದ್ರಗಳು ಒಂದು ರಾಷ್ಟ್ರೀಯತಾಸಮುದಾಯದ ನಿರ್ಮಾಣಕ್ಕೆ ಯಾವಾಗಲೂ ತಳಪಾಯದ ಅಡಿಗಲ್ಲುಗಳಾಗಿ ಕಾರ್ಯ ನಿರ್ವಹಿಸುತ್ತವೆ. ಈ ಬಗೆಯ ವಹಿವಾಟಿನ ಮುಖಾಂತರವೇ ರಾಷ್ಟ್ರೀಯತೆಯ ಕಲ್ಪಿತ ಸಮುದಾಯವೊಂದು ತನ್ನ ಪರಸ್ಪರ ಸಂಬಂಧೀ ಭಾವನೆಯನ್ನು ರೂಢಿಸಿಕೊಳ್ಳುತ್ತದೆ. ಯಾಕೆಂದರೆ, ವಾಸ್ತವವಾಗಿ ಭೌತಿಕ ಸನ್ನಿವೇಶಗಳಲ್ಲಿ ಆ ರಾಷ್ಟ್ರೀಯತೆಗೆ ಸೇರಿದ ವಿವಿಧ ಪ್ರಾಂತ್ಯಗಳ ಜನರು ತಮ್ಮ ನಡುವೆ ಒಂದು ಪರಸ್ಪರಾವಲಂಬನೆಯನ್ನು, ವಾಣಿಜ್ಯ ಮತ್ತು ಸಾಂಸ್ಕೃತಿಕ ವಿನಿಮಯಗಳನ್ನು ಏರ್ಪಡಿಸಿಕೊಂಡು ಪರಸ್ಪರ ಸಂಬಂಧಿತರಾಗಿರುವ ಭಾವನೆಯೊಂದಕ್ಕೆ ನೆಲೆಯಾಗುತ್ತಾರೆ.

ಕೃಷಿ ಹಾಗೂ ವಾಣಿಜ್ಯ ವಹಿವಾಟಿನ ಚಟುವಟಿಕೆಗಳು ರಾಷ್ಟ್ರೀಯತಾ ಸಮುದಾಯವೊಂದರ ಆರ್ಥಿಕ ಚಟುವಟಿಕೆಗಳ ಸಂಯೋಜನೆಗೆ ಕಾರಣವಾಗುತ್ತವೆ. ಹೊಯ್ಸಳರ ಕಾಲದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ರವಾನೆಯಾಗುತ್ತಿದ್ದ ಭೂ ಉತ್ಪನ್ನಗಳ ವಾಣಿಜ್ಯ ವಿನಿಮಯ ಹಾಗೂ ತಮ್ಮ ಸರಕುಗಳನ್ನು ವಾಣಿಜ್ಯ ಕೇಂದ್ರವೊಂದರ ಮುಖಾಂತರ ಬೇರೆ ಸಮುದಾಯಗಳ ಅಗತ್ಯಗಳಿಗಾಗಿ

ಪೂರೈಸುತ್ತಿದ್ದ ಸರಕುಗಳ ವಿನಿಮಯ, ಆ ರಾಷ್ಟ್ರೀಯತೆಯ ಪರಸ್ಪರ ಸಂಯೋಜನೆಗೆ ತಕ್ಕ ತಳಹದಿಯನ್ನು ನಿರ್ಮಿಸತೊಡಗುತ್ತದೆ.

ಇದೇ ಮಧ್ಯಯುಗೀನ ಸಮಯದಲ್ಲಿ ಕರ್ನಾಟಕದ ರಾಜ್ಯಭಾರಗಳ ಪ್ರಕ್ರಿಯೆಯಲ್ಲಿ ಏರ್ಪಟ್ಟ ಸಾಮಂತೀಕರಣ ಪ್ರಕ್ರಿಯೆಯು, ಅಂದರೆ ೮ನೇ ಶತಮಾನದ ನಂತರ ಕರ್ನಾಟಕದಲ್ಲಿ ಮೂಡಿಬಂದ ಎರಡನೇ ಹಂತದ ಆಳುವ ವರ್ಗಗಳಿಗೆ ಹರಡಿದ ಊಳಿಗಮಾನ್ಯತೆಯ ಬಲಿಷ್ಠೀಕರಣ ಪ್ರಕ್ರಿಯೆಯು 'ಊಳಿಗ ಕೃಷಿ ಹಾಗೂ ಕೃಷಿಯಾಧಾರಿತ ವಾಣಿಜ್ಯ ಸರಕು ಉತ್ಪಾದನೆಯ ಪ್ರಕ್ರಿಯೆಯ ಮೂಲಕ ಮತ್ತಷ್ಟು ವಿಸ್ತೃತ ಹಂತಗಳಿಗೆ ತಲುಪಿ' ಕನ್ನಡ ಭಾಷಿಕ ಸಮುದಾಯದ ಸಾಮಾಜಿಕ ಸ್ತರಗಳ ಕೆಲವು ನಿರ್ದಿಷ್ಟ ಗುಂಪುಗಳು ಬಲಗೊಂಡಿದ್ದನ್ನು ಇದು ಸೂಚಿಸುತ್ತದೆ.

ಸಾಮಂತೀಕರಣ ಪ್ರಕ್ರಿಯೆಯೆಂಬುದು ಒಂದು ರಾಷ್ಟ್ರೀಯತೆಯ ಅಭಿವೃದ್ಧಿಯ ಗತಿಯಲ್ಲಿ ಒಂದು ಸಕಾರಾತ್ಮಕ ಪ್ರಕ್ರಿಯೆಯನ್ನು ಅದೇ ಸಮಯಕ್ಕೆ ಒಂದು ನಕಾರಾತ್ಮಕ ಪ್ರಕ್ರಿಯೆಯನ್ನು ಹುಟ್ಟುಹಾಕುತ್ತದೆ. ಸಾಮಂತ ವರ್ಗಗಳು ಒಂದು ನಿರ್ದಿಷ್ಟ ಪ್ರಾಂತ್ಯ ವ್ಯಾಪ್ತಿಯಲ್ಲಿ ತಾವು ಅಧೀನತೆಗೊಳಪಟ್ಟಿರುವ ಕೇಂದ್ರ ಪ್ರಭುತ್ವವೊಂದರಿಂದ, ಸಾಕಷ್ಟು ಭಿನ್ನವಾಗಿ, ಸ್ವತಂತ್ರವಾಗಿ ಕಾರ್ಯಾಚರಣೆಯಲ್ಲಿ ತೊಡಗುವುದರಿಂದ, ಆ ಪ್ರಾಂತ್ಯಗಳು ಉತ್ಪಾದಕ ಕ್ಷೇತ್ರಗಳಲ್ಲಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವೈಶಿಷ್ಟ್ಯಪೂರ್ಣ ಕ್ರಿಯಾಶೀಲತೆಗೆ ಸನ್ನದ್ಧವಾಗುತ್ತವೆ. ಅದೇ ಸಮಯದಲ್ಲಿ ಈ ಬಗೆಯ ಚಟುವಟಿಕೆಗಳು ಬಹಳ ಮಟ್ಟಿಗೆ ಪ್ರಾಂತೀಯ ಸೀಮಿತತೆಯನ್ನು ಒಳಗೊಂಡಿರುವುದರಿಂದ ಹಾಗೂ ಒಂದೇ ರಾಷ್ಟ್ರೀಯತೆಯ ಹಲವು ಪ್ರಾಂತ್ಯಗಳ ನಡುವೆ ಹಿತಾಸಕ್ತಿಯ ಘರ್ಷಣೆಗಳನ್ನು ಸೃಷ್ಟಿಸುವುದರಿಂದ, ಒಂದು ಹಂತದ ಸೀಮಿತತೆಯನ್ನು ಪಡೆದುಕೊಳ್ಳುತ್ತವೆ. ಹೀಗೆ ಸಾಮಂತೀಕರಣ ಪ್ರಕ್ರಿಯೆಯು ಮೊದಲ ಹಂತದಲ್ಲಿ ನಿರ್ದಿಷ್ಟ ಪ್ರಾಂತ್ಯಗಳ ಹಲವು ಬಗೆಯ ಚಟುವಟಿಕೆಗಳ ಕ್ರಿಯಾಶಾಲಿತ್ವಕ್ಕೆ ಹಾಗೂ ಅವುಗಳ ಸದೃಢೀಕರಣಕ್ಕೆ ಕಾರಣವಾಗುತ್ತದೆ. ಎರಡನೇ ಹಂತದಲ್ಲಿ ಪರಸ್ಪರ ಪ್ರಾಂತ್ಯಗಳ ಹಿತಾಸಕ್ತಿ ಹಾಗೂ ಆಧಿಪತ್ಯ ಸ್ಪರ್ಧೆಯ ತಿಕ್ಕಾಟಕ್ಕೆ ಬೀಳುವುದರಿಂದ, ಸಂಪನ್ಮೂಲಗಳ ಪೋಲಿಗೆ ಕಾರಣವಾಗಿ, ಮತ್ತಷ್ಟು ವಿಸ್ತೃತ ಬೆಳವಣಿಗೆಯ ಸಂಯೋಜನೆಗೆ ಅಡೆತಡೆಯಾಗುತ್ತದೆ.

ಈ ಸಾಮಂತೀಕರಣದ ಪ್ರಕ್ರಿಯೆಯನ್ನು ನಿರ್ದಿಷ್ಟ ಬಗೆಯ ಕೇಂದ್ರೀಯ ಸಂಯೋಜನೆಗೆ ಒಳಪಡಿಸುವ ಬೆಳವಣಿಗೆಗಳು ಒಂದು ರಾಷ್ಟ್ರೀಯತೆಯ ಸದೃಢೀಕರಣದಲ್ಲಿ ಮುಂದಿನ ಹಂತವನ್ನು ತರಲು ಅಗತ್ಯವಾಗುತ್ತವೆ. ಈ ಸಾಮಂತೀಕರಣದ ಪ್ರಕ್ರಿಯೆಗಳು ಕೆಳಮಟ್ಟದಲ್ಲಿ ತಂದ ಪರಿಣಾಮಗಳನ್ನು ಕ್ರೋಢೀಕರಿಸಿಕೊಂಡು ಅದನ್ನೊಂದು ರಾಷ್ಟ್ರೀಯತಾ ಸಮುದಾಯತ್ವದ ಬೆಳವಣಿಗೆಗೆ ಅನುಕೂಲಕರ ಸನ್ನಿವೇಶವನ್ನಾಗಿ ಮಾರ್ಪಡಿಸಲಿಕ್ಕೆ ಕೂಡ ಒಂದು ಕೇಂದ್ರೀಯ ಪ್ರಭುತ್ವದ ಅಗತ್ಯ ಈ ಹಂತದಲ್ಲಿ ಉಂಟಾಗುತ್ತದೆ.

ಹೊಯ್ಸಳ ಆಳ್ವಿಕೆಯ ಕಾಲಘಟ್ಟವು, ಆರಂಭಿಕ ಊಳಿಗಮಾನ್ಯತೆಯ ಕಾಲಘಟ್ಟದಿಂದ ಮಧ್ಯ ಊಳಿಗಮಾನ್ಯತೆಯ ಕಾಲಾವಧಿಗೆ ಸಮಾಜವನ್ನು ಸ್ಥಿತ್ಯಂತರಗೊಳಿಸಲು ಆಗತ್ಯವಾದ ಭೌತಿಕ ಸನ್ನಿವೇಶಗಳು ರೂಪುಗೊಳ್ಳ ತೊಡಗಿದ ರಚನಾತ್ಮಕ ಅವಧಿಯಾಗಿತ್ತು ಎಂಬುದನ್ನು ನಾವಿಲ್ಲಿ ಮುಖ್ಯವಾಗಿ ಗುರುತಿಸಿ ಕೊಳ್ಳಬೇಕಾಗಿದೆ.

ಅಡಿಟಿಪ್ಪಣಿಗಳು

1. ಡಾ. ಶ್ರೀನಿವಾಸ ರಿತ್ತಿ - ಸೇವುಣರು, ಕರ್ನಾಟಕ ಚರಿತ್ರೆ, ಸಂ. ೨, ಪು. ೯೦
2. ಡಾ. ಬಿ. ಉದಯ - ಪಾರಂಗಲ್ಲಿನ ಕಾಕತೀಯರು, ಕರ್ನಾಟಕ ಚರಿತ್ರೆ ಸಂ. ೨, ಪು. ೯೫.
3. ಪ್ರೊ. ಎಚ್. ವಿ. ಶ್ರೀನಿವಾಸ್ ಮೂರ್ತಿ- ಹೊಯ್ಸಳರು, ಕರ್ನಾಟಕ ಚರಿತ್ರೆ, ಸಂ. ೨, ಪುಟ ೧೦೫
4. ಪ್ರೊ. ಕೆ. ಎಸ್. ಶಿವಣ್ಣ - ಹೊಯ್ಸಳ ರಾಜ್ಯಾಡಳಿತ ಮತ್ತು ಆರ್ಥಿಕತೆ, ಕರ್ನಾಟಕ ಚರಿತ್ರೆ, ಸಂ. ೨, ಪು. ೧೩೭, ೧೩೮,
5. ಅದೇ ಪು. ೧೩೮
6. ಅದೇ ಪು. ೧೩೮
7. ಅದೇ ಪು. ೧೪೦
8. ಅದೇ ಪು. ೧೪೭

✤ ✤ ✤

ಅಧ್ಯಾಯ -೪

ವಿಜಯನಗರ ಹಾಗೂ ಬಹುಮನಿ ಸಾಮ್ರಾಜ್ಯಗಳ ಕಾಲಾವಧಿ ;

ವಾಣಿಜ್ಯ ಉತ್ಕರ್ಷ ಹಾಗೂ ವಸಾಹತುಶಾಹಿ ಲೂಟಿ ಆರಂಭ

ಕನ್ನಡ ರಾಷ್ಟ್ರೀಯತೆಯ ಸಮಾಜದಲ್ಲಿ ೮ನೇ ಶತಮಾನದಿಂದ ೧೪ನೇ ಶತಮಾನದವರೆಗೆ ಹರಡಿರುವ ಅವಧಿಯಲ್ಲಿ ಕೃಷಿಕ್ಷೇತ್ರದಲ್ಲಿ ಹಾಗೂ ಸರಳ ಸರಕು ಉತ್ಪಾದನೆಯಲ್ಲಿ ಏರ್ಪಡುತ್ತಾ ಬಂದ ಬೆಳವಣಿಗೆಗಳನ್ನು ಗಮನಿಸುತ್ತಾ ನಾವು ಬಂದಿದ್ದೇವೆ. ತನ್ನ ಉತ್ಪಾದಕ ಕ್ಷೇತ್ರಗಳನ್ನು , ಬೇರೆ ಬೇರೆ ಸಾಮಾಜಿಕ ವರ್ಗಗಳ ಕ್ರಿಯಾ ಶೀಲತೆಯನ್ನು ಹೆಚ್ಚಿಸುವ ವಿಧಾನದಲ್ಲಿ ಅಭಿವೃದ್ಧಿಪಡಿಸಿಕೊಳ್ಳುತ್ತಾ, ತನ್ನ ಭೌಗೋಳಿಕ ಮೇರೆಗಳ ನಡುವೆ ಸಂಯೋಜನೆಯನ್ನು ಸೃಷ್ಟಿಸಿಕೊಳ್ಳುತ್ತಾ, ಆದರಿಂದ ಭಾಷಾ ಸಮುದಾಯದ ಭಾವೈಕ್ಯತೆಯನ್ನು ಬಲಪಡಿಸಿಕೊಳ್ಳುತ್ತಾ ಹೇರಳ ಸಾಂಸ್ಕೃತಿಕ ನಿರ್ಮಿತಿಗಳಿಗೆ ಬೇಕಾದಂತಹ ಸಮೃದ್ಧಿಯನ್ನು ರೂಪಿಸಿಕೊಳ್ಳುತ್ತಾ, ಈ ಸಾಂಸ್ಕೃತಿಕಾಂಶ ಗಳ ಆಧಾರದಲ್ಲಿ ಇತರೆ ಸಮುದಾಯಗಳಿಗೆ ಹೋಲಿಸಿದರೆ ತನ್ನ ಅನನ್ಯತೆಯನ್ನು ರೂಢಿಸಿಕೊಳ್ಳುತ್ತಾ , ಅದನ್ನು ತನ್ನ ರಾಷ್ಟ್ರೀಯತಾಸಮುದಾಯದ ಪರಂಪರೆ ಯನ್ನಾಗಿ, ಹೆಮ್ಮೆಯನ್ನಾಗಿ ಅಳವಡಿಸಿಕೊಳ್ಳಲು ಅಗತ್ಯವಾದ ಸನ್ನಿವೇಶಗಳ ನಿರ್ಮಾಣವನ್ನು ಈ ಕಾಲಘಟ್ಟದುದ್ದಕ್ಕೂ ಕಾಣುತ್ತಾ ಬಂದಿದ್ದೇವೆ.

ರಾಷ್ಟ್ರೀಯತಾ ಸಮುದಾಯದ ವಿಕಾಸವೆಂಬುದು ಒಂದು ಸುದೀರ್ಘ ಸಾಮಾಜಿಕ ಪ್ರಕ್ರಿಯೆಯ ಫಲಿತಾಂಶ. ಆದು ಇದ್ದಕ್ಕಿದ್ದಂತೆ ಒಂದು ಕಾಲಘಟ್ಟದಲ್ಲಿ ತನ್ನನ್ನು ರಾಷ್ಟ್ರೀಯತೆಯ ಸ್ವರೂಪದಲ್ಲಿ, ಆ ಹೆಸರಿನಲ್ಲಿಯೇ ಪ್ರಕಟಪಡಿಸಿಕೊಳ್ಳಲು ಈ ಹಿಂದಿನ ಚಾರಿತ್ರಿಕ ಪ್ರಕ್ರಿಯೆ ಒತ್ತಾಸೆ ನೀಡುತ್ತದೆ. ರಾಷ್ಟ್ರತ್ವವೆಂಬ ಪರಿಕಲ್ಪನೆ ಇತರ ಎಲ್ಲ ಸಾಮಾಜಿಕ ಪ್ರಕ್ರಿಯೆಗಳಂತೆ ಒಂದು ಚಾರಿತ್ರಿಕ ಪ್ರಕ್ರಿಯೆ. ಒಂದು ಕಾ

ಘಟ್ಟದಲ್ಲಿ ಒಂದು ಸಮುದಾಯವು ತನ್ನನ್ನು ಆ ರೀತಿ ಗುರುತಿಸಿಕೊಳ್ಳಲು ಆರಂಭಿಸುತ್ತದೆ. ಅದನ್ನು ಉತ್ಪಾದಕ ಭಾಷೆಯಲ್ಲಿ ಹೇಳಬೇಕೆಂದರೆ ಬಹಳ ವಿಸ್ತಾರವಾದ ಶ್ರಮ ವಿಭಜನೆ ; ಅದು ಆ ರಾಷ್ಟ್ರೀಯತೆಯ ಪ್ರದೇಶದೊಳಗಿನ ವಿವಿಧ ಪ್ರಾಂತ್ಯಗಳ ನಡುವೆ, ವಿವಿಧ ಜನವರ್ಗಗಳ ನಡುವೆ ಏರ್ಪಡುವಂಥಾದ್ದು. ಅದನ್ನು ಸಂಘಟಿಸಲು ಬಂಡವಾಳಶಾಹಿಗಳ ಉತ್ಪಾದನಾ ಚಟುವಟಿಕೆ, ಅದರಿಂದ ರೂಪುಗೊಳ್ಳುವ ವಿಸ್ತೃತ ಸಾಮಾಜಿಕ ವಾಣಿಜ್ಯಕ ಒಡನಾಟಗಳು , ಸಾರಿಗೆ ಸಂಪರ್ಕದಲ್ಲಿ ತೀವ್ರಗತಿಯ ವ್ಯಾಪಕತೆ, ಭಾಷೆಯೊಂದರಲ್ಲಿ ಇವುಗಳನ್ನೆಲ್ಲಾ ನಿರ್ವಹಿಸಲು ಅಗತ್ಯವಿರುವಷ್ಟು ಕಸುವು - ಮುಂತಾದವುಗಳೆಲ್ಲ ಒದಗಿದೊಡನೆ, ಆ ರಾಷ್ಟ್ರೀಯತಾ ಸಮುದಾಯವು ತನ್ನನ್ನು ಮತ್ತಷ್ಟು ಸದೃಢೀಕರಿಸಿಕೊಳ್ಳುವ ಹಂಬಲದೊಡನೆ, ಒಂದು ರಾಷ್ಟ್ರತ್ವ ಆಧಾರಿತ ಪ್ರಭುತ್ವ ರಚನೆಯನ್ನು , ಅದಕ್ಕೊಂದು ಸಾರ್ವಭೌಮತ್ವವನ್ನು ಅಪೇಕ್ಷಿಸತೊಡಗುತ್ತದೆ.

ಒಂದು ಆರಂಭಿಕ ಊಳಿಗಮಾನ್ಯಸಮಾಜವು, ತನ್ನ ಸಂಪೂರ್ಣ ಗ್ರಾಮನೆಲೆ ಆಧಾರಿತ, 'ಉತ್ಪಾದನೆ ಹಾಗೂ ಅನುಭೋಗ' ಎಂದು ಸೂಚಿಸ ಬಹುದಾದ ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆ ಹಾಗೂ ಅದರಿಂದಾಗಿ ಸಣ್ಣ ಸಣ್ಣ ನೆಲೆಗಳಲ್ಲಿ ತನ್ನನ್ನು ಸ್ವಯಂ ಪೋಷಿಸಿಕೊಳ್ಳುತ್ತಿರುವ ಸಮಾಜವೊಂದರ ವಿಧಾನ, ಇವುಗಳ ನಡುವೆಯಿಂದ 'ಉತ್ಪಾದನೆ - ಅನುಭೋಗ ಹಾಗೂ ವಿನಿಮಯ' ಎಂಬ ವಿನ್ಯಾಸವುಳ್ಳ ಆರ್ಥಿಕತೆಯ ಕಡೆಗೆ ಚಲಿಸುತ್ತಾ, ಈ ವಿನಿಮಯದ ಅಂಶ ಬಲಗೊಳ್ಳಲು, ಉತ್ಪಾದಕತೆಯಲ್ಲಿ ಹೆಚ್ಚಳ ಉಂಟಾಗುವಂತೆ, ಒಂದು ಸಮಾಜದ ಉತ್ಪಾದನಾ ಸಂಬಂಧಗಳೊಳಗೆ ಮಾರ್ಪಾಟುಗಳನ್ನು ತಂದುಕೊಳ್ಳಲು, ಸಾಮಾಜಿಕ ಅಥವಾ ಧಾರ್ಮಿಕ ಆಕೃತಿಯ ಮುಖಾಂತರ ಪ್ರಕಟವಾಗುವ ಸಂಘರ್ಷಗಳಲ್ಲಿ ಪಾಲ್ಗೊಳ್ಳುತ್ತಾ, ಅದರಿಂದ ತನ್ನನ್ನು ಕ್ರಮೇಣ ಒಂದು ಹೆಚ್ಚು ಸಂಪತ್ ಸಮೃದ್ಧಿಯ ಅಂದರೆ ಊಳಿಗಮಾನ್ಯತೆಗಿಂತ ಭಿನ್ನ ಸಮಾಜವನ್ನಾಗಿ ರೂಪಿಸಿಕೊಳ್ಳುತ್ತದೆ.

ಈವರೆಗೆ ನಾವು ಗಮನಿಸಿದ ಕನ್ನಡ ಭಾಷಿಕ ಸಮುದಾಯದ ವಿಕಾಸದಲ್ಲಿ ಈ ಸ್ಥಿತ್ಯಂತರಕ್ಕಾಗಿ ನಡೆದ ಪ್ರಯತ್ನವನ್ನು ೧೨ನೆಯ ಶತಮಾನದ ಅವಧಿಯಲ್ಲಿ ಗಮನಿಸಿದ್ದೇವೆ. ಆ ಅವಧಿಯ ವಚನಕಾರರ ಆಂದೋಲನವು, ಒಂದು ಸರಕು ಉತ್ಪಾದನೆಯ ಚಟುವಟಿಕೆಗಳಲ್ಲಿ ಹೆಚ್ಚು ಸ್ವತಂತ್ರವಾಗಿ, ಹೆಚ್ಚೆಚ್ಚು ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕೆಂಬ ಆಶಯದಿಂದ, ಸ್ವತಃ ತಮ್ಮನ್ನು ತಾವು ಕಾಯಕದ ಆಧಾರದ ಮೇಲೆ ಸಮಾನರೆಂಬಂತೆ ಭಾವಿಸಿಕೊಂಡು, ಆವರೆಗೆ ಅಸ್ತಿತ್ವದಲ್ಲಿದ್ದ ಜಾತಿಭೇದ, ಹೆಣ್ಣು ಗಂಡಿನ ತಾರತಮ್ಯ, ಒಡೆಯ ಹಾಗೂ ಅಧೀನತೆ ಮುಂತಾದವನ್ನು ಮೀರಿ ತಮ್ಮ ಕಾಯಕವನ್ನು ಒಂದು ಉನ್ನತ ಮೌಲ್ಯವನ್ನಾಗಿ ಭಾವಿಸಿಕೊಂಡಿದ್ದುದು ಹೇಗೆ ಒಂದು ಸಮಾಜದೊಳಗಿನ ಚಾರಿತ್ರಿಕ ಸನ್ನಿವೇಶದ ಪ್ರತಿಫಲನವಾಗಿತ್ತು ಎಂಬುದನ್ನು ಈಗಾಗಲೇ ಪ್ರಸ್ತಾಪಿಸಿದ್ದೇವೆ.

ವಚನಕಾರರ ಚಳುವಳಿ ಎನ್ನುವುದು ಕಲ್ಯಾಣದ ಕ್ರಾಂತಿಯಲ್ಲಿ ತನ್ನನ್ನು ಪ್ರಕಟಪಡಿಸಿಕೊಂಡಿದ್ದು, ಒಂದು ಸುದೀರ್ಘ ಸಾಮಾಜಿಕ ಪ್ರಕ್ರಿಯೆಯ ಉಜ್ವಲ ಉದ್ಘಾಟನೆಯಾಗಿತ್ತು. ಆ ಆಂದೋಲನದ ನಂತರ ಕನ್ನಡ ಭಾಷಿಕ ಸಮುದಾಯ ದೊಳಗೆ ಕಂಡುಬಂದ ಉತ್ಪಾದನಾ ಸಂಬಂಧಗಳ ನಡುವಿನ ಬದಲಾವಣೆಯ ಪ್ರವೃತ್ತಿ ಏನಾಗಿತ್ತೆಂಬುದನ್ನು ನಾವು ಈ ಕೆಲವು ಅಂಶಗಳ ಮುಖಾಂತರ ಸ್ಪಷ್ಟಪಡಿಸಿಕೊಳ್ಳ ಬಹುದು. ಸಾಕಿ ಅದನ್ನು ಹೀಗೆ ಸೂಚಿಸುತ್ತಾರೆ : '' ಈ ಬದಲಾವಣೆಗಳನ್ನು ನಿಶ್ಚಿತವಾಗಿ ಗುರುತುಮಾಡಿ ತೋರಿಸುವುದು ಕಷ್ಟವಾದರೂ ಬದಲಾವಣೆಗಳ ಧೋರಣಾತ್ಮಕ ಪ್ರವೃತ್ತಿಯಲ್ಲಿ ಒಟ್ಟಾರೆಯಾಗಿ ಬಂದ ತಿರುವುಗಳನ್ನು ಸಾಮಾನ್ಯೀಕರಿಸಿ ನೋಡಲು ನಾವು ಹಿಂದೆಗೆಯಬೇಕಾಗಿಲ್ಲ''.

''ಮೊದಲನೆಯದಾಗಿ, ಕಸುಬುದಾರ ಉತ್ಪಾದಕರ ಒಂದು ವಿಭಾಗವು ಮಾರುಕಟ್ಟೆಯಲ್ಲಿ ಪಾಲ್ಗೊಳ್ಳಲು ಸ್ವಾತಂತ್ರ್ಯವನ್ನು ಪಡೆದುಕೊಂಡಿತು. ಮಠಗಳು ಮತ್ತು ಭೂಮಾಲೀಕರು ಅವರನ್ನು ಊಳಿಗದಲ್ಲಿಟ್ಟುಕೊಳ್ಳುವ ಹಕ್ಕುಗಳನ್ನು ಕಳೆದುಕೊಂಡರು.

ಎರಡನೆಯದಾಗಿ, ಮಠಗಳಿಗೆ ಒಕ್ಕಲಾಗಿ ಬಂಧಿಸಲ್ಪಟ್ಟಿದ್ದ ಗೇಣಿದಾರರು ತಮ್ಮ ಜೀತದಿಂದ ಬಿಡುಗಡೆ ಪಡೆದರು. ಆಗ ಉತ್ತರ ಹಾಗೂ ಮಧ್ಯ ಕರ್ನಾಟಕದ ಲ್ಲಿದ್ದ ಬಹುಪಾಲು ಮಠಗಳು ಕಾಳಾಮುಖ ಪಂಥದಿಂದ ವೀರಶೈವ ಪಂಥಕ್ಕೆ ಸಾಮೂಹಿಕವಾಗಿ ಮತಾಂತರಗೊಂಡವಾದ್ದರಿಂದ, ಹಳೆಯ ಮಠಗಳೊಂದಿಗೆ ಹೊಂದಿದ್ದ ಗೇಣಿಜೀತವನ್ನು ಅವರು ಬಯಸಿದಾಗ ಬದಲಾಯಿಸಲು ಅವಕಾಶ ಒದಗಿತು. ಈ ಹಿಂದಿನ ಜೀತದ ಗೇಣಿದಾರಿಕೆಯ ಬದಲಾಗಿ ಒಂದು ಸ್ವತಂತ್ರ ಗೇಣಿದಾರರ ವರ್ಗವು ಅಸ್ತಿತ್ವಕ್ಕೆ ಬಂದಿತು.

ಮೂರನೆಯದಾಗಿ, ಜಮೀನ್ದಾರಿಕೆ ಹಾಗೂ ಅಗ್ರಹಾರಗಳ ಭೂಒಡೆಯರಿಗೆ ಸಲ್ಲಿಸಬೇಕಾಗಿದ್ದ ಬಿಟ್ಟಿ ಚಾಕರಿಯಿಂದ ಬಿಡುಗಡೆ. ತಮ್ಮನ್ನು ತಮ್ಮ ಭೂಮಿಯಿಂದ ಹೊರದೂಡಿ ಬಿಟ್ಟಿ ಚಾಕರಿಯ ಆಳುಗಳಾಗಿ ನಡೆಸಿಕೊಳ್ಳುತ್ತಿದ್ದ ಮಠಮಾನ್ಯಗಳ ಬಲಾತ್ಕಾರದ ದುಡಿಮೆಯಿಂದ ರೈತರು ಬಿಡುಗಡೆ ಹೊಂದಿದರು''. [1]

''ಉತ್ಪಾದನಾ ಸಂಬಂಧಗಳಲ್ಲಿ ಈ ಬಗೆಯ ಹೊಸ ಪ್ರವೃತ್ತಿಗಳ ನೆಲೆ ಗೊಳ್ಳುವಿಕೆ ಆಗ ಉಗಮವಾಯಿತು. ಉತ್ಪಾದನಾ ಸಾಧನಗಳ ವಿಷಯದಲ್ಲೂ ಸರಕು ಉತ್ಪಾದನೆಯನ್ನು ಹೆಚ್ಚಿಸಲು ಅನುಗುಣವಾಗುವಂತಹ ಬದಲಾವಣೆಗಳು ಬಂದವು. ಈ ಹಿಂದಿದ್ದ ಉತ್ಪಾದನಾ ಸಾಧನಗಳಿಗೆ ಹೋಲಿಸಿದರೆ ಉತ್ಪಾದಕತೆಯಲ್ಲಿ ಎಷ್ಟೋ ಹೆಚ್ಚು ಸಾಮರ್ಥ್ಯವಿದ್ದ ಹೊಸ ಸಾಧನಗಳು ರೂಪುಗೊಳ್ಳತೊಡಗಿದ್ದವು''[2]

''ಈ ಹಿಂದೆ ಕಾಳಾಮುಖ ಬ್ರಾಹ್ಮಣರ ನಿಯಂತ್ರಣದಲ್ಲಿದ್ದ ಐಯಾಹೊಳೆ ಐನೂರ್ವರ ಶ್ರೇಣಿಯು ಈಗ ವೀರಶೈವ ವರ್ತಕರ ನಿಯಂತ್ರಣಕ್ಕೆ ಬಂದಿತು. ಇದು

ಸರಕು ಉತ್ಪಾದನೆಯ ಹೊಸ ರಭಸಕ್ಕೆ ಒಂದು ಚಾಲಕಯಂತ್ರವಾಗಿ ಕಾರ್ಯ ನಿರ್ವಹಿಸಿತು''.[3]

''ಐಯಾಹೊಳೆ ಐನೂರ್ವರ ಶ್ರೇಣಿಯು ವೀರಶೈವ ಪ್ರಭಾವಕ್ಕೆ ಒಳಗಾದೊಡನೆ ಅದರ ಹಿಂದಿದ್ದ ಏಕಸ್ವಾಮ್ಯವು ಪತನವಾಗಿ ವಾಣಿಜ್ಯ ಚಟುವಟಿಕೆಗಳ ನಿಯಂತ್ರಣವು ವೀರಬಣಜಿಗರ ಕೈಗೆ ಬಂದಿತು. ಈ ಸಮುದಾಯವು ಕರ್ನಾಟಕದ ಬಲಿಷ್ಠ ವಣಿಕ ಸಮುದಾಯವಾಗಿ ರೂಪುಗೊಂಡಿತು. ಈ ವೀರಬಣಜಿಗ ಸಮುದಾಯವು ಆಗ ಹೊಯ್ಸಳ ಆಳ್ವಿಕೆಯಲ್ಲಿದ್ದ ದಕ್ಷಿಣ ಕರ್ನಾಟಕದ ಕಾವೇರಿ - ಕಬಿನಿ ನದೀ ಪ್ರಾಂತ್ಯಗಳಲ್ಲೂ ವಾಣಿಜ್ಯ ಚಟುವಟಿಕೆಗಳನ್ನು ಪ್ರೋತ್ಸಾಹಿಸಿತು''.[4]

''ವಾಣಿಜ್ಯ ಚಟುವಟಿಕೆಗಳ ಹಾಗೂ ಸರಕು ಉತ್ಪಾದನೆಯ ಈ ಬೆಳವಣಿಗೆಯ ಜೊತೆ ಸಮಾಜದಲ್ಲಿ ಎಡಗೈ ಹಾಗೂ ಬಲಗೈ ಎಂಬ ಶ್ರೇಣೀಕರಣವು ಪ್ರಚಲಿತ ಗೊಂಡಿತು. ಇದು ಉತ್ಪಾದನೆ ಹಾಗೂ ವಾಣಿಜ್ಯ ಎಂದು ಉಂಟಾಗಿದ್ದ ಜನ ವಿಭಾಗಗಳ ಚಟುವಟಿಕೆಗಳನ್ನು ನಿರ್ವಹಿಸಲು ಏರ್ಪಟ್ಟಿದ್ದ ಯುರೋಪಿನ ಗಿಲ್ಡ್ ಮಾದರಿಯ ಶ್ರೇಣೀಕರಣವಾಗಿತ್ತು.''[5]

ಸರಕು ಉತ್ಪಾದನೆ ಎಂಬ ಪ್ರಕ್ರಿಯೆಯು ಒಟ್ಟಾರೆಯಾಗಿ ಊಳಿಗಮಾನ್ಯತೆಯ ವಿರುದ್ಧ ನಿರ್ದೇಶಿತವಾದ ಬೆಳವಣಿಗೆಯಾಗಿದ್ದಾಗಲೇ, ಆ ಚಟುವಟಿಕೆಯೊಳಗೆ ಸರಕು ಉತ್ಪಾದಕರು ಹಾಗೂ ಅದರ ವಿನಿಮಯದಾರರು ಎಂಬ ಎರಡು ವರ್ಗಗಳ ನಡುವೆಯೂ ವೈರುಧ್ಯಗಳನ್ನು ಉಂಟುಮಾಡುತ್ತದೆ. ಇದರಲ್ಲಿ ತಮ್ಮ ಪರಸ್ಪರ ಹಿತಾಸಕ್ತಿ ರಕ್ಷಣೆಗಾಗಿ ಜಾತಿ ಸಂಬಂಧೀ ಸೌಹಾರ್ದತೆಗಳಾಚೆ, ತಮ್ಮ ಉತ್ಪಾದಕ ಚಟುವಟಿಕೆಯ ಆಧಾರದಲ್ಲಿ ವರ್ಗ-ಸೌಹಾರ್ದತೆಯಾಗಿ ಮಾರ್ಪಡುತ್ತಿರುವ ಸಾಮಾಜಿಕ ಸಂಬಂಧಗಳನ್ನು ಗುರುತಿಸಬಹುದಾಗಿದೆ.

ಬಲಗೈ ಎಂಬ ಶ್ರೇಣೀಕರಣವು ವಾಣಿಜ್ಯದಲ್ಲಿ ತೊಡಗಿದ್ದ ಹಲವಾರು ವರ್ತಕ ಜಾತಿಗಳನ್ನು ಹಾಗೂ ಅವುಗಳ ಸೇವೆಯಲ್ಲಿ ನಿರತವಾಗಿದ್ದ ಇತರ ಕೆಲವು ಜಾತಿಗಳನ್ನು ಒಳಗೊಂಡಿದ್ದ ಶ್ರೇಣಿಯಾಗಿತ್ತು. ಯಾವಾಗ ವಾಣಿಜ್ಯದ ಈ ಸಮುದಾಯವು ತನ್ನ ಊಳಿಗಮಾನ್ಯ ಜಾತಿ ಎಲ್ಲೆಗಳಾಚೆಗಿನ ಸೌಹಾರ್ದತೆಯನ್ನು ರೂಢಿಸಿಕೊಳ್ಳ ತೊಡಗಿತೋ, ಅದಕ್ಕೆ ಸಮಾನಾಂತರ ಪ್ರಕ್ರಿಯೆಯಾಗಿ, ಈ ಸಾಮಾಜಿಕ ಸನ್ನಿವೇಶದ ಮತ್ತೊಂದು ಪಂಗಡವಾದ ಸರಕು ಉತ್ಪಾದಕರ ಸಮುದಾಯವು ತನ್ನನ್ನು ತಾನು ಮತ್ತೊಂದು ಶ್ರೇಣಿಯಾಗಿ, ಉತ್ಪಾದಕ ಚಟುವಟಿಕೆಯ ಸೌಹಾರ್ದತೆ ಆಧಾರದಲ್ಲಿ, ಜಾತಿ ಎಲ್ಲೆಗಳಾಚೆ ರೂಪಿಸಿಕೊಂಡಿತು. ಇದು ಎಡಗೈ ಶ್ರೇಣಿಯಾಯಿತು.

ಊಳಿಗಮಾನ್ಯ ಸಮಾಜದೊಳಗಡೆ ಉತ್ಪಾದನೆಯ ಹೊಸ ಸನ್ನಿವೇಶಗಳು ಹೇಗೆ ಹೊಸ ಸಾಮಾಜಿಕ ಸಂಬಂಧಗಳ ವಿನ್ಯಾಸದಲ್ಲಿ ಪ್ರಕಟಗೊಳ್ಳುತ್ತವೆ ಎಂಬುದಕ್ಕೆ ಕರ್ನಾಟಕದ ಚಾರಿತ್ರಿಕ ವಿಕಾಸದಲ್ಲಿ ಉಂಟಾದ ಈ ಎಡಗೈ ಬಲಗೈ ಶ್ರೇಣೀಕರಣ ಒಂದು ಒಳ್ಳೆಯ ಉದಾಹರಣೆ. ಉತ್ಪಾದಕರ ಹಾಗೂ ವಿನಿಮಯದಾರರ ನಡುವೆ

ಇರುವ ಅಂತರ್ಗತ ವೈರುಧ್ಯವೇ ಎಡಗೈ ಬಲಗೈ ಗಳ ನಡುವಿನ ಆರಂಭಿಕ ಅವಸ್ಥೆಯ ವರ್ಗ ಸ್ಪರ್ಧೆ ಹಾಗೂ ಸಂಘರ್ಷವಾಗಿ ಮಾರ್ಪಟ್ಟಿತು. ಈ ಬಗೆಯ ವಿಂಗಡೀಕರಣ, ತೀವ್ರಗೊಳ್ಳುತ್ತಿದ್ದ ಸರಕು ಉತ್ಪಾದನಾ ಚಟುವಟಿಕೆಗಳಿಗೆ ಬಹಳ ಅಗತ್ಯವಾದ ಒಂದು ಸಾಮಾಜಿಕ ಏರ್ಪಾಟಾಗಿತ್ತು. ಅದು ಕರ್ನಾಟಕದ ಜನಸಮುದಾಯದಲ್ಲಿ ಜಾತಿಗಳ ನಡುವೆಯಿಂದಲೇ, ಹೊಸ ಸಾಮಾಜಿಕ ಸಂಬಂಧದ ಸತ್ವಾಂಶವುಳ್ಳ, ಜ್ಞಾತಿಗಳು ಉತ್ಪಾದನಾ ಸಂಬಂಧಾಧಾರಿತ ವರ್ಗ ಸಮೂಹಗಳಾಗುವುದರ ಕಡೆಗೆ ಏರ್ಪಡ ತೊಡಗಿದ್ದ ಬದಲಾವಣೆಗಳನ್ನು ಸೂಚಿಸುತ್ತದೆ. ಎಡಗೈ ಬಲಗೈ ಶ್ರೇಣೀಕರಣದಲ್ಲಿ ಸಾಂಸ್ಕೃತಿಕಾಂಶಗಳ ವಿಶಿಷ್ಟೀಕರಣವು ಏರ್ಪಟ್ಟಿದ್ದು ಅದು ಆ ಶ್ರೇಣೀಕರಣಕ್ಕೆ ಒಂದು ಸ್ಥಿರತ್ವವನ್ನು ಒದಗಿಸತೊಡಗಿತ್ತು.

ಒಟ್ಟಾರೆ ಈ ಬಗೆಯ ಸಾಮಾಜಿಕ ಹಿನ್ನೆಲೆಯೊಳಗೆ ರೂಪುಗೊಂಡ ಸರಕು ಉತ್ಪಾದನೆಯ ಚಟುವಟಿಕೆಗಳು, ಹೊಯ್ಸಳ ಕಾಲಾವಧಿಯಲ್ಲಿ ಹೇಗೆ ವಿಸ್ತರಿಸಲ್ಪಟ್ಟು, ಕೆಲವು ವಾಣಿಜ್ಯ ಕೇಂದ್ರಗಳ, ಪುರ ಹಾಗೂ ಪಟ್ಟಣಗಳ ರೂಪುಗೊಳ್ಳುವಿಕೆಗೆ ಕಾರಣವಾದವು ಎಂಬುದನ್ನು ನಾವು ಗಮನಿಸಿದ್ದೇವೆ. ಈ ವಾಣಿಜ್ಯ ಚಟುವಟಿಕೆಗಳ ಪ್ರಾಬಲ್ಯವು ವಿಜಯನಗರ ಸಾಮ್ರಾಜ್ಯದ ಕಾಲಾವಧಿಯ ಹೊತ್ತಿಗೆ ಬಹಳ ವ್ಯಾಪಕ ಪ್ರಮಾಣವನ್ನು ತಲುಪಿತ್ತು. ಆ ಸಮಯದಲ್ಲಿ ಈ ಚಟುವಟಿಕೆಗಳ ವ್ಯಾಪಕತೆಯು, ವಾಣಿಜ್ಯ ಚಟುವಟಿಕೆಗಳ ಭರಾಟೆಯು ಬಹಳ ದೊಡ್ಡ ಸಾಮ್ರಾಜ್ಯಗಳ ರಚನೆಗೆ ತಕ್ಕುದಾದ ಸನ್ನಿವೇಶವನ್ನು ನಿರ್ಮಿಸಿದ್ದವು.

ವಿಜಯನಗರಸಾಮ್ರಾಜ್ಯದ ಕಾಲಾವಧಿಯಾದ ೧೪ರಿಂದ ೧೬ನೇ ಶತಮಾನದ ವರೆಗೂ ಕಂಡುಬಂದ ಕೆಲವು ಮುಖ್ಯ ವಿದ್ಯಮಾನಗಳನ್ನು ನಾವು ಈಗ ಪರಿಶೀಲಿಸೋಣ.

ಹೆಚ್ಚೂ ಕಡಿಮೆ ವಿಜಯನಗರದ ಕಾಲಾವಧಿಗೆ ಸೇರಿದವನೆಂದು ನಿರ್ಣಯಿಸಬಹುದಾದ ಕವಿ ಸರ್ವಜ್ಞ ''ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟಿ ನಡೆದುದಲ್ಲದೆ, ದೇಶದಾಟವೆ ಕೆಡುಗು ಸರ್ವಜ್ಞ'' ಎನ್ನುತ್ತಾನೆ. ಆಗಿನ ಸಮಾಜದಲ್ಲಿ ಅತ್ಯಂತ ಹೆಚ್ಚು ವಾಣಿಜ್ಯ ಸರಕು ಉತ್ಪಾದನೆ ಉಂಟಾಗುತ್ತಿದ್ದುದು ಕೃಷಿ ಕ್ಷೇತ್ರದಿಂದಲೇ. ಹತ್ತನೆಯ ಶತಮಾನದಿಂದಲೇ ಸದೃಢೀಕರಣಗೊಳ್ಳತೊಡಗಿದ್ದ ಕೃಷಿ ಸರಕು ಉತ್ಪಾದನೆ ಹಾಗೂ ಅದರ ಹೆಚ್ಚಳವು ಮುಂದುವರಿಯುತ್ತಲೇ ಬಂದು, ವಿಜಯನಗರದ ಕಾಲಾವಧಿಯ ಹೊತ್ತಿಗೆ ಪರಾಕಾಷ್ಠೆಗೆ ಮುಟ್ಟಿತ್ತು. ಭಾರತದ ಎಷ್ಟೋ ಬೇರೆ ಕೆಲವು ಭಾಗಗಳಿಂದ ಸುಧಾರಿತವಾದ ಕೃಷಿ ಉಪಕರಣಗಳು ಇಲ್ಲಿ ಬಳಕೆಯಲ್ಲಿದ್ದವು. ಆಗ ಬಳಕೆಯಲ್ಲಿದ್ದ ಬಿತ್ತನೆ ಕೂರಿಗೆಯ ಬಗ್ಗೆ ಬಾರ್ಬೋಸಾ ಹೀಗೆ ಹೇಳುತ್ತಾನೆ :

''ನೇಗಿಲು ಗುಳದಲ್ಲಿ ಒಂದು ತೂತಿದೆ, ಅದರಲ್ಲಿ ಭತ್ತವನ್ನು ತುಂಬಲಾಗುತ್ತದೆ. ನೆಲವನ್ನು ನೀರು ಹಾಯಿಸಿ ಹದಗೊಳಿಸಿದ ಮೇಲೆ ನೇಗಿಲು ಗುಳವು ಉಳುತ್ತಲೇ

ಭತ್ತವು ಒಂದೊಂದಾಗಿ ಕೆಳಗಿಳಿದು ಮಣ್ಣಿನಲ್ಲಿ ಹುದುಗಿಕೊಳ್ಳುತ್ತದೆ. ಉತ್ತರ ಭಾರತದ ಕೆಲವು ಭಾಗಗಳಲ್ಲಿ ಪುರಾತನ ಕೂರಿಗೆಯಿಂದ ಬಿತ್ತುತ್ತಿದ್ದಾಗ ನೇಗಿಲುಗುಳದ ಕೂರಿಗೆಯಿಂದ ಬಿತ್ತುತ್ತಿದ್ದುದು ನಿಜವಾಗಿಯೂ ಪ್ರಶಂಸನೀಯವಾದುದು''.[6]

ಈ ಬಗೆಯಲ್ಲಿ ಮುಂದೆ ನಡೆದಿದ್ದ ಕನ್ನಡ ಸಮುದಾಯಗಳ ಕೃಷಿಯು, ಪ್ರತಿ ಪ್ರಾಂತ್ಯದಲ್ಲಿಯೂ ಅದರದರ ಹವಾಗುಣ, ನೆಲದ ಗುಣ ಇತ್ಯಾದಿಗಳ ಅನುಸಾರವಾಗಿ ಕೆಲವೊಂದು ನಿರ್ದಿಷ್ಟ ಬಗೆಯ ಬೆಳೆಗಳ ಉತ್ಪಾದನೆಯಲ್ಲಿ ಪ್ರಧಾನ ಪ್ರಾಶಸ್ತ್ಯವನ್ನು ಗಳಿಸಿಕೊಂಡಿತ್ತು.

ಉತ್ತರ ಮತ್ತು ದಕ್ಷಿಣ ಕನ್ನಡ, ಮಲೆನಾಡು ಮತ್ತು ಮೈಸೂರು ಪ್ರಾಂತ್ಯ, ಇವು ಭತ್ತ ಬೆಳೆಯುವ ಮುಖ್ಯ ಕೇಂದ್ರಗಳಾಗಿದ್ದವು. ಕರ್ನಾಟಕದ ಪಶ್ಚಿಮ ಕರಾವಳಿಯು ಸಾಂಬಾರ ವಸ್ತುಗಳ, ಮುಖ್ಯವಾಗಿ ಮೆಣಸು ಹಾಗೂ ಏಲಕ್ಕಿಗಳ ಉತ್ಪಾದನೆಯ ಪ್ರದೇಶವಾಗಿ, ಅದರ ಬಹುಭಾಗವು ಹೊರದೇಶಗಳಿಗೆ ರಫ್ತಾಗುತ್ತಿದ್ದಿತು. ಭತ್ತವನ್ನು ಸ್ಥಳೀಯ ಉಪಯೋಗಕ್ಕೆ ಮಾತ್ರವಲ್ಲದೆ ವಿದೇಶದಿಂದ ಬರುವ ಬೇಡಿಕೆಗಳನ್ನು ಕೂಡ ಪೂರೈಸಲು ಉತ್ಪಾದಿಸುತ್ತಿದ್ದರು.

ಕೋಲಾರವು ಕರ್ನಾಟಕದ ಒಣಪ್ರದೇಶಗಳಲ್ಲೊಂದಾದರೂ ಗದ್ದೆ, ಹೊಲ ಮತ್ತು ತೋಟದ ಬೆಳೆಗಳನ್ನು ಅಲ್ಲಿ ಬೆಳೆಯಲಾಗುತ್ತಿತ್ತು. ಬಹುಶಃ ತೆಂಗು ಮುಳಬಾಗಿಲು ಮತ್ತು ಗೌರೀಬಿದನೂರು ತಾಲ್ಲೂಕುಗಳಲ್ಲೂ, ಅಡಿಕೆಯು ಗೌರೀಬಿದನೂರು ಪ್ರದೇಶಗಳಲ್ಲೂ ಮುಖ್ಯವಾಗಿ ಬೆಳೆಯುತ್ತಿದ್ದವು. ಇಲ್ಲಿನ ವ್ಯವಸಾಯೋತ್ಪನ್ನಗಳು ಬೆಂಗಳೂರು ಜಿಲ್ಲೆಯ ಉತ್ಪನ್ನಗಳಿಗೆ ಸಮವಾಗಿಯೇ ಇದ್ದರೂ, ಹೆಚ್ಚು ಸಂಖ್ಯೆಯ ಕೆರೆಗಳಿದ್ದುದರಿಂದ ಇಲ್ಲಿ ಗದ್ದೆ ಮತ್ತು ತೋಟದ ಬೇಸಾಯ ಅಧಿಕ ಪ್ರಮಾಣದಲ್ಲಿದ್ದುದನ್ನು ಶಾಸನಗಳು ಹೇಳುತ್ತವೆ.

ಕೋಲಾರ ಜಿಲ್ಲೆಯಲ್ಲಿ ಹೊಲಗಳಲ್ಲಿ ರಾಗಿಯನ್ನು ಬಿತ್ತುತ್ತಿದ್ದರು. ಕೆರೆಗಳಿರುವ ಕಡೆಗಳಲ್ಲಿ ಅಡಿಕೆ, ತೆಂಗು ಮೊದಲಾದ ತೋಟದ ಬೆಳೆಗಳನ್ನು ನಿರ್ವಹಿಸುತ್ತಿದ್ದರು. ಈ ಜಿಲ್ಲೆಯಲ್ಲಿ ಈಗಿರುವಂತೆಯೇ ಒಣಬೆಳೆಗಳು ಕೃಷಿ ಉತ್ಪನ್ನಗಳ ಮುಖ್ಯ ಭಾಗವಾಗಿದ್ದವು. ಅವು ರಾಗಿ ಮತ್ತು ಜೋಳ.

ಶಿವಮೊಗ್ಗ ಜಿಲ್ಲೆಯು ಹೊಲ ಮತ್ತು ಗದ್ದೆ ಬೆಳೆಗಳೆರಡೂ ಬೆಳೆಯುತ್ತಿದ್ದವು. ಅಲ್ಲಿನ ವಾಯುಗುಣವು ಎರಡು ಬೆಳೆಗಳಿಗೂ ಹಿತಕರವಾಗಿತ್ತು. ಭತ್ತ ಜಿಲ್ಲೆಯ ಮುಖ್ಯ ಬೆಳೆಯಾಗಿದ್ದು ಕೆರೆಗಳ ಆಶ್ರಯದಲ್ಲಿ ಬೆಳೆಯುತ್ತಿತ್ತು. ಅಡಿಕೆ ಬೆಳೆಗೆ ಜಿಲ್ಲೆಯು ಇಂದಿಗೂ ಪ್ರಸಿದ್ಧವಾಗಿದೆ. ಅದು ಒಂದು ಮುಖ್ಯವಾದ ಬೆಳೆಯಾಗಿತ್ತೆಂದು ಶಾಸನಗಳು ಪದೇ ಪದೇ ಉಲ್ಲೇಖಿಸುತ್ತವೆ. ಇನ್ನೊಂದು ಶಾಸನವು ಜಿಲ್ಲೆಯಲ್ಲಿ ಅಡಿಕೆ, ಮೆಣಸು, ಮುಸುಕಿನ ಜೋಳ, ತೆಂಗು, ಬತ್ತ, ರಾಗಿ, ಬೇಳೆಕಾಳುಗಳು, ಎಣ್ಣೆ, ತುಪ್ಪ ಮತ್ತು ಬೆಲ್ಲ ಹೇರಳವಾಗಿ ಉತ್ಪನ್ನವಾಗುತ್ತಿದ್ದವೆಂದು ಹೇಳುತ್ತದೆ.

ಭತ್ತ, ರಾಗಿ, ಹುಣಿಸೇಹಣ್ಣು, ಬೇಳೆಕಾಳು, ಎಣ್ಣೆ, ತುಪ್ಪ, ತೊಗರಿ, ಬೆಲ್ಲ, ತೆಂಗು, ಕೊಬ್ಬರಿ, ಹೊಗೆಸೊಪ್ಪು, ಖರ್ಜೂರ, ಜೀರಿಗೆ, ಈರುಳ್ಳಿ, ಬೆಳ್ಳುಳ್ಳಿ, ಅರಿಶಿನ, ಅಡಿಕೆ ಮತ್ತು ಮೆಣಸು - ಇವು ಹಿಂದಿನ ಕಡೂರು ಜಿಲ್ಲೆಯ ಮುಖ್ಯ ಬೆಳೆಗಳು ಮತ್ತು ಉತ್ಪನ್ನಗಳು.

ಮೈಸೂರು ಜಿಲ್ಲೆಯು ಭತ್ತ, ಕಾಳುಗಳು, ಅಡಿಕೆ, ಕಬ್ಬು, ಹೊಗೆಸೊಪ್ಪು, ಹತ್ತಿ, ಹೆಸರು, ಹುರುಳಿ ಮತ್ತು ಇತರ ಹೊಲದ ಬೆಳೆಗಳನ್ನು ಒದಗಿಸುತ್ತಿದ್ದಿತು.

ಬೆಂಗಳೂರು ಜಿಲ್ಲೆಯಲ್ಲಿ ಧಾನ್ಯಗಳು, ಹಣ್ಣುಗಳು, ಹುಣಿಸೆ, ತರಕಾರಿಗಳು, ಸಾಂಬಾರ ವಸ್ತುಗಳು ಮತ್ತು ಹೊಗೆಸೊಪ್ಪು ಬೆಳೆಯುತ್ತಿದ್ದವು. ಭತ್ತ, ರಾಗಿ, ತೋಟದ ಬೆಳೆಗಳಾದ ತೆಂಗು ಮತ್ತು ಅಡಿಕೆ ಇವು ತುಮಕೂರು ಜಿಲ್ಲೆಯ ವೈಶಿಷ್ಟ್ಯಗಳಾಗಿದ್ದವು. ಕೆರೆಗಳು ಕಾಲುವೆಗಳ ಕೆಳಗೆ ತೋಟಗಳು ಬೆಳೆದಿದ್ದವು. ತೋಟಗಳಲ್ಲಿ ಕೆರೆಗಳು ಮತ್ತು ಕಾಲುವೆಗಳ ನೀರಿನಿಂದ ಬೆಳೆಯುವ ೨೦೦೦ದಿಂದ ೪೦೦೦ ಮರಗಳು ಇರುತ್ತಿದ್ದವು. ಆ ಜಿಲ್ಲೆಯ ಬೆಳೆಗಳನ್ನು ಮೂರು ಬಗೆಯಲ್ಲಿ ವರ್ಗೀಕರಿಸಬಹುದು . ೧. ದ್ವಿದಳ ಧಾನ್ಯಗಳು - ಅವರೆ, ಉದ್ದು, ಗೋಧಿ ಇತ್ಯಾದಿ. ೨. ಸಾಂಭಾರ ವಸ್ತುಗಳು - ಮೆಣಸು, ಅಡಿಕೆ, ಸಾಸಿವೆ, ಮೆಂತ್ಯ, ಜೀರಿಗೆ, ಸಬ್ಬಸಿಗೆ, ಧನಿಯಾ ಮತ್ತು ಅರಿಶಿನ ೩. ತೋಟದ ಬೆಳೆ - ತೆಂಗು.

ಬೆಂಗಳೂರು ಜಿಲ್ಲೆಯ ಮುಖ್ಯವಾದ ಬೇಸಾಯ ಹೊಲಬೆಳೆಗಳದ್ದು. ಬೇಳೆಗಳು ಮತ್ತು ಕಾಳುಗಳನ್ನು ಶಾಸನಗಳು ಪದೇ ಪದೇ ಉಲ್ಲೇಖಿಸುತ್ತವೆ.

ಜಿಲ್ಲೆಯಲ್ಲಿ ಹತ್ತಿಯನ್ನೂ ಬೆಳೆಯಲಾಗುತ್ತಿತ್ತು. ಬಾವಿಗಳು ಮತ್ತು ಕೆರೆಗಳ ಕೆಳಗೆ ಹೊಗೆಸೊಪ್ಪನ್ನು ಬೆಳೆಯುತ್ತಿದ್ದರು. ಜಿಲ್ಲೆಯ ಶಾಸನಗಳು ಕಬ್ಬನ್ನು, ಕಬ್ಬಿಣದ ಕಾರ್ಖಾನೆಗಳನ್ನು ಉಲ್ಲೇಖಿಸಿರುವುದರಿಂದ ಅಲ್ಲಿ ಹೇರಳವಾಗಿ ಕಬ್ಬು ಬೆಳೆಯುತ್ತಿತ್ತು. ಸಕ್ಕರೆ ತಯಾರಾಗುತ್ತಿತ್ತು ಎಂದು ನಿರ್ಣಯಿಸಬಹುದಾಗಿದೆ. ತರಕಾರಿಗಳ ಜೊತೆಗೆ ಹಣ್ಣುಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು.

ಕಬ್ಬಿನ ಉತ್ಪನ್ನಗಳಾದ ಸಕ್ಕರೆ ಮತ್ತು ಬೆಲ್ಲ ಹೇರಳವಾಗಿ ಉತ್ಪಾದನೆಯಾಗುತ್ತಿದ್ದು ಕರ್ನಾಟಕವು ಈ ವಿಷಯದಲ್ಲಿ ಸ್ವಯಂಪೂರ್ಣವಾಗಿತ್ತು. ಈ ವಸ್ತುಗಳನ್ನು ಇಲ್ಲಿಂದ ಹೊರದೇಶಗಳಿಗೆ ರಫ್ತು ಮಾಡುತ್ತಿದ್ದುದರಿಂದ ಈ ವಿಷಯವು ಸಮರ್ಥನೆ ಪಡೆಯುತ್ತದೆ. ಕಬ್ಬು ಬೆಳೆಗಾರರಿಗೆ ಅಪಾರವಾದ ಲಾಭ ತರುವ ನಗದು ಬೆಳೆಯಾಗಿತ್ತು. ಸಕ್ಕರೆ ಮತ್ತು ಬೆಲ್ಲಗಳನ್ನು ತಯಾರಿಸುತ್ತಿದ್ದ ಕ್ರಮವೂ ವರ್ಣಿತವಾಗಿದೆ. ಬಾರ್ಬೋಸನ ಪ್ರಕಾರ ಕರ್ನಾಟಕದಲ್ಲಿ ಉತ್ಪನ್ನವಾಗುತ್ತಿದ್ದ ಸಕ್ಕರೆಯು ಹುಡಿಯಾಗಿರುತ್ತಿತ್ತು. ಈ ಸಕ್ಕರೆಯ ಒಂದು ಅರೋಬಾ ಸುಮಾರು ೨೪೦ ರೈ ಬೆಲೆಬಾಳುತ್ತಿದ್ದಿತೆಂದು ಅವನು ಅಂದಾಜು ಮಾಡುತ್ತಾನೆ.[7] ಕಬ್ಬಿನಿಂದ ಸಕ್ಕರೆಯನ್ನು ತಯಾರಿಸಲು ಮೊದಲು ಕಬ್ಬನ್ನು ಸಣ್ಣ ತುಂಡುಗಳನ್ನಾಗಿ ಕತ್ತರಿಸಿ ಅವುಗಳಿಂದ ರಸಗಳನ್ನು ಹಿಂಡಿ ತೆಗೆದುಕೊಳ್ಳಲಾಗುತ್ತಿತ್ತು. ಆಮೇಲೆ ರಸವನ್ನು ಕುದಿಸಿ

ಸಕ್ಕರೆಯನ್ನು ಪಡೆಯಲಾಗುತ್ತಿತ್ತು. ಈ ಸಕ್ಕರೆಯಲ್ಲದೆ ಕಾಳುಸಕ್ಕರೆ ಮತ್ತು ಬೆಲ್ಲಗಳನ್ನು ಉತ್ಪಾದಿಸಲಾಗುತ್ತಿತ್ತು. ಇದು ದೇಶಾದ್ಯಂತ ಅಪಾರ ಬೇಡಿಕೆ ತಳೆದಿದ್ದಿತು.

ವಿದೇಶೀ ಪ್ರವಾಸಿಗ ಪೇಸ್ ಹೇಳುವ ಪ್ರಕಾರ "ವಿಜಯನಗರ ಪಟ್ಟಣದ ಆಸು ಪಾಸಿನ ಫಲವತ್ತಾದ ಕಣಿವೆಗಳಲ್ಲಿ ಭತ್ತ, ಕಿತ್ತಳೆ, ನಿಂಬೆ, ಸಿಲಾನ್, ಕೆಂಪು ಮೂಲಂಗಿ ಮತ್ತು ಎಲೆಕೋಸು ಮೊದಲಾದ ತೋಟದ ಬೆಳೆಗಳು ಪೋರ್ಚುಗಲ್ಲಿನಂತೆಯೇ ಬೆಳೆಯುತ್ತಿದ್ದವು."[8]

ಈ ಬಗೆಯ ಬೆಳೆಗಳ ವಿಸ್ತರಣೆ ಹಾಗೂ ಸಾಗುವಳಿ ಜಮೀನಿನ ವಿಸ್ತರಣೆ ಸತತವಾಗಿ ಮುಂದುವರಿಯುತ್ತಲೇ ಹೋಯಿತು. ಅರಣ್ಯವನ್ನು ಕಡಿದು ಕೆರೆಗಳನ್ನು ನಿರ್ಮಿಸಿದಾಗ ಗ್ರಾಮೀಣ ಅರ್ಥವ್ಯವಸ್ಥೆಯು ನೂತನವಾಗಿ ರೂಪುಗೊಂಡಿತು. ಸಹಜವಾಗಿಯೇ ನೀರಾವರಿ ಸೌಲಭ್ಯಗಳು ಉತ್ಸಾಹಿ ರೈತರನ್ನು ಕಸುಬುದಾರರನ್ನು ಆ ಹೊಸ ನೆಲೆಗಳಿಗೆ ಆಕರ್ಷಿಸಿದವು.

ಹೊಯ್ಸಳರ ಕಾಲದಲ್ಲಿ ಕೆರೆಗಳ ನಿರ್ಮಾಣ ಕಾರ್ಯವನ್ನು ಅತ್ಯಂತ ಪವಿತ್ರ ಕಾರ್ಯವೆಂಬಂತೆ ಪರಿಗಣಿಸಿದ್ದುದನ್ನು ನಾವು ಗಮನಿಸಿದ್ದೇವೆ. ಅದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಇನ್ನಷ್ಟು ವ್ಯಾಪಕ ಪ್ರಮಾಣವನ್ನು ಪಡೆದುಕೊಂಡಿತ್ತೆಂಬುದನ್ನು ತಿಳಿಯಲು ನಾವು ಪ್ರಸಿದ್ಧ ಆಡಳಿತಗಾರ ಸರ್ ಥಾಮಸ್ ಮುನ್ರೋ ಹೇಳಿದ ಮಾತುಗಳನ್ನು ಇಲ್ಲಿ ಗಮನಿಸಬಹುದು. ವಿಜಯನಗರ ಸಾಮ್ರಾಜ್ಯದ ಹೃದಯ ಭಾಗವಾಗಿದ್ದ ಬಳ್ಳಾರಿ ಜಿಲ್ಲೆಯಲ್ಲಿ ಕೈಗೊಳ್ಳಬಹುದಾದ ನೀರಾವರಿ ಸಾಧ್ಯತೆಗಳ ಕುರಿತು ಮುನ್ರೋ ಹೀಗೆ ಹೇಳಿದ:

"ಹೊಸದಾಗಿ ಇಲ್ಲಿ ಕೆರೆಗಳನ್ನು ನಿರ್ಮಿಸಹೋಗುವುದು, ತುಂಬಿಹೋಗಿರುವ ಕೆರೆಗಳ ದುರಸ್ತಿ ಕಾರ್ಯ ಕೈಗೊಳ್ಳುವುದಕ್ಕಿಂತ ವ್ಯರ್ಥಪ್ರಯತ್ನವಾಗುತ್ತದೆ. ಯಾಕೆಂದರೆ ಸ್ಥಳದ ನಿವಾಸಿಗಳು ಈ ಉದ್ದೇಶಕ್ಕಾಗಿ ಕೆರೆಕುಂಟೆಯನ್ನು ಮಾಡಿಕೊಂಡಿಲ್ಲದ ಒಂದೇ ಒಂದು ಹಳ್ಳಿಯೂ ನಮಗೆ ಕಾಣಸಿಗುವುದಿಲ್ಲ".[9]

ಎರಡನೇ ಹರಿಹರನ ನಂತರ ವಿಜಯನಗರ ಸಾಮ್ರಾಜ್ಯಕ್ಕೆ ಪಟ್ಟಕ್ಕೆ ಬಂದ ಎರಡನೆಯ ಬುಕ್ಕರಾಯನು, ಇಂದಿನ ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನದಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಿದುದನ್ನು ಫೆರ್‌ನಾವೋ ನ್ಯೂನಿಚ್ (ಕ್ರಿ.ಶ. ೧೫೩೫)ತನ್ನ ವರದಿಯಲ್ಲಿ ವರ್ಣಿಸಿದ್ದಾನೆ. ಅದರಿಂದ ಅವನ ವರಮಾನವು ೩,೫೦,೦೦೦ ಪರ್ಡೋಗಳಿಗಿಂತ ಹೆಚ್ಚಾಯಿತು. ಈ ನೀರನ್ನು ಬಳಸಿಕೊಂಡು ನಗರದ ಸುತ್ತಾ ತೋಟ, ಹಣ್ಣಿನ ತೋಟ, ಮರದ ತೋಪುಗಳು, ದ್ರಾಕ್ಷಿ ತೋಟಗಳು ಮೊದಲಾದವನ್ನು ಬೆಳೆಸಿದ್ದರು. ನಿಂಬೆ, ಕಿತ್ತಳೆ ಮತ್ತು ಗುಲಾಬಿ ತೋಟಗಳು ಹೇರಳವಾಗಿ ಬೆಳೆದವು. ಆದರೆ ನದಿಯ ನೀರನ್ನು ಹೀಗೆ ತಿರುಗಿಸುವುದಕ್ಕಾಗಿ ರಾಜನು ತನ್ನ ತಂದೆಯಿಂದ ಬಂದಿದ್ದ ಸಮಸ್ತ ಐಶ್ವರ್ಯವನ್ನು ವೆಚ್ಚ ಮಾಡಿದನು ಎಂದು ಹೇಳುತ್ತಾರೆ.

ಎರಡನೇ ಬುಕ್ಕನು ತುಂಗಭದ್ರೆಗೆ ಅಣೆಕಟ್ಟು ನಿರ್ಮಿಸಿದುದನ್ನು ರಾಬರ್ಟ್ ಸಿವೆಲ್ ಅಂದಾಜು ಮಾಡಿದ್ದಾನೆ. ''ಅವನು ಕೈಗೊಂಡ ಮಹತ್ತಾದ ಕಾರ್ಯವೆಂದರೆ ತುಂಗಭದ್ರಾ ನದಿಗೆ ಅಡ್ಡಲಾಗಿ ಭಾರೀ ಆಣೆಕಟ್ಟು ನಿರ್ಮಿಸಿದುದು ಮತ್ತು ನದಿಯಿಂದ ೧೫ ಮೈಲಿ ಉದ್ದದ ಒಂದು ಕಾಲುವೆಯನ್ನು ಕಲ್ಲಿನಿಂದ ಕಟ್ಟಿಸಿದುದು. ಅದೊಂದು ಅಸಾಧಾರಣವಾದ ಅದ್ಭುತ ಕಾರ್ಯವಾಗಿದೆ. ಹಲವು ಮೈಲಿಗಳವರೆಗೆ ಈ ಮೇಲು ಕಾಲುವೆಯನ್ನು ಈ ಬೆಟ್ಟದ ತಪ್ಪಲಿನ ಗಟ್ಟಿ ಬಂಡೆಯಲ್ಲಿ ಕೊರೆಯಲಾಗಿದೆ. ಭಾರತದಲ್ಲಿ ಕಂಡುಬರುವ ಅತ್ಯಂತ ಅಸಾಧಾರಣವಾದ ನೀರಾವರಿ ಕಾರ್ಯಗಳಲ್ಲಿಇದು ಒಂದು''.[10]

ಎರಡನೇ ದೇವರಾಯನು ಹರಿದ್ರಾ ನದಿಗೆ ಆ ನಾಮಕರಣವನ್ನು ಮಾಡಿ ಕಾಲುವೆ ಅಥವಾ ನಾಲೆಗಳ ಜಾಲವನ್ನೇ ಅದರಿಂದ ನಿರ್ಮಿಸಿದನು.

ಆಮೇಲೆ ಕೃಷ್ಣದೇವರಾಯನು ರಾಜ್ಯದ ಬೇರೆ ಬೇರೆ ಭಾಗದಲ್ಲಿ ಒಣ ನೆಲಗಳಲ್ಲಿ ನೀರಾವರಿ ಅಧಿಕಗೊಳಿಸಲು ಕ್ರಮ ಕೈಗೊಂಡನು. ೧೫೨೧ರಲ್ಲಿ ಕೊರ್‍ರಗಲ್ಲಿನಲ್ಲಿ ದೊಡ್ಡ ಆಣೆಕಟ್ಟು ಕಟ್ಟಿಸಿದನು. ಬಸವಣ್ಣ ನಾಲೆಯನ್ನು ತೋಡಿಸಿದನು. ಈ ಎರಡೂ ಇಂದಿಗೂ ಬಳ್ಳಾರಿ ಜಿಲ್ಲೆಯಲ್ಲಿ ಉಪಯೋಗದಲ್ಲಿವೆ. ಬಂಕಾಪುರದ ಉತ್ತರಕ್ಕೆ ೫ ಮೈಲಿ ದೂರದ ಶಿಗ್ಗಾವಿಯಲ್ಲಿ ಒಂದು ಭಾರಿ ಕೆರೆ ಮತ್ತು ಇತರ ಹಲವು ಸುಂದರವಾದ ಜಲಾಶಯಗಳನ್ನು ಅವನು ನಿರ್ಮಿಸಿದನು. ಕೆರೆ ನೀರಾವರಿಯಲ್ಲದೆ ಖಾಸಗೀ ಬಾವಿಗಳ ನಿರ್ಮಾಣವು ನೀರಾವರಿ ಉದ್ದೇಶಕ್ಕಾಗಿ ನಡೆಯುತ್ತಿತ್ತು. ಜಮೀನಿಗೆ ನೀರು ಹಾಯಿಸುವ ಉದ್ದೇಶಕ್ಕಾಗಿ ಕಪಿಲೆ ಎಂಬ ಹೆಸರಿನ ನಿರ್ದಿಷ್ಟ ರೂಪದ ಬಾವಿಯನ್ನು ದೇಶಾದ್ಯಂತ ವ್ಯಾಪಕವಾಗಿ ಬಳಸಲಾಗುತ್ತಿತ್ತು.

ನೀರಾವರಿಯಿಂದ ಹೊಲಗಳು ಗದ್ದೆಗಳಾಗಿ ಪರಿವರ್ತಿತವಾಗುತ್ತಿದ್ದರೆ ಬಂಜರು ಭೂಮಿಯನ್ನು ಸಾಗುವಳಿಗೊಳಪಡಿಸುವ ಮೂಲಕ ಕೃಷಿ ಪ್ರದೇಶವನ್ನು ವಿಸ್ತರಿಸಲಾಗುತ್ತಿತ್ತು. ಕೃಷಿ ಉತ್ಪನ್ನದ ಬೇಡಿಕೆಯಲ್ಲಿ ಬಂದ ಆಧಿಕ್ಯವು ಕೃಷಿ ವಿಸ್ತರಣೆಗೆ ಇಂಬು ನೀಡಿತ್ತು. ಸಾಗುವಳಿ ಮಾಡಬಹುದಾದ ನೆಲವು ಅಗ್ಗವಾಗಿ ದೊರಕುತ್ತಿದ್ದುದ ರಿಂದಲೂ ಅದಕ್ಕೆ ಸುಲಭವಾಗಿ ರಿಯಾಯಿತಿಗಳು ದೊರಕುತ್ತಿದ್ದುದರಿಂದಲೂ ಜನರು ಸರಕಾರಕ್ಕೆ ಅಂತಹ ನೆಲವನ್ನು ಮಂಜೂರು ಮಾಡಬೇಕೆಂದು ಅರ್ಜಿ ಹಾಕಿಕೊಳ್ಳುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಬಂಜರು ನೆಲವನ್ನು ಉತ್ತು ಬೇಸಾಯ ಮಾಡಿದವರು ತಮ್ಮ ವೆಚ್ಚಗಳನ್ನು ಕಳೆದು ಲಾಭವನ್ನು ಪಡೆಯುವಂತಾಗುವವರೆಗೂ ಸರಕಾರವು ತನ್ನ ಪಾಲನ್ನು ಕೇಳುತ್ತಿರಲಿಲ್ಲ.

ರೈತಾಪಿ ಜಾತಿಗಳನ್ನು ಒಕ್ಕಲಿಗ, ಒಕ್ಕಲು ಮತ್ತು ಗೌಡರು ಎಂದು ಕರೆಯುತ್ತಿದ್ದರು. ಇವರು ಕಠಿಣ ದೇಹಶ್ರಮ ಮತ್ತು ಬಂಡವಾಳಗಳಿಂದ ಹೊಸ ವಸತಿಗಳ ತಳಹದಿ ಹಾಕಿ ಸಾಗುವಳಿ ಭೂಮಿಯನ್ನು ವಿಸ್ತರಿಸಿದರು. ಕೆಂಪೇಗೌಡರ

ವಂಶದವರು ಮಾಗಡಿ, ದೇವನಹಳ್ಳಿ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಸುತ್ತಮುತ್ತಲ ಪ್ರಾಂತ್ಯಗಳಲ್ಲಿ ತಮ್ಮ ಪಾಳೇಪಟ್ಟುಗಳನ್ನು ಅಂದರೆ ಕೃಷಿ ವ್ಯವಸ್ಥೆಯ ಹೊಸನೆಲೆಗಳನ್ನು ಏರ್ಪಡಿಸಿದ್ದು ಈ ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲೇ.

ಹೀಗೆ ಬ್ರಾಹ್ಮಣೇತರರ - ಧಾರ್ಮಿಕವಲ್ಲದ ಕೃಷಿ ನೆಲೆಗಳ ಉದಯವು ನೂತನ ಸಾಮಾಜಿಕ ವಿನ್ಯಾಸವನ್ನು ಈ ಕಾಲಾವಧಿಯಲ್ಲಿ ತೋರಿಸಿತು. ಆ ಕಾಲದ ಶಾಸನಗಳು ಮತ್ತು ಸಾಹಿತ್ಯಿಕ ಆಕರಗಳು ಭೂಮಿಯ ಮೇಲೆ,ಅತ್ತ ಸರಕಾರದ ಒಡೆತನವೂ ಇತ್ತ ಖಾಸಗಿ ಒಡೆತನವೂ ಜೊತೆಜೊತೆಯಾಗಿ ಇದ್ದುದನ್ನು ದೃಢಪಡಿಸುತ್ತವೆ. ಸಂಪೂರ್ಣವಾಗಿ ರಾಜನ ಒಡೆತನ ಎಂಬುದಿರಲಿಲ್ಲ ಅಥವಾ ಸಂಪೂರ್ಣವಾಗಿ ಖಾಸಗಿ ಒಡೆತನ ಎಂಬುದಿರಲಿಲ್ಲ. ಆ ಕಾಲದಲ್ಲಿ ಕರ್ನಾಟಕದಲ್ಲಿದ್ದ ಪರಿಸ್ಥಿತಿ ಅದು.

ಈ ಸಮಯದಲ್ಲೆ ಶಿವಪ್ಪನಾಯಕನ ಶಿಸ್ತು ನಿಗದಿ ಪದ್ಧತಿಯು, ಕೃಷಿ ಆದಾಯಕ್ಕೆ ವಿಧಿಸುವ ಒಂದು ಕಂದಾಯ ರೂಪದ ಪದ್ಧತಿಯಾಗಿ ಜಾರಿಗೆ ಬಂದಿತು.

ಕೃಷಿಯಲ್ಲದೆ ಈ ಪ್ರದೇಶದಲ್ಲಿ ಕೃಷಿಯೇತರ ಅರ್ಥವ್ಯವಸ್ಥೆಯು ೧೪ನೆಯ ಶತಮಾನದಿಂದ ಒಂದು ಮುಖ್ಯ ಬೆಳವಣಿಗೆಯಾಗಿಯೂ, ಆರ್ಥಿಕ ಪರಿವರ್ತನೆಯಾಗಿಯೂ ರೂಪುಗೊಳ್ಳತೊಡಗಿತು. ಇದರ ಅರ್ಥ ಕೃಷಿಯೇತರ ಉತ್ಪಾದನೆ ಅಥವಾ ಚಟುವಟಿಕೆ ಕೃಷಿ ಅರ್ಥವ್ಯವಸ್ಥೆಯನ್ನು ಮುಚ್ಚಿಹಾಕಿ ಪೂರ್ಣ ಪ್ರಾಧಾನ್ಯತೆ ಪಡೆಯಿತು ಎಂದಲ್ಲ. ಕೃಷಿ ಆರ್ಥಿಕತೆಗೆ ಪೂರಕವಾಗಿ ಕೃಷಿಯೇತರ ಉತ್ಪಾದನಾ ಚಟುವಟಿಕೆಯು ಕ್ರಮೇಣ ಕಾಣಿಸಿಕೊಂಡಿತು. ಬೆಳೆಯುತ್ತಿದ್ದ ಅದರ ಪಾತ್ರ, ರಾಜ್ಯದ ಬೊಕ್ಕಸಕ್ಕೆ ವರಮಾನವನ್ನು ಹರಿಸುವ ಕ್ಷೇತ್ರವಾಗಿ, ಅದರ ಪ್ರಾಮುಖ್ಯ ಕಣ್ಣಿಗೆ ಕಾಣಿಸುಂತಹ ಆರ್ಥಿಕ ಬೆಳವಣಿಗೆಯಾಯಿತು ಎಂದು ಡಾ. ಎಸ್. ಎ. ಭಾರಿ ಬರೆಯುತ್ತಾರೆ.[11]

ವಾಣಿಜ್ಯ ಮತ್ತು ವ್ಯಾಪಾರ ಕ್ರಮೇಣ ಉದಿಸಿದ್ದು, ವಸ್ತುಗಳ ಉತ್ಪಾದನೆ, ಕಸುಬುಗಳು ಹರಳುಗಟ್ಟಿದುದು, ರಾಜ್ಯದ ಅರ್ಥವ್ಯವಸ್ಥೆಯು ಉತ್ತಮಗೊಂಡಿದ್ದು, ನಗರೀಕರಣ, ಇವು ಹಳೆಯ, ಆವೃತ, ಕೃಷಿ ಅರ್ಥ ವ್ಯವಸ್ಥೆಯು, ವಿಶಾಲತರವಾದ, ಕೃಷಿಯೇತರ ಮಾರುಕಟ್ಟೆಯನ್ನಾಧರಿಸಿದ ಅರ್ಥವ್ಯವಸ್ಥೆಯಾಗಿ ಬೆಳೆದುದರ ಸ್ಪಷ್ಟ ಕುರುಹುಗಳಾಗಿದ್ದವು. ಈ ಬದಲಾವಣೆ ದಿಢೀರನೆ ಆದದ್ದಲ್ಲ ಅಥವಾ ಯೂರೋಪಿನಲ್ಲಿ ಕಂಡುಬಂದಂತೆ ರೋಮಾಂಚಕರವೂ ಆದುದಲ್ಲ. ಯೂರೋಪಿನಲ್ಲೂ ಹೀಗೆಯೇ ಆವೃತ ಕೃಷಿ ಅರ್ಥ ವ್ಯವಸ್ಥೆಯಿಂದ ಮುಕ್ತ ಕೃಷಿಯೇತರ ಅರ್ಥವ್ಯವಸ್ಥೆಯ ಕಡೆಗೆ ಬೆಳವಣಿಗೆ ಕಂಡು ಬಂದಿತು. ಅದೇ ರೀತಿಯಲ್ಲಿ ದಕ್ಷಿಣ ಭಾರತದಲ್ಲಿಯೂ ಮುಖ್ಯವಾಗಿ ಬಂಡವಾಳಶಾಹಿ ಅರ್ಥವ್ಯವಸ್ಥೆಯು ವಿಕಾಸಗೊಂಡ ಕುರುಹುಗಳು ಗೋಚರಿಸುತ್ತವೆ. ಆದರೆ ಹೋಲಿಕೆಯನ್ನು ಇದಕ್ಕಿಂತಲೂ ಮುಂದಕ್ಕೆ ಎಳೆಯಲು ಸಾಧ್ಯವಿಲ್ಲ. ಒಂದು ಅಂಶ ಮಾತ್ರ ಸ್ಪಷ್ಟವಾಗಿ ಗೋಚರಿಸುತ್ತದೆ. ಯುರೋಪಿನ

ಅರ್ಥವ್ಯವಸ್ಥೆಯಲ್ಲಿ ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ಹಂತಕ್ಕೆ, ಅಲ್ಲಿಂದ ಮುಂದೆ ಔದ್ಯೋಗಿಕ ಅರ್ಥವ್ಯವಸ್ಥೆಯ ನೆಲೆಗೆ ಪರಿವರ್ತನೆ ಕಂಡು ಬಂದುದು ೧೪ ಮತ್ತು ೧೫ನೇ ಶತಮಾನಗಳಿಂದ. ಯೂರೋಪು ಮತ್ತು ದಕ್ಷಿಣ ಭಾರತಗಳ ನಡುವೆ ಪೂರ್ಣವಾದ ನೇರ ಹೋಲಿಕೆ ಸಾಧ್ಯವಿಲ್ಲವಾದರೂ ಆವೃತ ಅರ್ಥವ್ಯವಸ್ಥೆಯಿಂದ ಮುಕ್ತವಾದ ಬಂಡವಾಳಗಾರಿಕೆಯ ಅರ್ಥವ್ಯವಸ್ಥೆಯಾಗಿ ಪರಿವರ್ತನೆ ಹೊಂದಿದುದು ಮಾತ್ರ ಸುವ್ಯಕ್ತವಾಗಿದೆ.

ಹಾಗೆ ನೋಡಿದರೆ ಕೃಷಿಯೇತರ ಆರ್ಥಿಕತೆಯ ಬೆಳವಣಿಗೆ ಮತ್ತು ಉತ್ಪಾದನೆ, ಒಂದು ಪ್ರದೇಶದ ಅರ್ಥವ್ಯವಸ್ಥೆಯ ಸಾಮಾನ್ಯ ಬೆಳವಣಿಗೆಯ ಕುರುಹು ಎಂದಿಟ್ಟುಕೊಳ್ಳಬಹುದು. ಆಧುನಿಕ ಪೂರ್ವ ಸ್ಥಿತಿಯಿಂದ ಆಧುನಿಕ ಸ್ಥಿತಿಗೆ, ಊಳಿಗಮಾನ್ಯ ಆವೃತ ಜೀವನೋಪಾಯದ ಆರ್ಥಿಕತೆಯಿಂದ, ವಿಶಾಲಪರವಾದ ಮಾರುಕಟ್ಟೆ ಗುರಿಯಾಗುಳ್ಳ ಮುಕ್ತ ಅರ್ಥ ವ್ಯವಸ್ಥೆಗೆ, ಬಂಡವಾಳಶಾಹಿ ಆರ್ಥಿಕತೆಯ ಕಡೆಗಿನ ಚಲನೆಯು ಅನಿವಾರ್ಯವಾದ ಐತಿಹಾಸಿಕ ಪ್ರಕ್ರಿಯೆಯಾಗಿ ಬದಲಾಯಿತು. ಸಂಪೂರ್ಣವಾಗಿ ಕೃಷಿಯಾಧಾರಿತ ಆರ್ಥಿಕ ರಚನೆಯು, ಬದಲಾಗುವ ಆರ್ಥಿಕ ವಿನ್ಯಾಸದ ವಿವಿಧ ಹಂತಗಳ ಮೂಲಕ ಬೆಳೆಯಿತು.

ವಾಸ್ತವವಾಗಿ ಯೂರೋಪಿನಲ್ಲಿ ಅಂತಹುದೊಂದು ಮಹತ್ತರ ಪರಿವರ್ತನೆಯನ್ನು, ಯೂರೋಪಿನ ಆಧುನಿಕ ಆರ್ಥಿಕ ರಚನೆಯ ಮತ್ತು ಬಂಡವಾಳಶಾಹಿಯ ಕಡೆಗೆ ಕಂಡುಬಂದ ಒಂದು ಮುಖ್ಯವಾದ ಹೆಜ್ಜೆ ಎಂದು ಪರಿಗಣಿಸಲಾಯಿತು. ಇದು ಯೂರೋಪಿನ ಅರ್ಥವ್ಯವಸ್ಥೆಗೆ ಮಾತ್ರ ಅನ್ವಯಿಸಿದ ಲಕ್ಷಣವಲ್ಲ. ಏಷ್ಯಾ ಪ್ರಾಂತ್ಯಗಳ ಆರ್ಥಿಕ ಇತಿಹಾಸವನ್ನು ಕುರಿತು ಕೆಲಸಮಾಡುತ್ತಿರುವ ವಿದ್ವಾಂಸರು, ೧೪ರಿಂದ ೧೮ನೆಯ ಶತಮಾನಗಳವರೆಗಿನ ಕಾಲಾವಧಿಯಲ್ಲಿ ಏಷ್ಯಾ ಖಂಡವೂ ಕೂಡ ಮೂಲ ಬಂಡವಾಳಶಾಹಿಯ ಹೊಸ್ತಿಲಲ್ಲಿತ್ತು, ಆವೃತ್ತ ಸ್ವಯಂಪೂರ್ಣ ಗ್ರಾಮೀಣ ಆರ್ಥಿಕತೆಯಿಂದ ಬಂಡವಾಳಶಾಹಿ ಆರ್ಥಿಕತೆಯ ಕಡೆಗೆ ಬದಲಾವಣೆ ಹೊಂದುತ್ತಿದ್ದಿತು, ವಸಾಹತುಶಾಹಿ ಪೂರ್ವ ಏಷ್ಯಾ ಖಂಡದ ಆರ್ಥಿಕ ಇತಿಹಾಸವನ್ನು ಗಂಭೀರವಾಗಿ ಅಧ್ಯಯನ ಮಾಡಿದರೆ ಇದು ವೇದ್ಯವಾಗುತ್ತದೆ. - ಎಂದು ಎ.ಜೆ. ಕೈಸರ್, ವಿ.ಐ. ಪಾವುಲೋನ್, ಇರ್ಫಾನ್ ಹಬೀಬ್, ಸೈಮನ್ ಡಿಗ್ರಿ, ಬಿಪಿನ್ ಚಂದ್ರ, ಎ.ಜೆ. ಚರೋ, ಬರ್ಟನ್ ಸ್ಟೀನ್ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆಂದು ಡಾ.ಎಸ್. ಎ. ಭಾರಿ ಉಲ್ಲೇಖಿಸಿದ್ದಾರೆ.[12]

ಕೃಷಿಯೇತರ ಉತ್ಪಾದನಾ ಚಟುವಟಿಕೆ ಮತ್ತು ಕಸುಬುಗಳು, ದಕ್ಷಿಣದಲ್ಲಿ ಹದಿನಾಲ್ಕನೆಯ ಶತಮಾನದಿಂದಲೂ ವೃದ್ಧಿಗೊಂಡುದನ್ನು ನಾವು ನೋಡಬಹುದು. ಇದಕ್ಕೆ ಸಣ್ಣದೊಂದು ಉದಾಹರಣೆಯನ್ನು ನಾವು ನೋಡುವುದಾದರೆ ಕೃಷಿಯೇತರ ಉತ್ಪಾದನೆ ಮತ್ತು ಕಸುಬುಗಳ ಮೇಲೆ ತೆರಿಗೆಗಳನ್ನು, ಸುಂಕಗಳನ್ನು ವಿಧಿಸುವುದನ್ನು

ಹೇಳುವ ಶಾಸನಗಳ ಸಂಖ್ಯೆಯು ೧೪ನೇ ಶತಮಾನದ ಮೊದಲು ಇದ್ದುದಕ್ಕಿಂತ ಈ ಕಾಲದಲ್ಲಿ ಹೇರಳವಾಗಿರುವುದನ್ನು ನೋಡಬಹುದು.

ದಖ್ಖನ್ನಿನಲ್ಲಿ ೧೪ನೇ ಶತಮಾನದಿಂದ ಕೃಷಿಯೇತರ ಉತ್ಪಾದನಾ ಚಟುವಟಿಕೆಯಲ್ಲಿ ಅಪಾರವಾದ ಆಧಿಕ್ಯವನ್ನು ಗಮನಿಸಬಹುದಾಗಿದೆ. ಕೈಗಾರಿಕೆ ಮತ್ತು ಕೃಷಿಯೇತರ ಕಸುಬುಗಳ ವೃದ್ಧಿ ಕಾರಣವಾಗಿ ಹತ್ತಿ ನೂಲವುದು, ಬಟ್ಟೆ ನೇಯುವುದು, ಎಣ್ಣೆ ತೆಗೆಯುವುದು, ಬೆಲ್ಲ ಮತ್ತು ಸಕ್ಕರೆ ತಯಾರಿಸುವುದು, ಇಟ್ಟಿಗೆ ತಯಾರಿಕೆ, ಉಪ್ಪು ಮಾಡುವುದು, ಅದಿರು ಕರಗಿಸಿ ಕಬ್ಬಿಣ ತಯಾರಿಸುವುದು, ಮರಗೆಲಸ, ಗೊಂಬೆಗಳು ಮತ್ತು ಪೌರಾತ್ಯ ಕಲಾವಸ್ತುಗಳ ತಯಾರಿಕೆ, ಇವೆಲ್ಲ ಸ್ಥಳೀಯ ಮಾರುಕಟ್ಟೆಗಾಗಿ ಮಾತ್ರವಲ್ಲ - ಹೊರಕ್ಕೆ ರಫ್ತು ಮಾಡುವ ಪ್ರಮಾಣದಲ್ಲಿ ಬೆಳೆದವು.

ಹೀಗೆಯೇ ಒಳನಾಡ ಹಾಗೂ ಸಾಗರೋತ್ತರ ವಾಣಿಜ್ಯ ವಹಿವಾಟಿನಲ್ಲಿ ಗಮನಾರ್ಹ ಹೆಚ್ಚಳ ಉಂಟಾದುದು, ಕಾಲಬದ್ಧ ಸಂತೆಗಳು ಮತ್ತು ಮಾರುಕಟ್ಟೆಗಳು ಹೆಚ್ಚಿದುದು, ವ್ಯಾಪಾರ, ನಗರಗಳು ಮತ್ತು ನಗರೀಕರಣದ ಆಧಿಕ್ಯ ಇವು ಈ ಅವಧಿಯಲ್ಲಿ ಗೋಚರವಾದವು. ಇವು ಎಲ್ಲವೂ ಕೂಡ ವಿಸ್ತಾರಗೊಳ್ಳುತ್ತಿದ್ದ ನಗರ ಆರ್ಥಿಕತೆಯ ಹೆಚ್ಚಳಕ್ಕೆ ಸಹಾಯ ಮಾಡಿದವು.

ಸಾಗರೋತ್ತರ ವಾಣಿಜ್ಯವು ಈ ಮೂಲಕ ವರ್ಧಿಸುತ್ತಿತ್ತು. ವಾಸ್ತವವಾಗಿ ಪರ್ಷಿಯನ್ ಕೊಲ್ಲಿ, ಹಿಂದೂಮಹಾಸಾಗರ, ದಕ್ಷಿಣ ಚೈನಾ ಸಮುದ್ರಗಳ ನಡುವೆ ಸಂಚರಿಸಿ, ಪ್ರಾದೇಶಿಕ ವ್ಯಾಪಾರ ವಾಣಿಜ್ಯದಲ್ಲಿ ನಿರತರಾಗಿದ್ದ ಏಷ್ಯಾದ ಖಾಸಗಿ ವರ್ತಕರು ಮತ್ತು ದಲ್ಲಾಳಿಗಳ ವರಮಾನಕ್ಕೆ ಹೋಲಿಸಿದರೆ, ೧೬ನೇ ಶತಮಾನದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಬಂಡವಾಳ ಮೂಲವು ಅತ್ಯಂತ ಕಡಿಮೆಯಾಗಿತ್ತು ಎಂದು ಎ.ಜೆ. ಕೈಸರ್ ತಮ್ಮ 'ದಿ ಕೇಂಬ್ರಿಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ' ಕೃತಿಯಲ್ಲಿ ಅಭಿಪ್ರಾಯಪಡುತ್ತಾರೆ.[13]

೧೪ನೇ ಶತಮಾನದ ಮೊದಲ ಗ್ರಾಮ ಪ್ರಧಾನ ದೃಶ್ಯಕ್ಕೆ ವಿರುದ್ಧವಾಗಿ, ವ್ಯಾಪಾರ ನಗರಗಳು ಮತ್ತು ನಗರ ಕೇಂದ್ರಗಳಲ್ಲಿಯೂ ಬೆಳವಣಿಗೆಯನ್ನು ನೋಡಬಹುದು. ವಿನಿಮಯ ಮಾಧ್ಯಮವಾಗಿ ನಾಣ್ಯರೂಪದ ಹಣದ ಬಳಕೆ ಹೆಚ್ಚಿತು.

ಆದ್ದರಿಂದ ಕೃಷಿಯೇತರ ಅರ್ಥವ್ಯವಸ್ಥೆಯನ್ನು ನಾವು ಹೆಚ್ಚುವರಿ ಉತ್ಪಾದನೆಯ ಆಧಿಕ್ಯ, ವ್ಯಾಪಾರ ವಾಣಿಜ್ಯಗಳಲ್ಲಿ ಹೆಚ್ಚಳ (ಒಳನಾಡು ಮತ್ತು ಸಾಗರೋತ್ತರ) , ಸುಧಾರಿತ ನಾಣ್ಯಪದ್ಧತಿ (ವಸ್ತು ವಿನಿಮಯಕ್ಕೆ ಬದಲಾಗಿ), ಕೃಷಿಯೇತರ ಕುಶಲವಸ್ತು ಉತ್ಪಾದನೆ, ಪರಿಶ್ರಮದ ಹಂಚಿಕೆ ಮತ್ತು ಚಲನೆ ಮತ್ತು ನಗರೀಕರಣ ಈ ದೃಷ್ಟಿಗಳಿಂದ ಗಮನಿಸಬೇಕು.

ಈ ಕಾಲಘಟ್ಟದಲ್ಲಿ ತಮ್ಮ ಬಳಕೆಗಾಗಿಯಲ್ಲದೆ ವಿನಿಮಯಕ್ಕಾಗಿ ಉತ್ಪಾದಿಸುವ ಕ್ರಮವೂ ತೀವ್ರವಾಗಿ ಹೆಚ್ಚಳವಾಯಿತು.

ದಖ್ಖನ್ನಿನಲ್ಲೂ, ಇನ್ನೂ ದೂರದ ದಕ್ಷಿಣದಲ್ಲೂ ವರ್ಧಿಸುತ್ತಿದ್ದ ವ್ಯಾಪಾರಗಳು ಹೇರಳವಾಗಿದ್ದವು. ಸ್ಥಳೀಯರ ಉತ್ಪಾದನೆಗಳನ್ನು ಒಳನಾಡಿನ ಬೇರೆಬೇರೆ ಕಡೆಯೂ, ಸಾಗರೋತ್ತರ ದೇಶಗಳಲ್ಲಿ ಮಾರಾಟ ಮಾಡುವುದಕ್ಕಾಗಿ ಲಾಭದಾಯಕವಾದ ವಹಿವಾಟು, ವ್ಯಾಪಾರ ಮಾರ್ಗಗಳು, ಮಾರುಕಟ್ಟೆಗಳು ಮತ್ತು ಮೇಳಗಳ ಜಾಲವು ಇದನ್ನು ಸಮರ್ಥಿಸುತ್ತವೆ. ವಿಜಯನಗರ ಪಟ್ಟಣದಲ್ಲೇ ನಡೆಯುತ್ತಿದ್ದ ಅಪಾರವಾದ ವ್ಯಾಪಾರವನ್ನು ಬಾರ್ಬೋಸಾ ವರ್ಣಿಸಿದ್ದಾನೆ. ಅಲ್ಲಿ ಕೆಂಪು ಬಟ್ಟೆಯಿಂದ ಹಿಡಿದು ರೇಷ್ಮೆ, ಆಭರಣಗಳು, ಮುತ್ತುಗಳು, ವಜ್ರಗಳು ಮತ್ತು ಹರಳುಗಳು, ದೂರ ಮತ್ತು ಹತ್ತಿರದ ಸ್ಥಳಗಳಿಂದ ಬಂದು ಮಾರಾಟವಾಗುತ್ತಿದ್ದವು.

ವಿವಿಧ ಮೂಲಗಳಲ್ಲಿ ಮತ್ತು ಕೃಷ್ಣದೇವರಾಯ ವಿರಚಿತ ಆಮುಕ್ತ ಮಾಲ್ಯದದಲ್ಲಿ ಉಲ್ಲೇಖಿಸಿರುವ ಸಾಪ್ತಾಹಿಕ ಸಂತೆಗಳ ಸಂಖ್ಯಾಬಾಹುಳ್ಯವು, ಗ್ರಾಮೀಣ ಆರ್ಥಿಕತೆಯ ಸ್ವಯಂಪೂರ್ಣ ಲಕ್ಷಣಗಳನ್ನು ದುರ್ಬಲಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವುದನ್ನು ಸೂಚಿಸುತ್ತದೆ.

೧೪ನೇ ಶತಮಾನದ ಹಿಂದಿನ ಗ್ರಾಮ ಆಧಾರಿತ ಅರ್ಥವ್ಯವಸ್ಥೆಗೆ ವಿರುದ್ಧವಾಗಿ, ಉದಯೋನ್ಮುಖವಾಗಿದ್ದ ನಗರೀಕರಣ ಮತ್ತು ನಗರ ಅರ್ಥವ್ಯವಸ್ಥೆಯನ್ನು ಇವು ಗುರುತಿಸುತ್ತವೆ. ಈ ಕಾಲದಲ್ಲಿ ಬಹಮನಿ ಮತ್ತು ವಿಜಯನಗರ ಪ್ರದೇಶಗಳಲ್ಲಿ ವಾಣಿಜ್ಯದ ಮುಖ್ಯ ನಗರಗಳು, ಅವುಗಳ ಮಹತ್ವ ಎಷ್ಟಿತ್ತೆಂಬುದನ್ನು ಸಾರುತ್ತವೆ. ಉದಾಹರಣೆಗೆ ಬಲವಾದ ನಗರ ಆರ್ಥಿಕ ಕೇಂದ್ರಗಳಾಗಿದ್ದವುಗಳು ಬೀದರ್, ಗುಲ್ಬರ್ಗಾ, ಗೋಲ್ಕೊಂಡಾ, ವರಂಗಲ್, ನಲಗೊಂಡಾ, ಕೊಂಡಪಲ್ಲಿ, ಅಮ್ರೋಟಿ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಕೊಲ್ಲಾಪುರ, ಮೀರಜ್, ಕಲ್ಯಾಣಿ, ಗಂಧಾರ, ಅಹಮದ್‌ನಗರ, ಬೀರ್, ಜುನ್ನಾರ್, ಬೀರಾರ್ ಇತ್ಯಾದಿ. ಇವುಗಳ ದಕ್ಷಿಣಕ್ಕೆ ವಿಜಯನಗರ ಪ್ರದೇಶದಲ್ಲಿ ದ್ವಾರಸಮುದ್ರ, ಗುತ್ತಿ, ಆಧೋನಿ, ಹೊನ್ನಾವರ, ಚಂದ್ರಗುತ್ತಿ, ಉದಯಗಿರಿ, ಆನೇಗುಂದಿ, ಇಕ್ಕೇರಿ, ಮಂಗಳೂರು, ಬಾರಕೂರು, ಶ್ರೀರಂಗಪಟ್ಟಣ, ಶಿವನ ಸಮುದ್ರ, ಅಂಕೋಲಾ, ಮೀರಜಾನ್, ಬಂಕಾಪುರ, ಹರಿಹರ, ಅರಗ ಇತ್ಯಾದಿ.

ಕರಾವಳಿಯಲ್ಲಿದ್ದ ನಗರಗಳು ಉತ್ತಮ ಬಂದರುಗಳ ಸಾಲಾಗಿದ್ದವು. ಪಶ್ಚಿಮ ಕರಾವಳಿಯ ಉತ್ತರ ಭಾಗದಲ್ಲಿ, ಸಾಗರೋತ್ತರ ವಾಣಿಜ್ಯದಲ್ಲಿ ತೊಡಗಿದ್ದ ಬಂದರುಗಳು, ವಿಜಯನಗರ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವುವೆಂದರೆ ಕಾರವಾರ, ಅಂಕೋಲ, ಮೀರಜಾನ್, ಹೊನ್ನಾವರ, ಭಟ್ಕಳ, ಬಸ್ರೂರು, ಬಾರಕೂರು, ಮಂಗಳೂರು, ಮಂಜೇಶ್ವರ, ಕುಂಬಳ ಮತ್ತು ನೀಲೇಶ್ವರ ಇತ್ಯಾದಿಗಳು.

ಹೀಗೆ ಒಳನಾಡು ಮತ್ತು ಸಾಗರೋತ್ತರ ವಾಣಿಜ್ಯದಲ್ಲಿ ಉಂಟಾದ ಅಪಾರ ಹೆಚ್ಚಳ, ಸಂತೆಗಳು ಮತ್ತು ಮಾರುಕಟ್ಟೆಗಳ ವಿಸ್ತರಣ, ವ್ಯಾಪಾರ ಕೇಂದ್ರಗಳು ಹಾಗೂ ನಗರಗಳ ಉದಯ ಇವು ಬಿರುಸಾಗಿ ಬೆಳೆಯುತ್ತಿದ್ದ ಒಂದು ಸರಕು ಆಧಾರಿತ ಅರ್ಥ ವ್ಯವಸ್ಥೆಯನ್ನು ಸೂಚಿಸುತ್ತವೆ. ಅದೇ ರೀತಿಯಲ್ಲಿ ಆ ಅವಧಿಯ ಕೈಗಾರಿಕಾ ಕ್ಷೇತ್ರದಲ್ಲಿ ಉಂಟಾಗಿದ್ದ ಬೆಳವಣಿಗೆಯ ಬಗ್ಗೆಯೂ ಕೆಲವು ಅಂಶಗಳನ್ನು ನಾವು ಗಮನಿಸಬಹುದು.

೧೬ನೇ ಶತಮಾನದಲ್ಲಿ ಭಾರತ ಮತ್ತು ಯೂರೋಪುಗಳ ಕೈಗಾರಿಕಾ ಪರಿಸ್ಥಿತಿ ಆತ್ಮೀಯ ನೆರೆಹೊರೆಯ ಸಂಬಂಧದ್ದಾಗಿತ್ತು ಎಂದು ಹೇಳುತ್ತಾ ಪ್ರೊ. ಕೆ.ಎಸ್. ಶಿವಣ್ಣ ಮೋರ್‌ಲ್ಯಾಂಡ್‌ನನ್ನು ಉಲ್ಲೇಖಿಸುತ್ತಾರೆ, ಅವರ ಪ್ರಕಾರ :

''ಪಶ್ಚಿಮ ಯೂರೋಪಿನೊಂದಿಗೆ ಇಂದಿನ ಸ್ಥಿತಿ ಏನಿದೆಯೋ ಅದಕ್ಕಿಂತ ಮುಂದುವರಿದ ಸ್ಥಿತಿಯಾಗಿತ್ತು ಎಂಬುದನ್ನು ಕೈಗಾರಿಕೆಯ ಕ್ಷೇತ್ರಕ್ಕೆ ಅನ್ವಯಿಸಿ ನಾನು ಹೇಳಬಹುದು, ನನ್ನ ಮನಸ್ಸಿಗೆ ಅದು ವಿವಾದಾಸ್ಪದವಾಗಿಲ್ಲ'' [14]

ಇಂದಿನ ಮತ್ತು ಮಧ್ಯಯುಗೀನ ಕೈಗಾರಿಕಾವ್ಯವಸ್ಥೆಯ ನಡುವೆ ಕಂಡುಬಂದ ಒಂದು ಮುಖ್ಯವಾದ ವ್ಯತ್ಯಾಸವೆಂದರೆ, ಆಹಾರ ವಸ್ತುಗಳ ಹೊರತು ತಮ್ಮ ಮಿಕ್ಕೆಲ್ಲ ಅಗತ್ಯಗಳಿಗೆ ಭಾರತದ ಜನರು ಇತರ ದೇಶಗಳನ್ನು ಈಗ ಅತಿಯಾಗಿ ಅವಲಂಬಿಸಿದ್ದಾರೆ. ಆದರೆ ಮಧ್ಯಯುಗದಲ್ಲಿ ಅಂದರೆ ನಾವು ಈಗ ಪರಿಶೀಲಿಸುತ್ತಿರುವ ಅವಧಿಯ ಕಾಲಘಟ್ಟದಲ್ಲಿ ಭಾರತವು ಸ್ವಯಂಪೂರ್ಣವಾಗಿತ್ತು. ಆಗ ಬಹುವಾಗಿ ಆಮದು ಮಾಡಿಕೊಳ್ಳುತ್ತಿದ್ದುದು ಯುದ್ಧಕ್ಕಾಗಿ ಕುದುರೆಗಳನ್ನು ಹಾಗೂ ರಾಜರ ಆಸ್ಥಾನಗಳಿಗಾಗಿ ವೈಭವದ ವಸ್ತುಗಳನ್ನು ಮಾತ್ರ. ಜನಸಾಮಾನ್ಯರ ಜೀವನವು ವಿದೇಶೀ ಆಮದುಗಳಿಂದಾಗಿ ಬಾಧೆಗೊಂಡಿರಲಿಲ್ಲ.

ವಿಜಯನಗರ ಪಟ್ಟಣದಲ್ಲಿ ಹಲವಾರು ಮಿಶ್ರಿತ ಹಾಗೂ ಅಮಿಶ್ರಿತ ಲೋಹಗಳು ಕಂಡುಬಂದಿವೆ. ಅಲ್ಲಿ ವಜ್ರಗಳ ವ್ಯಾಪಾರವು ಬಹುವಾಗಿತ್ತು. ಅಲ್ಲಿಗೆ ಬಹುತೇಕ ವಜ್ರಗಳು ಬರುತ್ತಿದ್ದುದು ವಜ್ರಕರೂರಿನಿಂದ. ಲೋಹಗಳ ವಿಷಯದಲ್ಲೂ ವಿಜಯನಗರವು ಸಾಕಷ್ಟು ವಾಣಿಜ್ಯವನ್ನು ನಡೆಸುತ್ತಿದ್ದಿತು. ಹೇರುಗಟ್ಟಲೆ ಕಬ್ಬಿಣವನ್ನು ರಫ್ತು ಮಾಡಲಾಗುತ್ತಿತ್ತು. ಆಭರಣಗಳು, ಯುದ್ಧದ ಆಯುಧಗಳು ಮತ್ತು ಮನೆ ಬಳಕೆಯ ವಸ್ತುಗಳ ತಯಾರಿಕೆಯಲ್ಲಿ ಅಂದಿನ ಲೋಹಕಾರರು ತೊಡಗಿರುತ್ತಿದ್ದರು.

೧೫ನೇ ಶತಮಾನದ ದಕ್ಷಿಣ ಭಾರತದಲ್ಲಿ, ದಕ್ಷಿಣ ಆಫ್ರಿಕಾ, ಅಬಿಸೀನಿಯಾ ಮತ್ತು ಅರೇಬಿಯಾಗಳ ವರ್ತಕರು ಭಾರತಾದ್ಯಂತ ಹರಡುವುದಕ್ಕಾಗಿ ಇಲ್ಲಿನ ಬಂದರುಗಳಿಗೆ ವಿವಿಧ ವಸ್ತುಗಳನ್ನು ತರುತ್ತಿದ್ದರು. ಇಲ್ಲಿಂದ ರಫ್ತಾಗುತ್ತಿದ್ದ ಮುಖ್ಯ ವಸ್ತುಗಳೆಂದರೆ ಬಟ್ಟೆ, ಅಕ್ಕಿ, ಕಬ್ಬಿಣ, ಪೆಟ್ಲುಪ್ಪು, ಸಕ್ಕರೆ ಮತ್ತು ಸಾಂಬಾರು ವಸ್ತುಗಳು.

ಕರಾವಳಿ ಮತ್ತು ಒಳನಾಡುಗಳಲ್ಲಿ ವ್ಯಾಪಾರದಲ್ಲಿ ನಿರತರಾಗಿದ್ದವರಲ್ಲಿ ಪ್ರಮುಖರು ಮುಸ್ಲಿಮರು ಮತ್ತು ಮಲಬಾರಿಗಳು ಮತ್ತು ಚಟ್ಟಿಗಳು ಅಥವಾ

ಸೆಟ್ಟಿಗಳು. ಮುಸ್ಲಿಮರು, ಮಲಬಾರಿಗಳು ಕರಾವಳಿಯಲ್ಲಿ ಹೆಚ್ಚು ವಹಿವಾಟು ಹೊಂದಿದ್ದರೆ, ಸೆಟ್ಟಿಗಳು ಒಳನಾಡಿಗೆ ತಮ್ಮ ವಹಿವಾಟನ್ನು ಸೀಮಿತಗೊಳಿಸಿ ಕೊಂಡಿದ್ದರು. ವರ್ತಕ ಜನಾಂಗವಾಗಿ ಮುಸ್ಲಿಮರಿಗೆ ಹಿನ್ನಡೆಯುಂಟಾದದ್ದು ನಾವು ಪರಿಶೀಲಿಸುತ್ತಿರುವ ಕಾಲದಲ್ಲಿ ಪೋರ್ಚುಗೀಸರು ಬಂದದ್ದರಿಂದ.

ವಿಜಯನಗರದ ಪತನದಿಂದ ಪೋರ್ಚುಗೀಸರ ಅಧಿಕಾರವು ಕುಂಠಿತ ವಾಯಿತು. ಏಕೆಂದರೆ ಅದು ನಿಂತಿದ್ದುದು ವಿಜಯನಗರದೊಂದಿಗೆ ನಡೆಸುತ್ತಿದ್ದ ವ್ಯಾಪಾರದ ಮೇಲೆ.

ಈ ಕಾಲಘಟ್ಟದಲ್ಲಿ ವರ್ತಕರು ಹಾಗೂ ಕುಶಲಕರ್ಮಿಗಳು ಪರಸ್ಪರ ಸಂಘಟಿತರಾಗಿ ಶ್ರೇಣಿಗಳನ್ನು ರಚಿಸಿಕೊಂಡಿದ್ದರು.

ಈ ಬಗ್ಗೆ ಡೊಮಿಂಗೋ ಪೇಸ್ ಹೇಳುತ್ತಾನೆ :

''ಎಲ್ಲಾ ಕಸುಬುಗಳ ಮತ್ತು ವರ್ತಕರ ಸಂಘಗಳು ನಮ್ಮ ಕಡೆ ಇರುವ ಕನ್‌ಫ್ರಾಟಿಮಿಟೋಗಳಂತೆ ಇಲ್ಲೂ ಇವೆ''.[15]

ಕಸುಬು ಮಂಡಳಿಗಳನ್ನು ಕುರಿತು 'ಆಮುಕ್ತಮಾಲ್ಯದ' ರೇಷ್ಮೆ ನೇಕಾರರ, ಹತ್ತಿ ನೇಕಾರರ ಮತ್ತು ಅಕ್ಕಸಾಲಿಗಳ ಸಂಘಗಳನ್ನೂ , ಚೀಲ ತಯಾರಿಸುವವರ ಮತ್ತು ಬುಟ್ಟಿ ಹೆಣೆಯುವವರ ಸಂಘಗಳನ್ನೂ ಉಲ್ಲೇಖಿಸುತ್ತದೆ. ಅನೇಕ ಶಾಸನಗಳು ಪಾಂಚಾಲೆಯರು ಎಂಬ ಹೆಸರಿನ ಕುಶಲಕರ್ಮಿಗಳ ಸಂಘಗಳನ್ನು ಹೇಳುತ್ತವೆ. ಐದು ತೆರನಾದ ಕಸುಬುದಾರರ ಸಂಘಗಳು ಅವು.

ವರ್ತಕ ಸಂಘಗಳು ಕಸುಬು ಸಂಘಗಳ ಮೇಲೆ ಅಧಿಕಾರವನ್ನು ಚಲಾಯಿಸುತ್ತಿದ್ದವು ಎಂಬುದನ್ನು ಕೆಲವು ಶಾಸನಗಳು ಸೂಚಿಸುತ್ತವೆ. ಬಹುಶಃ ವರ್ತಕಸಂಘವು ಕಸುಬುದಾರರಿಗೆ ಹಣವನ್ನು ಸಾಲವಾಗಿ ಕೊಟ್ಟು, ನಿರ್ದಿಷ್ಟ ಸಮಯದೊಳಗೆ ಪೂರೈಸಬೇಕೆಂದು ವಿಧಿಸುತ್ತಿತ್ತೆಂದು ತೋರುತ್ತದೆ. ಇದು ಎಡಗೈ ಮತ್ತು ಬಲಗೈ ಪಂಗಡಗಳ ನಡುವಿನ ಸಂಘರ್ಷಕ್ಕೆ ದಾರಿ ಮಾಡಿತೆಂಬುದನ್ನು ಈ ಅಧ್ಯಾಯದ ಆರಂಭದಲ್ಲೇ ಪ್ರಸ್ತಾಪಿಸಲಾಗಿದೆ.

ಕೃಷಿ ಉತ್ಪನ್ನಗಳ ಮಾರಾಟದ ಪ್ರಮಾಣ ಎಷ್ಟಿತ್ತೆಂದರೆ ಅದು ವರ್ತಕ ಸಂಘಗಳ ಬೆಳವಣಿಗೆಗೆ ಮಹತ್ವದ ಕೊಡುಗೆಯನ್ನು ನೀಡಿತ್ತು. ಇಂತಹ ಸಂಘಗಳ ಅಸ್ತಿತ್ವವನ್ನು ರಜಾಕ್ ಮತ್ತು ಪೇಸ್‌ನಂತಹ ವಿದೇಶೀ ಪ್ರವಾಸಿಗರು ಸಮರ್ಥಿಸಿದ್ದಾರೆ. ಅವರಿಗೆ ಬೇರೆ ಬೇರೆ ಹೆಸರುಗಳಿದ್ದವು. ಬಣಜಿಗರು, ನಾನದೇಶಿಗರು, ಉಭಯ - ನಾನದೇಶಿಗರು, ನಖರರು, ವೈಶ್ಯರು, ಶೆಟ್ಟಿಗಳು, ಸೆಟ್ಟಿ - ಗುಟ್ಟಾರು, ವೀರ ಬಣಜಿಗರು ಇತ್ಯಾದಿ. ಈ ಸಂಘಗಳ ಮುಖ್ಯಸ್ಥರು ವಾಣಿಜ್ಯ ಕೇಂದ್ರಗಳ ಮುಖ್ಯಸ್ಥರೂ ಆಗಿದ್ದು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಿದ್ದರು. ಉಭಯ ನಾನಾ ದೇಸಿ, ಪಟ್ಟಣ ಸ್ವಾಮಿ, ಮಹಾವಡ್ಡ ವ್ಯವಹಾರಿ, ವಡ್ಡ ವ್ಯವಹಾರಿ, ಷೆಟ್ಟಿ ವ್ಯಾಪಾರಿ,/ಸೆಟ್ಟಿ, ಸ್ವಾಮಿ

ಪೃಥ್ವೀ ಶೆಟ್ಟಿ, ಸೆಟ್ಟಿ ಪಟ್ಟಣ ಸ್ವಾಮಿ, ಸೆಟ್ಟಿತನ, ಪುರಪತಿ, ನಗರೇಶ್ವರ, ಪಟ್ಟಣಾಧೀಶ್ವರ ಹಾಗೂ ಮಹಾನ್ ಪ್ರಭು. ಈ ವರ್ತಕ ಸಮುದಾಯಗಳಲ್ಲಿ ಈ ಕಾಲಾವಧಿಯಲ್ಲಿ ಸಾಲು ಮೂಲೆ ಬಣಜಿಗರು ಮುಖ್ಯಸ್ಥರಾಗಿದ್ದರು. ಅವರ ಸಂಘಟನೆಯನ್ನು ಕುರಿತು ಸ್ವಾರಸ್ಯಕರ ವಿವರಗಳು ಲಭ್ಯವಿವೆ. ೧೧ ಮತ್ತು ೧೨ನೇ ಶತಮಾನಗಳಲ್ಲಿ ವಿಶೇಷತಃ ವೀರ ಬಣಜಿಗರು ಉತ್ತರ ಕರ್ನಾಟಕದಲ್ಲಿ ಪ್ರಧಾನರಾಗಿದ್ದರು. ೧೪ನೆಯ ಶತಮಾನದ ನಂತರ ಸಾಲುಮೂಲೆ ಬಣಜಿಗರು ಮಹತ್ವವನ್ನು ಪಡೆದರು. ಇವರು ವಿಜಯನಗರಸಾಮ್ರಾಜ್ಯದ ೨೬ ನಗರಗಳಲ್ಲಿ ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವ ಸಲುವಾಗಿ ಸಂತೆಗಳನ್ನು ಸ್ಥಾಪಿಸಿದ್ದರು.

ಈ ೨೬ ವ್ಯಾಪಾರ ಕೇಂದ್ರಗಳಿಗೆ ಸೇರಿದ ಬಣಜಿಗ ವರ್ತಕರು ತಮ್ಮ ಹಿತವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಹಾಗೂ ವಿಜಯನಗರ ಸರಕಾರದೊಂದಿಗೆ ವ್ಯವಹರಿಸುವ ಸಲುವಾಗಿ ಒಕ್ಕೂಟವೊಂದನ್ನು ಮಾಡಿಕೊಂಡಿದ್ದರು. ಇದು ನಮಗೆ ಮಧ್ಯಕಾಲದ ಜರ್ಮನಿಯಲ್ಲಿ ಹೆಚ್ಚೂ ಕಡಿಮೆ ಇದೇ ಉದ್ದೇಶದಿಂದ ಸ್ಥಾಪಿತವಾಗಿದ್ದ ಹನ್ಸಿಯಾಟಿಕ್ ಲೀಗ್ ಅನ್ನು ನೆನಪಿಗೆ ತರುತ್ತದೆ.

ಈ ಸಾಮ್ರಾಜ್ಯದಲ್ಲಿ ೩೦೦ ಬಂದರುಗಳಿದ್ದವು. ಹಿಂದೂ ಮಹಾಸಾಗರದ ದ್ವೀಪಗಳೊಂದಿಗೆ ಮಲಯಾ, ಬರ್ಮಾ, ಚೀನಾ, ಅರೇಬಿಯಾ, ಪರ್ಷಿಯಾ, ದಕ್ಷಿಣ ಆಫ್ರಿಕಾ, ಅಬಿಸೀನಿಯಾ ಮತ್ತು ಪೋರ್ಚುಗಲ್‌ನೊಂದಿಗೆ ವಾಣಿಜ್ಯ ಸಂಪರ್ಕಗಳನ್ನು ಈ ರಾಜ್ಯವು ಇರಿಸಿಕೊಂಡಿತ್ತು. ಆನೆ, ಕುದುರೆ, ಮುತ್ತು, ತಾಮ್ರಗಳು, ಪಾದರಸ, ಚೀನಾಂಬರ, ರೇಷ್ಮೆ ಮತ್ತು ವೆಲ್ವೆಟ್ ಬಟ್ಟೆಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಒಳನಾಡಿನ ಸಾರಿಗೆ ಅಗ್ಗವಾಗಿತ್ತು. ಕಾವಡಿ(ಅಡ್ಡೆ)ಗಳು, ತಲೆಹೊರೆಗಳು, ಕುದುರೆಗಳು, ಎತ್ತುಗಳು, ಗಾಡಿಗಳು ಮತ್ತು ಕತ್ತೆಗಳು - ಇವುಗಳ ಮೇಲೆ ಸಾಮಾನುಗಳ ಸಾಗಾಣಿಕೆ ನಡೆಯುತ್ತಿತ್ತು.

ಕರಾವಳಿಪ್ರದೇಶದ ವ್ಯಾಪಾರವು ಹಡಗುಗಳಲ್ಲಿ ನಡೆಯುತ್ತಿತ್ತು. ಬಾರ್ಬೋಸನ ಪ್ರಕಾರ ದಕ್ಷಿಣ ಭಾರತವು ಮಾಲ್ಡೀವ್ ದ್ವೀಪಗಳಲ್ಲಿ ತಯಾರಾದ ಹಡಗುಗಳನ್ನು ಪಡೆದಿತ್ತು. ಶಾಸನಗಳ ಪ್ರಕಾರ ವಿಜಯನಗರ ರಾಜರು ಹಡಗಿನ ಪಡೆಯೊಡೆಯ ರಾಗಿದ್ದುದಲ್ಲದೆ ಆಗಿನ ಜನ ಹಡಗು ಕಟ್ಟುವ ಕಲೆಯನ್ನು ಪೋರ್ಚುಗೀಸರಿಗಿಂತ ಮೊದಲೇ ಬಲ್ಲವರಾಗಿದ್ದರು.

ಇದೇ ಅವಧಿಯಲ್ಲಿ, ಇವರ ನೆರೆಯ ರಾಜ್ಯವಾಗಿದ್ದ ಬಹಮನಿ ಆದಿಲ್‌ಷಾಹಿ ಸಾಮ್ರಾಜ್ಯದೊಳಗಿನ ಸಾಮಾಜಿಕ ಪರಿವರ್ತನೆಯ ದಿಕ್ಕು ಹಾಗೂ ಅಲ್ಲಿ ಉಂಟಾಗುತ್ತಿದ್ದ ಆರ್ಥಿಕ ಸಂರಚನೆಯ ಪ್ರಕ್ರಿಯೆಗಳು, ವಿಜಯನಗರ ಸಾಮ್ರಾಜ್ಯದ ಪ್ರದೇಶದೊಳಗೆ ನಡೆಯುತ್ತಿದ್ದುದಕ್ಕೆ ಬಹುಮಟ್ಟಿಗೆ ತಾಳೆಯಾಗುತ್ತಿದ್ದವು.

ಎರಡೂ ರಾಜ್ಯಗಳ ಆಳುವ ವರ್ಗಗಳ ನಡುವೆ ಇದ್ದ ಹಿಂದು ಹಾಗೂ ಮುಸ್ಲಿಂ ಎಂಬ ಧಾರ್ಮಿಕ ಭಿನ್ನತೆಯು ಏನಿದ್ದರೂ ಹೊರ ಆವರಣದ ಬಣ್ಣವಾಗಿದ್ದು,

ಈ ಮಧ್ಯೆ ಊಳಿಗಮಾನ್ಯತೆಯ ತಳಹದಿಯ ಮೇಲೆ ಸರಕು ಉತ್ಪಾದನೆಯು ಅಭಿವೃದ್ಧಿಗೊಳ್ಳುತ್ತಿರುವುದನ್ನು ಅಲ್ಲಿಯೂ ನಾವು ಗಮನಿಸಬಹುದು.

''೧೩ನೇ ಶತಮಾನದ ಆರಂಭವು ಹಲವಾರು ವಿಧದಲ್ಲಿ ಭಾರತೀಯ ಇತಿಹಾಸದೊಳಗೆ ಒಂದು ತಿರುವನ್ನು ಗುರುತಿಸುತ್ತದೆ. ಭಾರತೀಯ ಊಳಿಗಮಾನ್ಯತೆಯನ್ನು ಸಾಮಾನ್ಯವಾಗಿ ಎರಡು ವಿಭಿನ್ನ ಕಾಲಘಟ್ಟಗಳಾಗಿ ಗುರುತಿಸಲಾಗುತ್ತದೆ''.[16]

ಸಾಕಿ ಸೂಚಿಸುವಂತೆ ಕರ್ನಾಟಕವು ಈ ಊಳಿಗಮಾನ್ಯತೆಯಲ್ಲಿ ಮೂರು ಅವಧಿಗಳನ್ನು ಒಳಗೊಂಡಿದೆ. ಅವು ಆರಂಭಿಕ, ಮಧ್ಯಾವಧಿ ಹಾಗೂ ಉತ್ತರಾವಧಿ.

''ಪ್ರತೀ ಅವಧಿಯು ತನ್ನ ಸ್ಥಿತ್ಯಂತರದ ಬಿಂದುವಿನಲ್ಲಿ ಜನಪ್ರಿಯ ಆಂದೋಲನಗಳಿಂದ ಗುರುತಿಸಲ್ಪಟ್ಟಿದೆ. ಕೆಲವು ಸಮಯಗಳಲ್ಲಿ ಈ ಆಂದೋಲನಗಳು ವಚನಕಾರರ ವಿಷಯದಲ್ಲಿ ಗುರುತಿಸಬಹುದಾಗಿರುವ ಹಾಗೆ ಸ್ವತಂತ್ರ ಜನಮುಖಿ ಆಶಯಗಳನ್ನು ಹೊಂದಿರುತ್ತಿದ್ದವು. ಮತ್ತೆ ಕೆಲವು ಸಮಯಗಳಲ್ಲಿ ಶ್ರೀ ವೈಷ್ಣವ ಚಳುವಳಿಯು ಜೈನಧರ್ಮದ ವಿರುದ್ಧ ನಡೆಸಿದ ಜನಪ್ರಿಯ ಆಂದೋಲನಗಳ ಪ್ರಕರಣದಲ್ಲಿ ಇರುವಂತೆ, ಊಳಿಗಮಾನ್ಯ ನಾಯಕತ್ವದ ಅಡಿಯಲ್ಲಿ ತರಬೇತಿ ಹೊಂದಿರುತ್ತಿದ್ದವು. ಈ ಎರಡೂ ಪ್ರಕರಣಗಳಲ್ಲಿ, ಈ ಬದಲಾವಣೆಯ ಪ್ರೇರಕ ಶಕ್ತಿಗಳು, ತಳದ ಕಡೆಯಿಂದ ಅಂದರೆ ದುಡಿಯುವ ಜನಸಮೂಹಗಳ ಕಡೆಯಿಂದ ಬಂದವುಗಳಾಗಿದ್ದವು. ಇದು ಇತಿಹಾಸವನ್ನು ನಿರ್ಮಿಸುವ ಅವರ ಸಾಮೂಹಿಕ ಕಾರ್ಯಾಚರಣೆಯಾಗಿರುತ್ತಿತ್ತು''.[17]

ನಾವು ವಿಜಯನಗರ ಸಾಮ್ರಾಜ್ಯದ ಕಾಲಾವಧಿಯಲ್ಲಿ ಈ ಬಗೆಯ ಸಾಮಾಜಿಕ ಸ್ಥಿತ್ಯಂತರಗಳನ್ನು ಗಮನಿಸುತ್ತೇವೆ. ಈ ಸ್ಥಿತ್ಯಂತರಕ್ಕೆ ಆ ಕಾಲಾವಧಿಯಲ್ಲಿ ನಡೆದುಕೊಂಡು ಬಂದ ಸರಕು ಉತ್ಪಾದನೆಯ ಹೆಚ್ಚಳ, ಆದರಿಂದ ಮಹತ್ತರವಾಗಿ ವಿಸ್ತರಿಸಲ್ಪಟ್ಟ ವಾಣಿಜ್ಯ ಚಟುವಟಿಕೆಗಳ ತಳಹದಿ ಇತ್ತು. ಅವು ಯಾವ ರೀತಿಯಲ್ಲಿ ಕಾರ್ಯಪ್ರವೃತ್ತವಾಗಿದ್ದವು ಎಂಬುದನ್ನು ನಾವೀಗ ಗಮನಿಸೋಣ.

೧೩ನೇ ಶತಮಾನದಲ್ಲಿ ಚೋಳರ ಅವನತಿಯೊಂದಿಗೆ ನಿಧಾನಗೊಳಿಸಲ್ಪಟ್ಟಿದ್ದ ನಗರೀಕರಣ ಪ್ರಕ್ರಿಯೆ ಹಾಗೂ ಪ್ರಭುತ್ವಗಳ ಆಶ್ರಯದಲ್ಲಿ ಬೆಳೆಯತೊಡಗಿದ್ದ ಕಸುಬುದಾರ ಹಾಗೂ ಕುಶಲಕರ್ಮಿ ವರ್ಗಗಳ ಬೆಳವಣಿಗೆ, ಈ ಅವಧಿಯ ಹೊತ್ತಿಗೆ ಪುನಶ್ಚೇತನಗೊಳ್ಳತೊಡಗಿತ್ತು. ಇದು ಹೊಸ ಬಗೆಯ ಅಧಿಕಾರಶಾಹಿ ಸೃಷ್ಟಿಯಾಗುವುದರ ಜೊತೆ ಸೇರಿ , ಬಟ್ಟೆ ಸರಕಿಗೆ ಇದ್ದ ಬೇಡಿಕೆಯನ್ನು ಹೆಚ್ಚಿಸಿತು.

ನಾಯಕರು, ಪಾಳೇಗಾರರು ಮುಂತಾದ ಹೊಸ ಅಧಿಕಾರಶಾಹಿಯ ಬೆಳವಣಿಗೆಯು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅಪಾರ ಸಂಖ್ಯೆಯಲ್ಲಿ ಸೃಷ್ಟಿಯಾಯಿತು. ಅವರನ್ನು ಅಮರನಾಯಕರೆಂದು ಕರೆಯುತ್ತಿದ್ದರು. ಈ ಅಮರನಾಯಕರು ಒಂದು ಹಳ್ಳಿಗಳ ಗುಂಪಿನ ನಿರ್ದಿಷ್ಟ ಪ್ರದೇಶವನ್ನು ಆಳುತ್ತಿದ್ದರು.

ಉಪಸಾಮಂತೀಕರಣ ಪ್ರಕ್ರಿಯೆಯೂ ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಬಹುವಿಸ್ತೃತ ರೂಪವನ್ನು ಪಡೆದುಕೊಂಡಿತ್ತು. ಈ ಅಮರನಾಯಕರು ತಂತಮ್ಮ ನಿರ್ದಿಷ್ಟ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕೃಷಿ, ನೀರಾವರಿ, ಸರಕುಗಳ ಉತ್ಪಾದನೆ, ರಸ್ತೆ ಕಾಮಗಾರಿ, ನಿರ್ಮಾಣ ಮುಂತಾದುವುಗಳನ್ನು ವಿಜಯನಗರ ಸಾಮ್ರಾಜ್ಯದ ಕೇಂದ್ರಾಡಳಿತ ಮಾದರಿಯಲ್ಲೇ ನಡೆಸುತ್ತಿದ್ದರು. ಇದೊಂದು ಅಧೀನ ಒಕ್ಕೂಟ ವ್ಯವಸ್ಥೆಯೆಂಬಂತೆ ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿ ಅಮರನಾಯಕನೂ ಬಹಳ ಚಿಕ್ಕದಾದ ಕಾರ್ಯಕ್ಷೇತ್ರವನ್ನು ಹೊಂದಿರುತ್ತಿದ್ದನಾದ್ದರಿಂದ, ಅವು ತಮ್ಮ ಆಸ್ಥಾನಗಳಲ್ಲಿ ವಿಜಯನಗರದ ಮಾದರಿಯನ್ನೇ ಅನುಸರಿಸುತ್ತ, ಸ್ಥಳೀಯ ಕಾರ್ಯಾಂಗ ಹಾಗೂ ಸೇನಾಂಗಗಳನ್ನು ಹೊಂದಿರುತ್ತಿದ್ದವಾದ್ದರಿಂದ, ಒಂದು ಕಡೆಯಲ್ಲಿ ನಿರ್ದಿಷ್ಟ ಸ್ಥಾನಿಕ ಬೆಳವಣಿಗೆಯು ಗಮನ ವಹಿಸಿ ನಿರ್ವಹಿಸಲ್ಪಟ್ಟುದಲ್ಲದೆ, ಅಧಿಕಾರ, ಸೇನೆ ಇತ್ಯಾದಿ ಉದ್ಯೋಗಿಗಳ ಜನಸಂಖ್ಯೆಯು ತೀವ್ರವಾಗಿ ಹೆಚ್ಚಾಯಿತು. ಈ ಹೆಚ್ಚಳವು ಉತ್ತಮ ದರ್ಜೆಯ ಬಟ್ಟೆಗಾಗಿ ಇದ್ದ ಬೇಡಿಕೆಯನ್ನು ಹೆಚ್ಚಿಸಿತು.

ಈ ಹಿನ್ನೆಲೆಯಲ್ಲಿ ಈ ಸಮಾಜದ ನೇಕಾರ ಜಾತಿಗಳಾಗಿದ್ದ ದೇವಾಂಗ, ಪದ್ಮಸಾಲೆ, ಜೇಡ ಹಾಗೂ ಸೇಣಿಗಾರರಿಗೆ ಮಹತ್ವ ಹಾಗೂ ಆರ್ಥಿಕ ಚೈತನ್ಯ ಬರತೊಡಗಿದವು.

ವೀರಶೈವ ಚಳುವಳಿಯ ನಂತರ, ಆಳುವ ವರ್ಗಗಳ ಒಳಗಿನ ಜಾತಿ ಸಂರಚನೆಯಲ್ಲಿ, ನಾವು ಹಲವು ವಿಭಿನ್ನ ಸ್ಥಿತ್ಯಂತರಗಳನ್ನು ಗಮನಿಸಬಹುದಾಗಿದೆ.

ಉಪಸಾಮಂತೀಕರಣ ತೀವ್ರಗೊಳ್ಳುತ್ತಲೇ ಹೋದ ಈ ಕಾಲಘಟ್ಟದಲ್ಲಿ, ಸೇನಾಶಕ್ತಿಯ ಪ್ರಾಮುಖ್ಯತೆಯು ಬೆಳೆಯುತ್ತಲೇ ಹೋದದ್ದರಿಂದ, ಸಾಮಾಜಿಕ ರಂಗದಲ್ಲಿ ಸಮರಶೀಲ ಜಾತಿಗಳ ಪ್ರಾಮುಖ್ಯತೆಯು ಬೆಳೆಯುತ್ತಾ ಹೋಯಿತು. ಬಲಗೈ ಶ್ರೇಣಿಯ ನಾಯಕತ್ವ ಸ್ಥಾನದಿಂದ ಸಾಲುಮೂಲೆ ಬಣಜಿಗರ ಪ್ರಾಬಲ್ಯ ದಿಂದಾಗಿ ಸ್ಥಾನಾಂತರಗೊಂಡಿದ್ದ ವೀರ ಬಣಜಿಗರು ವ್ಯಾಪಾರೀ ವಿಷಯಗಳಲ್ಲಿ ಇನ್ನೂ ತಮ್ಮ ಮಹತ್ವವನ್ನು ಪೂರ್ತಿ ಕಳೆದುಕೊಂಡಿರಲಿಲ್ಲ. ಇವರ ಜೊತೆಗೆ ಆಂಧ್ರಮೂಲದ ಕೋಮಟಿಗಳು ಮತ್ತು ಬಲಿಜಿಗರು ಪ್ರಾಮುಖ್ಯತೆಯನ್ನು ಪಡೆದುಕೊಂಡಿದ್ದರು.

ವಿಜಯನಗರ ಆಳ್ವಿಕೆಯೊಂದಿಗೆ ದಕ್ಷಿಣ ಕನ್ನಡದಲ್ಲಿ ಒಂದು ವಾಣಿಜ್ಯ ಚಟುವಟಿಕೆಯ ಅಲೆ ಏರ್ಪಟ್ಟಿತ್ತು. ಗೋವಾದಿಂದ ನಿರಾಶ್ರಿತರಾಗಿ ಬಂದಿದ್ದ ಗೌಡ ಸಾರಸ್ವತರು ಹಾಗೂ ಸ್ಥಳೀಯ ಜಾತಿಯಾಗಿದ್ದ ಬಂಟರ ಒಂದು ವಿಭಾಗವು ತನ್ನನ್ನು ಕೃಷಿಯಿಂದ ಬೇರ್ಪಡಿಸಿಕೊಳ್ಳುತ್ತಾ, ಕರಾವಳಿಯಲ್ಲಿ ಸಾಗರೋತ್ತರವಾಗಿ ನಡೆಯುತ್ತಿದ್ದ ಅಕ್ಕಿ ವ್ಯಾಪಾರವನ್ನು ಕೈಗೆತ್ತಿಕೊಂಡು, ಶೆಟ್ಟಿ ಎಂಬ ಜಾತಿವಾಚಕ ಗುರುತನ್ನು ಧರಿಸಿಕೊಂಡು ಮಹತ್ವಕ್ಕೇರಿತು.

ವಿಜಯನಗರ ಸಮಯದಲ್ಲಿ ಪ್ರವರ್ಧಮಾನಕ್ಕೆ ಬಂದ ಮತ್ತೊಂದು ಗುಂಪೆಂದರೆ ಪಂಚಾಳರು ಮತ್ತು ನೇಕಾರರು, ಪಂಚಾಳರ ಗುಂಪು ಅಕ್ಕಸಾಲೀ ಬೆಳ್ಳಿ

ಕೆಲಸದವರು, ಕಮ್ಮಾರರು, ತಾಮ್ರ ಕೆಲಸದವರು ಮತ್ತು ಬಡಗಿಗಳನ್ನು ಒಳಗೊಂಡಿದ್ದಿತು. ಇವರಲ್ಲದೆ ಈ ಸಮಾಜದಲ್ಲಿ ಸರಕು ಉತ್ಪಾದಕರಾಗಿ ಪ್ರವರ್ಧಮಾನಕ್ಕೆ ಬಂದ ಮತ್ತೊಂದು ಬಣವೆಂದರೆ, ಭೂ ಹಿಡುವಳಿದಾರ ರೈತ ಜಾತಿಗಳಾದ ಒಕ್ಕಲಿಗರು ಮತ್ತು ಲಿಂಗಾಯಿತರ ಒಂದು ವಿಭಾಗ.

ಈ ಸಂದರ್ಭದಲ್ಲಿ ನಾವು ಗಮನಿಸಬೇಕಾಗಿರುವ ಒಂದು ಅಂಶವೆಂದರೆ, ದಕ್ಷಿಣ ಕನ್ನಡದಲ್ಲಿ ಆಳ್ವಿಕೆ ನಡೆಸುತ್ತಿದ್ದ ಮಧ್ಯಾವಧಿಯ ಆಳುಪರ ಆಳ್ವಿಕೆಯು ಕೊನೆಗೊಂಡು, ವಿಜಯನಗರವು ಆ ಪ್ರದೇಶವನ್ನು ಆಕ್ರಮಿಸಿದ ನಂತರವೇ ಅಲ್ಲಿ ಸರಕು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಹೆಚ್ಚಳ ಬಂದಿತು. ಇದು ಈ ವಿಷಯದಲ್ಲಿ, ದಕ್ಷಿಣ ಕನ್ನಡ ಹಾಗೂ ಕರ್ನಾಟಕದ ಇತರ ಪ್ರಾಂತ್ಯಗಳ ನಡುವೆ ಊಳಿಗಮಾನ್ಯತೆಯ ಸ್ಥಿತ್ಯಂತರದ ವಿಷಯದಲ್ಲಿ ಸುಮಾರು ಮೂರು ಶತಮಾನಗಳ ಅಂತರವನ್ನು ನಿರ್ಮಿಸಿತು.

ಅಲ್ಲಿ ದ್ವೈತ ಮತವು ಮಧ್ವಾಚಾರ್ಯರ ನೇತೃತ್ವದಲ್ಲಿ ಸಂಘಟಿತಗೊಂಡಿತು. ಆ ಪ್ರದೇಶದಲ್ಲಿ ಆಳುವ ವರ್ಗಗಳ ಮಧ್ಯಕ್ಕೆ ಶೂದ್ರ ಶಕ್ತಿಗಳ ಪ್ರವೇಶದೊಂದಿಗೆ ಉಂಟಾಗತೊಡಗಿದ್ದ ಸಂರಚನಾತ್ಮಕ ಬದಲಾವಣೆಗಳಿಗೆ ಪ್ರತಿಕ್ರಿಯಿಸಿದ ವಿಧಾನವೇ ದ್ವೈತಮತವಾಗಿತ್ತು. ದ್ವೈತ ಮತವು ಅದ್ವೈತದೊಂದಿಗೆ ತತ್ವ ಶಾಸ್ತ್ರೀಯ ಭೇದಗಳನ್ನು ಏನೇ ಹೇಳಿಕೊಂಡಿರಲಿ, ಅದು ತನ್ನ ಕಾರ್ಯಾಚರಣೆಯಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಊಳಿಗಮಾನ್ಯ ಆಳುವ ವರ್ಗಗಳ ಸಂರಚನೆಯಲ್ಲಿ ಉಂಟಾಗತೊಡಗಿದ್ದ ಶೂದ್ರ ಜಾತಿಗಳ ಪ್ರವೇಶಪ್ರಕ್ರಿಯೆಗೆ, ಹೊಂದಾಣಿಕೆ ಮಾಡಲು ಅಗತ್ಯವಾಗಿದ್ದ ಸ್ಥಿತ್ಯಂತರಗಳನ್ನು ನೆರವೇರಿಸುವ ಉದ್ದೇಶವನ್ನು ಈಡೇರಿಸಿತು.

ಅದೇ ರೀತಿಯಲ್ಲಿ ವೈಷ್ಣವ ಚಳುವಳಿಯು, ಬದಲಾಗುತ್ತಿದ್ದ ವರ್ಗ ಸಂರಚನೆಯ ಪ್ರಕ್ರಿಯೆಯನ್ನು ಸಾಧ್ಯಗೊಳಿಸಲು ಪ್ರವರ್ಧಮಾನಕ್ಕೆ ಬಂದು ತನ್ನ ಕಾರ್ಯಾಚರಣೆಯಲ್ಲಿ ನಿರತವಾಯಿತು. ತಳದ ಕಡೆಯಿಂದ ಉಂಟಾದ ಊಳಿಗಮಾನ್ಯತೆಯ ಬೆಳವಣಿಗೆಯು, ವಿಜಯನಗರಸಾಮ್ರಾಜ್ಯದ ಕಾಲಘಟ್ಟದಲ್ಲಿ ಊಳಿಗಮಾನ್ಯ ವಿರೋಧಿ ಜನರ ಹೋರಾಟಗಳನ್ನು ಹುಟ್ಟುಹಾಕಿತ್ತು. ವೈಷ್ಣವ ಭಕ್ತಿ ಪಂಥ ಈ ಕಾಲದಲ್ಲಿ ಪ್ರಚಲಿತಗೊಂಡು, ಹೊಸ ಆಶೋತ್ತರಗಳಿಂದ, ಹೊಸ ಸನ್ನಿವೇಶದಲ್ಲಿ, ತನಗೆ ಒದಗಿಬಂದ ಮಹತ್ವದಿಂದ, ಮೇಲ್ಮುಖಚಲನೆಯನ್ನು ಆರಂಭಿಸಿದ್ದ, ಈ ಮೇಲೆ ನಾವು ಪ್ರಸ್ತಾಪಿಸಿದ ಹಲವಾರು ಜಾತಿ ಗುಂಪುಗಳ ಚಲನಶೀಲತೆಗೆ ಒಂದು ಅಭಿವ್ಯಕ್ತಿಯನ್ನು ಒದಗಿಸಿತು. ಇದು ಹಿಂದಿನ ವಚನಕಾರ ಚಳುವಳಿಯ ಹಾಗೆಯೇ ಆ ಸನ್ನಿವೇಶದ ಫಲಿತಾಂಶವಾಗಿ ಪ್ರಕಟಗೊಂಡ ಒಂದು ಪ್ರತಿಕ್ರಿಯೆಯಾಗಿತ್ತು.

ಜಾರ್ಜ್ ಥಾಮ್‌ಸನ್ ಧರ್ಮವನ್ನು ಕುರಿತ ಚರ್ಚೆಗೆ ಒಂದು ಉಪಯುಕ್ತಕರ ಸಾಮಾನ್ಯೀಕರಣವನ್ನು ಒದಗಿಸಿದ್ದಾರೆ. ಈ ಸಂದರ್ಭದಲ್ಲಿ ಅದನ್ನು ಗಮನಿಸಿದರೆ, ಶ್ರೀ

ವೈಷ್ಣವ ಭಕ್ತಿ ಪಂಥದ ಬಗ್ಗೆ ನಾವು ಹೇಳುತ್ತಿರುವ ಭೌತಿಕ ಅಂಶದ ಪ್ರಾಮುಖ್ಯತೆಗೆ ಸಮರ್ಥನೆ ಸಿಗುತ್ತದೆ.

ಥಾಮ್‌ಸನ್ ಹೇಳುತ್ತಾರೆ : ''ಧರ್ಮದ ಇತಿಹಾಸದಲ್ಲಿ ಎರಡು ಧೋರಣೆಗಳಿವೆ. ಒಂದು ಅಧಿಕೃತ, ಎರಡನೆಯದು ಜನಪ್ರಿಯ. ಅಧಿಕೃತ ಧರ್ಮಗಳು ಪ್ರಭುತ್ವದಿಂದ ನಿಯಂತ್ರಿಸಲ್ಪಟ್ಟು ವರ್ಗಶೋಷಣೆಗೆ ಸಮರ್ಥನೆಯನ್ನು ಒದಗಿಸುತ್ತವೆ; ಅದೇ ಸಮಯದಲ್ಲಿ ಜನಪ್ರಿಯ ಪಂಥಗಳು ಹುಟ್ಟಿಕೊಂಡು ಆ ಜನಸಮೂಹಗಳಿಗೆ ಒಂದು ಸಾಂತ್ವನವನ್ನು ಹಾಗೂ ಶೋಷಣೆಯ ವಿರುದ್ಧ ಪ್ರತಿಭಟನೆಯನ್ನು ಒದಗಿಸುತ್ತವೆ. ವರ್ಗ ಹೋರಾಟ ಬೆಳೆದಂತೆಲ್ಲ ಈ ಎರಡೂ ಪಂಥಗಳು ಸಂಘರ್ಷಿಸುತ್ತವೆ. ಹೊಸವರ್ಗವೊಂದು ಅಧಿಕಾರವನ್ನು ಆಕ್ರಮಿಸಿಕೊಂಡಾಗ, ಅದರೊಂದಿಗೆ ಸಹಯೋಗಿನಿಯಾಗಿದ್ದ ಪಂಥವು, ಅಧಿಕೃತ ಪಂಥವಾಗಿ ಮಾರ್ಪಟ್ಟು ತನ್ನ ಜನಪರತೆಯ ಸ್ವಭಾವವನ್ನು ಕಳೆದುಕೊಳ್ಳುತ್ತದೆ. ಈ ಎರಡೂ ಪಂಥಗಳು ಪರಿಕಲ್ಪನಾವಾದಿಗಳೇ ಆಗಿದ್ದು, ಅಧಿಕೃತ ಧರ್ಮವು ಆಧಿಭೌತಿಕವಾದಿಯಾಗಿರುತ್ತದೆ. ಆದರೆ ಜನಪ್ರಿಯ ಪಂಥಗಳು ತಮ್ಮ ರಹಸ್ಯಾತ್ಮಕ ಧೋರಣೆಯಲ್ಲಿ ಒಂದು ಗತಿತಾರ್ಕಿಕತೆಯ ಸರಳಪ್ರಜ್ಞೆಯನ್ನು ರಚಿಸಿ ಕೊಂಡಿರುತ್ತವೆ''.[18]

ಹೊಸದಾಗಿ ತಲೆ ಎತ್ತುತ್ತಿದ್ದ ಶೂದ್ರ ಜಾತಿಗಳನ್ನು, ಆಳುವ ವರ್ಗದ ಸಂರಚನೆಯೊಳಕ್ಕೆ ಅಳವಡಿಸಿಕೊಳ್ಳುವ ಪ್ರಕ್ರಿಯೆಯನ್ನು ವಿಶಿಷ್ಟಾದ್ವೈತ ಪಂಥವು ಕರ್ನಾಟಕದ ಕೆಲವು ಪ್ರಾಂತ್ಯಗಳಲ್ಲಿ ನೆರವೇರಿಸುವಾಗ, ಈ ವಿಷಯವನ್ನು ಕುರಿತಂತೆ ಅದರೊಳಗೆ ತಿಕ್ಕಾಟಗಳು ಶುರುವಾಗಿ, ಎರಡು ಬಣಗಳಾಗಿ ವಿರ್ಪಟ್ಟವು. ತೆಂಗಲೈ ಮತ್ತು ಬಡಗಲೈ ಎಂಬವು ಆ ಎರಡು ಬಣಗಳ ಹೆಸರಾಗಿದ್ದವು. ತೆಂಗಲೈ ಬಣವು 'ಜಾತಿ ಮತಗಳನ್ನು ಮೀರಿ ಪ್ರಾಪ್ತಿ ಎಂಬುದು ದತ್ತವಾಗುತ್ತದೆ', ಳನೇ ವರ್ಣದ ಮನುಷ್ಯ ಕೂಡ ಭಕ್ತಿಯ ಮುಖಾಂತರ ದೇವರ ಕೃಪೆಗೆ ಪಾತ್ರನಾಗುತ್ತಾನೆ ಎಂದಿತು. ತೆಂಗಲೈ ಬಣವು ಜಾತಿ ವ್ಯವಸ್ಥೆಯನ್ನು ತಿರಸ್ಕರಿಸಿತಲ್ಲದೆ ಅದರ ದೃಷ್ಟಿಕೋನ ಹಾಗೂ ಆಚರಣೆಯಲ್ಲಿದ್ದ ಉದಾರತ್ವವು, ಜಾತಿಪದ್ಧತಿಯನ್ನು ಅನುಮೋದಿಸುತ್ತಿದ್ದ ಬಡಗಲೈ ಬಣಕ್ಕಿಂತ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿತು. ಸಾಂದರ್ಭಿಕವಾಗಿ ಇಲ್ಲಿ ಹೇಳಬಹುದಾದ ಒಂದು ಉದಾಹರಣೆಯೆಂದರೆ ದ್ವೈತ ಪಂಥಾನುಯಾಯಿಗಳಾದ ವಾದಿರಾಜರಿಂದ, ಮೂಲದಲ್ಲಿ ಶೂದ್ರರಾಗಿದ್ದ ಮಟ್ಟು ಮತ್ತು ಕೋಟಾ ಪಂಗಡದವರು ಕಗ್ಗಾವಳಿ ಬ್ರಾಹ್ಮಣರಾಗಿ ಪರಿವರ್ತಿತರಾದರು.

ಇದೇ ಬಗೆಯ ಭಿನ್ನತೆ ಭಕ್ತಿಪಂಥದ ಹರಿದಾಸ ಚಳುವಳಿಯಲ್ಲಿಯೂ ಕಾಣಿಸಿಕೊಂಡಿತು. ತಮ್ಮ ಪಂಥಕ್ಕೆ ರಾಜಾಶ್ರಯವಿರಬೇಕೋ ಅಥವಾ ಜನಾಶ್ರಯ ವಿರಬೇಕೋ ಎಂಬ ವಿಷಯದಲ್ಲೂ, ಕೀರ್ತನೆಗಳನ್ನು ಹಾಗೂ ಶ್ಲೋಕಗಳನ್ನು ಸಂಸ್ಕೃತದಲ್ಲಿ ಬರೆಯಬೇಕೋ ಅಥವಾ ಕನ್ನಡದಲ್ಲಿ ಬರೆಯಬೇಕೋ ಎಂಬ ವಿಷಯದಲ್ಲಿ ಹರಿದಾಸ ಚಳುವಳಿಯು ವ್ಯಾಸಕೂಟ ಮತ್ತು ದಾಸಕೂಟ ಎಂಬುದಾಗಿ

ಮಾರ್ಪಟ್ಟವೆಂದು ಕೆಲವರು ಸೂಚಿಸುತ್ತಾರೆ. ಇದೇನೇ ಇದ್ದರೂ ದಾಸಕೂಟವು ಜನತೆಯ ನಡುವೆ ಕೀರ್ತನೆಗಳನ್ನು ಪ್ರಸಾರಮಾಡುತ್ತಾ ಊರಿಂದೂರಿಗೆ ಸಂಚಾರ ಮಾಡುತ್ತಾ ಭಿಕ್ಷಾಟನೆಯನ್ನು ಆಶ್ರಯಿಸಿತು. ಅದರ ಕಾರಣಗಳು ಏನೇ ಇರಲಿ ಹರಿದಾಸ ಪಂಥವು ಜನಸಾಮಾನ್ಯರೊಂದಿಗೆ ಒಂದಾಗಿದ್ದರಿಂದ ಅದಕ್ಕೆ ಪ್ರಗತಿಪರ ಆಯಾಮ ಒದಗಿ ಬಂದಿತು. ಕನಕ ಮತ್ತು ಪುರಂದರರು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿ ಕನ್ನಡ ಸಾಹಿತ್ಯದ ಪ್ರಗತಿಪರ ಮುನ್ನಡೆಗೆ ಕಾರಣರಾದರು.

ಜಾತಿ ಪದ್ಧತಿ ವೈಫಲ್ಯ, ಮಾನವನ ಮನಸ್ಸಿನ ಮೇಲೆ ಅದರ ದುಷ್ಪರಿಣಾಮ, ಅದರ ಬೆಂಬಲಿಗರು ತೋರ್ಪಡಿಸುತ್ತಿದ್ದ ಕಪಟ ವಂಚನೆ, ಮುಂತಾದ ಅಂಶಗಳ ಬಗ್ಗೆ ಕನಕದಾಸ, ಪುರಂದರದಾಸರಂತಹ ಸಂತ ಶ್ರೇಷ್ಠರು, ಸರಳವಾದ ಹಾಡು ಮತ್ತು ವಚನಗಳ ರೂಪದಲ್ಲಿ ಭಕ್ತಿಯನ್ನು ಪ್ರಸಾರ ಮಾಡಿದರು. ಆ ಮಾತುಗಳಲ್ಲಿ ಹಲವು, ವ್ಯಾಪಕ ಬಳಕೆಯಿಂದಾಗಿ ಗಾದೆಗಳೇ ಆದವು.

ಹರಿದಾಸ ಪಂಥದವರು ಐದನೆಯ ಜಾತಿಯವರಾದ ಅಸ್ಪೃಶ್ಯರೂ ಸೇರಿದಂತೆ ಎಲ್ಲಾ ಜಾತಿಗಳ ಸಮಾನತೆಯನ್ನು ಸಾರಿದರು. ಸಾಮಾಜಿಕ ಸಂಬಂಧಗಳಲ್ಲಿ ಇಬ್ಬಂದಿ ನೀತಿಯನ್ನು ಅನುಸರಿಸುತ್ತಿದ್ದುದಕ್ಕಾಗಿ ಅವರು ಬ್ರಾಹ್ಮಣರನ್ನು ಖಂಡಿಸಿದರು. ಶೂದ್ರರಿಗೆ ಸಮಾಜದ ಚೌಕಟ್ಟಿನಲ್ಲಿ ಎತ್ತರದ ಸ್ಥಾನವನ್ನು ಕೊಟ್ಟರು. ಎಲ್ಲಾ ಧರ್ಮಗಳ ಸಮಾತನೆಯನ್ನು ಸಾರಿ, ಧರ್ಮಕಾರಣವಾದ ಕಲಹಗಳನ್ನು ಖಂಡಿಸಿ ಭಗವಂತನು ಒಬ್ಬನೇ ಎಂದು ಸಾರಿದರು.

೮ನೇ ಶತಮಾನದ ಹೊತ್ತಿಗೆ ಕರ್ನಾಟಕಕ್ಕೆ ಪರಿಚಯಗೊಂಡಿದ್ದ ಇಸ್ಲಾಂ ಧರ್ಮವು ವಿಜಯನಗರದ ಕಾಲಾವಧಿಯ ಹೊತ್ತಿಗೆ ಒಂದು ಗಮನಾರ್ಹ ಧರ್ಮವಾಗಿ ಸಮಾಜದಲ್ಲಿ ನೆಲೆಗೊಂಡಿತ್ತು. ಕನಕದಾಸರು ಭಾರತೀಯ ಪರಂಪರೆಗೆ ಹೊರಗಿನದೆಂದು ಸಾಮಾನ್ಯವಾಗಿ ಭಾವಿಸಲ್ಪಡುವ ಇಸ್ಲಾಂ ಧರ್ಮದ ಅಲ್ಲಾನನ್ನು ಕೂಡಾ ಇತರೆ ದೇವರುಗಳಂತೆ ಕೀರ್ತನೆಯೊಂದರಲ್ಲಿ ಉಲ್ಲೇಖಿಸಿದ್ದಾರೆ. ಅವರು ಸಾಮಾಜಿಕ ಐಕ್ಯತೆ ಮತ್ತು ಸಾಮರಸ್ಯಗಳಿಗೆ ಕರೆಕೊಟ್ಟರು. ಈ ಹರಿದಾಸ ಆಂದೋಲನದಲ್ಲಿ ಮುಖ್ಯ ಪ್ರೇರಕಶಕ್ತಿಯಂತಿದ್ದವರು ಪುರಂದರದಾಸರು. ಒಟ್ಟಿನಲ್ಲಿ ಹರಿದಾಸ ಆಂದೋಲನದ ಎರಡು ಪ್ರಮುಖ ವ್ಯಕ್ತಿತ್ವಗಳಾದ ಕನಕದಾಸರು ಹಾಗೂ ಪುರಂದರದಾಸರು ಬ್ರಾಹ್ಮಣರಲ್ಲ ಎಂದು ಪ್ರೊ. ಕೆ.ಎಸ್. ಶಿವಣ್ಣ ಹೇಳುತ್ತಾರೆ :

''ಈ ಆಂದೋಲನದ ಬೆಳಕಿನಂತಿದ್ದ ಇಬ್ಬರು ಮಹನೀಯರೂ ಬ್ರಾಹ್ಮಣರಲ್ಲ. ನೂತನ ಸಾಮಾಜಿಕ ಜಾಗೃತಿಯು ವಿಜಯನಗರ ಸಮಾಜದ ಕುರುಹಾಗಿತ್ತು. ಸಮಾಜದಲ್ಲಿ ತೀರಾ ಕೆಳಗಿನ ಸ್ತರದಲ್ಲಿದ್ದವರೂ ಕೂಡ ಜಾತಿ ವರ್ಗ ಭೇದವಿಲ್ಲದೆ ಉದಾರ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದರು ಎಂಬುದು ಗೊತ್ತಾಗುತ್ತದೆ''. [19]

ಕನಕದಾಸರು (ಕ್ರಿ.ಶ. ೧೫೦೯-೧೬೦೭) ಒಬ್ಬ ಸಂತ, ಸಮಾಜಸುಧಾರಕ ಮತ್ತು ಕವಿ. ಅವರು ಕರ್ನಾಟಕದಲ್ಲೆಲ್ಲಾ ವ್ಯಾಪಕವಾಗಿ ಸಂಚಾರ ಮಾಡಿದರು. ಅವರ ಇಷ್ಟ ದೈವವಾದ ಕಾಗಿನೆಲೆ ಆದಿ ಕೇಶವನ ಅಂಕಿತದಲ್ಲಿ ನೂರಾರು ಭಕ್ತಿಗೀತೆಗಳನ್ನು ರಚಿಸಿದರು.

ಕನಕದಾಸರ ಹಾಡುಗಳಲ್ಲಿ ಕಂಡು ಬರುವ ಬಹಳಷ್ಟು ಅಂಶಗಳು, ಅಂದು ಕನ್ನಡ ಭಾಷಿಕ ಸಮಾಜವು ತೊಡಗಿಕೊಂಡಿದ್ದ ಹಲವಾರು ಸಂಘರ್ಷಾತ್ಮಕ ಅಂಶಗಳನ್ನು ಪ್ರತಿಬಿಂಬಿಸುತ್ತದೆ. ಹಲವಾರು ಜಾತಿಸಮುದಾಯಗಳ ಮೇಲೆ ಊಳಿಗಮಾನ್ಯತೆಯು ಈ ಮೊದಲಿನಿಂದಲೂ ಹಲವಾರು ಆಚರಣೆಗಳ ಸಂಕೋಲೆಯನ್ನು ಬಿಗಿದಿತ್ತು. ಉತ್ಪಾದನಾ ಕ್ಷೇತ್ರದಲ್ಲಿ ಹೊಸಬಗೆಯ ಸಂಚಲನೆಗಳು ಮೂಡಿ, ಅಲ್ಲಿದ್ದ ಸಾಮಾಜಿಕ ವರ್ಗಗಳ ಚೈತನ್ಯದಲ್ಲಿ, ಅವುಗಳ ಮಹತ್ವದಲ್ಲಿ ಹೊಸ ಕಸುವು ಏರ್ಪಟ್ಟೊಡನೆ, ಸಹಜವಾಗಿ ಆ ಜಾತಿ ಸಮುದಾಯಗಳು ತಮ್ಮನ್ನು ಬಿಗಿಯುತ್ತಿದ್ದ ಪುರಾತನ ಮೌಲ್ಯಗಳನ್ನು ಸಡಿಲಿಸಲು ಆಶಿಸಿದವು. ಅದು ಅಂದಿನ ಸಮಾಜ ಮತ್ತಷ್ಟು ಸುಸಂಘಟಿತವಾಗಿ ನೆಲೆಗೊಳ್ಳಲು, ತನ್ನ ಸಾಮಾಜಿಕ ನೆಲೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಅಗತ್ಯವಾಗಿತ್ತು. ಅಂತಹ ಒಂದು ಸನ್ನಿವೇಶವನ್ನು ಹರಿದಾಸ ಚಳುವಳಿಯು ತನ್ನ ಪ್ರಕಟ ಆಶಯವನ್ನಾಗಿಸಿಕೊಂಡಿತು. ಅದರ ಬಹಳ ಮುಖ್ಯವಾದ ನಿಲುವೆಂದರೆ ಭಗವಂತನು ಯಾವುದೇ ವಿಧಿವಿಧಾನಗಳ ಆಚರಣೆಯಿಲ್ಲದೆ ಕೇವಲ ಮನಃಪೂರ್ವಕವಾದ ಭಕ್ತಿಗೆ ದಕ್ಕಬಲ್ಲವನು ಎಂಬುದಾಗಿತ್ತು. ಭಗವಂತನ ಸಾಕ್ಷಾತ್ಕಾರವೆಂಬುದು ಅಂದಿನ ಕಾಲದಲ್ಲಿ ಬಹಳ ದೊಡ್ಡ ಮೌಲ್ಯವಾಗಿರಲು ಕಾರಣವೇನೆಂದರೆ, ಆಗಿನ ಕುಲೀನ ಸಮುದಾಯಗಳಿಗೆ ಸುಖ ಮತ್ತು ಸವಲತ್ತುಗಳು ಸಿಕ್ಕಿರುವುದು, ಅವರಿಗೆ ಸಮಾಜದಲ್ಲಿ ಶ್ರೇಷ್ಠ ಸ್ಥಾನವಿರುವುದು ಯಾಕೆಂದರೆ, ಅವೆಲ್ಲ ದೈವದತ್ತವಾದುದು ಎಂಬ ಅಪ್ರಶ್ನಿತ ಮೌಲ್ಯವನ್ನು ಕರ್ಮಠ ವೈದಿಕ ಪುರಾಣಶಾಸ್ತ್ರಗಳು ಪ್ರತಿಪಾದಿಸುತ್ತಿದ್ದವು. ಬಡವರ ಕಷ್ಟಕ್ಕೆ ಹಾಗೂ ಕೀಳುಸ್ಥಿತಿಗೆ ಅವರಿಗೆ ವಿಧಿಯಿಂದ ಒದಗಿರುವ ಕರ್ಮವೇ ಕಾರಣವೆಂದು ಬೋಧಿಸಲಾಗುತ್ತಿತ್ತು.

ಇಂತಹ ಪರಿಸ್ಥಿತಿಯಲ್ಲಿ ವೈದಿಕ ಶಾಸ್ತ್ರಗಳು ಸಾರುವ ಕರ್ಮಫಲವೇನೇ ಇರಲಿ, ಈ ಅವಧಿಯಲ್ಲಿ ಕೆಲವು ಜಾತಿಗಳು ತಮ್ಮ ಕಾಯಕ ಕರ್ಮದಿಂದ, ತಮ್ಮ ಪರಂಪರಾಗತ ಹಣೆಬರಹವನ್ನು ಕೈಯಾರೆ ಬದಲಿಸಿಕೊಂಡು ಬಿಟ್ಟಿದ್ದವು. ಅದಕ್ಕೆ ಸಮಾಜದ ಅಧಿಕೃತ ಮಾನ್ಯತೆ ಬೇಕಾಗಿತ್ತು. ಅಂದಿನ ಸಮಾಜದಲ್ಲಿ ಈ ಬಗೆಯ ಮಾನ್ಯತೆಯನ್ನು ಒದಗಿಸಿಕೊಡುವ ಬಹುದೊಡ್ಡ ಅಲೌಕಿಕ ಅಥಾರಿಟಿ ಧರ್ಮದ ಕೈಯಲ್ಲಿತ್ತು. ಯಾಕೆಂದರೆ, ಅಂದು ಬೇರೆ ಬಗೆಯ ಸಾರ್ವತ್ರಿಕ ನ್ಯಾಯ ಮೌಲ್ಯಮಾಪನೆಯ ವಿಧಾನವಾಗಲೀ, ಸರಿತಪ್ಪುಗಳನ್ನು ಮಾನ್ಯ ಮಾಡುವ ವಿಸ್ತೃತ ಶಾಸನ ವ್ಯವಸ್ಥೆಯಾಗಲೀ ಚಾಲ್ತಿಯಲ್ಲಿರದೆ, ಧರ್ಮವೆಂಬುದೇ ಅದನ್ನು ನಿರ್ವಹಿಸುತ್ತಿತ್ತು. ಹೀಗಿರುವಾಗ ಸಮಾಜದ ಯಾವುದೇ ಚಟುವಟಿಕೆಯನ್ನು ಧಾರ್ಮಿಕ ಅಥವಾ ಅಧಾರ್ಮಿಕ ಎಂಬ

ವಿಭಾಗೀಕರಣದಡಿಯಲ್ಲಿಯೇ ನೋಡಲಾಗುತ್ತಿತ್ತು. ಸ್ವತಃ ರಾಜನಾದವನೂ ಕೂಡ ತನ್ನ ಆಳ್ವಿಕೆಯ ನ್ಯಾಯಬದ್ಧತೆಯನ್ನು ಸಮರ್ಥಿಸಿಕೊಳ್ಳಲು ಧರ್ಮಮೂಲಗಳನ್ನೇ ಆಶ್ರಯಿಸಬೇಕಾಗಿತ್ತು.

ಇಂತಹ ಪರಿಸ್ಥಿತಿಯಲ್ಲಿ ಶೂದ್ರವರ್ಗಗಳು ಹಾಗೂ ಕಸುಬುದಾರ ವರ್ಗಗಳು, ತಮ್ಮ ಹೊಸ ಪರಿಸ್ಥಿತಿಗೆ ಧಾರ್ಮಿಕ ಮನ್ನಣೆಯನ್ನು ಒದಗಿಸಿ ಕೊಡುವಂತಹ ಹಾಗೂ ತಮ್ಮನ್ನು ಬಿಗಿದಿರಿಸಿದ್ದ ಸಾಮಾಜಿಕ ಪದ್ಧತಿಗಳು ಹಾಗೂ ಮೌಲ್ಯಗಳನ್ನು ತಪ್ಪು ಎಂದು ಖಂಡಿಸಬಲ್ಲ ಧರ್ಮಪಂಥವೊಂದನ್ನು ಆಶ್ರಯಿಸಬಯಸುತ್ತಿದ್ದರು. ಆ ಮೂಲಕ ಅವರೂ ಕೂಡ ದೇವರ ಅನುಗ್ರಹವನ್ನು ಪಡೆಯಬಯಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಅವರಿಗೆ ಭಕ್ತಿಪಂಥವು ಮೋಕ್ಷಕ್ಕೆ ಸುಲಭವಾದ ಹಾದಿಯನ್ನು ತೋರಿಸಿಕೊಟ್ಟಿತು.

ಭಗವಂತನ ಸಾಕ್ಷಾತ್ಕಾರಕ್ಕೆ ಭಕ್ತಿ ಎಂಬ ಸರಳ ಮಾರ್ಗ ಅವರಿಗೆ ಯಾಕೆ ಅಗತ್ಯವಾಗಿತ್ತು ಎಂಬ ಪ್ರಶ್ನೆಯನ್ನು ಕೂಡ ನಾವು ಚರ್ಚಿಸಬೇಕಾಗಬಹುದು. ಯಾಕೆಂದರೆ ಈಗ ಹೊಸತಾಗಿ ಚೈತನ್ಯ ಗಳಿಸಿಕೊಳ್ಳುತ್ತಿದ್ದ ಹಲವಾರು ಹೊಸ ಸಮುದಾಯ ಗಳು ವೈದಿಕ ಕರ್ಮಕಾಂಡದ ಯಜ್ಞಯಾಗಾದಿಗಳ ಮೂಲಕವೇ ತಮ್ಮನ್ನು ಗಣ್ಯರನ್ನಾಗಿ ಪ್ರತಿಷ್ಠಾಪಿಸಿಕೊಳ್ಳಲು ಪ್ರಯತ್ನಿಸಬಹುದಾಗಿತ್ತು ಎಂಬ ವಾದ ಈ ಸಂದರ್ಭದಲ್ಲಿ ಎದುರಾಗುವ ಸಂಭವವಿದ್ದೇ ಇದೆ. ಇದಕ್ಕೆ ನಾವು ಎರಡು ಬಗೆಯ ಭೌತಿಕ ಕಾರಣಗಳನ್ನು ಸೂಚಿಸಬಹುದು. ಮೊದಲನೆಯದು ; ಈ ವೈದಿಕ ಕರ್ಮಕಾಂಡವನ್ನು ಬ್ರಾಹ್ಮಣರ ನೇತೃತ್ವದಲ್ಲಿ ಮಾತ್ರ ನಿರ್ದಿಷ್ಟ ಸಮುದಾಯಕ್ಕೆ ಸೇರಿದಂತಹ ಗುಂಪುಗಳು ಅಥವಾ ವ್ಯಕ್ತಿಗಳು ಆಚರಿಸಬಹುದಾಗಿತ್ತು. ಹಳೆಯ ಧಾರ್ಮಿಕ ಮೌಲ್ಯಗಳ ಪ್ರಕಾರ, ಈಗ ಹೊಸದಾಗಿ ಪ್ರಾದುರ್ಭಾವಕ್ಕೆ ಬರುತ್ತಿದ್ದ ಎಷ್ಟೋ ಕಸುಬುದಾರ ಹಾಗೂ ಉತ್ಪಾದಕ ಸಮುದಾಯಗಳು ಇಂತಹ ಧಾರ್ಮಿಕ ಅನುಷ್ಠಾನಗಳನ್ನು ಕೈಗೊಳ್ಳುವುದು ನಿಷಿದ್ಧವಾಗಿತ್ತು. ಆದ್ದರಿಂದ ಅವರು ಆ ಮೂಲದಲ್ಲಿ ಭಗವಂತನ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸುವಂತಿರಲಿಲ್ಲ. ಇದರ ಭೌತಿಕ ವಾಸ್ತವವೇನೆಂದರೆ ಹೊಸದಾಗಿ ಪ್ರವರ್ಧಮಾನಕ್ಕೆ ಬಂದ ಸಾಮಾಜಿಕ ಪಂಗಡಗಳು ಹಳೆಯ ಪದ್ಧತಿಯ, ಧಾರ್ಮಿಕವಾಗಿ ಮನ್ನಣೆ ಹೊಂದಿದ ಸಾಮಾಜಿಕ ವಿನ್ಯಾಸದೊಳಗೆ ನೆಲೆಯನ್ನು ಪಡೆದುಕೊಂಡವುಗಳಾಗಿರಲಿಲ್ಲ. ಎರಡನೆಯ ಕಾರಣವೆಂದರೆ; ವೈದಿಕ ಕರ್ಮಕಾಂಡವೆಂಬುದು ಒಂದು ಧಾರ್ಮಿಕ ಆಚರಣೆಯಾಗಿ, ಸಮಾಜದ ನಿರ್ದಿಷ್ಟ ವರ್ಗವಿನ್ಯಾಸದ ಮೇಲೆ ಆಧಾರಿತವಾಗಿತ್ತು. ಅಂದರೆ ಹಲವಾರು ಶ್ರಮಿಕ ವರ್ಗಗಳು ಉತ್ಪಾದಿಸಿದ ಹೆಚ್ಚುವರಿ ಮೌಲ್ಯವನ್ನು ತಾವು ಕೈಸೇರಿಸಿಕೊಂಡು, ಅಪಾರವಾದ ವೆಚ್ಚ ಮಾಡಿ, ಈ ಆಚರಣೆಗಳನ್ನು ಕೈಗೊಳ್ಳಲು ಒಂದು ವರ್ಗವೇ ಅಸ್ತಿತ್ವದಲ್ಲಿತ್ತು.

ಈ ವರ್ಗವು ಶ್ರಮದ ಉತ್ಪಾದನೆಯಿಂದ ಪೂರ್ಣವಾಗಿ ಬಿಡುಗಡೆಗೊಂಡು, ದುಡಿಯದೆ, ಊಳಿಗಮಾನ್ಯ ಪದ್ಧತಿಯ ಕಾರಣದಿಂದಾಗಿ ಕೈಸೇರುತ್ತಿದ್ದ ಹೆಚ್ಚುವರಿ ಮೌಲ್ಯವನ್ನು ಅನುಭೋಗಿಸುವ ಪಂಗಡವಾಗಿತ್ತು. ಈ ಬಗೆಯ ವಿಶ್ರಾಂತಿಯಲ್ಲಿ ಅದು ಸಮಾಜದ ಇತರರೆಲ್ಲರಿಗೂ 'ದೈವಾನುಗ್ರಹವನ್ನು ಸಂಪಾದಿಸಿಕೊಡುವ' ಮಧ್ಯವರ್ತಿ ಪಂಗಡವಾಗಿತ್ತು.

ಈಗ ಹೊಸದಾಗಿ ಚೈತನ್ಯಗೊಂಡ ಸಮುದಾಯಗಳು ಈ ಕರ್ಮಕಾಂಡವನ್ನು ದುಬಾರಿಯಾಗಿ ನೆರವೇರಿಸಲು ಅಗತ್ಯವಾದ ಪುಕ್ಕಟೆ ಹೆಚ್ಚುವರಿ ಮೌಲ್ಯವನ್ನು ಪಡೆದಿರಲಿಲ್ಲ. ಸಾಲದ್ದಕ್ಕೆ ಆ ವರ್ಗವು ಈ ಕರ್ಮಕಾಂಡಗಳನ್ನು ನೆರವೇರಿಸುತ್ತಾ ಕುಳಿತುಕೊಳ್ಳುವಷ್ಟು ವಿರಾಮವನ್ನೂ ಪಡೆದಿರಲಿಲ್ಲ.

ಇದರೊಂದಿಗೆ ಹರಿದಾಸ ಚಳುವಳಿಯ ಭಕ್ತಿ ಮಾರ್ಗಕ್ಕೆ ಮತ್ತೊಂದು ಭೌತಿಕ ಆಶಯದ ಹಿನ್ನೆಲೆಯೂ ಅಂತರ್ಗತವಾಗಿದ್ದಂತೆ ಕಾಣುತ್ತದೆ. ಅದನ್ನು ನಾವು ಹೀಗೂ ವಿವೇಚಿಸಬಹುದು ; ಊಳಿಗಮಾನ್ಯ ಪದ್ಧತಿಯಲ್ಲಿ ತನ್ನ ಅಸ್ತಿತ್ವದ ಮೋಕ್ಷವನ್ನು ಕಂಡುಕೊಳ್ಳಬೇಕೆಂದರೆ ಒಬ್ಬ ಮಧ್ಯವರ್ತಿಯ ಪೂರ್ವಾನುಗ್ರಹ ಅಗತ್ಯ. ಅದೇ ಊಳಿಗಮಾನ್ಯತೆಯ ತಳಹದಿ. ಅಂದರೆ ರೈತನಾದವನು ತನ್ನ ದುಡಿಮೆಗೆ ಭೂಮಿಯನ್ನು ಪಡೆಯಬೇಕೆಂದರೆ, ಕಸುಬುದಾರನಾದವನು ತನ್ನ ಉತ್ಪನ್ನಕ್ಕೆ ಮಾರುಕಟ್ಟೆಯನ್ನು ಕಾಣಬೇಕಾದರೆ, ಭೂ ಒಡೆಯ, ಅಗ್ರಹಾರ, ಮಠ ಮುಂತಾದ ಯಾವುದಾದರೊಂದನ್ನು ಆಶ್ರಯಿಸಬೇಕಾಗಿತ್ತು. ಇದಕ್ಕೆ ಆ ಮಧ್ಯವರ್ತಿ ವ್ಯವಸ್ಥೆಯ ಮಂಜೂರಾತಿ ಅಗತ್ಯ. ಈಗ ಹೊಸದಾಗಿ ಚೈತನ್ಯ ಸಂಚಯಿಸಿಕೊಂಡಿರುವ ಕಸುಬುದಾರ ಹಾಗೂ ಸರಕು ಉತ್ಪಾದಕ ಸಮುದಾಯಗಳು ಈ ಮಧ್ಯವರ್ತಿ ಪದ್ಧತಿಯನ್ನು ವಿರೋಧಿಸಿ, ತಮ್ಮ ಉತ್ಪಾದನಾ ಸಾಧನಗಳ ಮೇಲಿನ ಒಡೆತನವನ್ನು ಹಾಗೂ ತಮ್ಮ ಸರಕು ಉತ್ಪಾದನೆಯ ಶ್ರಮದ ಮೌಲ್ಯವನ್ನು ನೇರವಾಗಿ ಪಡೆಯಬೇಕೆಂದು ಸಂಘರ್ಷಿಸುತ್ತಿದ್ದರು. ಅಂದರೆ ಆರ್ಥಿಕ ಜೀವನದಲ್ಲಿ ಅವರ ಹೋರಾಟವಿದ್ದುದೇ ಮಧ್ಯವರ್ತಿ ವ್ಯವಸ್ಥೆಯ ನಿರ್ಬಂಧಗಳು ಹಾಗೂ ಅಡೆ ತಡೆಗಳಿಂದ ಮುಕ್ತರಾಗಬೇಕೆಂದು.

ಹೀಗಿದ್ದಾಗ ಅವರ ಅಲೌಕಿಕ ಜೀವನದ ಆಶಯದಲ್ಲಿ, ಅಂದರೆ ಭಗವಂತನ ಸಾಕ್ಷಾತ್ಕಾರದಲ್ಲಿ, ಮಧ್ಯವರ್ತಿ ಪುರೋಹಿತರನ್ನಾಗಲೀ, ಧಾರ್ಮಿಕ ಆಚರಣೆಗಳ ಕಡ್ಡಾಯತೆಯನ್ನಾಗಲೀ, ಒಪ್ಪಿಕೊಳ್ಳುವ ಮನಸ್ಸುಳ್ಳವರಾಗಿರುವುದಿಲ್ಲ. ಹೀಗಿರುವಾಗ ಭಕ್ತಿಪಂಥವು ಬೇರೆ ಯಾವುದೇ ಮಧ್ಯವರ್ತಿಯ ಅಗತ್ಯವಿಲ್ಲದೆ, ಜಪತಪಾದಿಗಳ, ಯಜ್ಞಯಾಗಾದಿಗಳ ನಿರ್ಬಂಧವಿಲ್ಲದೇ ಭಗವಂತನನ್ನು ಎಲ್ಲಾ ಸಂದರ್ಭಗಳಲ್ಲೂ ಮನದುಂಬಿ ನೆನೆದರೆ ಸಾಕು ಎಂಬ ಪದ್ಧತಿಯನ್ನು ಮುಂದಿಟ್ಟಾಗ, ಅದು ಸರ್ವರೀತಿಯಲ್ಲೂ ಸಮಾಜದ ಆಗಿನ ಹೊಸ ಸಮುದಾಯಗಳ ಚೈತನ್ಯವಂತ ಮನಃಸ್ಥಿತಿಗೆ ಪೂರಕವಾದುದಾಗಿರುತ್ತದೆ. ಹಿಂದೆ ವಚನಕಾರ ಚಳುವಳಿ

ಸಮಯದಲ್ಲೂ ಅವರು ಭಕ್ತಿಯನ್ನು, ಇಷ್ಟಲಿಂಗವನ್ನು ಮಾತ್ರ ಭಗವಂತನ ಸಾನ್ನಿಧ್ಯಕ್ಕೆ ತಕ್ಕ ಹಾದಿಯನ್ನಾಗಿ ಸೂಚಿಸಿದ್ದು, ಈ ಮಧ್ಯವರ್ತಿ ವ್ಯವಸ್ಥೆಯ ವಿರೋಧದ ಕಾರಣದಿಂದಲೇ ಎಂಬುದನ್ನು ನಾವಿಲ್ಲಿ ಹೋಲಿಕೆಗಾಗಿ ನೋಡಬಹುದು.

ಕನಕದಾಸರು ಆಶಾವಾದಿಯಾಗಿದ್ದು ಧಾರ್ಮಿಕ ವಿಚಾರಗಳಲ್ಲಿ ಆಚರಣೆ, ಶಾಸ್ತ್ರಾಧ್ಯಯನ, ತೀರ್ಥಯಾತ್ರೆ ಮುಂತಾದುವುಗಳನ್ನು ಭಗವಂತನ ಸಾಕ್ಷಾತ್ಕಾರಕ್ಕೆ ಅಗತ್ಯವಿಲ್ಲದ ಅಂಶಗಳಾಗಿ ಖಂಡಿಸಿದ್ದಾರೆ. ಲೌಕಿಕ ಜಗತ್ತಿನಲ್ಲಿದ್ದುಕೊಂಡೇ ಭಗವಂತನ ಮೇಲಿನ ಭಕ್ತಿಯಿಂದ ಮೋಕ್ಷವನ್ನು ಗಳಿಸಿಕೊಳ್ಳಬಹುದು ಎಂದಿದ್ದಾರೆ. ನಿಜವಾಗಿ ಭಕ್ತಿಯೂ ಸೇರಿದಂತೆ ಮಾನವನ ಸಮಸ್ತ ಚಟುವಟಿಕೆಗಳ ಉದ್ದೇಶವೂ ''ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ'' ಎಂದು ಹಾಡಿದ್ದಾರೆ. ಕುಲಜರೆಂದು ಕೊಳ್ಳುವವರೆಲ್ಲ ಸತ್‌ಚಾರಿತ್ರ್ಯವಂತರಲ್ಲ. ಆದ್ದರಿಂದ ನಿಜವಾದ ಕುಲದ ನೆಲೆ ಏನು? ಆತ್ಮ ಅಥವಾ ಜೀವದ, ಇಂದ್ರಿಯಗಳ ಜಾತಿ ಯಾವುದು ಎಂದು ಪ್ರಶ್ನಿಸಿದ್ದಾರೆ. ಪುತ್ರ ಸಂತಾನವಿದ್ದರೆ ಮಾತ್ರ ಮೋಕ್ಷ ಎಂಬ ಪುರುಷ ಪ್ರಧಾನ ಮೌಲ್ಯವನ್ನು 'ಮಗನಿಂದ ಗತಿಯುಂಟೆ' ಎಂದು ಪ್ರಶ್ನಿಸಿದ್ದಾರೆ. ಹೀಗೆ ಅವರ ಕೀರ್ತನೆಗಳಲ್ಲಿ ಅಂದಿನ ಹೊಸ ಚೈತನ್ಯವಂತ ಸಮುದಾಯಗಳ ಪರಿಸ್ಥಿತಿಗೆ ಹಾಗೂ ಆಶಯಗಳಿಗೆ ಹೊಂದಾಣಿಕೆ ಯಾಗುವ ಬಹಳಷ್ಟು ಅಂಶಗಳಿದ್ದುದರಿಂದಲೇ ಹರಿದಾಸ ಪಂಥ ಅಷ್ಟು ಜನಪ್ರಿಯ ವಾಗಲು ಸಾಧ್ಯವಾಯಿತು ಎನ್ನಬಹುದು. ತಾತ್ವಿಕ ನಿಲುವಾಗಲೀ, ಶಿಲ್ಪಕತಿಯ ಆಕೃತಿ ಗಳಾಗಲೀ, ಸಾಹಿತ್ಯ ಕೃತಿಯ ಆಶಯಗಳಾಗಲೀ, ಹೊಸಧರ್ಮದ ನಿಲುವುಗಳಾಗಲೀ, ಆಯಾ ವರ್ತಮಾನದ ಸಾಮಾಜಿಕ ಸನ್ನಿವೇಶವನ್ನು ಪ್ರತಿಫಲಿಸುತ್ತಿರುತ್ತವೆ ಎಂಬುದನ್ನು ನಾವು ಮತ್ತೊಮ್ಮೆ ಈ ಸಂದರ್ಭದಲ್ಲಿ ನೆನೆದುಕೊಳ್ಳಬಹುದು.

ಈ ಹರಿದಾಸ ಪಂಥದ ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಈ ಪಂಥದ ಮೂಲಕ, ಮುಖ್ಯವಾಗಿ ಅದರ ಹಾಡು ಹಾಗೂ ಕೀರ್ತನೆಗಳ ಮೂಲಕ, ಕರ್ನಾಟಕದಲ್ಲಿ ಸಮೂಹ ಸಂಪರ್ಕವನ್ನು ಒಂದು ವಿಧಾನವಾಗಿ, ಆಳುವ ವರ್ಗಗಳು ಹಾಗೂ ಸ್ವತಃ ವಿವಿಧ ಸಾಮಾಜಿಕ ಸಮುದಾಯಗಳು ಅಳವಡಿಸಿಕೊಂಡವು.

ಇದೇ ಬಗೆಯ ಬೆಳವಣಿಗೆಗಳು ಆದಿಲ್‌ಶಾಹಿ ಸಾಮ್ರಾಜ್ಯದಲ್ಲಿ ೧೭ನೆಯ ಶತಮಾನದ ಹೊತ್ತಿಗೆ ಕಾಣಿಸಿಕೊಂಡವು. ಅದರ ಆಳುವ ವರ್ಗಗಳು ದಖ್ಖನಿ ಮಾತನಾಡುವ ಮುಸ್ಲಿಮರಾಗಿದ್ದು, ಕನ್ನಡಿಗರು ಮತ್ತು ಮಹಾರಾಷ್ಟ್ರದವರ ನಡುವೆ ತಲೆಮಾರುಗಳಿಂದ ಬಾಳಿಕೊಂಡು ಬಂದವರಾಗಿದ್ದರು. ಇವರ ಮೊದಲ ದೊರೆ ಇಮ್ಮಡಿ ಇಬ್ರಾಹಿಂ ಪರ್ಷಿಯನ್ ಭಾಷೆಯ ಪರಿಚಯವನ್ನು ಹೊಂದಿರಲಿಲ್ಲ. ಅದರ ಬದಲು ಆತ ದಖ್ಖನಿಯನ್ನು ಬಳಸಿದ. ಹಿಂದೂ ದೇವತೆಗಳನ್ನು ಕೂಡ ಆತ ಪೂಜಿಸುತ್ತಿದ್ದ. ಆತನ ಸಮಕಾಲೀನ ಅಕ್ಬರ್ ಸ್ಥಾಪಿಸಿದ ದೀನ್ - ಇ-ಇಲಾಹಿ ಪರಿಕಲ್ಪನೆಗಳನ್ನು ಇಲ್ಲಿಯೂ ಅಭಿವೃದ್ಧಿ ಪಡಿಸಿದ. ಕೆಲವು ಮೂಲಗಳು ನಮಗೆ ಸುಮಾರು ೧೩ ಕನ್ನಡಿಗ ಕುಶಲಕರ್ಮಿ ಮತ್ತು ಸೇವಾಜಾತಿಗಳು ಇಸ್ಲಾಂ ಧರ್ಮಕ್ಕೆ

ಪರಿವರ್ತನೆಗೊಂಡದ್ದನ್ನು ಸೂಚಿಸುತ್ತವೆ. ಅವರಲ್ಲಿ ಪದ್ಮಶಾಲಿ ನೇಕಾರರು ಸೇರಿದ್ದರು. ಇದೊಂದು ಬಹುಮುಖ್ಯ ನೇಕಾರ ಜಾತಿಯಾಗಿದ್ದು, ನಂತರದಲ್ಲಿ ಬೊಮಿಯನ್ಸ್ ಹಾಗೂ ಪಟ್ಟೇಗಾರರೆಂದು ಕರೆಯಲ್ಪಡುವ ರೇಷ್ಮೆ ನೇಕಾರರಾದರು. ಆದಿಲ್ ಶಾಹಿಗಳಿಗೆ ಸೇರಿದ್ದ ಪ್ರಾಂತ್ಯಗಳಲ್ಲಿ ಹರಡಿದ ಸೂಫಿವಾದವು, ಊಳಿಗಮಾನ್ಯ ಕುಲೀನವರ್ಗಗಳಲ್ಲಿ ರಾಜಕೀಯವಾಗಿ ಸದೃಢೀಕರಣಗೊಂಡ ಹೊಸ ವಿಭಾಗಗಳ ಅಸ್ತಿತ್ವವನ್ನು ಪ್ರತಿಬಿಂಬಿಸುತ್ತದೆ.

ಸೂಫಿ ಚಳುವಳಿಯ ಹಲವಾರು ಪ್ರವರ್ತಕರು ದಖ್ಖನಿ ಭಾಷೆಯಲ್ಲಿ ಚಕ್ಕೀನಾಮ, ಚಕ್ರನಾಮ, ಲೋರಿನಾಮ ಮತ್ತು ಸುಹಾಗನ್ ನಾಮ ಎಂಬ ಪ್ರಕಾರಗಳಲ್ಲಿ ಹಾಡುಗಳನ್ನು ರಚಿಸಿದರು. ಅವು ಕನ್ನಡದಲ್ಲಿ ಜೋಗುಳದ ಹಾಡು, ಬೀಸೋಕಲ್ಲಿನ ಪದ, ಸೋಬಾನೆ ಗೀತೆ ಮುಂತಾದವುಗಳಿಗೆ ಸಂವಾದಿಯಾಗಿವೆ. ಈ ಹಾಡುಗಳನ್ನು ಆಗಿನ ಜನಸಮೂಹಗಳು ಅದರಲ್ಲೂ ಮುಖ್ಯವಾಗಿ ಹೆಣ್ಣುಮಕ್ಕಳು ಬಹುವಾಗಿ ಹಾಡುತ್ತಿದ್ದರು. ಸೂಫಿ ಚಳುವಳಿಯು ಕೂಡ, ಧರ್ಮದಲ್ಲಿ ಪರಂಪರಾಗತವಾಗಿದ್ದ ಊಳಿಗಮಾನ್ಯ ಶಕ್ತಿಗಳ ಹಿಡಿತಕ್ಕೆ ವಿರುದ್ಧವಾಗಿ, ಹೊಸದಾಗಿ ಶಕ್ತಿ ಸಂಚಯಿಸಿಕೊಂಡ ಸಮುದಾಯಗಳ ನೆಲೆಯನ್ನು, ಆಗಿನ ಸಾಮಾಜಿಕ ವಿನ್ಯಾಸದೊಳಗೆ ಏರ್ಪಡಿಸುವ ಹಾಗೂ ಜನಸಮುದಾಯಗಳ ನಡುವೆ ಪರಸ್ಪರ ಸಾಮರಸ್ಯಗಳನ್ನು ಕುದುರಿಸುವ ಆಶಯಗಳಿಂದ ಕಂದಾಚಾರದ ಮೌಢ್ಯಗಳ ವಿರುದ್ಧ ನಿರ್ದೇಶಿಸಲ್ಪಟ್ಟಿದ್ದ ಸುಧಾರಣಾವಾದಿ ಚಳುವಳಿಯಾಗಿತ್ತು.

ಈ ಸೂಫಿ ಚಳುವಳಿಯು ಆದಿಲ್‌ಶಾಹಿಗಳ ಪತನದೊಂದಿಗೆ, ದಖ್ಖನ್ ಪ್ರಾಂತ್ಯಗಳನ್ನು ೧೬೮೭ರಲ್ಲಿ ಔರಂಗಜೇಬನು ಆಕ್ರಮಿಸುವುದರೊಂದಿಗೆ ಒಂದು ಹಠಾತ್ ನಿಲುಗಡೆಗೆ ಒಳಗಾಯಿತು. ಆದಿಲ್ ಶಾಹಿಗಳು ತಾವು ಔರಂಗಜೇಬನ ಪಡೆಗಳಿಗೆ ಸೋಲುವ ಮೊದಲು ೧೫೬೫ರಲ್ಲಿ ವಿಜಯನಗರದ ರಾಜ ಅಳಿಯ ರಾಮರಾಯನನ್ನು ಸೋಲಿಸಿದ್ದರು. ರಾಮರಾಯನ ಸೋಲಿಗೆ ಆದಿಲ್‌ಶಾಹಿಗಳ ಪ್ರಾಬಲ್ಯವೊಂದೇ ಕಾರಣವಾಗಿರದೆ, ಹೆಚ್ಚುತ್ತಿದ್ದ ಕಂದಾಯ ಹಾಗೂ ತೆರಿಗೆಗಳ ವಿರುದ್ಧ ಹೋರಾಡುತ್ತಿದ್ದ ರೈತರು, ಜೊತೆಗೆ ಸ್ವತಂತ್ರರಾಗಲು ಬಯಸುತ್ತಿದ್ದ ಹಲವಾರು ಅಮರ ನಾಯಕರು ಕೂಡ ಕೈ ಜೋಡಿಸಿದ್ದರಿಂದ ವಿಜಯನಗರ ಸಾಮ್ರಾಜ್ಯದ ಪ್ರಾಬಲ್ಯದ ಅಡಿಪಾಯ ಶಿಥಿಲವಾಗತೊಡಗಿತ್ತು. ಇದೆಲ್ಲದೆ ಕುಶಲಕರ್ಮಿಗಳು, ರೈತರು ಮತ್ತು ವರ್ತಕರು, ತಮ್ಮ ಪಟ್ಟಣ ಹಾಗೂ ಗ್ರಾಮೀಣ ಪ್ರಾಂತ್ಯಗಳಿಂದ, ಪ್ರಭುತ್ವದಡಿಯಲ್ಲಿ ಹೆಚ್ಚುತ್ತಲೇ ಇದ್ದ ಊಳಿಗಮಾನ್ಯ ಪದ್ಧತಿಯ ತೆರಿಗೆ ಹಾಗೂ ಇತರೆ ರೂಪದ ದಮನಗಳ ವಿರುದ್ಧ, ನಿಷ್ಕ್ರಿಯವಾದ ಆದರೆ ವಿಸ್ತೃತವಾದ ವಿರೋಧವನ್ನು ವ್ಯಕ್ತಪಡಿಸತೊಡಗಿದ್ದರು.

ಪಾಳೆಗಾರ ವ್ಯವಸ್ಥೆಗಳು ಪರಸ್ಪರ ಒಂದನ್ನೊಂದು ಮುಗಿಸುವ ಪೈಪೋಟಿಯಲ್ಲಿ ಇನ್ನಿಲ್ಲದಷ್ಟು ಪ್ರಮಾಣದ ಯುದ್ಧಗಳಲ್ಲಿ ತೊಡಗಿ, ಆ ಯುದ್ಧಗಳಲ್ಲಿ

ತೊಡಗುವುದಕ್ಕಾಗಿ ಮತ್ತಷ್ಟು ಹೆಚ್ಚುವರಿ ತೆರಿಗೆಯನ್ನು ಹೆಚ್ಚುವರಿ ಹಣ ಸಂಗ್ರಹಣೆಯನ್ನು ಉತ್ಪಾದಕರಿಂದ ಬಯಸತೊಡಗಿದ್ದು ಬಹಳ ದೊಡ್ಡ ಭಾರವಾಗಿ ಪರಿಣಮಿಸಿತ್ತು. ಈ ಪಾಳೇಪಟ್ಟುಗಳ ನಡುವಿನ ದಿನನಿತ್ಯದ ಯುದ್ಧ ಕಲಹ, ಒಬ್ಬರ ಪ್ರಾಂತ್ಯವನ್ನು ಮತ್ತೊಬ್ಬರು ಲೂಟಿ ಹೊಡೆಯುವುದು, ಬಲಾತ್ಕಾರದ ತೆರಿಗೆ ಕಾಣಿಕೆಗಳ ಸಂಗ್ರಹ, ಮುಂತಾದವು ಜನತೆಯನ್ನು ದಿವಾಳಿಯೆಬ್ಬಿಸತೊಡಗಿದ್ದವು.

ಕರ್ನಾಟಕದೊಳಗೆ ಈ ಅವಧಿಯಲ್ಲಿ, ಮಧ್ಯಾವಧಿಯ ಊಳಿಗಮಾನ್ಯತೆಯನ್ನು ನಿವಾರಿಸುವುದಕ್ಕೆ ಅಗತ್ಯವಾದ ರಾಜಕೀಯ ಪರಿಸ್ಥಿತಿಗಳು ನಿರ್ಮಾಣವಾಗಿದ್ದವು. ಸಮಾಜದ ಎಲ್ಲಾ ರಂಗಗಳಲ್ಲಿ ನಿರ್ಮಾಣವಾಗಿದ್ದ ಊಳಿಗಮಾನ್ಯ ವಿರೋಧಿ ಅಂಶಗಳ ಬಲಿಷ್ಠಗೊಳ್ಳುವಿಕೆಯಿಂದ, ಯುದ್ಧಕೋರ ಪಾಳೇಗಾರರ ಮತ್ತು ಊಳಿಗಮಾನ್ಯ ಅರಾಜಕತೆಯ ವಿರುದ್ಧ, ಒಂದು ದೃಢ ಭೌತಿಕ ಸನ್ನಿವೇಶ ನಿರ್ಮಾಣವಾಗಿತ್ತು. ಈ ಅಡೆತಡೆಗಳ ವಿರುದ್ಧ ಸೃಷ್ಟಿಯಾದ ಭೌತಿಕ ಸನ್ನಿವೇಶವು ಅವುಗಳ ನಿವಾರಣೆಗೆ ಹಾಗೂ ಉತ್ತರಾವಧಿಯ ಊಳಿಗಮಾನ್ಯತೆಯ ಉದ್ಘಾಟನೆಗೆ ಅಗತ್ಯ ಪರಿಸ್ಥಿತಿಗಳನ್ನು ಉಂಟುಮಾಡಿದ್ದವು. ಈ ಅವಧಿಯು ಅದರ ನಿಜವಾದ ಅರ್ಥದಲ್ಲಿ ಕರ್ನಾಟಕದ ಬಂಡವಾಳಶಾಹಿ ಪ್ರಜಾತಾಂತ್ರಿಕ ಕ್ರಾಂತಿಯ ಆರಂಭ ಹಾಗೂ ಊಳಿಗಮಾನ್ಯತೆಯ ಸಾಮಾಜಿಕ ಅಸ್ತಿತ್ವವನ್ನು ಅಂತಿಮವಾಗಿ ಕೊನೆಗೊಳಿಸುವ ಕಾಲಘಟ್ಟಕ್ಕೆ ಅಡಿಪಾಯವನ್ನು ಹಾಕಿತು. ಈ ಅವಧಿಯಲ್ಲಿ ಪೋರ್ಚುಗೀಸ್ ನಾಯಕ ವಾಸ್ಕೋ ಡ ಗಾಮನು ತನ್ನ ನಾಲ್ಕು ಹಡಗುಗಳೊಂದಿಗೆ, ೧೭೦ ಜನ ನಾವಿಕರೊಂದಿಗೆ ಭಾರತದ ಕರಾವಳಿಯನ್ನು ತಲುಪಿದ. ಅದು ಭಾರತಕ್ಕೆ ಮೊದಲ ಐರೋಪ್ಯ ಹಡಗುಗಳ ತಲುಪುವಿಕೆಯನ್ನು ಉದ್ಘಾಟಿಸಿತು. ಆ ನೌಕಾಯಾನದ ಸಾಹಸಕ್ಕೆ ಪೋರ್ಚುಗಲ್‌ನವರು ಆರಂಭಿಕವಾಗಿ ಹೂಡಿದ್ದ ಪ್ರತಿ ರೂಪಾಯಿಗೆ ಸುಮಾರು ೬೦ ಪಟ್ಟು ಲಾಭವನ್ನು ಅದು ಆಗ ತಂದುಕೊಟ್ಟಿತು.

ಅಲಫನ್ಸೋಡಿ ಆಲ್ಬುಕರ್ಕ್ ಬಿಜಾಪುರದ ಆದಿಲ್ ಶಾಹಿಗಳಿಂದ ೧೫೧೦ರಲ್ಲಿ ಗೋವಾ ದ್ವೀಪವನ್ನು ಗೆದ್ದುಕೊಂಡನು. ಆ ನಂತರ ಒಪ್ಪಂದದ ಮುಖಾಂತರ ಮರ್ಮಾಗೋವಾ ಮತ್ತು ಸಾಲ್ಸೆಟ್ ಪ್ರದೇಶವನ್ನು ಪಡೆದುಕೊಂಡನು. ಆ ಮುಖಾಂತರ ಗೋವಾವನ್ನು, ಪೋರ್ಚುಗೀಸ್ ಚಕ್ರಾಧಿಪತ್ಯಕ್ಕೆ ಪೂರ್ವದಲ್ಲಿದ್ದ ಕೇಂದ್ರ ಕಛೇರಿಯನ್ನಾಗಿಸಿದನು.

ವಾಸ್ಕೋಡಗಾಮನ ನಂತರ ಪೋರ್ಚುಗೀಸರು, ಕರ್ನಾಟಕದ ಬಂದರು ನಗರಗಳ ಮೇಲೆ ಬಹಳ ನಿರ್ದಯವಾದ ಸಮುದ್ರ ಧಾಳಿಗಳನ್ನು ಆರಂಭಿಸಿದರು. ೧೫೫೮ರ ಹೊತ್ತಿಗೆ ಕರ್ನಾಟಕ ಕರಾವಳಿಯ ಹದಿನಾರು ಬಂದರುಗಳು ಅಥವಾ ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಇಡೀ ಕರ್ನಾಟಕದ ಕರಾವಳಿಯು ಪೋರ್ಚುಗೀಸರಿಗೆ ನಿಯಮಿತ ಕಪ್ಪವನ್ನು ಸಲ್ಲಿಸತೊಡಗಿತ್ತು.

ಪೋರ್ಚುಗೀಸರು ಇಲ್ಲಿ ಸ್ಥಾಪಿಸಿದ ಕಾರ್ಖಾನೆಗಳಲ್ಲಿ ಸುಂಕದ ಕಟ್ಟೆಗಳು ಕೂಡ ಏರ್ಪಟ್ಟಿದ್ದು, ಹೊರ ಹೋಗುವ ಮತ್ತು ಒಳಬರುವ ಪ್ರತಿ ಹಡಗು ಪೋರ್ಚುಗೀಸರಿಗೆ ಸುಂಕವನ್ನು ಕಟ್ಟಬೇಕಿತ್ತಲ್ಲದೆ, ಈ ವಸಾಹತುಶಾಹಿ ಧಾಳಿಕೋರರ ತಪಾಸಣೆಗೂ ತಮ್ಮನ್ನು ಒಳಪಡಿಸಿಕೊಳ್ಳಬೇಕಾಗಿತ್ತು. ಈ ಸುಂಕದ ಮನೆಗಳು ವಂಚನೆಯ ತಾಣಗಳಾಗಿದ್ದು, ಸ್ಥಳೀಯ ವರ್ತಕರನ್ನು ಬಹಳ ಸಲ ತೊಂದರೆಗೀಡು ಮಾಡುತ್ತಿದ್ದವು.

೧೫ನೇ ಶತಮಾನದ ಕೊನೆಯ ಭಾಗದಲ್ಲಿ ಹಾಗೂ ೧೬ನೇ ಶತಮಾನದ ಮೊದಲ ಭಾಗದಲ್ಲಿ, ಐರೋಪ್ಯ ವರ್ತಕರು ಭಾರತೀಯ ಪ್ರದೇಶದ ಮೇಲೆ ಕಾಲಿಡತೊಡಗಿದರು. ಈ ಅವಧಿಯು ವಸಾಹತುಶಾಹಿ ಶಕ್ತಿಗಳ ಸೇನಾತ್ಮಕ ಹಾಗೂ ಆರ್ಥಿಕ ವಿಸ್ತರಣೆಯ ಆರಂಭವನ್ನು ಗುರುತಿಸಿತು. ಪೋರ್ಚುಗೀಸರು ಸಾಗರೋತ್ತರ ವ್ಯಾಪಾರದ ಮೇಲೆ ತಮ್ಮ ಏಕಸ್ವಾಮ್ಯವನ್ನು ಸ್ಥಾಪಿಸಿದರು. ಇದರ ಜೊತೆಗೆ ಅತ್ಯಂತ ದಮನಕಾರಿ ವಿಧಾನಗಳ ಮೂಲಕ, ಸ್ಥಳೀಯ ವರ್ತಕರು ತಮ್ಮ ಸರಕುಗಳನ್ನು ಪೋರ್ಚುಗೀಸರು ನಿಗದಿಪಡಿಸಿದ ಬೆಲೆಗಳಿಗೆ ಮಾರುವಂತೆ ನಿರ್ಬಂಧಕ್ಕೊಳ ಪಡಿಸಿದರು. ಇವೆಲ್ಲವೂ ಪೋರ್ಚುಗೀಸರಿಗೆ ಮಹತ್ತರ ಲಾಭವನ್ನು ಗಳಿಸಿಕೊಟ್ಟವು. ಚಿಚರೋವ್ ಬರೆಯುವ ಪ್ರಕಾರ ಕೇವಲ ಸಾಂಬಾರ ವಸ್ತುಗಳ ವಾಣಿಜ್ಯವೊಂದೇ ಅವರು ಹೂಡಿದ್ದ ಬಂಡವಾಳ ಪ್ರಮಾಣಕ್ಕೆ ೮೦೦% ರಿಂದ ೧೦೦೦%ದವರೆಗಿನ ಲಾಭವನ್ನು ಪೋರ್ಚುಗೀಸರಿಗೆ ತಂದಕೊಟ್ಟಿತ್ತು. [20]

ಈ ಬಗೆಯ ದಮನ ಹಾಗೂ ಲೂಟಿಯ ವಿರುದ್ಧ ಮಾಪಿಳ್ಳೆ ವರ್ತಕ ವರ್ಗವು ನಡೆಸಿದ ಪ್ರತಿಭಟನೆಯ ಬಗ್ಗೆ ಎಂ.ಎನ್. ಪಿಯರ್‌ಸನ್ ನಮಗೆ ಬಹಳ ಆಸಕ್ತಿದಾಯಕವಾದ ಮಾಹಿತಿಗಳನ್ನು ಒದಗಿಸಿದ್ದಾರೆ. ಮಂಗಳೂರನ್ನು ೧೬೫೮ರಲ್ಲಿ ಸಂಪೂರ್ಣವಾಗಿ ಆಕ್ರಮಿಸಲಾಯಿತು. ರಾಣಿ ಅಬ್ಬಕ್ಕ ಪೋರ್ಚುಗೀಸರ ವಿರುದ್ಧ ವೀರೋಚಿತವಾದ ಪ್ರತಿಭಟನೆಯನ್ನು ಅಲ್ಲಿಯವರೆಗೆ ನಡೆಸಿದ್ದಳು. ಕರ್ನಾಟಕದ ವರ್ತಕರು ಮತ್ತು ಬೆಸ್ತರು ಮಾಪಿಳ್ಳೆ ಪ್ರತಿಭಟನಾ ಹೋರಾಟಕ್ಕೆ ಬಹಳ ಸಕ್ರಿಯ ಬೆಂಬಲ ನೀಡಿದರು.

ಕರ್ನಾಟಕದ ಸಾಗರೋತ್ತರ ವ್ಯಾಪಾರದ ಮೇಲೆ ಪೋರ್ಚುಗೀಸರು ತಮ್ಮ ಏಕಸ್ವಾಮ್ಯವನ್ನು ಏರ್ಪಡಿಸಿಕೊಂಡಿದ್ದರ ಬಹುಮುಖ್ಯವಾದ ಪರಿಣಾಮವೇನೆಂದರೆ, ಕರ್ನಾಟಕದ ಆರ್ಥಿಕತೆಯನ್ನು ಅವರು ತಮ್ಮ ವಸಾಹತುಶಾಹಿ ನಗರ ಕೇಂದ್ರಗಳ ಆರ್ಥಿಕತೆಯೊಂದಿಗೆ ಬೆಸೆಯುವ ಪ್ರಕ್ರಿಯೆಯನ್ನು ಆರಂಭಿಸಿದ್ದು. ಅದು ಕರ್ನಾಟಕ ಇತಿಹಾಸದಲ್ಲಿ ವಸಾಹತುಶಾಹಿ ಹಂತವನ್ನು ಉದ್ಘಾಟಿಸಿತು. ಕರಾವಳಿಯಗುಂಟ ಸರಕು ಉತ್ಪಾದನೆಯು ಬೆಳೆಯತೊಡಗಿದ್ದ ಸಮಯದಲ್ಲೇ, ಈ ವಸಾಹತುಶಾಹಿ ಹಂತ ಕರ್ನಾಟಕದ ಇತಿಹಾಸದಲ್ಲಿ ಉದ್ಘಾಟನೆಗೊಂಡಿತು ಎಂಬ ಅಂಶವನ್ನು ನಾವು ನೆನಪಿಡಬೇಕಾಗಿದೆ. ಕರ್ನಾಟಕದೊಂದಿಗೆ ಪೋರ್ಚುಗೀಸರು ನಡೆಸಿದ ವ್ಯಾಪಾರವು

ಲೂಟಿಕೋರ ವಿಧಾನದಲ್ಲಿತ್ತು. ಅದು ಇಲ್ಲಿನ ವರ್ತಕ ವರ್ಗಗಳ ಸ್ವತಂತ್ರ ಮುನ್ನಡೆಗೆ ತಡೆಯೇರ್ಪಡಿಸಿತು. ಅವರು ತಮ್ಮ ಬಂದೂಕಿನ ಬಲದ ಮೇಲೆ ನಿಗದಿಪಡಿಸಿದ ಬೆಲೆಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಾಟಮಾಡಲೇಬೇಕೆಂದು ಒತ್ತಾಯಪಡಿಸಿ, ಮುಖ್ಯವಾಗಿ ಪೋರ್ಚುಗಲ್ಲಿಗೆ ಹಾಗೂ ಸಾಮಾನ್ಯವಾಗಿ ಇತರ ಐರೋಪ್ಯ ದೇಶಗಳಿಗೆ ಅಪಾರವಾದ ಲಾಭವನ್ನು ಗಳಿಸಿಕೊಟ್ಟಿತು.

ಕರ್ನಾಟಕದಿಂದ ಈ ಹೆಚ್ಚುವರಿ ಮೌಲ್ಯವನ್ನು ಲೂಟಿ ಹೊಡೆಯುವ ಪ್ರಕ್ರಿಯೆ ಹೆಚ್ಚು ಕಡಿಮೆ ಮೂರು ಶತಮಾನದುದ್ದಕ್ಕೂ ಮುಂದುವರೆಯಿತು. ಇದನ್ನು ಕೇವಲ ಪೋರ್ಚುಗೀಸ್ ವಸಾಹತುಶಾಹಿಗಳು ಮಾತ್ರ ಈಡೇರಿಸಲಿಲ್ಲ. ಈ ಬಗೆಯ ಕೆಲಸದಲ್ಲಿ ಅಸ್ತಿತ್ವದಲ್ಲಿದ್ದ ಊಳಿಗಮಾನ್ಯ ವರ್ಗಗಳು ಮತ್ತು ಪೋರ್ಚುಗೀಸರೇ ಸೃಷ್ಟಿಮಾಡಿದ ಒಂದು ಹೊಸ ವರ್ಗವು ಬಹಳ ನೆರವನ್ನು ನೀಡಿತು. ಈ ಹೊಸವರ್ಗವು ಪೋರ್ಚುಗೀಸ್ ವಸಾಹತುಶಾಹಿ ಆಳ್ವಿಕೆಗೆ ಊಳಿಗ ಮಾಡುವ ವರ್ಗವಾಗಿತ್ತು. ಅದು ತನ್ನ ಈ ಸೇವೆಯ ಮೂಲಕ ಬಹಳ ಲಾಭವನ್ನು ಗಳಿಸಿತಲ್ಲದೆ, ಇತರ ಎಲ್ಲಾ ವರ್ತಕರಿಗಿಂತಲೂ ಮುನ್ನಡೆಯನ್ನು ಬಹಳ ಬೇಗನೆ ಸಾಧಿಸಿತು. ಕರ್ನಾಟಕದ ಆರ್ಥಿಕತೆಯನ್ನು ಲೂಟಿ ಹೊಡೆಯಲು ಪೋರ್ಚುಗೀಸರಿಗೆ ನೆರವು ನೀಡುವ ಮೂಲಕ ಅದು ತನ್ನ ಲಾಭವನ್ನು ಗಳಿಸಿತು. ಈ ಹೊಸ ವರ್ಗವು ಕರ್ನಾಟಕದ ಇತಿಹಾಸದಲ್ಲಿ ನೂತನವಾದುದಾಗಿತ್ತು. ಅದು ವಸಾಹತುಶಾಹಿಗೆ ಸೇವೆ ಸಲ್ಲಿಸಲು ಮತ್ತು ವಸಾಹತುಶಾಹಿಯು ನಡೆಸುತ್ತಿದ್ದ ಕರ್ನಾಟಕದ ಲೂಟಿಯಿಂದ ಲಾಭ ಗಳಿಸಲು ನಿಯುಕ್ತವಾಗಿದ್ದಿತು. ಈ ಬಗೆಯ ಲಾಭಗಳಿಂದ ಪೋರ್ಚುಗೀಸರು ಬಹಳ ಆದಾಯ ಪಡೆದರು. ಇದರ ಇನ್ನೊಂದು ಮುಖವಾಗಿ ಕರ್ನಾಟಕದ ಸಾಮಾಜಿಕ ಆರ್ಥಿಕ ಸ್ಥಾನಮಾನಗಳಲ್ಲಿ ಸ್ಥಳೀಯ ವರ್ತಕರಿಗಿದ್ದ ಸ್ವತಂತ್ರ ಅಸ್ತಿತ್ವವನ್ನು ಅದು ದುರ್ಬಲಗೊಳಿಸಿತು. ದಲ್ಲಾಲಿ ಪ್ರವೃತ್ತಿಗಳನ್ನು ಹಾಗೂ ಗುಂಪುಗಳನ್ನು ಅದು ಬಹಳವಾಗಿ ಬಲಪಡಿಸಿತು.

ಈ ಬಗೆಯ ದಲ್ಲಾಲಿ ಪ್ರವೃತ್ತಿಯಿಂದ ಬಲಗೊಂಡ ಭಾರತೀಯ ಉಪಖಂಡದ ಮೊದಲ ವರ್ತಕರೆಂದರೆ ಗುಜರಾತಿನ ಬನಿಯಾಗಳು ಮತ್ತು ಕರ್ನಾಟಕದ ಗೌಡ ಸಾರಸ್ವತ ಬ್ರಾಹ್ಮಣರು. ಪೋರ್ಚುಗೀಸರಿಗೆ ತಮ್ಮ ನಿಷ್ಠೆಯನ್ನು ಅಡವಿಟ್ಟು ಕರ್ನಾಟಕದ ಮೊದಲ ಊಳಿಗಮಾನ್ಯ ವರ್ಗವೆಂದರೆ ಗೌಡ ಸಾರಸ್ವತ ಬ್ರಾಹ್ಮಣರು ಎಂದು ಸಾಕಿ ಹೇಳುತ್ತಾರೆ.[21] ಈ ಬಗೆಯ ಕೃತ್ಯಗಳಿಂದಾಗಿ ಊಳಿಗ ಮಾನ್ಯತೆಯೊಂದಿಗೆ ಸಾವಯವ ಸಂಬಂಧಗಳನ್ನು ಹೊಂದಿದ್ದ ದಲ್ಲಾಲಿ ಬಂಡವಾಳಿಗ ವರ್ಗವು ಕರ್ನಾಟಕದಲ್ಲಿ ಮೊದಲ ಬಾರಿಗೆ ಸೃಷ್ಟಿಯಾಯಿತು. ಆ ವರ್ಗದ ಸೃಷ್ಟಿಯ ಉಗಮ, ಅದು ವಸಾಹತುಶಾಹಿಯೊಂದಿಗೆ ಹೊಂದಿದ್ದ ನಿಷ್ಠಾವಂತಿಕೆಯ ಹಾಗೂ ಲೂಟಿಕೋರ ಆರ್ಥಿಕತೆಯಲ್ಲಿ ಲಾಭಗಳನ್ನು ಹಂಚಿಕೊಂಡ ಪ್ರವೃತ್ತಿಯ ಪ್ರತೀಕ ವಾಗಿತ್ತು.

ಇದು ಕರ್ನಾಟಕದ ಆರ್ಥಿಕತೆಯ ಮೇಲೆ ಪೋರ್ಚುಗೀಸ್ ವಸಾಹತುಶಾಹಿಯು ಉಂಟುಮಾಡಿದ ಮಹತ್ತರ ದುಷ್ಪರಿಣಾಮವಾಗಿತ್ತು. ಅದು ಸೃಷ್ಟಿ ಮಾಡಿದ ದಲ್ಲಾಲಿ ವರ್ತಕರ ವರ್ಗವು ಪೋರ್ಚುಗೀಸ್ ಆಳುವ ವರ್ಗದೊಂದಿಗೆ ಮಾತ್ರವಲ್ಲದೆ, ಈ ಕರ್ನಾಟಕದ ನೆಲದ ಮೇಲೆ ಕಾಲಿಡುವ ಪ್ರತಿ ವಸಾಹತುಶಾಹಿ ಶಕ್ತಿಯೊಂದಿಗೆ ಹೊಂದಾಣಿಕೆಯನ್ನು ರಚಿಸಿಕೊಳ್ಳುವ ವರ್ಗವಾಯಿತು.

ವಿಜಯನಗರದ ಕಾಲಾವಧಿಯಲ್ಲಿ ಅತ್ಯಂತ ಹೆಚ್ಚಳಗೊಂಡ ಸರಕು ಉತ್ಪಾದನೆಯ ಪ್ರಕ್ರಿಯೆ, ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ, ನಗರ ಹಾಗೂ ವಾಣಿಜ್ಯ ಕೇಂದ್ರಗಳ ಬೆಳವಣಿಗೆ, ಹೊಸದಾಗಿ ಚೈತನ್ಯಗೊಂಡ ಸರಕು ಉತ್ಪಾದಕ ಸಮುದಾಯಗಳು, ಹರಿದಾಸ ಚಳುವಳಿಯ ಮುಖಾಂತರವಾಗಿ ಗಳಿಸಿಕೊಂಡ ಸಾಮಾಜಿಕ ಮನ್ನಣೆ ಇತ್ಯಾದಿಗಳೆಲ್ಲ, ವಿಜಯನಗರದ ಪತನದೊಂದಿಗೆ., ಕರ್ನಾಟಕದ ಕರಾವಳಿಯ ಮೇಲೆ, ಆ ಮೂಲಕ ಸಾಗರೋತ್ತರ ವಾಣಿಜ್ಯಗಳ ಮೇಲೆ ಪೋರ್ಚುಗೀಸರು ಸ್ಥಾಪಿಸಿಕೊಂಡ ಏಕಸ್ವಾಮ್ಯ ಹಾಗೂ ಅವರು ಹೊಸದಾಗಿ ಸೃಷ್ಟಿಸಿದ ದಲ್ಲಾಲಿ ವರ್ತಕ ವರ್ಗದ ಉಗಮದೊಂದಿಗೆ, ತಿರುಗುಮುರುಗಾಯಿತು.

ಆವರೆಗೆ ಒಂದು ಸಂಚಲನಾತ್ಮಕ ಪರಿಸ್ಥಿತಿಯಲ್ಲಿಮುನ್ನಡೆಯ ಕಡೆಗೆ ಮುಖ ಮಾಡಿದ್ದ ಕನ್ನಡ ಭಾಷಿಕ ಸಮುದಾಯಗಳ ಸಾಮಾಜಿಕ ಬೆಳವಣಿಗೆಯು, ದಲ್ಲಾಲಿ ವರ್ಗದ ಉದಯದೊಂದಿಗೆ ಒಂದು ತೀವ್ರ ದೌರ್ಬಲ್ಯಕ್ಕೆ ಗುರಿಯಾಯಿತು. ಎಷ್ಟೇ ವಾಣಿಜ್ಯ ಚಟುವಟಿಕೆಗಳು ನಡೆಯಲಿ, ಎಷ್ಟೇ ಹಣಕಾಸಿನ ಚಲಾವಣೆ ಚಾಲ್ತಿಯಲ್ಲಿರಲಿ, ಅವೆಲ್ಲವೂ ಕರ್ನಾಟಕದ ಜನ ಸಮುದಾಯಗಳನ್ನು ಬಲಪಡಿಸುವ ಬದಲು, ಅದರ ಸಾಮಾಜಿಕ ಪ್ರಗತಿಗೆ ತಳಹದಿಯನ್ನು ನಿರ್ಮಿಸುವ ಬದಲು, ಸಾಗರೋತ್ತರವಾದ ವಸಾಹತು ಶಕ್ತಿಗಳ ಆರಂಭಿಕ ಬಂಡವಾಳ ಸಂಚಯನಕ್ಕೆ ಹಾಗೂ ಕರ್ನಾಟಕದ ಚೈತನ್ಯ ಸೋರಿಹೋಗುವುದಕ್ಕೆ ಕಾರಣವಾಗುವ ಪ್ರಕ್ರಿಯೆಯೊಂದರ ಆರಂಭವನ್ನು ಅದು ಕಂಡಿತು.

ಅಡಿಟಿಪ್ಪಣಿಗಳು

1. SAKI- Making History, Vol. 1, ಪು. ೨೭೪
2. ಅದೇ, ಪು. ೨೭೬
3. ಅದೇ ಪು. ೨೭೭
4. ಅದೇ ಪು. ೨೭೭, ೨೭೮
5. ಅದೇ ಪು. ೨೭೮
6. ಬಾರ್ಬೊಸಾ, ಉಲ್ಲೇಖಿತ, ಡಾ. ಕೆ.ಎಸ್. ಶಿವಣ್ಣ - ಕೃಷಿ ವ್ಯವಸ್ಥೆ, ಕರ್ನಾಟಕ ಚರಿತ್ರೆ, ಸಂ. ೩, ಪು. ೧೫೪.
7. ಬಾರ್ಬೊಸಾ, ಉಲ್ಲೇಖಿತ - ಅದೇ, ಪು. ೧೫೬
8. ಪೇಸ್, ಉಲ್ಲೇಖಿತ - ಅದೇ ಪು. ೧೫೭.

9. ಥಾಮಸ್ ಮುನ್ರೋ, ಉಲ್ಲೇಖಿತ - ಅದೇ, ಪು. ೧೬೧.
10. ರಾಬರ್ಟ್ ಸಿವೆಲ್, ಉಲ್ಲೇಖಿತ - ಅದೇ ಪು. ೧೬೧
11. ಡಾ. ಎಸ್. ಎ. ಭಾರಿ - ವಿಜಯನಗರದಲ್ಲಿ ಕೃಷಿಯೇತರ ತೆರಿಗೆ, ಕರ್ನಾಟಕ ಚರಿತ್ರೆ, ಸಂ. ೩, ಪು. ೨೦೦
12. ಅದೇ. ಪು. ೨೦೧
13. ಎ.ಜೆ. ಕೈಸರ್ ಉಲ್ಲೇಖಿತ, ಡಾ. ಎಸ್. ಎ. ಭಾರಿ - ಅದೇ ಪು. ೨೦೪.
14. ಮೋರ್‌ಲ್ಯಾಂಡ್, ಉಲ್ಲೇಖಿತ, ಪ್ರೊ. ಕೆ.ಎಸ್. ಶಿವಣ್ಣ - ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ, ಕರ್ನಾಟಕ ಚರಿತ್ರೆ, ಸಂ. ೩, ಪು. ೨೧೩.
15. ಡೊಮಿಂಗೊ ಪೇಸ್, ಉಲ್ಲೇಖಿತ, ಪ್ರೊ. ಕೆ. ಎಸ್. ಶಿವಣ್ಣ ಅದೇ, ಪು. ೨೨೧.
16. Irfan Habib, ಉಲ್ಲೇಖಿತ, SAKI- Making History, Vol. 1, ಪು. ೨೮೮
17. SAKI ಅದೇ , ಪು. ೨೭೯
18. George Thomson, ಉಲ್ಲೇಖಿತ ಅದೇ ಪು. ೨೭೯.
19. ಪ್ರೊ. ಕೆ.ಎಸ್. ಶಿವಣ್ಣ - ವಿಜಯನಗರ ಕಾಲದ ಸಮಾಜ, ಕರ್ನಾಟಕ ಚರಿತ್ರೆ, ಸಂ. ೩, ಪು. ೨೪೯.
20. A.I. Chicherov, ಉಲ್ಲೇಖಿತ, SAKI- Making History, Vol. 1, ಪು. ೩೫೦
21. SAKI- Making History, Vol. 1, ಪು. ೩೫೪

✤ ✤ ✤ ✤

ಅಧ್ಯಾಯ -೫

೧೭ನೇ ಶತಮಾನದ ಉತ್ತರಾರ್ಧ ಹಾಗೂ ೧೮ನೇ ಶತಮಾನದ ಪೂರ್ವಾರ್ಧ

ಪಾಳೇಗಾರಿಕೆ ಪತನ

ವಿಜಯನಗರದ ಪತನಾನಂತರ ಪ್ರವರ್ಧಮಾನಕ್ಕೆ ಬಂದದ್ದು ಮೈಸೂರಿನ ಒಡೆಯರ್ ವಂಶದ ರಾಜಾಡಳಿತ. ತಾಳಿಕೋಟೆಯ ಕದನದ ನಂತರ ವಿಜಯನಗರ ಸಾಮ್ರಾಜ್ಯವು ಬಹು ಬಿಕ್ಕಟ್ಟಿನ ಅವಧಿಯನ್ನು ಕಾಣಬೇಕಾಯಿತು. ಅನಾಯಕತ್ವ ಹಾಗೂ ಅತೃಪ್ತಿಗಳಿಂದಾಗಿ ಅನೇಕ ಸಾಮಂತರಾಜರು ಸ್ವತಂತ್ರರಾಜ್ಯಗಳನ್ನು ರೂಪಿಸಿ ಕೊಂಡರು. ಅಂತಹ ಕಷ್ಟಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಸಂಸ್ಥಾನಗಳಲ್ಲಿ ಮೈಸೂರು ಒಂದು.

ಈ ವಂಶದ ಸರಿಯಾದ ಇತಿಹಾಸವು ಕ್ರಿ.ಶ. ೧೬೧೦ರಲ್ಲಿ ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಆಕ್ರಮಿಸಿಕೊಂಡಾದ ಮೇಲೆ ಆರಂಭವಾಗುತ್ತದೆ. ಒಂದು ಪುಟ್ಟ ಪಾಳೆಯಪಟ್ಟಾಗಿ ಆರಂಭಗೊಂಡ ಈ ರಾಜ್ಯದ ಆಡಳಿತಾವಧಿಯು ಚಿಕ್ಕದೇವರಾಜ ಒಡೆಯರ್ (೧೬೭೩-೧೭೦೪) ಕಾಲದಲ್ಲಿ ಉತ್ಕರ್ಷಕ್ಕೇರಿತ್ತು. ಇದನ್ನು ಪ್ರೊ. ಕೆ. ಎಸ್. ಶಿವಣ್ಣ ಹೀಗೆ ವಿವರಿಸುತ್ತಾರೆ. ''ಈತನ ಆಳ್ವಿಕೆಯಲ್ಲಿ ಮೈಸೂರು ರಾಜವಂಶವು ತನ್ನ ವೈಭವದ ಶಿಖರವನ್ನು ಮುಟ್ಟಿತು. ಕಾರ್ಯಾಚರಣೆಗಳು ಮತ್ತು ರಾಜಕಾರಣ ಕೌಶಲ್ಯಗಳಿಂದ ತುಂಬಿ ಈ ಅವಧಿಯು ಬಹು ರೋಮಾಂಚಕರವಾಗಿದೆ. ರಾಷ್ಟ್ರಮಟ್ಟದಲ್ಲಿ ಔರಂಗಜೇಬ್ ಹಾಗೂ ಶಿವಾಜಿ ದಕ್ಷಿಣಭಾರತದ ರಂಗವನ್ನು ಪ್ರವೇಶಿಸಿ ಮಹತ್ವದ ಪಾತ್ರವನ್ನು ನಿರ್ವಹಿಸಿದ ಅತಿ ಮುಖ್ಯವಾದ ಅವಧಿ ಇದು. ಚಿಕ್ಕದೇವರಾಜನು ಶಿವಾಜಿಗೆ ಮುಖಾಮುಖಿಯಾಗಿ ನಿಂತನು. ಮರಾಠರೊಂದಿಗೆ

ಹಲವಾರು ಉಗ್ರಕಾಳಗಗಳನ್ನು ನಡೆಸಿದನು. ಮೈಸೂರಿನ ಮೇಲೆ ಅವರು ಮಾಡಿದ ಆಕ್ರಮಣಗಳನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ ರಾಜ್ಯಕ್ಕೆ ಹೊರಗಿನಿಂದ ಅಪಾಯ-ಭೀತಿ ಇಲ್ಲದಂತೆ ಮಾಡಿದನು.

ಮರಾಠರೊಂದಿಗೆ ಯುದ್ಧ ನಿರತನಾಗಿದ್ದಾಗ ಚಿಕ್ಕದೇವರಾಜನು ಮೊಗಲರನ್ನು ಮಿತ್ರರನ್ನಾಗಿ ಮಾಡಿಕೊಂಡು ಮೊಗಲ್ ಸಾಮ್ರಾಜ್ಯದೊಂದಿಗೆ ಉತ್ತಮ ರಾಜಕಾರಣ ಸಂಬಂಧವನ್ನು ಬೆಳೆಸಿದನು. ಅವನ ಆಳ್ವಿಕೆಯ ೩೧ ವರ್ಷಗಳಲ್ಲಿ ಹಲವು ಯುದ್ಧಗಳನ್ನು ಮಾಡಿದ್ದರೂ ರಾಜ್ಯವು ವೈಭವ ಮತ್ತು ವಿಪುಲ ಐಶ್ವರ್ಯದ ಶಿಖರವನ್ನು ಮುಟ್ಟಿತು''.[1] ''ಚಿಕ್ಕದೇವರಾಜ ಒಬ್ಬ ಹುಟ್ಟಾ ಯೋಧ, ದೊಡ್ಡ ವಿದ್ವಾಂಸ, ಅಸಾಧಾರಣ ಸಾಮರ್ಥ್ಯವಿದ್ದ ಒಬ್ಬ ಆಡಳಿತಗಾರ, ಮುಂದಿನ ಪೀಳಿಗೆಯು ಅವನನ್ನು ಇಂಗ್ಲೆಂಡಿನ ಎಲಿಜಬೆತ್ ರಾಣಿಯಂತೆ ಫ್ರಾನ್ಸ್‌ನ ೧೪ನೇ ಲೂಯಿಯಂತೆ, ರೋಮಿನ ಅಗಸ್ಟಸ್‌ನಂತೆ, ದೆಹಲಿಯ ಅಕ್ಬರನಂತೆ ಮತ್ತು ವಿಜಯನಗರದ ಕೃಷ್ಣದೇವರಾಯ ನಂತೆ ವಂಶದ ಅತ್ಯಂತ ಶ್ರೇಷ್ಠ ಅರಸನೆಂದು ನೆನಪಿನಲ್ಲಿ ಉಳಿಸಿಕೊಂಡಿರುತ್ತವೆ''.[2]

೧೬೭೭ರಲ್ಲಿ ಶಿವಾಜಿಯು ಶ್ರೀರಂಗಪಟ್ಟಣದ ಮೇಲೆ ಧಾಳಿ ಮಾಡಿದಾಗ ಚಿಕ್ಕ ದೇವರಾಜನು ಉಗ್ರ ಕಾಳಗದಲ್ಲಿ ಶಿವಾಜಿಯನ್ನು ಸೋಲಿಸಿದನು. ಶಿವಾಜಿಯು ಚಿಕ್ಕದೇವರಾಜನನ್ನು ಕರ್ನಾಟಕದ ನಿರ್ವಿವಾದಿತ ಪ್ರಭುವೆಂದು ಕೊಂಡಾಡಿ ಯುದ್ಧರಂಗದಿಂದ ಹಿಮ್ಮೆಟ್ಟಿದನು ಎಂಬ ಆಂಗ್ಲ ಉಲ್ಲೇಖವಿದ್ದು ಇದು ಚಿಕ್ಕದೇವರಾಜನ ಪರಾಕ್ರಮವನ್ನು, ಶಿವಾಜಿಯ ಔದಾರ್ಯವನ್ನು ನಿರ್ದೇಶಿಸುತ್ತದೆ.

ಆತನ ರಾಜಕೀಯ ಚಾಣಾಕ್ಷತೆ ಕೂಡ ಬಹಳ ಸಾಂದರ್ಭಿಕವಾದುದಾಗಿದೆ. ಆ ಕಾಲದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿದ್ದ ಮೊಗಲ್ ಸಾಮ್ರಾಟ್ ಔರಂಜೇಬನ ಜೊತೆಗೆ ಆತ ಮೈತ್ರಿಯನ್ನು ಗಳಿಸಿಕೊಂಡನು. ಇದನ್ನು ಪ್ರೊ. ಕೆ.ಎಸ್. ಶಿವಣ್ಣ ''ಮುಂದೆ ಭಾರತದ ನಕ್ಷೆಯನ್ನೇ ಬದಲಿಸಿಕ ಕ್ಲೈವ್ ಮತ್ತು ಡೂಪ್ಲೆ ಇವರನ್ನು ನೆನಪಿಗೆ ತರುವಂತಹ ಉನ್ನತಮಟ್ಟದ ಮುತ್ಸದ್ದಿತನ ಇದು''[3] ಎನ್ನುತ್ತಾರೆ. ''ಸಂಭಾಜಿಯು ಒಂದೇ ಸಮನೆ ಕಾಟಕೊಡುತ್ತಿರುವಾಗ, ಮಧುರೆ ಮತ್ತು ಜಿಂಜಿಗಳ ನಾಯಕರು ಮಲೆತು ನಿಂತಿದ್ದಾಗ, ಚಿಕ್ಕದೇವರಾಜನು ಔರಂಗಜೇಬನ ಸದ್ಭಾವನೆಯನ್ನು ಗಳಿಸುವುದು ಸೂಕ್ತ ಎಂದು ಅರ್ಥಮಾಡಿಕೊಂಡನು. ರಾಜಕೀಯದಲ್ಲಿ ತತ್ವನಿಷ್ಠೆ ಗೆ ಎಡೆಯಿಲ್ಲ. ಔರಂಗಜೇಬನು ಬಿಜಾಪುರ ಮತ್ತು ಗೋಲ್ಕೊಂಡಗಳ ಮೇಲೆ ಮುತ್ತಿಗೆ ಹಾಕುವಲ್ಲಿ ಚಿಕ್ಕದೇವರಾಜನು ತನ್ನ ನೆರವನ್ನು ಚಕ್ರವರ್ತಿಗೆ ನೀಡಿದನು. ಮಹಾನ್ ಚಕ್ರವರ್ತಿಯೂ ಒಬ್ಬ ಸಣ್ಣ ರಾಜನಿಂದ ಸಹಾಯವನ್ನು ಪಡೆಯುವುದು ತನಗೆ ಅವಮಾನವೆಂದೇನೂ ಭಾವಿಸಲಿಲ್ಲ. ಆದರೆ ಅದರಿಂದ ಮಹತ್ತರವಾದೊಂದು ಐತಿಹಾಸಿಕ ಘಟನೆ ನಡೆದುಹೋಯಿತು. ಮೈಸೂರು ಸುಭದ್ರವಾಗಿ ಉಳಿದುಕೊಂಡು ದಕ್ಷಿಣದ ರಾಜಕಾರಣದಲ್ಲಿ ಬಹುಮುಖ್ಯವಾದ ಪಾತ್ರ ನಿರ್ವಹಿಸಲು ನಿಂತಿತು''.[4]

ಮೊಗಲ್ ನೆರವಿನಿಂದ ಅವನು ೧೬೮೬ರಲ್ಲಿ ತುಮಕೂರನ್ನು ಗೆದ್ದುಕೊಂಡನು. 1687ರಲ್ಲಿ ಬೆಂಗಳೂರನ್ನು ಗೆದ್ದುಕೊಂಡನು. ಬೆಂಗಳೂರು ಚಿಕ್ಕದೇವರಾಜನಿಗೆ ಕೈವಶವಾದದ್ದು ಅವನಿಗೆ ಬಹುದೊಡ್ಡ ಉಡುಗೊರೆ ಯಾಗಿಯೂ, ಮರಾಠರಿಗೆ ಬಹು ದೊಡ್ಡ ನಷ್ಟವಾಗಿಯೂ ಪರಿಣಮಿಸಿತು.

ಚಿಕ್ಕದೇವರಾಜನು 1699ರಲ್ಲಿ ಕರಣಿಕ ಲಿಂಗಣ್ಣಯ್ಯನ ಕೈಕೆಳಗೆ ಔರಂಗ ಜೇಬನ ದರ್ಬಾರಿಗೆ ರಾಯಭಾರವನ್ನು ಕಳುಹಿಸಿದನು. ರಾಯಭಾರಿಗೆ ಆತ್ಮೀಯವಾದ ಸ್ವಾಗತ ದೊರೆಯಿತು. ಚಿಕ್ಕದೇವರಾಜನು ಕಳುಹಿಸಿಕೊಟ್ಟಿದ್ದ ಉಡುಗೊರೆಗಳನ್ನು ಸಂತೋಷದಿಂದ ಸ್ವೀಕರಿಸಿದ ಚಕ್ರವರ್ತಿಯು ಅವನಿಗೆ 'ರಾಜಾ - ಚಿಕ್ಕದೇವರಾಜ ಅಹಮದ್ ಶಾಹಿ ' ಎಂಬ ಬರಹವನ್ನು ಕೆತ್ತಿದ್ದ ಒಂದು ರಾಜ ಮುದ್ರೆಯನ್ನು ಉಡುಗೊರೆಯಾಗಿ ನೀಡಿದನು.

ಚಿಕ್ಕದೇವರಾಜ ಒಡೆಯರ್ ಕಳಿಸಿದ ನಿಯೋಗವು ೧೮ನೆಯ ಶತಮಾನದ ಪ್ರಾರಂಭದಲ್ಲಿ ಮೈಸೂರಿನ ರಾಜಕೀಯ ಸ್ಥಾನಮಾನದ ಮೇಲೆ ಒಳ್ಳೆಯ ಪ್ರಭಾವ ಬೀರಿತು. ಔರಂಗಜೇಬನು ಕರ್ನಾಟಕದ ಮೇಲೆ ಚಿಕ್ಕದೇವರಾಜ ಒಡೆಯನ ಪ್ರಭುತ್ವವನ್ನು ಮಾನ್ಯ ಮಾಡಿದನು. ಈ ಮನ್ನಣೆಯಿಂದಾಗಿ ಮೈಸೂರು ಕಷ್ಣಾನದಿಯ ದಕ್ಷಿಣಕ್ಕೆ ಸ್ವತಂತ್ರ ರಾಜ್ಯವಾಗಿ ಪ್ರಾಧಾನ್ಯ ಪಡೆಯಿತು. ಭಾರತದ ಅತ್ಯಂತ ಬಲಿಷ್ಠ ಶಕ್ತಿಯಾದ ಮೊಗಲರಿಂದ ಪ್ರಭುತ್ವವನ್ನು ಆಧುನಿಕ ರೀತಿಯಲ್ಲಿ ಸಂಘಟಿಸುವ ವಿಧಾನವನ್ನು, ಮಾದರಿಗಳನ್ನು ಕಲಿತುಕೊಂಡನು. ಈ ಹಿಂದೆ ಚಿಕ್ಕಪುಟ್ಟ ಪಾಳೇಪಟ್ಟುಗಳ ಆಸ್ಥಾನ ಮಾದರಿಯ ರಾಜ್ಯಭಾರಗಳಲ್ಲಿ ಮುಳುಗಿಹೋಗಿದ್ದ ಮೈಸೂರು ಪ್ರಾಂತ್ಯವನ್ನು , ಸುಸಂಘಟಿತವಾದ ಒಂದು ಆಡಳಿತಾತ್ಮಕ ಆಧುನಿಕ ಘಟಕವನ್ನಾಗಿ ರೂಪಿಸಿದನು.

ಮೈಸೂರಿನಲ್ಲಿ ರಾಜ ಒಡೆಯರ ಕಾಲದಿಂದ ಚಿಕ್ಕದೇವರಾಜ ಒಡೆಯರ ಕಾಲದವರೆಗೂ ಮೂಲ ಪಾಳೇಗಾರರ ಆಡಳಿತ ಪದ್ಧತಿಯೇ ಮುಂದುವರೆದಿತ್ತು. ರಾಜ್ಯಗಳನ್ನು ಗೆಲ್ಲುವುದು, ಸೇರಿಸಿಕೊಳ್ಳುವುದು, ತಮ್ಮ ತಮ್ಮ ರಾಜ್ಯದ ಗಡಿಗಳ ವಿಸ್ತಾರ ಇವೇ ಅವರ ಮುಖ್ಯ ಆಸಕ್ತಿಗಳಾಗಿದ್ದವು. ಉದ್ದೇಶಗಳು, ಚಟುವಟಿಕೆಗಳು ಅವೇ ಆಗಿದ್ದವು. ಅವರು ಶ್ರೀರಂಗಪಟ್ಟಣದ ಅಧೀನರೂ ಆಗಿದ್ದುದರಿಂದ ವಿಜಯನಗರ ಆಡಳಿತ ಪದ್ಧತಿಯನ್ನು ಅಲ್ಪಸ್ವಲ್ಪ ಬದಲಾವಣೆಯೊಂದಿಗೆ ಬೆಳೆಯುತ್ತಿದ್ದ ರಾಜ್ಯದ ಅಗತ್ಯಗಳಿಗನುಸಾರವಾಗಿ ಅಳವಡಿಸಿಕೊಂಡರು.

ಚಿಕ್ಕದೇವರಾಜ ಒಡೆಯರು ಆಡಳಿತ ಸೂತ್ರಗಳನ್ನು ತಮ್ಮ ಕೈಗೆತ್ತಿಕೊಳ್ಳುವ ವೇಳೆಗೆ ಮೈಸೂರು ರಾಜ್ಯವು ವಿಜಯನಗರ ಸಾಮ್ರಾಜ್ಯದ ಅಧೀನತೆಯ ನೊಗವನ್ನು ಕಳಚಿಕೊಂಡಿತ್ತು. ದೇವರಾಜರ ಆಡಳಿತದ ಕೊನೆಯ ವೇಳೆಗೆ ಪಾಳೇಗಾರರ ಸಮಸ್ಯೆಗಳು ಪರಿಹಾರವಾಗಿದ್ದವು. ದಂಗೆಕೋರ ಪಾಳೇಗಾರರನ್ನು ನಿಯಂತ್ರಿಸುವ ದೃಷ್ಟಿಯಿಂದ ಸ್ಥಾಪನೆಗೊಂಡಿದ್ದ ಹಿಂದಿನ ಆಡಳಿತವನ್ನು ಈಗ ಪ್ರಚಲಿತ ಸಂಕೀರ್ಣ

ಪರಿಸ್ಥಿತಿಗೆ ಹೆಚ್ಚು ಹೊಂದಿಕೊಳ್ಳುವ ಹಾಗೆ ಅದಕ್ಕೆ ಹೊಸ ಆಕಾರ ಕೊಡಬೇಕಾಗಿತ್ತು. ಗೆದ್ದ ಎಲ್ಲ ರಾಜ್ಯಗಳನ್ನು ಕ್ರೋಢೀಕರಿಸಿ ರಾಜಕೀಯ ಸ್ಥಿರತೆಯನ್ನು ಶಾಂತಿ ಮತ್ತು ಅಭ್ಯುದಯಗಳ ಕಾಲವನ್ನು ಆರಂಭಿಸಬೇಕಾಗಿದ್ದುದರಿಂದ ಅದನ್ನು ಭದ್ರವಾದ ತಳಹದಿಯ ಮೇಲೆ ಸ್ಥಾಪಿಸಬೇಕಾಗಿತ್ತು.

ಚಿಕ್ಕದೇವರಾಜನು ಮೊದಲು ಕೆಲವು ಪಾಳೇಗಾರರಿಗೆ ಜಹಗೀರುಗಳನ್ನು ಉಂಬಳಿಗಳನ್ನೂ ಕೊಟ್ಟು ಇತರರಿಂದ ಬರಬೇಕಾದ ಖಂಡನೆಯನ್ನು ನಿಗದಿ ಪಡಿಸಿದನು. ಅನಂತರ ಅದುವರೆಗೆ ಗೆದ್ದಿದ್ದ ಮತ್ತು ಒತ್ತುವರಿ ಮಾಡಿಕೊಂಡಿದ್ದ ಭೂಪ್ರದೇಶವೆಲ್ಲವನ್ನೂ ೮೪ ಆಡಳಿತ ಘಟಕಗಳನ್ನಾಗಿ ಸ್ಥಾಪಿಸಿದನು.

ರಾಜನಿಗೆ ಸಂಬಂಧಿಸಿದ ಜಮೀನು ಮತ್ತು ಆಸ್ತಿಯನ್ನು ನೋಡಿಕೊಳ್ಳಲು ಒಬ್ಬ ವಿಶೇಷ ಸುಬೇದಾರನನ್ನು ನೇಮಿಸಲಾಗಿತ್ತು.

ಇದಕ್ಕೆ ನಂತರದಲ್ಲಿ ಮೊಗಲ್ ಚಕ್ರವರ್ತಿ ಔರಂಗಜೇಬನ ಆಡಳಿತವು ಇದ್ದ ರೀತಿಯನ್ನು ಅನುಸರಿಸಿ, ಆಡಳಿತವು ಆಧುನಿಕವೂ, ಪರಿಣಾಮಕಾರಿಯೂ, ಶಾಶ್ವತವೂ ಆಗಿರುವಂತೆ ಪರಿಷ್ಕರಿಸಲು ಸಿದ್ಧನಾದನು. ಅದರ ಫಲವೇ ಸುಪ್ರಸಿದ್ಧ ೧೮ ವಿಭಾಗಗಳ ಚಾವಡಿ ಸ್ಥಾಪನೆ.

ಈ ಒಂದೊಂದು ವಿಭಾಗದಲ್ಲಿ ಒಬ್ಬ ಮೇಲ್ವಿಚಾರಕನಾದ ಗೊತ್ತುಗಾರ, ಮೂವರು ದಫ್ತರದವರು(ದಾಖಲೆಗಳನ್ನಿಡುವವರು) ಗುಮಾಸ್ತೆಯರು, ರಾಯಸ ದವರು(ಬರೆಯುವವರು), ಒಬ್ಬ ದಫೇದಾರ, ಊಳಿಗದವರು, ಗೊಲ್ಲ, ಕಾವಲುಗಾರ ಮತ್ತು ದೀವಟಿಗೆಯವರು ಇರುತ್ತಿದ್ದರು. ಇವರ ವೇತನವನ್ನು ಅರ್ಧ ನಗದಾಗಿ ಮತ್ತು ಅರ್ಧ ವಸ್ತು ರೂಪದಲ್ಲಿ ಪಾವತಿ ಮಾಡಲಾಗುತ್ತಿತ್ತು. ಪ್ರತಿದಿನ ಬೆಳಿಗ್ಗೆ ಹಿಂದಿನ ದಿನ ತಮ್ಮ ಚಾವಡಿಯಲ್ಲಿ ಏನಾಯಿತು ಎಂಬುದರ ವರದಿ ಒಪ್ಪಿಸಿ ರಾಜ ನಿಂದ ಆಜ್ಞೆಯನ್ನು ಪಡೆದುಕೊಳ್ಳಬೇಕಾಗುತ್ತಿತ್ತು.

ಈ ಬಗೆಯಲ್ಲಿ ಪಾಳೇಗಾರ ಪ್ರಭುತ್ವದಿಂದ ಛಿದ್ರೀಕರಣಗೊಂಡಿದ್ದ ರಾಜ್ಯವನ್ನು ಒಂದು ಕೇಂದ್ರೀಕೃತ ಪ್ರಭುತ್ವದಡಿ ಸಂಘಟಿಸಿದನು.

ತನ್ನ ಸೇನೆಯಲ್ಲಿ ಕೆಲಸ ಮಾಡುತ್ತಿದ್ದ ಕಂದಾಚಾರ ಪಡೆಗಳ ಸೈನಿಕರಿಗೆ ಹಾಗೂ ಖಾಯಂ ಸೈನಿಕರಿಗೆ, ಖಾಸಗಿ ಒಡೆತನವು ವಂಶ ಪಾರಂಪರ್ಯವಾಗಿ ಮುಂದುವರೆಯು ವಂತಹ ಭೂ ಒಡೆತನದ ಹಿಡುವಳಿಗಳನ್ನು ದತ್ತಿಕೊಟ್ಟನು. ಈ ಬಗೆಯ ಭೂ ಹಿಡುವಳಿಗಳು, ಗ್ರಾಮದಲ್ಲಿದ್ದ ಊಳಿಗಮಾನ್ಯತೆಯ ಅಧಿಕಾರವು ಸವಕಲಾಗಲು ನೆರವಾದವು. ಈ ಹಿಡುವಳಿಗಳು ಹಲವಾರು ಶೂದ್ರಜಾತಿಗಳಿಗೆ ತಮ್ಮ ಆರ್ಥಿಕ, ಸಾಮಾಜಿಕ ಸ್ಥಾನಮಾನದಲ್ಲಿ ಉನ್ನತಿ ಪಡೆಯಲು ಹಾಗೂ ಸರಕು ಉತ್ಪಾದನೆಯಲ್ಲಿ ಮತ್ತಷ್ಟು ಸಕ್ರಿಯವಾಗಿ ಪಾಲ್ಗೊಳ್ಳಲು ಕಾರಣವಾದವು. ಈ ಜಾತಿಗಳಲ್ಲಿ ಬಹಳ ಮುಖ್ಯವಾದವುಗಳು ಒಕ್ಕಲಿಗ, ಲಿಂಗಾಯಿತ, ಕುರುಬ, ಬೇಡ, ರಾಜಪರಿವಾರ ಮತ್ತು ಈಡಿಗ ಮುಂತಾದುವು.

ಪ್ರತೀ ೮ ಅಥವಾ ೧೬ ಹಳ್ಳಿಗಳಿಗೆ ಒಂದರಂತೆ ಸ್ಥಾಪಿತವಾದ ಹೋಬಳಿಗಳು ಕೇವಲ ಆಡಳಿತಾತ್ಮಕ ವಿಭಾಗೀಕರಣಗಳಲ್ಲದೆ ಕಂದಾಯ ಸಂಗ್ರಹಣೆಯ ಘಟಕಗಳೂ ಆಗಿದ್ದವು. ಈ ಹೋಬಳಿಯು ಎರಡೂ ಬಗೆಯ ಚಟುವಟಿಕೆಗಳನ್ನು ಒಳಗೊಂಡಿರಲು ಕಾರಣವೇನೆಂದರೆ ಆ ೮ ಅಥವಾ ೧೬ ಹಳ್ಳಿಗಳೊಂದಿಗೆ ಅದು ಬೆಳೆಸಿಕೊಂಡಿದ್ದ ಆರ್ಥಿಕ ಸಂಬಂಧಗಳು.

ಸಂತೆಗಳು ಇವುಗಳ ಆಧಾರದಲ್ಲಿ ರೂಪುಗೊಂಡಿದ್ದು, ಹೋಬಳಿಯು ಇವುಗಳ ರಚನೆಗೆ ಅತ್ಯಂತ ಸೂಕ್ತ ಘಟಕವಾಗಿತ್ತು. ಚಿಕ್ಕದೇವರಾಜರ ಆಡಳಿತದ ಸಮಯದಲ್ಲಿ ಹಲವು ನೂರು ಸಂಖ್ಯೆಯ ಸಂತೆಗಳ ಅಸ್ತಿತ್ವವನ್ನು ನಾವು ಕರ್ನಾಟಕದ ಈ ಭಾಗದಲ್ಲಿ ಕಾಣುತ್ತೇವೆ. ಇಡೀ ಪ್ರಭುತ್ವ ತೆರಿಗೆಯ ಸಂಗ್ರಹವನ್ನು ನಗದು ರೂಪದಲ್ಲೇ ಕೈಗೊಂಡಿದ್ದುದನ್ನು ನಾವು ಈ ಸಮಯದಲ್ಲಿ ಕಾಣುತ್ತೇವೆ.

ತೂಕ, ಅಳತೆ ಮತ್ತು ಪ್ರಮಾಣಗಳಿಗೆ ಸಂಬಂಧಪಟ್ಟ ಅಂಶಗಳನ್ನು ಈ ಸಮಯದಲ್ಲಿ ಆಡಳಿತ ಪ್ರಾಂತ್ಯಕ್ಕೆಲ್ಲಾ ಅನ್ವಯಿಸುವಂತೆ ಏಕರೂಪಗೊಳಿಸಲಾಯಿತು. ಈ ಬಗೆಯ ಪ್ರಮಾಣೀಕರಣ, ಉತ್ಕರ್ಷಗೊಳ್ಳುತ್ತಿದ್ದ ವರ್ತಕರ ವರ್ಗಕ್ಕೆ ಬೇರಾರಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಸಹಕಾರಿಯಾಯಿತು.

ಚಿಕ್ಕದೇವರಾಜನು ಮೊಗಲರ ಸೇನಾಧಿಕಾರಿ ಖಾಸಿಂಖಾನನಿಂದ ಬೆಂಗಳೂರನ್ನು ಮೂರು ಲಕ್ಷ ಪಗೋಡಾಗಳಿಗೆ ಕೊಂಡುಕೊಂಡ. ಆನಂತರದಲ್ಲಿ ಈ ರಾಜನು ಆ ಸ್ಥಳವನ್ನು ಮಹತ್ತರವಾಗಿ ಅಭಿವೃದ್ಧಿ ಪಡಿಸಿದ. ಒಂದು ಕೋಟೆಯನ್ನು ಕಟ್ಟಿಸಿದನಲ್ಲದೇ ಪೇಟೆ ಬೀದಿಯೊಂದನ್ನೂ ಏರ್ಪಡಿಸಿದ. ನೇಕಾರರು ಮುಂತಾದ ನಗರವಾಸಿ ಜನರನ್ನು ಆತ ರಾಜ್ಯದ ಬೇರೆ ಬೇರೆ ಕಡೆಗಳಿಂದ, ಕೆಲವೊಮ್ಮೆ ಹೊರಗಡೆಯ ಪ್ರಾಂತ್ಯಗಳಿಂದ ಕರೆಸಿಕೊಂಡ. ಈ ನಗರದ ರಕ್ಷಣೆಗೆ ಕಾವಲಿನ ವ್ಯವಸ್ಥೆಯನ್ನು ಕೈಗೊಂಡು ಬೇರೆ ಎಲ್ಲಾ ಪ್ರಾಂತ್ಯಗಳಿಗೆ ಹತ್ತಿಬಟ್ಟೆಯ ಉತ್ಪನ್ನಗಳನ್ನು ಸರಬರಾಜು ಹಾಗೂ ರಫ್ತು ಮಾಡುವ ಅತ್ಯಂತ ದೊಡ್ಡ ಜವಳಿ ಕೇಂದ್ರವನ್ನಾಗಿ ಬೆಂಗಳೂರನ್ನು ವ್ಯವಸ್ಥೆಗೊಳಿಸಿದ.

ಪಂಚಮ ಬಣಜಿಗರು ಈ ಸಮಯದಲ್ಲೇ ತೀವ್ರವಾಗಿ ಪ್ರಾಬಲ್ಯಕ್ಕೆ ಬಂದರು. ಬಹುಶಃ ಅವರು ಧಾನ್ಯ ವರ್ತಕರಾದ ಸಾಲುಮೂಲೆ ಬಣಜಿಗರನ್ನು ಸ್ಥಾನಾಂತರ ಗೊಳಿಸಲು ಚಿಕ್ಕದೇವರಾಜನಿಂದ ಬೆಂಬಲ ಪಡೆದವರಾಗಿರಬೇಕು. ಯಾಕೆಂದರೆ ಆತ, ಹತ್ತಿ ಬಟ್ಟೆ ತಯಾರಿಕೆಯಲ್ಲಿಬೆಂಗಳೂರು ನಗರಕ್ಕಿದ್ದ ಭವಿಷ್ಯದ ಸಾಧ್ಯತೆಗಳನ್ನು ಗಮನದಲ್ಲಿ ಇಟ್ಟುಕೊಂಡು, ಪಂಚಮ ಬಣಜಿಗರಿಗೆ ಈ ಬಗೆಯ ಪ್ರೋತ್ಸಾಹವನ್ನು ನೀಡಿರಬೇಕು.

ಚಿಕ್ಕದೇವರಾಜನು ಒಡೆಯರ್ ವಂಶದ ರಾಜರಲ್ಲಿ ತನ್ನ ಸಾಮಾಜಿಕ ದೃಷ್ಟಿಕೋನಗಳ ಕಾರಣಗಳಿಂದಲೂ ಬಹಳ ಮಹತ್ವ ಪಡೆದವನಾಗಿದ್ದಾನೆ. ತನ್ನ

ಸಾವಿನೊಂದಿಗೆ ತನ್ನ ರಾಣಿಯರು ಸಹಗಮನ ಕೈಗೊಳ್ಳಬಾರದು ಎಂಬ ಪ್ರಗತಿಪರ ಆದೇಶವನ್ನು ಜಾರಿಗೊಳಿಸಿದವರಲ್ಲಿ ಒಡೆಯರ್ ವಂಶಾವಳಿಯಲ್ಲಿ ಈತನೇ ಮೊದಲಿಗ. ಈ ರಾಜನ ಅಭಿರುಚಿಗಳು, ಆಲೋಚನೆಗಳು ಹಾಗೂ ಸಾಂಸ್ಕೃತಿಕ ಮೌಲ್ಯಗಳು ಕಠಿಣ ಊಳಿಗಮಾನ್ಯ ತಳಹದಿಯನ್ನು ಕಳಚಿಕೊಂಡು, ವ್ಯಾಪಾರೀ ವರ್ಗವೊಂದರ ದೃಷ್ಟಿಕೋನಗಳನ್ನು ಅಳವಡಿಸಿಕೊಳ್ಳುತ್ತಿರುವುದನ್ನು ನಾವು ಗಮನಿಸಬಹುದಾಗಿದೆ.

ಈ ಅವಧಿಯಲ್ಲಿ ಕನ್ನಡ ಭಾಷಿಕ ಸಮುದಾಯಗಳ ಸಾಮಾಜಿಕ ಹಾಗೂ ಉತ್ಪಾದನಾ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉಂಟಾದ ಮಾರ್ಪಾಡನ್ನು, ಫ್ರಾನ್ಸಿಸ್ ಬುಕಾನಿನ್ ಈ ಪ್ರದೇಶದಲ್ಲಿ ೧೮೦೦-೦೧ರವರೆಗೆ ನಡೆಸಿದ ತನಿಖೆಗಳ ಆಧಾರದಲ್ಲಿ ಸೂಚಿಸಬಹುದಾದರೆ ಹೀಗೆ ಹೇಳಬಹುದು :

''ಮೈಸೂರು ಆಡಳಿತಗಾರರು ಕೈಗೊಂಡ ಪಾಳೇಗಾರ ವಿರೋಧಿ ಕಾರ್ಯಾಚರಣೆಯ ಫಲವಾಗಿ ಇಲ್ಲಿ ಊಳಿಗಮಾನ್ಯ ವ್ಯವಸ್ಥೆ ಮುರಿದುಬಿದ್ದಿದೆ..''[5]

ಈ ಬಗೆಯಲ್ಲಿ ಪುಟ್ಟ ರಾಜರಿಗೆ ಹಾಗೂ ಪಾಳೇಗಾರ ಮಧ್ಯವರ್ತಿ ಸ್ತರಗಳಿಗೆ ಇದ್ದ ಅಧಿಕಾರವನ್ನು ಸರಕಾರೀ ಸಿಬ್ಬಂದಿಗೆ ವಹಿಸಿಕೊಡುವ ಒಂದು ಸಂಪೂರ್ಣ ನೂತನ ವ್ಯವಸ್ಥೆ ಈ ಕಾಲದಲ್ಲಿ ಆರಂಭಗೊಂಡಿತು.

ಈ ಸಮಯದಲ್ಲಿ ಉಪಸಾಮಂತೀಕರಣದ ಅಂಗವಾಗಿ ಪ್ರಚಲಿತಗೊಂಡ ಪಾಳೇಗಾರ ವ್ಯವಸ್ಥೆಯ ಲೋಪದೋಷಗಳನ್ನು ನಾವು ಗಮನಿಸಬೇಕು. ವಿಜಯನಗರ ಸಾಮ್ರಾಜ್ಯದ ಕಾಲದ ಹೊತ್ತಿಗೆ ವ್ಯಾಪಕಗೊಂಡಿದ್ದ ಪ್ರತೀ ಹತ್ತಿಪ್ಪತ್ತು ಹಳ್ಳಿಗಳಿಗೆ ಒಬ್ಬನಂತೆ ಇದ್ದ ತುಂಡರಸರು, ಕೆಲವೊಮ್ಮೆ ಸ್ವಲ್ಪ ವಿಸ್ತೃತವಾದ ಪ್ರಾಂತ್ಯಗಳನ್ನು ಆಳ್ವಿಕೆ ಮಾಡುತ್ತಿದ್ದ ಪಾಳೇಗಾರರು ಉದಾಹರಣೆಗೆ ಕೆಳದಿ, ಚಿತ್ರದುರ್ಗ ಮುಂತಾದ ಪಾಳೇಪಟ್ಟುನಾಯಕರು ತಮ್ಮ ಪ್ರದೇಶಗಳ ನಿರ್ದಿಷ್ಟಕ್ಷೇತ್ರಗಳಲ್ಲಿ ಕೃಷಿ, ಕಸುಬುದಾರಿಕೆ, ವಾಣಿಜ್ಯ ಮುಂತಾದ ಆರ್ಥಿಕ ಚಟುವಟಿಕೆಗಳ ಬೆಳವಣಿಗೆ ಸದೃಢೀಕರಣಗೊಳ್ಳುವಂತೆ ಕಾರ್ಯ ನಿರ್ವಹಿಸಿದರು. ಯಾಕೆಂದರೆ ಅವರ ಅಸ್ತಿತ್ವಕ್ಕೆ ಒದಗುತ್ತಿದ್ದ ಆದಾಯವು ಈ ಪ್ರದೇಶಗಳಿಂದಲೇ ಬರಬೇಕಾಗಿತ್ತು. ಹಾಗಾಗಿ ಅದನ್ನು ಹೆಚ್ಚುಹೆಚ್ಚಾಗಿ ಪಡೆದುಕೊಳ್ಳಲು ಅವರು ನಿಶ್ಚಿತ ಚಟುವಟಿಕೆಗಳನ್ನು ಕೈಗೊಂಡರು. ಈ ಪ್ರತೀ ತುಡರಸನು ತನ್ನನ್ನು ಸಾಪೇಕ್ಷವಾಗಿ ಸ್ವತಂತ್ರ ಆಡಳಿತ ಅಧಿಕಾರಿಯೆಂದು ಭಾವಿಸಿಕೊಳ್ಳುತ್ತಿದ್ದ. ತಾನು ಯಾವ ಸಾಮ್ರಾಜ್ಯದ ಸಾಮಂತ ನಾಗಿದ್ದನೋ ಅದರ ರೀತಿ ರಿವಾಜುಗಳನ್ನು ಅನುಸರಿಸುತ್ತಾ ತನ್ನ ಸ್ಥಳೀಯ ಆಸ್ಥಾನವನ್ನು ಸಂಘಟಿಸುತ್ತಿದ್ದ. ಆದರಿಂದ ನಿರ್ದಿಷ್ಟ ಸ್ಥಾನಿಕತೆಯ ಸಂಸ್ಕೃತಿ, ಸಾಹಿತ್ಯ ಮುಂತಾದವುಗಳು ಪ್ರೋತ್ಸಾಹ ಪಡೆದು, ಪ್ರತೀ ಚಿಕ್ಕ ಭಾಗವೂ ಸಕ್ರಿಯಗೊಂಡಂತಾಗಿ ಅತ್ಯಂತ ಒಳನಾಡಿನ ಪ್ರದೇಶಗಳಲ್ಲೂ ನಿರ್ದಿಷ್ಟ ಅಭಿವೃದ್ಧಿಪರವಾದ ಅಂಶಗಳು ಕಂಡುಬರುತ್ತಿದ್ದವು. ಕನ್ನಡ ಭಾಷೆ ಹಾಗೂ ಸಂಸ್ಕೃತಿಯನ್ನು ಬಹುಮಟ್ಟಿಗೆ

ಪೋಷಿಸಿದವರು, ಈ ಬಗೆಯ ಉಪಸಾಮಂತೀಕರಣದ ಪ್ರಕ್ರಿಯೆಯ ಅಂಗವಾಗಿ ರೂಪುಗೊಂಡ ರಾಜರಾಗಿದ್ದರು ಎಂಬುದನ್ನು ನಾವು ರಾಷ್ಟ್ರಕೂಟರ ಕಾಲದಿಂದಲೂ ಗಮನಿಸಿದ್ದೇವೆ.

ಈ ಬಗೆಯಲ್ಲಿ ಕನ್ನಡ ಭಾಷಿಕ ಸಮುದಾಯಗಳ ವ್ಯಾಪಕ ಭೌಗೋಳಿಕ ಪ್ರದೇಶದಲ್ಲಿನ ಪ್ರತೀ ಪುಟ್ಟ ಘಟಕವು ಸಕ್ರಿಯಗೊಳ್ಳಲು ಕಾರಣವಾದ ಈ ಸಾಮಂತವರ್ಗಗಳೇ, ಭೌಗೋಳಿಕ ಪರಿಸ್ಥಿತಿಗಳು ಹಾಗೂ ಉತ್ಪನ್ನಗಳು ಮತ್ತಷ್ಟು ವಿಸ್ತ್ರುತವಾದ ಹಾಗೂ ಮತ್ತಷ್ಟು ಸಂಯೋಜಿತ, ಏಕೀಕೃತವಾದ ಆರ್ಥಿಕ ಮತ್ತು ಸಾಮಾಜಿಕ ಘಟಕವಾಗಿ ರೂಪುಗೊಳ್ಳಲು ಅಡೆತಡೆಯಾಗಿ ಪರಿಣಮಿಸಿದ್ದವು.

ಯಾಕೆಂದರೆ, ಅವರು ಪ್ರತಿಯೊಬ್ಬರೂ ತಮ್ಮನ್ನು ತಾವು ಸ್ವತಂತ್ರ ಘಟಕಗಳಾಗಿ ಭಾವಿಸಿದ್ದು, ಆ ನಿರ್ದಿಷ್ಟ ಪ್ರಾಂತ್ಯದ ಹೆಚ್ಚುವರಿ ಮೌಲ್ಯದ ಲೂಟಿಯಲ್ಲಿ ತಾವು ಹೆಚ್ಚಿನ ಪಾಲನ್ನು ಪಡೆಯಬೇಕೆಂಬ ಆಕಾಂಕ್ಷೆ ಅವರದಲ್ಲಿದ್ದಿತು.

ಊಳಿಗಮಾನ್ಯ ಪಾಳೇಗಾರ ಪ್ರಭುತ್ವಗಳ ನಿರ್ದಿಷ್ಟ ಲಕ್ಷಣವೇನೆಂದರೆ ಅವುಗಳ ಸ್ಥಳೀಯ ಹಿತಾಸಕ್ತಿ ಹಾಗೂ ಪರಸ್ಪರ ಪ್ರಾಂತ್ಯಗಳ ಮೇಲೆ ಹತೋಟಿಯನ್ನು ಸಾಧಿಸಲು ಸ್ಪರ್ಧೆ ಹಾಗೂ ಯುದ್ಧ.

ಒಂದು ಹಂತದಲ್ಲಿ ಊಳಿಗಮಾನ್ಯ ವ್ಯವಸ್ಥೆಯೊಳಗೆ ಮೂಡಿಬಂದ ಈ ಉಪಸಾಮಂತೀಕರಣ ಪ್ರಕ್ರಿಯೆಯು, ಕನ್ನಡದ ಆಡಳಿತಾತ್ಮಕ ಹಾಗೂ ಶಾಸನಾತ್ಮಕ ಬಳಕೆಗೆ ಕಾರಣವಾಯಿತು. ಪ್ರತೀ ಪ್ರದೇಶದಲ್ಲೂ ಸರಕು ಉತ್ಪಾದನೆಯ ಚಟುವಟಿಕೆಗಳು ತೀವ್ರಗೊಂಡು, ವಾಣಿಜ್ಯದ ಹೆಚ್ಚಳಕ್ಕೆ ಆ ಮೂಲಕವಾಗಿ ಇಡೀ ಭಾಷಿಕ ಸಮಾಜದ ಚಲನಶೀಲತ್ವಕ್ಕೆ ನೆರವಾಯಿತು. ಮತ್ತೊಂದು ಕಡೆಯಲ್ಲಿ ಪ್ರತೀ ಹತ್ತಿಪ್ಪತ್ತು ಹಳ್ಳಿಗಳ ಗುಂಪೂ ಕೂಡ ಒಂದೊಂದು ಪುಟ್ಟ ರಾಜದರ್ಬಾರಿನ ಮಾದರಿಯ ಖರ್ಚುವೆಚ್ಚಗಳನ್ನು ಭರಿಸಬೇಕಾದ ದುಬಾರಿ ಖರ್ಚಿಗೆ ಗುರಿಯಾಯಿತು. ಅಲ್ಲದೇ ಅಕ್ಕಪಕ್ಕದ ಪಾಳೇಪಟ್ಟುಗಳ ಜೊತೆ ಯುದ್ಧದಲ್ಲಿ ತೊಡಗಬೇಕಾದ ಪ್ರಮೇಯ ಬಂದೊದಗುತ್ತಿದ್ದುದರಿಂದ, ಪಾಳೇಗಾರರ ಸೇನಾವೆಚ್ಚಗಳಿಗಾಗಿ ನಿಗದಿತವಲ್ಲದ, ಕಾನೂನುಬದ್ಧವಲ್ಲದ, ತೆರಿಗೆಗಳನ್ನು , ಕಾಣಿಕೆಗಳನ್ನು ರೈತರು ಕೊಡಬೇಕಾಗಿ ಬಂದಿತು. ಪ್ರತೀ ಪ್ರಾಂತ್ಯವೂ ತನ್ನ ವಿರೋಧಿ ಪಾಳೇಪಟ್ಟಿನ ಸೈನಿಕರಿಂದ ಯಾವಾಗ ಬೇಕಾದರೂ ಲೂಟಿಗೆ ಹಾಗೂ ಧ್ವಂಸಕ್ಕೆ ಗುರಿಯಾಗುವಂತಹ ಆತಂಕವನ್ನು ಎದುರಿಸಬೇಕಾಯಿತು. ಪ್ರತೀ ಪಾಳೇಗಾರನು ತನ್ನ ಯುದ್ಧಕ್ಕೆ ಹಳ್ಳಿಗಳಿಂದ ಜನರನ್ನು ಸಂಗ್ರಹಿಸುವಾಗ, ಅವರಲ್ಲಿ ಬಹುಪಾಲು ಜನ ನಿಗದಿತ ಸಂಬಳ ವ್ಯವಸ್ಥೆಯಿಲ್ಲದ, ಆದರೆ ಯುದ್ಧದಲ್ಲಿ ಪಾಲ್ಗೊಂಡಾಗ ಸಿಗುವ ಲೂಟಿಯಲ್ಲಿ ಪಾಲು ಪಡೆಯಬಹುದಾದ ಅರೆಕಾಲಿಕ ಸೈನ್ಯದವರಾಗಿರುತ್ತಿದ್ದರು. ಇಂತಹ ಸಮಯದಲ್ಲಿ ಯುದ್ಧದಲ್ಲಿ ಪಾಲ್ಗೊಳ್ಳುವ ಸೈನಿಕರು ಹಳ್ಳಿಗಳ ಲೂಟಿ, ಬೆಳೆಯ ನಾಶ, ಆಸ್ತಿಪಾಸ್ತಿ ಧ್ವಂಸ ಮುಂತಾದ ಚಟುವಟಿಕೆಗಳಲ್ಲಿ ನಿರತರಾಗಿದ್ದುದು ಸರ್ವೇಸಾಮಾನ್ಯವಾಗಿತ್ತು.

ಉಪಸಾಮಂತೀಕರಣವು ಇಂತಹ ಪುನರಾವರ್ತಿತ ಯುದ್ಧಗಳ ಹಾಗೂ ದುಬಾರಿ ತೆರಿಗೆ ವಸೂಲಿಯ ಮೇಲೆ ಆಧರಿಸಿದ್ದುದರಿಂದ, ಬಹಳ ಬೇಗನೆ ಅದು ಆಯಾ ಸಮುದಾಯಗಳ ಉತ್ಪಾದನಾ ಚಟುವಟಿಕೆಗಳ ಮೇಲೆ ಹೇರಿದ ಬಂಡೆಗಲ್ಲಾಗತೊಡಗಿತ್ತು. ಜೊತೆಗೆ ಆ ಸಮಾಜದಲ್ಲಿ ಬೆಳೆಯತೊಡಗಿದ್ದ ಸರಕು ಉತ್ಪಾದನಾ ಚಟುವಟಿಕೆಯು ಇಡೀ ಕನ್ನಡ ರಾಷ್ಟ್ರೀಯತೆಯ ಭೌಗೋಳಿಕ ಮೇರೆಗಳನ್ನು ತನ್ನ ವಹಿವಾಟಿನ ಎಲ್ಲೆಯನ್ನಾಗಿಸಿಕೊಂಡಿತ್ತು. ಆ ಎಲ್ಲೆಯೊಳಗಿನ ವಿವಿಧ ಪ್ರಾಂತ್ಯಗಳ ನಡುವೆ ಕೃಷಿ, ಇತರೆ ಸರಕು ಉತ್ಪನ್ನದ ವಿಶಿಷ್ಟೀಕರಣ ಪ್ರಕ್ರಿಯೆಗಳು ಬೆಳೆಯತೊಡಗಿದ್ದು, ಒಂದು ಪ್ರಾಂತ್ಯವು ಮತ್ತೊಂದು ಪ್ರಾಂತ್ಯದ ಮೇಲೆ ಪರಸ್ಪರಾವಲಂಬನೆಯನ್ನು ರೂಢಿಸಿಕೊಳ್ಳತೊಡಗಿದ್ದವು. ಹಲವಾರು ಹಳ್ಳಿಗಳಿಗೆ ಸೇರಿದಂತೆ ಸೃಷ್ಟಿಯಾಗಿದ್ದ ಸಂತೆಯೊಂದು, ಇಂತಹ ಹಲವಾರು ಸಂತೆಗಳ ವರ್ತಕರು ಬಂದು ಹೋಗುವ, ಮತ್ತೊಂದು ಹೋಬಳಿಮಟ್ಟದ ಅಥವಾ ತಾಲ್ಲೂಕಾಮಟ್ಟದ ಸಂತೆಯೊಂದಿಗೆ ಸಂಪರ್ಕಗಳನ್ನು ತಳೆದಿತ್ತು. ಈ ದೊಡ್ಡ ಸಂತೆಗಳು ಅವುಗಳಿಗಿಂತಲೂ ದೊಡ್ಡ ಮಾರುಕಟ್ಟೆಯಾದ ನಗರ ಕೇಂದ್ರಗಳ ಹಾಗೂ ಇತರ ವಾಣಿಜ್ಯ ಕೇಂದ್ರಗಳ ಸಂತೆಗಳೊಂದಿಗೆ ಬೆಸೆಯಲ್ಪಟ್ಟಿದ್ದವು. ಈ ನಗರ ವಾಣಿಜ್ಯ ಕೇಂದ್ರಗಳು ಪ್ರಾಂತ್ಯಾಂತರ ಹಾಗೂ ಪ್ರದೇಶಾಂತರ ಮಾರುಕಟ್ಟೆ ಗಳೊಂದಿಗೆ ವಹಿವಾಟು ಹೊಂದಿದ್ದವು.

ಈ ಬಗೆಯಲ್ಲಿ ಒಂದಕ್ಕೊಂದು ಪೂರಕವಾಗಿ, ಪರಸ್ಪರ ಸಂಬಂಧಿತವಾಗಿ ಬೆಳೆಯತೊಡಗಿದ್ದ ಸರಕು ವಾಣಿಜ್ಯದ ಜಾಲವು, ಪ್ರತೀ ಸೀಮೆಯೊಳಗೆ ಪ್ರತ್ಯೇಕವಾದ ತೆರಿಗೆ ಹಾಗೂ ಸುಂಕ ನೀತಿಯನ್ನು, ತೂಕ ಮತ್ತು ಅಳತೆಗಳ ಸ್ಥಾನಿಕ ಪ್ರಮಾಣಗಳನ್ನು ವಿಧಿಸಿಕೊಂಡಿರುತ್ತಿದ್ದ ಪಾಳೇಪಟ್ಟುಗಳ ಅಸ್ತಿತ್ವದಿಂದಾಗಿ ಅಡೆತಡೆಗೊಳಪಟ್ಟಿತ್ತು. ಪ್ರತೀ ಪ್ರಾಂತ್ಯವು ಮತ್ತೆ ಮತ್ತೆ ಕಾಳಗದಲ್ಲಿ ತೊಡಗುತ್ತಿದ್ದುದರಿಂದ ಅಲ್ಲಿ ಅಶಾಂತಿಯೇರ್ಪಟ್ಟು ವಾಣಿಜ್ಯ ವ್ಯವಹಾರಗಳಿಗೆ ತಡೆಯುಂಟಾಗುತ್ತಿತ್ತು. ಇದಲ್ಲದೆ ಕೃಷಿಕರ ಮೇಲೆ ಹಾಗೂ ಇತರೆ ಸರಕು ಉತ್ಪಾದಕರ ಮೇಲೆ ಬೇಕಾಬಿಟ್ಟಿಯಾಗಿ ತೆರಿಗೆ ವಸೂಲಿ ಮಾಡುತ್ತಿದ್ದುದ ರಿಂದಲೂ, ಪಾಳೇಗಾರರ ಆಗ್ರಹಕ್ಕೆ ತುತ್ತಾದ ರೈತರು ತಮ್ಮ ಜಮೀನುಗಳಿಂದ ಹೊರಹಾಕಲ್ಪಡುತ್ತಿದ್ದುದರಿಂದಲೂ, ಅವರು ಅನಿಶ್ಚಿತತೆಗೆ ಗುರಿಯಾಗಿದ್ದರು. ಇವೆಲ್ಲವೂ ಬೆಳೆಯುತ್ತಿದ್ದ ಸರಕು ಉತ್ಪಾದನೆಯ, ಆ ಮೂಲಕ ಬೆಳೆಯುತ್ತಿದ್ದ ವಾಣಿಜ್ಯ ಹಾಗೂ ಸಾಮಾಜಿಕ ಸಂಬಂಧಗಳ ಕಾಲಘಟ್ಟದಲ್ಲಿದ್ದ ಸಮಾಜವೊಂದರ ಸದೃಢೀಕರಣಕ್ಕೆ ದೊಡ್ಡ ದಮನಕಾರೀ ಅಂಶಗಳಾಗಿ ರೂಪುಗೊಂಡಿದ್ದವು. ಇಂತಹ ಸಂದರ್ಭದಲ್ಲಿ, ವಿವಿಧ ಪ್ರಾಂತ್ಯಗಳ ನಡುವೆ ಆಡಳಿತಾತ್ಮಕ ಏಕರೂಪತೆಯನ್ನು ಸಾಧಿಸುವ ದಿಸೆಯಲ್ಲಿ ಉತ್ಪಾದನಾ ಚಟುವಟಿಕೆಗಳಿಗೆ ಸ್ಥಳೀಯ ಪ್ರತಿಬಂಧಕಗಳನ್ನು ವಿಧಿಸಿದ್ದ ಪಾಳೇಗಾರ ವ್ಯವಸ್ಥೆಯನ್ನು ನಿವಾರಿಸುವುದು, ಅಂದಿನ ಸಾಮಾಜಿಕ ಸಂದರ್ಭಕ್ಕೆ ಅಗತ್ಯವಾಗಿ ಒದಗಿ ಬಂದ ಒಂದು ಕರ್ತವ್ಯವಾಗಿತ್ತು.

ಈ ಬಗೆಯ ಕರ್ತವ್ಯವನ್ನು ಕೃಷ್ಣಾ ನದಿ ತೀರದಿಂದಾಚೆಯ ಕನ್ನಡ ಪ್ರದೇಶಗಳಲ್ಲಿ ಚಿಕ್ಕದೇವರಾಜನು ಪೂರೈಸಿದ. ಪಾಳೇಗಾರಿಕೆಯ ನಿರ್ಮೂಲನೆ ಹಾಗೂ ಆಧುನಿಕ ಪ್ರಭುತ್ವವೊಂದರ ಗಟನೆ ಎಂಬ ಪ್ರಕ್ರಿಯೆಗೆ ಚಿಕ್ಕದೇವರಾಜನು ನಾಂದಿ ಹಾಡಿದ. ಅದರಿಂದಾಗಿ ಅವನ ರಾಜಾದಾಯವು ಹೆಚ್ಚಿತಲ್ಲದೆ ಹಳೇ ಮೈಸೂರು ಸೀಮೆಯ ಕನ್ನಡ ಪ್ರದೇಶಗಳು ತಮ್ಮ ಚಟುವಟಿಕೆಗಳನ್ನು ಸಮೃದ್ಧೀಕರಣ ಗೊಳಿಸಿಕೊಳ್ಳುವ ಹಂತಕ್ಕೆ ಅನುವಾದವು.

ಈ ಬೆಳವಣಿಗೆಗಳ ಪ್ರತಿಫಲನವನ್ನು ನಾವು ಆ ಕಾಲದ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳ ಹೆಚ್ಚಳದಲ್ಲಿ ಕೂಡ ಗುರುತಿಸಬಹುದಾಗಿದೆ. ೧೭೬೭ರ ವರೆಗಿನ ಒಡೆಯರ್ ರಾಜವಂಶದ ಆಡಳಿತಾವಧಿಯಲ್ಲಿ ಬಹಳ ವಿಪುಲವಾದ ಕನ್ನಡ ಸಾಹಿತ್ಯ ನಿರ್ಮಾಣ ಚಟುವಟಿಕೆಗಳು ಕಂಡು ಬಂದವು. ಚಿಕ್ಕದೇವರಾಜರಲ್ಲಿ ಮಂತ್ರಿಗಳಾಗಿದ್ದ ತಿರುಮಲರಾಯ, ಚಿಕ್ಕುಪಾಧ್ಯಾಯ, ಅಲ್ಲೇ ಊಳಿಗದಲ್ಲಿದ್ದ ಸಂಚಿಯ ಹೊನ್ನಮ್ಮ, ಶೃಂಗಾರಮ್ಮ, ದೊಡ್ಡ ಕೃಷ್ಣರಾಜರ ಸೇನಾಪತಿಯಾಗಿದ್ದ ರಂಗಯ್ಯ, ಮಂತ್ರಿ ವೆಂಕಾಮಾತ್ಯ, ಬೆಟ್ಟದ ಚಾಮರಾಜರ ಗುರು ಸಿಂಗರಾರ್ಯ ಮುಂತಾದವರುಗಳು ಈ ಕಾಲದಲ್ಲಿ ಕವಿಗಳಾಗಿ ರಾಜಾಸ್ಥಾನದಲ್ಲಿ ಆಶ್ರಿತರಾಗಿರದೆ, ಬೇರೆ ಬೇರೆ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಲೇ ಸಾಹಿತ್ಯ ರಚನೆಯಲ್ಲಿ ನಿರತರಾಗಿದ್ದುದು ಕಂಡು ಬರುತ್ತದೆ.

''ಈಗಿರುವಂತೆ ಮೈಸೂರು ಅರಸರ ಕಾಲದ ಸಾಹಿತ್ಯ ಶ್ರೀಮಂತವಾದದ್ದು; ಈ ಕಾಲದ ಲಭ್ಯಕೃತಿಗಳ ಸಂಖ್ಯೆ ಹೆಚ್ಚಾದದ್ದು ''.[6]

''ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಕಾಲದ ಕನ್ನಡ ಸಾಹಿತ್ಯಕ್ಕಿಂತ ಈ ಕಾಲದ ಸಾಹಿತ್ಯ ಸಮೃದ್ಧವಾದದ್ದು, ಸಂಪದ್ಯುಕ್ತವಾದದ್ದು''[7] ಎಂದು ಡಾ. ಎನ್. ಎಸ್. ತಾರಾನಾಥ ಅಭಿಪ್ರಾಯ ಪಡುತ್ತಾರೆ. ಅದಕ್ಕೆ ಕಾರಣ ಆ ಸಾಮ್ರಾಜ್ಯಗಳ ಕಾಲಘಟ್ಟಕ್ಕಿಂತ ಮೈಸೂರು ಒಡೆಯರ ಆಳ್ವಿಕೆಯ ಕಾಲಘಟ್ಟವು ಹೆಚ್ಚು ಮುನ್ನಡೆಗೆ ಬಂದದ್ದು, ಮಧ್ಯ ಊಳಿಗಮಾನ್ಯತೆಯ ಅವಧಿಯಿಂದ ಊಳಿಗಮಾನ್ಯತೆಯ ಉತ್ತರಾವಧಿಗೆ ಪ್ರವೇಶಿಸಿದ್ದು, ಸಮಾಜವು ತನ್ನ ಹಲವು ಬಗೆಯ ಉತ್ಪಾದನೆ ಹಾಗೂ ವಾಣಿಜ್ಯ ಚಟುವಟಿಕೆಗಳಲ್ಲಿ ಸ್ಥಿರತೆಯನ್ನು ಸಾಧಿಸಿಕೊಂಡದ್ದು ಕಾರಣವಾಗಿರಬೇಕೆಂದು ನಾವು ಸೂಚಿಸಬಹುದು.

ಈ ಅವಧಿಯಲ್ಲಿ ಚಾರಿತ್ರಿಕ ಕಾವ್ಯಗಳು ಪ್ರತ್ಯೇಕವಾಗಿ ಬೆಳೆದು ಬಂದವು. ಪಂಪ, ಪೊನ್ನ, ರನ್ನರ ಕೃತಿಗಳಲ್ಲಿ ಚಾರಿತ್ರಿಕಾಂಶಗಳು ಕಥಾವಸ್ತುವಿನೊಂದಿಗೆ ಕಲೆಸಿಹೋಗಿವೆ. ಆಶ್ರಯದಾತ ರಾಜನನ್ನು ಪುರಾಣಪುರುಷರೊಂದಿಗೆ ಸಮೀಕರಿಸಿದ್ದರಿಂದ ಆ ಕಾವ್ಯಗಳು ಶುದ್ಧ ಚರಿತ್ರೆಗಳಾಗಿಲ್ಲ. ಮಣ್ಣಿನಿಂದ ಹೊನ್ನಿನ ಕಣ ತೆಗಯುವಂತೆ ಅಲ್ಲಿ ಚಾರಿತ್ರಿಕಾಂಶ ತೆಗೆಯಬೇಕು. ನಂಜುಂಡ, ಪಾಂಚಾಲ ಗಂಗರನ್ನ ಬಿಟ್ಟರೆ ನೇರವೂ ಸವಿವರವೂ ಆದ ಚಾರಿತ್ರಿಕ ಕಾವ್ಯಗಳು ಬಂದುದು ಈ

ಅವಧಿಯಲ್ಲೇ. ಇದು 'ಕಂಠೀರವ ನರಸರಾಜ ವಿಜಯ'ದಿಂದ ಆರಂಭವಾಗಿ 'ಸೌಂದರ್ಯ ಕಾವ್ಯ' ದ ವರೆಗೂ ವ್ಯಾಪಿಸಿದೆ. ತಿರುಮಲಾರ್ಯ, ತಾವಯ್ಯ, ತಮ್ಮಯ್ಯ, ಈ ಬಗೆಯ ಒಂದಕ್ಕಿಂತ ಹೆಚ್ಚು ಕೃತಿಗಳು, ಕರ್ತೃಗಳು, ರಾಜಾಶ್ರಿತ ಕವಿಗಳು ತಮ್ಮ ಗ್ರಂಥಾರಂಭದಲ್ಲಿ ಮೈಸೂರು ಅರಸರ ಇತಿಹಾಸ ಹೇಳುವುದು ಮುಂದೆ ಒಂದು ಪರಂಪರೆಯೇ ಆಯಿತು. ಈ ಕಾಲದಲ್ಲಿ ಹಳಗನ್ನಡ ಸಾಹಿತ್ಯ ತನ್ನ ಅರುಣೋದಯ ವನ್ನು ಕಂಡುಕೊಂಡಿತು. ಚಾರಿತ್ರಿಕ ಕಾವ್ಯ ಸೃಷ್ಟಿ, ಚಂಪೂವಿನ ಪುನರುಜ್ಜೀವನ, ಗದ್ಯ ಪ್ರಕಾರ ಪ್ರಯೋಗ, ಲೇಖಕರಿಗೆ ಪ್ರೋತ್ಸಾಹ ಮುಂತಾದವು ಚಿಕ್ಕದೇವರಾಜನ ಕಾಲದ ವೈಶಿಷ್ಟ್ಯಗಳು. ಈ ಕಾಲಘಟ್ಟದಲ್ಲೇ ಕನ್ನಡದ ಉಪಲಬ್ಧ ನಾಟಕಗಳಲ್ಲಿ ಮೊದಲನೆಯದಾದ 'ಮಿತ್ರವಿಂದಾ ಗೋವಿಂದ'ವನ್ನು ಸಿಂಗರಾರ್ಯನು ಬರೆದ.

ಆ ಮನೆತನದ ಕೊನೆಯ ದೊರೆಗಳು ಪರಿವರ್ತನೆಯ ಹರಿಕಾರರು. ಚಂಪೂವಿನ ಅಸ್ತಿತ್ವ, ಗದ್ಯದ ವಿಜೃಂಭಣೆ,ಮೊದಲ ನಾಟಕ ಮತ್ತು ಯಕ್ಷಗಾನಗಳ ಬಹುಪ್ರಯೋಗ, ಸಾಂಗತ್ಯದ ಸರಳ ಭಾಷಾ ಶೈಲಿ, ಕಥನ ಕೃತಿಗಳ ಅಂಕುರಾರ್ಪಣ, ಇವು ಬಳಿಕ ರಾಜರ ಕಾಲದ ಸಾಹಿತ್ಯಿಕ ವೈಶಿಷ್ಟ್ಯಗಳು. ಇವು ಹೊಸ ಸಾಹಿತ್ಯಕ್ಕೆ ಅಗತ್ಯವಾದ ಸಾಂಸ್ಕೃತಿಕ, ಸಾಹಿತ್ಯಿಕ ವಾತಾವರಣ ಹಿನ್ನೆಲೆ ಕಲ್ಪಿಸಿಕೊಟ್ಟವು.

ಹೀಗೆ ಆಧುನಿಕಗೊಳ್ಳುತ್ತಿದ್ದ, ಏಕೀಕೃತ ಪ್ರಭುತ್ವ ನಿರ್ಮಾಣದ ಕಾಲಘಟ್ಟವು ಸಾಹಿತ್ಯಿಕವಾಗಿಯೂ, ಸಾಮಾಜಿಕವಾಗಿಯೂ ಹೊಸ ಸನ್ನಿವೇಶಗಳಿಗೆ, ಹೊಸಗನ್ನಡ ಸಾಹಿತ್ಯದ ಅಂಕುರಾರ್ಪಣಕ್ಕೆ ಪ್ರೇರಣೆಗಳನ್ನು ಒದಗಿಸಿತು ಎಂಬುದನ್ನು ನಾವು ಗಮನಿಸಬಹುದಾಗಿದೆ.

ಈ ಕಾಲಘಟ್ಟದಲ್ಲಿ ಕನ್ನಡ ಭಾಷಾ ಸಮುದಾಯಗಳ ಬೆಳವಣಿಗೆಯ ಕೇಂದ್ರಬಿಂದು ದಕ್ಷಿಣ ಕರ್ನಾಟಕದ ಕಡೆಗೆ ಸ್ಥಳಾಂತರಗೊಂಡುದನ್ನು ನಾವು ಒಟ್ಟಾರೆಯಾಗಿ ಗಮನಿಬಹುದಾಗಿದೆ. ೧೨ನೇ ಶತಮಾನದಲ್ಲಿ ಸರಕು ಉತ್ಪಾದನೆಯ ಬೆಳವಣಿಗೆ ಯೊಂದಿಗೆ ಧಾರವಾಡ-ಶಿವಮೊಗ್ಗ-ಬಿಜಾಪುರ ಪ್ರಾಂತ್ಯವು ಕರ್ನಾಟಕದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ದಿಕ್ಕುಗಳ ಧೋರಣಾತ್ಮಕ ನಿರ್ಮಾಪಕನಾಗಿ ಉಳಿದುಕೊಂಡಿತ್ತು. ೧೪ರಿಂದ ೧೭ನೇ ಶತಮಾನದವರೆಗೆ ಶಿವಮೊಗ್ಗ ಮತ್ತು ಧಾರವಾಡಗಳು ತಮ್ಮ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿಕೊಂಡವು. ಆಗ ಬಿಜಾಪುರ, ಬಳ್ಳಾರಿ, ಬೀದರ್ ಮತ್ತು ಗುಲ್ಬರ್ಗಾಗಳು ಕರ್ನಾಟಕದ ಚಾರಿತ್ರಿಕ ಬೆಳವಣಿಗೆಗೆ ಸಾಮಾನ್ಯ ದಿಕ್ಕು ನಿರ್ಧರಿಸುತ್ತಿದ್ದ ಹೊಸ ಕೇಂದ್ರಗಳಾಗಿ ರೂಪು ಗೊಂಡವು. ವಿಜಾಪುರದ ಪತನದ ನಂತರ ಚಿಕ್ಕದೇವರಾಜರ ಉತ್ಕರ್ಷದೊಂದಿಗೆ ಈ ಬೆಳವಣಿಗೆಯ ದಿಕ್ಕು ನಿರ್ಧರಿಸುವ ಮಹತ್ವವು ಶ್ರೀರಂಗಪಟ್ಟಣ - ಬೆಂಗಳೂರು ಪ್ರದೇಶಗಳಿಗೆ ವರ್ಗಾವಣೆಯಾಯಿತು. ಸಾಕಿ ಹೇಳುವ ಹಾಗೆ '' ಈ ಪ್ರಾಂತ್ಯದಲ್ಲಿ ಆಗ ಆಧುನಿಕ ಪ್ರಭುತ್ವ ಹಾಗೂ ವ್ಯಾಪಾರೀ ವರ್ಗದ ಹಿತಾಸಕ್ತಿಗಳು ಪರಸ್ಪರ ಬೆರೆತಿದ್ದು, ಅತ್ಯಂತ ದೂರಗಾಮಿ ದೃಷ್ಟಿಕೋನ ರೂಪುಗೊಂಡಿತ್ತು. ಈ ಪ್ರಾಂತ್ಯದಲ್ಲಿ

ರಾಜ ಮತ್ತು ವ್ಯಾಪಾರಿಯ ಪ್ರಗತಿಪರ ಐಕ್ಯತೆಯನ್ನು ರೂಪಿಸಿ, ಊಳಿಗಮಾನ್ಯ ರಾಜನನ್ನು ವ್ಯಾಪಾರತ್ವಕ್ಕೆ ಪೋಷಕನನ್ನಾಗಿ ಅದೇ ಸಮಯದಲ್ಲಿ ಬೆಳೆಸಿದವು''[8]

ಇನ್ನೊಂದು ಕಡೆ ಇದೇ ಅವಧಿಯಲ್ಲಿ ಕರ್ನಾಟಕದ ಕರಾವಳಿಯಲ್ಲಿ ಬೇರೊಂದು ಬಗೆಯ ಸಮ್ಮೈಕ್ಯತೆಗಳು ರೂಪುಗೊಂಡಿದ್ದವು. ಅದು ವಸಾಹತುಶಾಹಿ ಊಳಿಗಮಾನ್ಯತೆ ಹಾಗೂ ದಲ್ಲಾಳಿ ವರ್ತಕ ಬಂಡವಾಳದ ನಡುವಿನ ಪ್ರತಿಗಾಮಿ ಸಂಬಂಧವಾಗಿತ್ತು. ಚಿಕ್ಕದೇವರಾಜರ ನಿಧನದ ನಂತರ ಮಿಕ್ಕಿದ್ದ ಆ ಶತಮಾನದ ಅವಧಿಯಲ್ಲಿ ಒಂದು ಕಡೆ ವಸಾಹತುಶಾಹಿಗಳ ನೇತೃತ್ವದಲ್ಲಿದ್ದ ಬೆಳವಣಿಗೆ, ಮತ್ತೊಂದು ಕಡೆ ವರ್ತಕ ರಾಷ್ಟ್ರೀಯತಾವಾದದ ಬೆಳವಣಿಗೆ ಪರಸ್ಪರ ಸಂಘರ್ಷಕ್ಕೆ ಇಳಿಯಲಿದ್ದವು.[9]

ಅಡಿ ಟಿಪ್ಪಣಿಗಳು

1. ಪ್ರೊ. ಕೆ.ಎಸ್. ಶಿವಣ್ಣ - ಮೈಸೂರು ಒಡೆಯರ ಇತಿಹಾಸ, ಕರ್ನಾಟಕ ಚರಿತ್ರೆ, ಸಂ. ೩, ಪು. ೨೬೪
2. ಜೊಸನರ್ ಜಿಯಾರ್, ಉಲ್ಲೇಖಿತ, ಪ್ರೊ. ಕೆ.ಎಸ್. ಶಿವಣ್ಣ-ಅದೇ. ಪು. ೨೮೪.
3. ಪ್ರೊ. ಕೆ.ಎಸ್. ಶಿವಣ್ಣ, ಅದೇ, ಪು. ೨೮೬.
4. ಅದೇ, ಪು. ೨೮೬
5. Francis Buchanan ಉಲ್ಲೇಖಿತ, SAKI- Making History, Vol 1, ಪು. ೩೭೦.
6. ಡಾ. ಎನ್.ಎಸ್. ತಾರಾನಾಥ - ಮೈಸೂರು ಅರಸರು ಮತ್ತು ಕನ್ನಡ ಸಾಹಿತ್ಯ, ಕರ್ನಾಟಕ ಚರಿತ್ರೆ, ಸಂ. ೩, ಪು. ೩೯೧.
7. ಅದೇ ಪು. ೩೯೧.
8. SAKI- Making History, Vol. 1, ಪು. ೩೬೮
9. ಅದೇ ಪು. ೩೬೮

✤ ✤ ✤ ✤

ಅಧ್ಯಾಯ -೬

೧೮ನೇ ಶತಮಾನದ ಉತ್ತರಾರ್ಧ

ವರ್ತಕ ಬಂಡವಾಳ ಕೈಗಾರಿಕಾ ಬಂಡವಾಳವಾದ ಪ್ರಕ್ರಿಯೆಯ ಆರಂಭ

ಪ್ರೊ. ಷೇಕ್ ಅಲಿಯವರು ಈಗ ನಾವು ಪರಿಶೀಲಿಸಲಿರುವ ೧೮ನೆಯ ಶತಮಾನದ ಕಾಲಾವಧಿಯ ಬಗ್ಗೆ ಹೀಗೆ ಹೇಳುತ್ತಾರೆ :

'' ಹದಿನೆಂಟನೆಯ ಶತಮಾನದ ಮಧ್ಯಭಾಗವು ಭಾರತದ ಇತಿಹಾಸದಲ್ಲಿ ಬಹು ಮಹತ್ವದ ಒಂದು ಸಮಯ. ಅಲ್ಲಿಂದ ಮುಂದೆ ನಡೆದ ಘಟನೆಗಳು ರಾಜಕಾರಣದ ಒಲವುಗಳನ್ನು ಸಾಂಪ್ರದಾಯಿಕ ಪಥದಿಂದ ಬೇರೆಡೆಗೆ ತಿರುಗಿಸಿದವು. ಪಶ್ಚಿಮದಿಂದ ಭಾರತಕ್ಕೆ ಹೊಸ ಒಡೆಯರು ಬರಲಿದ್ದರು, ಅದಕ್ಕೆ ಒಳಗಿನಿಂದ ತೀವ್ರ ಪ್ರತಿಭಟನೆ ಬರಲಿತ್ತು. ಈ ಬಗೆಯ ವಿದೇಶೀಯ ಆಕ್ರಮಣವನ್ನು ಎದುರಿಸಿದವರಲ್ಲಿ ಇಬ್ಬರು ಕರ್ನಾಟಕದವರು, ಮೈಸೂರಿನ ಹೈದರಾಲಿ ಮತ್ತು ಟಿಪ್ಪು ಸುಲ್ತಾನ್. ಅವರ ಉದಯವೇ ಅತ್ಯಂತ ಆಸಕ್ತಿಯ ಕತೆ. ಅತ್ಯಂತ ಕಡಿಮೆ ಸಮಯದಲ್ಲಿ ಅವರು ಒಂದು ಸಣ್ಣ ಸಂಸ್ಥಾನವನ್ನು ಹೊರ ಜಗತ್ತಿನ ಇತಿಹಾಸದೊಂದಿಗೆ ತಳಕು ಹಾಕಿದರು. ಆ ಪ್ರದೇಶದಲ್ಲಿ ನೂತನವಾಗಿ ಶಕ್ತಿ ಮತ್ತು ಸಮತೋಲನವು ಮೂಡುವಂತೆ ಪ್ರಭಾವ ಬೀರುವ ಮಹತ್ವದ ಶಕ್ತಿಯಾದರು. ಅವರು ತಮ್ಮ ರಾಜ್ಯವನ್ನು ಎಷ್ಟರ ಮಟ್ಟಿಗೆ ವಿಸ್ತರಿಸಿದರೆಂದರೆ ಮುಂದೆ ವಿಶಾಲ ಕರ್ನಾಟಕ ಎಂದು ಯಾವುದನ್ನು ಕಲ್ಪಿಸಿಕೊಳ್ಳಲಾಯಿತೋ ಅದನ್ನು ಮುಂದಾಗಿಯೇ ರೂಪಿಸಿದಂತಿತ್ತು. ರಾಜ್ಯದಲ್ಲಿ ಹಿಂದೆಂದೂ ಕೇಳಿಯೂ ಇರದಿದ್ದ ಜನ ಕಲ್ಯಾಣ ಮತ್ತು ಸಿರಿ ಸಂಪತ್ತುಗಳನ್ನು ಅವರು ಉಂಟುಮಾಡಿದರು. ಸುಮಾರು ನಾಲ್ಕು ದಶಕಗಳ ಅವರ ಆಳ್ವಿಕೆಯು ಅನೇಕ ದೃಷ್ಟಿಗಳಿಂದ ಮಹತ್ವದ್ದಾಗಿತ್ತು. ಘಟನಾ ಪೂರ್ಣವಾಗಿತ್ತು.''[1]

ಹಾಗೆಯೇ ಮುಂದುವರೆದು ಅವರು ಆ ಕಾಲಾವಧಿಯ ಇತರ ಬೆಳವಣಿಗೆಯ ಬಗ್ಗೆ ಹೇಳುತ್ತಾರೆ :

''ಹದಿನೆಂಟನೆಯ ಶತಮಾನದ ದ್ವಿತೀಯಾರ್ಧವು ಬಹಳ ಮುಖ್ಯವಾದ ಮೂರು ಘಟನೆಗಳನ್ನು ಕಂಡಿತು. ಮೊಗಲ್ ಸಾಮ್ರಾಜ್ಯ ಮತ್ತು ಮರಾಠಾ ಶಕ್ತಿಯ ಶಿಖರ, ವಸಾಹತುಗಾರರ ಪ್ರಭುತ್ವದ ಉದಯ, ಕರ್ನಾಟಕವು ಹೈದರ್ ಮತ್ತು ಟಿಪ್ಪೂ ಇವರ ನಾಯಕತ್ವದಲ್ಲಿ ಈ ಮೂರು ಅಂಶಗಳನ್ನು ಎದುರಿಸಬೇಕಾಯಿತು. ಹಿತಾಸಕ್ತಿಗಳ ಸಂಘರ್ಷವನ್ನು ಅದರಿಂದ ಉಂಟಾದ ಗೊಂದಲವನ್ನು ತನ್ನ ಉಪಯೋಗಕ್ಕೆ ಬಳಸಿಕೊಂಡು ಹೈದರನು ಮೈಸೂರು ರಾಜ್ಯವನ್ನು ತನ್ನ ಶತ್ರುಗಳೆಲ್ಲರ ಶಕ್ತಿಯನ್ನು ಎದುರಿಸಲು ತಕ್ಕ ಬಲಿಷ್ಠ ರಾಜ್ಯವನ್ನಾಗಿ ರೂಪಿಸಿದನು. ಮೊಗಲ್ ಗದ್ದುಗೆಗೆ ತಾನೇ ವಾರಸುದಾರನೆಂದು ಬೀಗುತ್ತಿದ್ದ ಹೈದರಾಬಾದಿನ ನಿಜಾಮನ ರೆಕ್ಕೆಗಳನ್ನು ಕತ್ತರಿಸಿ, ಜೀವ ಉಳಿಸಿಕೊಳ್ಳಬೇಕಾದರೆ ಇತರರ ಬೆಂಬಲವನ್ನು ಅವನು ಬೇಡುವಂತೆ ಮಾಡಿದನು. ಪ್ರಭುತ್ವದ ಶಿಖರಾವಸ್ಥೆಯಲ್ಲಿದ್ದ ಮರಾಠರೊಂದಿಗೆ ಮುತ್ಸದ್ದಿತನದಿಂದಲೂ , ಆಯಕಟ್ಟಿನ ಯುದ್ಧಗಳಿಂದಲೂ, ಉಪಾಯವಾಗಿ ನಡೆದುಕೊಂಡು ಅವರು ಕೃಷ್ಣಾಪ್ರದೇಶದಲ್ಲಿ ತಮ್ಮ ರಾಜ್ಯಭಾಗವನ್ನು ಮೈಸೂರಿಗೆ ಬಿಟ್ಟುಕೊಡುವ ಹಾಗೆ ಮಾಡಿದನು. ಹೈದರನು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದು ಮೇಲೇರುತ್ತಿದ್ದ ಬ್ರಿಟಿಷ್ ಅಧಿಕಾರದ ವಿರುದ್ಧವಾಗಿ. ಅವನು ಆಡಳಿತ ವಹಿಸಿಕೊಳ್ಳುವ ವೇಳೆಗಾಗಲೇ ಬ್ರಿಟಿಷರು ಅಜೇಯಶಕ್ತಿ ಎಂಬ ಪ್ರಸಿದ್ಧಿ ಪಡೆದಿದ್ದರು. ಅವರ ಸೈನ್ಯದ ಸಣ್ಣ ತುಕಡಿಗಳು ಭಾರತೀಯರ ಭಾರೀ ಸೈನ್ಯಗಳನ್ನು ಬಗ್ಗು ಬಡಿಯುತ್ತಿದ್ದವು. ಕರ್ನಾಟಕ ಯುದ್ಧಗಳಿಂದ ಅವರಿಗೆ ಒಂದು ರಾಜಕೀಯ ನೆಲೆ ದೊರೆತಂತಾಗಿದ್ದು, ಪ್ಲಾಸಿ ಮತ್ತು ಬಕ್ಸಾರ್ ಯುದ್ಧಗಳು ಅವರಿಗೆ ಅಪಾರ ಸಂಪನ್ಮೂಲಗಳಿದ್ದ ವಿಶಾಲ ಪ್ರದೇಶಗಳನ್ನು ದೊರಕಿಸಿಕೊಟ್ಟಿದ್ದವು. ಅವು ಸಮೃದ್ಧ ಸಂಪನ್ಮೂಲಗಳಿದ್ದ ಪ್ರದೇಶಗಳು. ವ್ಯಾಪಾರಕ್ಕಾಗಿ ಇಲ್ಲಿಗೆ ಬಂದಿದ್ದ ವರ್ತಕರು ಭಾರತದ ಗಣನೀಯ ಭಾಗಗಳಿಗೆ ಒಡೆಯರಾಗಿದ್ದರು. ಅವರ ರಾಜಕೀಯ ನೈಪುಣ್ಯ, ಸೈನ್ಯ ಶಕ್ತಿ, ಆಡಳಿತ ಸಾಮರ್ಥ್ಯ, ಒಳ್ಳೆಯ ನಾಯಕತ್ವ ಹಾಗೂ ಆರ್ಥಿಕ ಬಲ ಇವು ದೇಶದ ಒಂದು ಕಡೆಯಿಂದ ನೆರಳು ಮುಸುಕುತ್ತಿದ್ದವು. ಸಧ್ಯದಲ್ಲೇ ಇಡೀ ದೇಶವನ್ನು ಅದು ವ್ಯಾಪಿಸಲಿತ್ತು. ಆ ಹತಾಶೆಯ ಸಮಯದಲ್ಲಿ ಒಬ್ಬ ಕನ್ನಡಿಗ ಹೈದರ್ ಅವರ ಪಾರಮ್ಯವನ್ನು ಪುಡಿಗುಟ್ಟಿದನು. ಅವರು ಅಜೇಯರೆಂಬ ಕಲ್ಪನೆಯನ್ನು ಅಳಿಸಿದನು. ಮದರಾಸಿನ ಬಾಗಿಲಲ್ಲಿ ನಿಂತು ಅವರು ಸಂಧಿಯನ್ನು ಕೋರುವಂತೆ ಮಾಡಿದನು. ಭಾರತದ ಬ್ರಿಟಿಷ್ ಆಡಳಿತದಲ್ಲಿ ಇದೊಂದೇ ಒಂದು ಸಂದರ್ಭ ; ಅವರು ಭಾರೀ ಅಪಮಾನಕ್ಕೆ ಗುರಿಯಾಗಬೇಕಾಗಿ ಬಂದದ್ದು. ಹೈದರ್ ಮತ್ತು ಟಿಪ್ಪೂ ಬದುಕಿರುವ ವರೆಗೂ ಬ್ರಿಟಿಷರು ತಮ್ಮನ್ನು ರಕ್ಷಿಸಿಕೊಳ್ಳುವ ನೆಲೆಯಲ್ಲೇ ನಿಂತರು. ಟಿಪ್ಪೂವಿನ ಅವಸಾನದ ನಂತರವೇ ಅವರು ''ಭಾರತವು ನಮ್ಮದು'' ಎಂದು ಹೇಳಿಕೊಳ್ಳುವಂತಾಯಿತು''.[2]

ಈ ವಿಷಯದಲ್ಲಿ ಟಿಪ್ಪೂ ಅಚಲಿತ ವಸಾಹತುಶಾಹಿ ವಿರೋಧಿಯಾಗಿದ್ದನು. ತನ್ನ ಅಳಿವು ಉಳಿವುಗಳ ಎಂತಹದೇ ಸಂದರ್ಭ ಬಂದಾಗಲೂ ಅವನು ವಸಾಹತು ಶಾಹಿಗಳ ಪರ ವಹಿಸಲಿಲ್ಲ. ಈ ಬಗ್ಗೆ ಬಿ. ಶೇಕ್ ಅಲಿ ಮಾತುಗಳಲ್ಲಿ ಹೇಳುವುದಾದರೆ: ''ಅವನು ಎಂದೂ ಯಾವುದೇ ಭಾರತೀಯ ಶಕ್ತಿಯ ಎದುರು ವಸಾಹತುದಾರರ ಪಕ್ಷಕ್ಕೆ ಸೇರಲಿಲ್ಲ. ಅದಕ್ಕೆ ಬದಲಾಗಿ ವಿದೇಶೀಯರ ವಿರುದ್ಧವಾಗಿ ತನ್ನ ಸಹ ದೇಶಭಕ್ತರ ಬೆಂಬಲವನ್ನು ಗಳಿಸಲು ಶಕ್ತಿಮೀರಿ ಪ್ರಯತ್ನಿಸಿದನು. ಗೋಡೆ ಬರಹಗಳನ್ನು ನೋಡಿ ಎಂದು ಮನವಿ ಮಾಡಿಕೊಂಡನು, ಒತ್ತಾಯಪಡಿಸಿದನು. ವಿಶೇಷವಾಗಿ ಇಂಗ್ಲಿಷರನ್ನು ಸೇರಿಕೊಳ್ಳದಂತೆ ನಿಜಾಮರನ್ನು ಕೇಳಿಕೊಂಡನು, ಆದರೆ ಲ್ಲವೂ ವ್ಯರ್ಥವಾಯಿತು. ಮೂರನೆಯ ಮೈಸೂರು ಯುದ್ಧದಲ್ಲಿ ಮರಾಠರು ಮತ್ತು ನಿಜಾಮ ಇಬ್ಬರೂ ಇಂಗ್ಲಿಷರೊಂದಿಗಿದ್ದರು. ಟಿಪ್ಪೂವನ್ನು ಸೋಲಿಸಲು ಅವರು ಎರಡು ವರ್ಷ ಬಹು ಕಷ್ಟಪಟ್ಟು ಕಾಯಬೇಕಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದ ಭಾವನೆಯನ್ನು ಉದ್ಘಾಟಿಸಿದವನು ಟಿಪ್ಪು ಎಂಬುದನ್ನು ಇತಿಹಾಸವು ದಾಖಲಿಸಬೇಕಾಗಿದೆ. ಸ್ವತಂತ್ರ ಭಾರತದ 'ಇತಿಹಾಸವನ್ನು ಬರೆಯುವುದಕ್ಕೆ ತನ್ನ ರಕ್ತವನ್ನು ಮೊದಲು ಸುರಿಸಿದ ಮಹಾಪುರುಷ ಅವನು''.[3]

ಟಿಪ್ಪುವಿನ ಆಡಳಿತದ ಕಾಲಘಟ್ಟವು ಹೀಗೆ ಕೇವಲ ವಸಾಹತುಶಾಹಿ ವಿರೋಧಿಯಾದ. ಧೀರೋದಾತ್ತ ಆದರ್ಶಗಳಿಂದ ಮಾತ್ರ ತನ್ನ ಆಡಳಿತದ ಕಾಲಾವಧಿಯಲ್ಲಿ ಮಹತ್ವ ಪಡೆಯಲಿಲ್ಲ. ಟಿಪ್ಪು ಕರ್ನಾಟಕವನ್ನು ಈ ಹಿಂದೆಂದಿಗಿಂತಲೂ ಹೆಚ್ಚು ಸಮೃದ್ಧ ನಾಡನ್ನಾಗಿ ಪರಿವರ್ತಿಸಿದನು. ತನ್ನ ರಾಜ್ಯವನ್ನು ಆಧುನೀಕರಿಸಲು ಪ್ರಯತ್ನಗಳನ್ನು ಕೈಗೊಂಡನು. ವ್ಯವಸಾಯವನ್ನು ಅಭಿವೃದ್ಧಿ ಪಡಿಸಲು, ವಾಣಿಜ್ಯವನ್ನು ಸುಧಾರಿಸಲು, ಕೈಗಾರಿಕೆಗಳನ್ನು ಸ್ಥಾಪಿಸಲು ಅವನು ಗಾಢವಾದ ಆಸಕ್ತಿ ತೋರಿಸಿದನು. ಆಡಳಿತದ ಸಮರ್ಥ ವ್ಯವಸ್ಥೆಯನ್ನು ಅವನು ಕಟ್ಟಿದನು. ಅನೇಕ ಸುಧಾರಕ ಅಂಶಗಳಿಂದ ಟೀಪು ಮೈಸೂರನ್ನು ಮಹತ್ವದ ಅಭಿವೃದ್ಧಿ ಚಟುವಟಿಕೆಗಳಿಂದ ಸದಾ ಗಿಜಿಗುಟ್ಟುವ ರಾಜ್ಯವನ್ನಾಗಿ ಮಾಡಿದನು. ಆ ಕಾಲಘಟ್ಟದಲ್ಲಿ ಬಂದ ಬೆಳವಣಿಗೆಯ ಕೆಲವು ಅಂಶಗಳನ್ನು ನಾವು ಗಮನಿಸಬಹುದು.

ಇಡೀ ಕರ್ನಾಟಕದ ಇತಿಹಾಸದಲ್ಲಿ ಹೈದರ್ ಮತ್ತು ಟೀಪು ಇವರ ಆಳ್ವಿಕೆಯ ಅವಧಿ ಕೇವಲ ೪೦ ವರ್ಷ. ಹೈದರನಿಗಿಂತ ಮುಂಚೆ ಮೈಸೂರು ಊಳಿಗಮಾನ್ಯ ಪದ್ಧತಿಯ ಆಡಳಿತವಿದ್ದ ಒಂದು ಸಣ್ಣ ರಾಜ್ಯ. ಅದನ್ನು ಆಧುನಿಕ ಪ್ರಭುತ್ವವನ್ನಾಗಿ ರೂಪಿಸಲು ಪಾಳೇಗಾರರ ವಿರುದ್ಧ ಈ ಹಿಂದೆ ಚಿಕ್ಕದೇವರಾಜ ಒಡೆಯರ್ ಆರಂಭಿಸಿದ್ದ ಕಾರ್ಯಾಚರಣೆಯನ್ನು ಇವರು ಮುಂದುವರೆಸಿದರು. ಇವರ ಸಮಯದಲ್ಲಿ ಸುಮಾರು ಇನ್ನೂರರಷ್ಟು ಸಂಖ್ಯೆಯ ಪಾಳೇಗಾರರನ್ನು ಸದೆಬಡೆಯಲಾಯಿತು. ಇದರಿಂದ ಕರ್ನಾಟಕದ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿದ್ದ ಒಂದು ದೊಡ್ಡ ಪರಾವಲಂಬಿ ವರ್ಗವನ್ನು ರಾಜಕೀಯವಾಗಿ ಕೊನೆಗೊಳಿಸಿ

ದಂತಾಯಿತು. ಚಿಕ್ಕದೇವರಾಜನು ಮಂಡ್ಯ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಯ ಒಂದು ಭಾಗದಲ್ಲಿದ್ದ ಪಾಳೇಗಾರ ವರ್ಗವನ್ನು ನಿರ್ನಾಮಗೊಳಿಸಿದನಾದರೆ, ಹೈದರ್ ಮತ್ತು ಟೀಪು ಹಾಸನ, ಶಿವಮೊಗ್ಗ, ದಕ್ಷಿಣಕನ್ನಡ , ಉತ್ತರ ಕನ್ನಡ, ಚಿತ್ರದುರ್ಗ, ರಾಯಚೂರು, ಬಳ್ಳಾರಿ, ಧಾರವಾಡ, ತುಮಕೂರು ಮತ್ತು ಕೋಲಾರ ಜಿಲ್ಲೆಯ ಪ್ರದೇಶಗಳಲ್ಲಿ ಈ ಕಾರ್ಯಾಚರಣೆಯನ್ನು ಮುಂದುವರೆಸಿದರು. ಫ್ರಾನ್ಸಿಸ್ ಬುಕಾನನ್ ಇದನ್ನು ಗಮನಿಸಿಯೇ ೧೮೦೦ರಲ್ಲಿ 'ಊಳಿಗಮಾನ್ಯ ವ್ಯವಸ್ಥೆಯು ಈ ಪ್ರದೇಶದಲ್ಲಿ ಮುರಿದುಬಿದ್ದಿದೆ'' ಎಂದು ಅಭಿಪ್ರಾಯಪಟ್ಟನು.

ಈ ಹಿಂದಿನ ರಾಜರ ಊಳಿಗಮಾನ್ಯ ಅವಧಿಯ ದಿಗ್ವಿಜಯಗಳು ಸಾಮಾಜಿಕ ಸಂಬಂಧಗಳಲ್ಲಿ ಅತ್ಯಂತ ಹೆಚ್ಚು ಪರಿಣಾಮಗಳನ್ನು ಬೀರಿರಲಿಲ್ಲ. ಆದರೆ ಮೈಸೂರಿನ ಆಡಳಿತವನ್ನು ವಿಸ್ತರಿಸಿದ ಟೀಪು ಮತ್ತು ಹೈದರ್ ಅವರ ಪ್ರಾದೇಶಿಕ ವಿಸ್ತರಣೆಯೂ ಕೂಡ ಒಂದು ಪ್ರಗತಿಪರ ಸಾಮಾಜಿಕ ಪರಿವರ್ತನೆಯನ್ನು ನೆಲೆಗೊಳಿಸಿತು. ಯಾಕೆಂದರೆ, ಈ ಪ್ರದೇಶಗಳಲ್ಲಿ ಎಲ್ಲಾ ಉತ್ಪಾದಕರ ಹಾಗೂ ವಾಣಿಜ್ಯ ವರ್ಗಗಳ ತಲೆಯ ಮೇಲೆ ಭಾರೀ ಹೊರೆಯನ್ನು ಹೊರಿಸಿದ್ದ ಪಾಳೇಗಾರರ ವರ್ಗವನ್ನು ಅವರು ನಿವಾರಿಸಿದರು. ಚಾಲುಕ್ಯ ಮತ್ತು ವಿಜಯನಗರದ ಕಾಲಾವಧಿಯಲ್ಲಿ ಆ ಆಳ್ವಿಕೆಗಳು ಕನ್ನಡ ಭಾಷಿಕ ಸಮುದಾಯಗಳ ವಿಸ್ತೃತ ಭಾಗಗಳನ್ನು ಒಂದುಗೂಡಿಸಿದ್ದುದೇನೋ ನಿಜ. ಆದರೆ ಹೈದರ್ ಮತ್ತು ಟೀಪು ನೇತೃತ್ವದಲ್ಲಿ ಏರ್ಪಟ್ಟ ಬೆಳಗಾಂ, ಬಿಜಾಪುರ, ಬೀದರ್ ಮತ್ತು ಗುಲ್ಬರ್ಗಾಗಳನ್ನು ಹೊರತುಪಡಿಸಿದ, ಮಿಕ್ಕ ಕರ್ನಾಟಕ ಭಾಗಗಳ ಏಕೀಕರಣವು ಬಹಳ ವಿಸ್ತೃತವಾಗಿತ್ತು ಮಾತ್ರವಲ್ಲದೆ, ಸಮರ್ಪಕವೂ ಆಗಿತ್ತು. ಯಾಕೆಂದರೆ ಇಡೀ ಕರ್ನಾಟಕವು ಆಗ ಒಂದು ಸಾಮಾನ್ಯ ಆಡಳಿತದಡಿ ಸಮಗ್ರವಾಗಿ ಏಕೀಕರಣಗೊಂಡಿತು. ಅದು ಊಳಿಗಮಾನ್ಯತೆಯಿಂದಾಗಿ ಜನರ ನಡುವೆ ಏರ್ಪಟ್ಟಿದ್ದ ಅನೈಕ್ಯತೆಗಳನ್ನು ತೊಡೆದು ಹಾಕಿ ಕರ್ನಾಟಕದ ಏಕೀಕರಣವನ್ನು ಸಾಧಿಸಿತು.

ಟೀಪುವಿನ ಕಾಲಘಟ್ಟದ ಬಗ್ಗೆ, ಮೂರನೇ ಮೈಸೂರು ಯುದ್ಧದಲ್ಲಿ ಸ್ವತಃ ಹೋರಾಡಿದ ಲೆ. ಮೂರ್ ಕೊಡುವ ಒಂದು ಪ್ರತ್ಯಕ್ಷ ವರದಿಯ ಉಲ್ಲೇಖ ಹೀಗಿದೆ:

''ಹೊಸ ದೇಶವೊಂದರ ಮೂಲಕ ಪ್ರಯಾಣ ಮಾಡುತ್ತಿರುವ ವ್ಯಕ್ತಿಯು ಆ ದೇಶದಲ್ಲಿ ಚೆನ್ನಾಗಿ ಬೇಸಾಯವಾಗಿರುವುದನ್ನು ನೋಡುತ್ತಾನೆ. ಸದಾ ಕಾರ್ಯಮಗ್ನರಾಗಿರುವ ಜನರನ್ನು ನೋಡುತ್ತಾನೆ. ಪಟ್ಟಣಗಳು ಹೊಸದಾಗಿ ನಿರ್ಮಿತವಾಗಿರುತ್ತವೆ, ವಾಣಿಜ್ಯವು ವಿಸ್ತಾರವಾಗುತ್ತಿರುತ್ತದೆ. ನಗರಗಳ ಸಂಖ್ಯೆ ಹೆಚ್ಚುತ್ತಿರುತ್ತದೆ. ಎಲ್ಲೆಲ್ಲೂ ಸಂತೋಷವನ್ನು ಸೂಚಿಸುವಂತೆ ಸುಖ ಸಮೃದ್ಧಿಗಳಿಂದ ತುಂಬಿ ತುಳುಕುವ ಆ ನಾಡನ್ನು ನೋಡಿ, ಅದು ಪ್ರಜೆಗಳ ಮನಸ್ಥಿತಿಗೆ ಹೊಂದಿಕೆಯಾಗುವಂತಹ ದೇಶವೆಂದು ಅವನು ತೀರ್ಮಾನಿಸುತ್ತಾನೆ. ಟೀಪುವಿನ ದೇಶದ ಚಿತ್ರ ಇದು. ಅಲ್ಲಿಯ ಸರ್ಕಾರವನ್ನು ನಾನು ಗೌರವಿಸುವುದು ಹೀಗೆ''.[4]

ಈ ಬಗೆಯ ಪ್ರಗತಿಯನ್ನು ಸಾಧಿಸಲು ಆತ ಮೊದಲು ಕೈಗೊಂಡ ಕಾರ್ಯಕ್ರಮವೆಂದರೆ, ಪಾಳೇಗಾರರ ಊಳಿಗಮಾನ್ಯ ವ್ಯವಸ್ಥೆಯನ್ನು ನಿರ್ಮೂಲಗೊಳಿಸಿ, ತನ್ನ ವ್ಯವಸ್ಥೆಯಲ್ಲಿ ಮೂಲಭೂತವಾದ ಬದಲಾವಣೆಗಳನ್ನು ಮಾಡಿದನು. ಇಡೀ ಊಳಿಗಮಾನ್ಯ ವ್ಯವಸ್ಥೆಯ ಯಂತ್ರವನ್ನು ಭಾಗ ಭಾಗವಾಗಿ ವಿವರ ವಿವರವಾಗಿ ಪರೀಕ್ಷಿಸಿದನು. ತೆರಿಗೆಯನ್ನು ವಸೂಲಿ ಮಾಡುವ ಹಕ್ಕನ್ನು, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಹೊಣೆಗಾರಿಕೆಯನ್ನು, ಪೌರ ಅಧಿಕಾರ ಚಲಾಯಿಸುವ ಹಕ್ಕನ್ನು ಪಾಳೇಗಾರರಿಂದ ಕಿತ್ತುಕೊಂಡನು. ರಾಜ್ಯಾದ್ಯಂತ ನೂತನ ವ್ಯವಸ್ಥೆಯು ಜಾರಿಗೆ ಬಂದಿತು. ಇದರ ಪ್ರಕಾರ ಪಾಳೇಗಾರರಿಗೆ ಭೂ ಕಂದಾಯ ವಸೂಲಿ ಮಾಡುವ ಅಧಿಕಾರ ತಪ್ಪಿತು. ಅದಕ್ಕೆ ಬೇರೆಯೇ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ಅನೇಕ ಕಡೆ ಸರಕಾರವು ನೇರವಾಗಿ ರೈತರಿಂದ ಕಂದಾಯವನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಿತು. ಕೆಲವು ಸಂದರ್ಭಗಳ ಮಟ್ಟಿಗೆ ಈ ಕೆಲಸವನ್ನು ಕೆಲವು ವ್ಯಕ್ತಿಗಳಿಗೆ ವಹಿಸಿತು. ಸರಕಾರದ ಅಧಿಕಾರಿಗಳೇ ವಿಶೇಷವಾಗಿ ಅಂತಹ ಕೆಲವಾರು ವ್ಯಕ್ತಿಗಳನ್ನು ಆರಿಸಿದ್ದರು.

ಇಡೀ ರಾಜ್ಯವನ್ನು ಐದು ಸಾವಿರ ಪಗೋಡಾ ವರಮಾನಗಳನ್ನು ಕೊಡುವ ಸಣ್ಣ ಘಟಕಗಳನ್ನಾಗಿ ವಿಭಾಗಿಸಲಾಯಿತು. ಕಂದಾಯ ಆಡಳಿತ ದೃಷ್ಟಿಯಿಂದ ಅಂತಹ ಘಟಕವನ್ನು ತುಕಡಿ ಎಂದು ಕರೆಯಲಾಗುತ್ತಿತ್ತು. ಪ್ರತಿಯೊಂದು ತುಕಡಿಯು ಒಬ್ಬ ಅಮಲದಾರನ ಕೈಕೆಳಗಿತ್ತು. ಒಬ್ಬ ಶಿರಸ್ತೇದಾರ, ಮೂವರು ಗುಮಾಸ್ತರು, ಒಬ್ಬ ತರ್ಫ್‌ದಾರ, ಒಬ್ಬ ಸರಾಫ, ಒಬ್ಬ ಮುನಿಷಿ, ಒಬ್ಬ ಗೊಲ್ಲ ಮತ್ತು ಆರು ಜನ ಸಹಾಯಕರು ಅಥವಾ ಸೇವಕರು ಪ್ರತಿ ತುಕಡಿಯಲ್ಲೂ ಇರುತ್ತಿದ್ದರು. ೨೦ ಅಥವಾ ೩೦ ತುಕಡಿಗಳಿಗೆ ಒಂದು ಅಸಫ್ ಕಛೇರಿಯನ್ನು ಸೂಕ್ತ ಸಿಬ್ಬಂದಿಯೊಂದಿಗೆ ಸ್ಥಾಪಿಸಲಾಯಿತು. ಆಧುನಿಕ ಪರಿಭಾಷೆಯಲ್ಲಿ ಇದು ಒಂದು ಜಿಲ್ಲೆ ಇದ್ದ ಹಾಗೆ. ಇದೆಲ್ಲದರ ಮೇಲೆ ಪ್ರಧಾನ ಅಸಫ್ ಇರುತ್ತಿದ್ದನು. ಇಡೀ ಕಂದಾಯ ಇಲಾಖೆಯನ್ನು ನಿಯಂತ್ರಿಸುತ್ತಿದ್ದವನು ಇವನೇ.

ಈ ಎಲ್ಲ ಬದಲಾವಣೆಗಳ ಉದ್ದೇಶ ಸರಕಾರಕ್ಕೂ ರೈತರಿಗೂ ನಡುವೆ ಸಹಕಾರವನ್ನು ವಿಕಾಸಗೊಳಿಸುವುದು, ಮಧ್ಯವರ್ತಿಗಳ ಪಿಡುಗನ್ನು ನಿವಾರಿಸುವುದು ಮತ್ತು ರಾಜ್ಯದ ಆದಾಯವು ಸೋರಿಹೋಗುತ್ತಿದ್ದುದನ್ನು ತಡೆಗಟ್ಟುವುದೇ ಆಗಿತ್ತು. ಪಾಳೇಗಾರರು ಮತ್ತು ಜಮೀನ್ದಾರರಿಂದ ಮಧ್ಯಮ ಸ್ತರವನ್ನು ಅವನು ಪೂರ್ತಿಯಾಗಿ ತೊಡೆದುಹಾಕಿದನು. ಹಳೆಯ ಪದ್ಧತಿಯಲ್ಲಿ ಲಾಭವಾಗುತ್ತಿದ್ದುದು ಅವರಿಗೆ ಮಾತ್ರ. ಹಳೆಯ ಭೂಮಾಲೀಕರು ತಮ್ಮ ಅಧಿಕಾರವನ್ನು, ಪ್ರಭಾವವನ್ನು ಕಳೆದುಕೊಂಡರು.

ಟೀಪು ಕಬ್ಬು, ಗೋಧಿ ಮತ್ತು ಬಾರ್ಲಿ ಬೇಸಾಯಕ್ಕೆ ಹಾಗೂ ತೇಗ, ನೀಲ, ಅಕೇಶಿಯಾ, ಶ್ರೀಗಂಧ, ಅಡಿಕೆ ಮತ್ತು ಮಾವಿನ ತೋಟಗಳಿಗೆ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದ. ರಾಜ್ಯದಲ್ಲಿ ಎಲ್ಲೂ ಗಸಗಸೆ (ಅಪೀಮು ಅಥವಾ ಬಂಗಿ) ಯನ್ನು ಬೆಳೆಯಕೂಡದೆಂದು ನಿಷೇಧಿಸಲಾಗಿತ್ತು. ಅಡಿಕೆ ಬೆಳೆಗೆ ತುಂಬಾ ಪ್ರೋತ್ಸಾಹವಿತ್ತು.

ಅಡಿಕೆ ಬೆಳೆಗಾರರಿಗೆ ಮೊದಲ ಐದು ವರ್ಷ ಕಂದಾಯದಿಂದ ಮನ್ನಾ ಇರುತ್ತಿತ್ತು. ೬ನೇ ವರ್ಷದಿಂದ ಮಾಮೂಲು ದರದ ಅರ್ಧ ಕಂದಾಯ. ವೀಳ್ಯದೆಲೆಯ ಬೇಸಾಯಗಾರರಿಗೂ ತೆಂಗು ಕೃಷಿ ಮಾಡುವವರಿಗೂ ಅದೇ ರಿಯಾಯಿತಿ ಅನ್ವಯಿಸಲಾಗುತ್ತಿತ್ತು.

ಮೈಸೂರು ರಾಜ್ಯದಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿ ಪಡಿಸಬೇಕೆಂದು ಉತ್ಸುಕತೆಯಿಂದ ಟೀಪು ಹಿಪ್ಪೇನೇರಳೆ ಕೃಷಿಯನ್ನು ಪ್ರೋತ್ಸಾಹಿಸಿದ್ದ. ಅವನ ಎರಡು ಪ್ರೀತಿಯ ತೋಟಗಳು ಬೆಂಗಳೂರಿನ ಲಾಲ್‌ಬಾಗ್ ಹಾಗೂ ಶ್ರೀರಂಗಪಟ್ಟಣದ ತೋಟ. ಇಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳಿಂದ ತರಿಸಿದ ಬೀಜಗಳನ್ನು, ಸಸಿಗಳನ್ನು ನೆಟ್ಟು ಬೆಳೆಸುತ್ತಿದ್ದರು. ಅವೆರಡೂ ಉತ್ತಮವಾದ ಸಸ್ಯಕ್ಷೇತ್ರಗಳಾಗಿದ್ದವು. ಅವನ ತೋಟಗಳಲ್ಲಿ ಮಾವು, ಸೇಬು, ಕಿತ್ತಲೆ, ಸೀಬೆ, ಅಂಜೂರ, ಹಿಪ್ಪುನೇರಳೆ, ನೀಲಿ ಮತ್ತು ಹತ್ತಿ ಬೆಳೆಯುತ್ತಿದ್ದವು. ಪೈನ್ ಮತ್ತು ಓಕ್ ಮರಗಳ ಸಸಿಗಳನ್ನು , ಬೀಜಗಳನ್ನು ಗುಡ್‌ಹೋಪ್ ಭೂಶಿರದಿಂದ ತರಿಸಿ ಬೆಳೆಸಿದ್ದ.

ಟೀಪು ರೈತರನ್ನು ಬಹಳ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದ. ಫಸಲಿಲ್ಲದ ಸಮಯದಲ್ಲಿ ಅವರು ಹಣಕಾಸು ಮುಗ್ಗಟ್ಟಿನ ಪರಿಸ್ಥಿತಿಯನ್ನು ದಾಟಲು ತಕ್ಕಾವಿ ಸಾಲದ ಪದ್ಧತಿಯನ್ನು ಜಾರಿಗೆ ತಂದ. ಅಲ್ಪಾವಧಿಗೆ ಕೊಡುವ ಸಾಲ ಇದು. ತುಂಬ ಬಡವರಾದ ರೈತರಿಗೆ ನೇಗಿಲನ್ನು, ಬೀಜವನ್ನು ಕೊಳ್ಳಲು ಈ ಸಾಲ ದೊರಕುತ್ತಿತ್ತು. ಲೇವಾದೇವಿದಾರರ ಮತ್ತು ಅಧಿಕಾರಿಗಳ ಶೋಷಣೆಗೆ ಅವರು ಸಿಲುಕದಂತೆ ರಕ್ಷಣೆ ಕೊಡಲಾಗಿತ್ತು. ಕೂಲಿ ಕೊಡದೆ ರೈತರನ್ನು ಕೆಲಸಕ್ಕೆ ನೇಮಿಸಿಕೊಳ್ಳದಂತೆ ಪಟೇಲರಿಗೆ ಕಟ್ಟಾಜ್ಞೆ ಇದ್ದಿತು. ಈ ಆಜ್ಞೆಯನ್ನು ಉಲ್ಲಂಘಿಸಿದರೆ ಅವರ ಇಡೀ ಫಸಲನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿತ್ತು. ರೈತರಿಗೆ ಯಾವ ಸ್ಥಳೀಯ ಅಧಿಕಾರಿಯೂ ಕಿರುಕುಳ ಕೊಡದಂತೆ ನೋಡಿಕೊಳ್ಳುವುದು ಅಮಲ್ದಾರನ ಹೊಣೆಯಾಗಿತ್ತು.

ಥಾಮಸ್ ಮುನ್ರೋ ಪ್ರಕಾರ, ಕೆಲವು ಪ್ರಾಂತ್ಯಗಳಲ್ಲಿ ತುಂಬ ಕಡಿಮೆ ಕಂದಾಯವನ್ನು ವಸೂಲು ಮಾಡಲಾಗುತ್ತಿತ್ತು. ಆತ ಹೇಳುತ್ತಾನೆ '' ಸರಕಾರದ ಭಾಗವು ಮೂರನೆಯ ಒಂದು ಪಾಲಿಗಿಂತಲೂ ಹೆಚ್ಚಾದ ಸಂದರ್ಭ ಎಲ್ಲೂ ಇರಲಿಲ್ಲ. ಅನೇಕ ಕಡೆ ಒಟ್ಟು ಉತ್ಪನ್ನದ ೧/೫,, ೧/೬ ಅಥವಾ ೧/೧೦ ಭಾಗ ಕೂಡ ಆಗಿರಲಿಲ್ಲ''.[5] ಅದು ಮಣ್ಣಿನ ಫಲವತ್ತತೆ, ಬೆಳೆಯ ಸ್ವರೂಪ, ಮಳೆ ಮತ್ತು ಭೂಮಿಯ ಸ್ವರೂಪ - ಇವುಗಳನ್ನು ಅವಲಂಬಿಸಿದ್ದಿತು. ರೈತರಿಗೆ ಅನುಕೂಲವಾಗುವ ನಿಯಮಗಳ ಮೇಲೆ ಜಮೀನು ಹಂಚಿ ಟೀಪು ಬೇಸಾಯದ ಭೂಮಿಯ ವ್ಯಾಪ್ತಿಯನ್ನು ಹೆಚ್ಚಿಸಿದ. ಬಂಜರು ಭೂಮಿಯನ್ನು ಬೇಸಾಯ ಮಾಡತೊಡಗಿದಾಗ ಮೊದಲನೇ ವರ್ಷ ಅದಕ್ಕೆ ಕಂದಾಯವಿಲ್ಲ, ಎರಡನೇ ವರ್ಷ ೧/೪ ಭಾಗ, ಅಲ್ಲಿಂದ ಮುಂದಕ್ಕೆ ಮಾಮೂಲು ದರದಲ್ಲಿ.

ಮುಖ್ಯ ಸರಕಾರಿ ಅಧಿಕಾರಿಗಳಿಗೆ ಬೇಸಾಯದ ಹಕ್ಕನ್ನು ನೀಡಿರಲಿಲ್ಲ. ಎರಡನೆಯದಾಗಿ ಒಬ್ಬ ವ್ಯಕ್ತಿಯು ತನ್ನ ಸ್ವಂತ ಜಮೀನು ಒಂದು ಮೌಜಕ್ಕಿಂತ ಹೆಚ್ಚಿಗೆ ಹೊಂದಿರಲು ಅನುಮತಿ ಇರಲಿಲ್ಲ.

ಕಂದಾಯ ನಿಗದಿಗೆ ಮುಂಚೆ ಜಿಲ್ಲಾಧಿಕಾರಿಗಳು ಮನೆಗಳು, ಜಮೀನುಗಳು ಮತ್ತು ಬೇಸಾಯದ ಪರಿಸ್ಥಿತಿಗಳು ಇವುಗಳ ಸರ್ವೆ ನಡೆಸಬೇಕಾಗಿತ್ತು. ಇದು ಬಹಳ ಮಹತ್ವದ ಸಮೀಕ್ಷೆಯಾಗಿದ್ದು,ರೈತರ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತಿದ್ದಿತು. ಈ ಸಂಬಂಧದ ಆದೇಶಗಳು ಹೀಗಿದ್ದವು :

''ನಿಮ್ಮ ಜಿಲ್ಲೆಯಲ್ಲಿರುವ ಎಲ್ಲಾ ಜಾತಿಗಳ, ಎಲ್ಲಾ ಮನೆಗಳ ವಿವರವಾದ ಯಾದಿಗಳನ್ನು ಸಿದ್ಧಪಡಿಸತಕ್ಕದ್ದು. ಹಳ್ಳಿಗಳ ಹೆಸರು, ನೇಗಿಲುಗಳ ಸಂಖ್ಯೆ, ಬಿತ್ತಿದ ಬೀಜದ ಗುಣಮಟ್ಟ, ಉತ್ತ ಭೂಮಿಯ ಗುಣಮಟ್ಟ, ಕೆಲಸಗಾರರು, ಅವರ ಕುಟುಂಬ ಸದಸ್ಯರು, ಮಕ್ಕಳ ಸಂಖ್ಯೆ ; ಅವರ ಜಾತಿಗಳು ಮತ್ತು ವೃತ್ತಿಗಳು ಈ ಎಲ್ಲ ವಿವರಗಳು ಅದರಲ್ಲಿ ಇರತಕ್ಕದ್ದು. ಈ ವರದಿಯನ್ನು ಸಿದ್ಧಪಡಿಸುವಾಗ ರೈತರಿಗೆ ಅದು ಯಾವುದೇ ರೀತಿಯಲ್ಲಿ ಕಳವಳವನ್ನುಂಟು ಮಾಡದಂತೆ ಜಾಗರೂಕತೆ ವಹಿಸತಕ್ಕದ್ದು. ವರ್ಷ ವರ್ಷವೂ ಬೇಸಾಯದಲ್ಲಿ ಮತ್ತು ಜನಸಂಖ್ಯೆಯಲ್ಲಿ ಆಗುವ ಹೆಚ್ಚಳ ಹಾಗೂ ಇಳಿತಾಯಗಳನ್ನು ಈ ಕೆಳಕಂಡ ವಿಧಾನದಿಂದ ದಾಖಲು ಪಡಿಸಬೇಕು. ಗ್ರಾಮದ ಶ್ಯಾನುಭೋಗರು ವರದಿಯನ್ನು ತಯಾರಿಸಿ ಸಿಂಪಿಗೆ ಕಳಿಸಬೇಕು. (ಇದು ಬಂಗಾಳದ ಫರ್ರಫಗೆ ಸಮನಾದದ್ದು) ಶ್ಯಾನುಭೋಗರಿಂದ ಸಿಂಪಿಗೆ ಬಂದು ಪೂರ್ಣರೂಪ ಪಡೆದ ವರದಿಯನ್ನು ಜಿಲ್ಲೆಯ ಅಮಲ್‌ಗೆ ಕಳುಹಿಸಬೇಕು. ಅವನು ವರದಿಗಳನ್ನು ಸಿದ್ಧಪಡಿಸಿ ತನ್ನ ಕಛೇರಿಯಲ್ಲಿ ಇಡಬೇಕು. ಅಲ್ಲಿಂದ ಮುಂದೆ ಅದನ್ನು ಹುಜೂರ್ ಅವರ ಸನ್ನಿಧಾನಕ್ಕೆ ಒಪ್ಪಿಸಬೇಕು. ಹುಜೂರ್ ಸನ್ನಿಧಾನದಲ್ಲಿ ಬೇಹುಬಾ ತಿಂಗಳನ್ನು ಈ ವರದಿಯ ಪರಿಶೀಲನೆಗೆ ನಿಗದಿಪಡಿಸಿರುವುದರಿಂದ ಅವುಗಳನ್ನು ರಮಜಾನ್ ತಿಂಗಳಲ್ಲೇ ಕಛೇರಿಗೆ ಒಪ್ಪಿಸಬೇಕು. ಮನೆಗಳ ಮತ್ತು ಅಲ್ಲಿನ ನಿವಾಸಿಗಳ ಲೆಕ್ಕ ತೆಗೆದುಕೊಳ್ಳಲು ಹೋದಾಗಲೇ ನೀವು ಏತಕ್ಕಾಗಿ ಈ ಕೆಲಸ ಮಾಡುತ್ತಿದ್ದೀರಿ ಎಂಬುದನ್ನು ಅವರಿಗೆ ವಿವರಿಸಿ ಹೇಳಬೇಕು. ಯಾರ ವೆಚ್ಚವು ವರಮಾನಕ್ಕಿಂತ ಹೆಚ್ಚಾಗಿದೆ ಎಂಬುದನ್ನು ಕಂಡುಹಿಡಿದು ಅವರಿಗೆ ತಕ್ಕಾವಿ ಸಾಲವನ್ನು ನೀಡುವುದು ಉದ್ದೇಶ ಎಂದು ತಿಳಿಸಬೇಕು. ಈ ಕ್ರಮದಲ್ಲಿ ನೀವು ಸಮೀಕ್ಷೆಯನ್ನು ಕೈಗೊಳ್ಳತಕ್ಕದ್ದು''.[6]

ಭಾರತದಲ್ಲಿ ಭೂಮಿಯೇ ಸಂಪತ್ತಿನ ಅತ್ಯಂತ ಮುಖ್ಯವಾದ ಮೂಲ. ಅನಾದಿಕಾಲದಿಂದಲೂ ದೇಶದ ಕೋಟ್ಯಾಂತರ ಜನರನ್ನು ಭೂಮಿಯು ಸಾಕುತ್ತಿದೆ. ಯುಗ ಯುಗಾಂತರಗಳಿಂದ ಭಾರತೀಯ ಸಮಾಜವು ಭೂಮಿಯ ಉತ್ಪನ್ನವನ್ನು ವಿತರಿಸಲು ಅನೇಕ ವಿಧಾನಗಳನ್ನು ರೂಪಿಸಿಕೊಂಡಿದೆ. ಅದರಿಂದ ಪ್ರತಿಯೊಂದು ವರ್ಗವೂ, ಮತವೂ, ಜಾತಿಯೂ, ಬಡವರೂ, ಬಲ್ಲಿದರೂ ಪ್ರಯೋಜನ

ಪಡೆಯುವಂತಾಗಿತ್ತು. ''ಬದುಕು, ಬದುಕಲು ಬಿಡು'' ಎಂಬ ತತ್ವವನ್ನು ಅಳವಡಿಸಿಕೊಳ್ಳಲಾಗಿತ್ತು. ಹಳ್ಳಿಯ ಪ್ರತಿಯೊಬ್ಬನೂ ಪುರೋಹಿತ, ಪಟೇಲ, ನಾಯಿಂದ, ಕಮ್ಮಾರ, ಅಗಸ, ಕಾವಲುಗಾರ ಮತ್ತು ಇತರ ಎಲ್ಲರನ್ನೂ ಪ್ರತಿಯೊಬ್ಬರನ್ನೂ ಅದು ಗಮನದಲ್ಲಿಟ್ಟುಕೊಂಡಿತ್ತು. ಭೂಮಿಯ ಉತ್ಪನ್ನದಲ್ಲಿ ಇವರೆಲ್ಲರಿಗೂ ನಿರ್ದಿಷ್ಟವಾದ ಪಾಲಿತ್ತು. ಈ ನ್ಯಾಯಯುತ ವಿತರಣೆಯ ವಿಧಾನ ಟೀಪುವಿಗೆ ತಿಳಿದಿತ್ತು. ಅದನ್ನು ಅವನು ವ್ಯತ್ಯಾಸ ಮಾಡಲಿಲ್ಲ. ಯಂತ್ರವು ಇನ್ನೂ ಹೆಚ್ಚು ಸರಾಗವಾಗಿ ಚಲಿಸುವುದಕ್ಕೆ ಅಗತ್ಯವೆನಿಸುವಂತಹ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದನು.

ರೈತರಿಂದ ಆಹಾರ ತೆರಿಗೆಯನ್ನು ವಸೂಲಿ ಮಾಡುವ ಪದ್ಧತಿಯನ್ನು ನಿಲ್ಲಿಸಲಾಯಿತು. ಅಶ್ವದಳವಾಗಲೀ, ಇನ್ನಿತರ ಸೇವಾ ವಿಭಾಗಗಳಾಗಲೀ, ಹುಲ್ಲು ಮತ್ತಿತರ ವಸ್ತುಗಳನ್ನು ರೈತರಿಂದ ಕಿತ್ತುಕೊಳ್ಳುವುದನ್ನು ನಿಷೇಧಿಸಲಾಗಿತ್ತು.

ಜಿಲ್ಲೆಯ ಪ್ರತಿಯೊಬ್ಬ ಮುಖ್ಯ ಅಧಿಕಾರಿಯೂ ಆಸಫ್‌ನೂ ಕೂಡಿದಂತೆ ಅವನು ಮುಸ್ಲಿಂ ಆಗಿದ್ದರೆ 'ಬಡವರನ್ನು ಅಥವಾ ರೈತರನ್ನು ಮಾತಿನಲ್ಲಾಗಲೀ, ಕೃತಿಯಲ್ಲಾಗಲೀ ದಮನಕ್ಕೊಳಪಡಲು ಬಿಡುವುದಿಲ್ಲ' ಎಂಬುದಾಗಿ ಕುರಾನ್ ಹಿಡಿದು ಪ್ರಮಾಣ ವಚನ ಸ್ವೀಕರಿಸಬೇಕಾಗಿದ್ದಿತು. ಟೀಪುವಿನ ಆರೋಗ್ಯಕರ ನೀತಿಯ ಫಲವಾಗಿ ಕಬ್ಬು, ಗೋಧಿ, ಬಾರ್ಲಿ ಹಾಗೂ ನಗದು ಬೆಳೆಗಳ ಬೇಸಾಯದಲ್ಲಿ ಮೂಲಭೂತವಾದ ವಿಸ್ತರಣೆ ಮತ್ತು ಸುಧಾರಣೆಗಳು ಜಾರಿಗೆ ಬಂದವು. ಸುಧಾರಣೆಗಳನ್ನು ಗಮನಿಸಿಯೇ ರಷ್ಯನ್ ವಿದ್ವಾಂಸ ಚಿಚರೋವ್ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ :

''..... ಈ ಪ್ರಯತ್ನಗಳು ಸಕ್ಕರೆ ಉತ್ಪಾದನೆಯಲ್ಲಿ ಬಂಡವಾಳ ಸೃಷ್ಟಿಗೆ ತಳಹದಿಯಾದವು. ಮಾಲೀಕರು ಗುತ್ತಿಗೆ ಪಡೆದ ಭೂಮಿಯಲ್ಲಿ ಬಂಡವಾಳ, ಸಾಮಗ್ರಿ, ಕೃಷಿ ಉತ್ಪಾದನೆಯನ್ನು ನಿರ್ವಹಿಸಿದರು. ಇದು ಕೃಷಿಯಲ್ಲಿ ಹೊಸದೊಂದು ಬಂಡವಾಳ ಸಂಬಂಧವು ವಿಕಾಸಗೊಂಡುದನ್ನು ಸೂಚಿಸುತ್ತದೆ''. [7]

''ಟೀಪುವಿನ ಆಡಳಿತದ ಕಾಲಾವಧಿಯ ಬಗ್ಗೆ ಅದು ಯಾವ ಮಾದರಿಯ ಸಮಾಜವಾಗಿತ್ತು ಎಂಬ ಬಗ್ಗೆ ಚರ್ಚೆ ನಡೆದಿದೆ. ಟೀಪುವು ಭಾರತದಲ್ಲಿ ಬಂಡವಾಳಶಾಹಿ ಮಾದರಿಯ ಸಮಾಜದ ಉದಯಕ್ಕೆ ದಾರಿಯನ್ನು ಹಾಕಿಕೊಟ್ಟನೋ ಹೇಗೆ ಎನ್ನುವ ವಿಷಯದಲ್ಲಿ ಈಗ ವಿದ್ವಾಂಸರು ಚರ್ಚೆ ಮಾಡುತ್ತಿದ್ದಾರೆ. ಇದು ಒಂದು ಕಡೆ ದೇಶದ ಸಂಪತ್ತನ್ನು ಹೆಚ್ಚಿಸಿತ್ತು. ಇನ್ನೊಂದು ಕಡೆ ಆ ಸಂಪತ್ತು ಅನೇಕರ ಪ್ರಯೋಜನಕ್ಕೆ ಬರುವ ಬದಲು ಕೆಲವರ ಕೈ ಬೊಗಸೆಗೆ ಬಿದ್ದಿತ್ತು. ಬಂಡವಾಳಶಾಹಿ ಸಮಾಜದಲ್ಲಿ ಅನೇಕರ ಶ್ರಮದಿಂದ ಕೆಲವರು ತುಂಬ ಶ್ರೀಮಂತರಾಗುತ್ತಾರೆ. ಅಂಥದೊಂದು ಶೋಷಕ ಪರಿಸ್ಥಿತಿ ಆ ಸಮಾಜದ ಲಕ್ಷಣವಾಗಿರುತ್ತದೆ. ವಾಮ ಪಂಥಿಗಳಾದ ರಷ್ಯನ್ ವಿದ್ವಾಂಸರ ಅಭಿಪ್ರಾಯ ಇದು. ಆದರೆ ಪಾಶ್ಚಿಮಾತ್ಯ ವಿದ್ವಾಂಸರ ಅಭಿಪ್ರಾಯ ಹಾಗಲ್ಲ. ಟೀಪು ಕೈಗೊಂಡ ಕ್ರಮಗಳು ದೇಶದಲ್ಲಿ

ಬಂಡವಾಳಶಾಹಿಯನ್ನು ಪ್ರಚೋದಿಸಲಿಲ್ಲ. ಏಕೆಂದರೆ ಅವನು ಪರಂಪರೆಯ ವಿನ್ಯಾಸವನ್ನು ಹಾಗೇ ಉಳಿಸಿಕೊಂಡನು. ಎಲ್ಲಾ ಸಾಮಾಜಿಕ ವರ್ಗಗಳಿಗೂ ಸ್ಥಾನಮಾನ ಮತ್ತು ಅವರು ಸಲ್ಲಿಸುವ ಸೇವೆಗಳಿಗೆ ಅನುಗುಣವಾಗಿ ಉತ್ಪಾದಿತವಾದ ಸಂಪತ್ತನ್ನು ಹಂಚಲಾಗುತ್ತಿತ್ತು. ಬಂಡವಾಳಶಾಹಿಯು ಬೆಳೆಯಲು ಹೆಚ್ಚುವರಿ ಸಂಪತ್ತು ಉಳಿಯುತ್ತಲೇ ಇರಲಿಲ್ಲ. ಭೂಮಿಯ ಉತ್ಪನ್ನವು ವಿತರಣೆಯಾಗುತ್ತಿದ್ದ ೧೨ ಜನವರ್ಗಗಳನ್ನು ವಿಲ್ಕ್ಸ್ ಕೂಡಾ ಪಟ್ಟಿ ಮಾಡಿದ್ದಾನೆ. ಪಟೇಲ, ಶಾನುಭೋಗ, ತಳವಾರ, ತೋಟಿ, ನೀರಗಂಟಿ, ಜ್ಯೋತಿಷಿ, ಕಮ್ಮಾರ, ಬಡಗಿ, ಕುಂಬಾರ, ಅಗಸ, ನಾಯಿಂದ ಮತ್ತು ಅಕ್ಕಸಾಲಿಗ ಇವರೇ ಆ ೧೨ ವರ್ಗಗಳು. ಈ ೧೨ ಜನ ಅಧಿಕಾರಿಗಳು ಅಥವಾ ಸಮುದಾಯದ ಅಗತ್ಯ ಸದಸ್ಯರು ತಮ್ಮ ಶ್ರಮಕ್ಕೆ ಪರಿಹಾರವನ್ನು ಭೂಮಿಯ ರೂಪದಲ್ಲಿ ಅಥವಾ ಹಳ್ಳಿಯ ಪ್ರತಿಯೊಬ್ಬ ರೈತನೂ ಬೆಳೆಯುವ ಫಸಲಿನ ನಿಗದಿತ ಪ್ರಮಾಣದ ರೂಪದಲ್ಲಿ ಪಡೆಯುತ್ತಿದ್ದರು''.[8]

''ನಿಜವಾಗಿ ಹೇಳಬೇಕೆಂದರೆ ಟೀಪುವು ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯನ್ನನುಸರಿಸಿ ಕಾಣಿಸಿಕೊಂಡ ಬಂಡವಾಳಶಾಹಿಯ ಮಾದರಿಯ ಬೀಜವನ್ನು ಬಿತ್ತಲಿಲ್ಲ; ಅಥವಾ ಊಳಿಗಮಾನ್ಯ ಪದ್ಧತಿಯ ಸಾಂಪ್ರದಾಯಿಕ ಅರ್ಥವ್ಯವಸ್ಥೆಯನ್ನು ಮುಂದುವರಿಸಲಿಲ್ಲ. ಅವನ ಸುಧಾರಣೆಗಳ ಗುರಿ ಅವನದೇ ವಿಶಿಷ್ಟವಾದೊಂದು ಹೊಸ ನಮೂನೆಯ ವಿಕಾಸವಾಗಿತ್ತು. ಅದರಲ್ಲಿ ಸಂಪತ್ತು ಅಧಿಕಗೊಂಡಂತೆ ಜನರ ಜೀವನ ಪರಿಸ್ಥಿತಿಗಳು ಉತ್ತಮಗೊಳ್ಳುತ್ತಿದ್ದವು. ಅಷ್ಟೇ ಹೊರತು ಶೋಷಕ ಸಮಾಜವೊಂದರ ಉದಯಕ್ಕೆ ಅದರಲ್ಲಿ ಅವಕಾಶವಿರಲಿಲ್ಲ. ಅವನ ಕ್ರಮಗಳು ಊಳಿಗಮಾನ್ಯ ಸಮಾಜದ ದಮನಶೀಲ ಚಟುವಟಿಕೆಗಳಿಗೆ ಕಡಿವಾಣ ಹಾಕಿದ್ದವು. ರೈತರಿಗೂ ಸರಕಾರಕ್ಕೂ ನಡುವೆ ದಲ್ಲಾಳಿಗಳ, ಮಧ್ಯವರ್ತಿಗಳ ಪಾಲು ಬರದಂತೆ, ತೆಗೆದುಹಾಕಿದವು. ರೈತರೂ ಸರಕಾರವೂ ಹತ್ತಿರ ಬಂದರು. ಅದೇ ಸಮಯಕ್ಕೆ ಗ್ರಾಮೀಣ ಸಾಮಾಜಿಕ ಅರ್ಥಶಾಸ್ತ್ರೀಯ ರಚನೆಯ ವಿನ್ಯಾಸವು ವಿರೂಪಗೊಳ್ಳದೆ ಉಳಿಯುವಂತೆ ಆಯಿತು''[9] ಎಂದು ಪ್ರೊ. ಬಿ. ಷೇಕ್ ಅಲಿ ಅಭಿಪ್ರಾಯಪಡುತ್ತಾರೆ.

''ಆರ್ಥಿಕ ಹೆಚ್ಚುವರಿಯ ಸಂಚಯನ ಸಮಸ್ಯೆಯು ವಿತರಣ ವ್ಯವಸ್ಥೆಗೆ ಅಧೀನವಾಗಿತ್ತು. ಟೀಪುವು ಅದನ್ನು ಬದಲಾಯಿಸಲು ಪ್ರಯತ್ನಿಸಲಿಲ್ಲ. ಹೆಚ್ಚುವರಿ ಸಂಪತ್ತಿನ ಉತ್ಪಾದನೆಯೇ ಬಂಡವಾಳಶಾಹಿಗೆ ಕಾರಣ. ಹಾಗೆ ಹೆಚ್ಚುವರಿ ಸಂಪತ್ತು ಸಂಗ್ರಹವಾಗುವುದಕ್ಕೆ ವಿರುದ್ಧವಾದ ಅಂಶಗಳು ಅಥವಾ ತಡೆಗಳು ಏನೇನಿದ್ದವೋ ಅದು ಯಾವುದನ್ನೂ ಟೀಪು ಬದಲಾಯಿಸಲಿಲ್ಲ. ರೈತನು ಬಂಡವಾಳವಾಗಿ ಹೂಡಿ ಇನ್ನೂ ಹೆಚ್ಚು ಲಾಭ ಪಡೆಯುವುದಕ್ಕೆ ಅವಕಾಶವೇ ಇರಲಿಲ್ಲ. ಏಕೆಂದರೆ ಹೂಡಲು ಅವನ ಬಳಿ ಹೆಚ್ಚುವರಿ ಬಂಡವಾಳವೇ ಉಳಿಯುತ್ತಿಗಲಿಲ್ಲ......ಆದ್ದರಿಂದ ತನ್ನದೇ ಆದ ಬಂಡವಾಳದಾರಿಕೆಯ ಮಾದರಿಯೊಂದನ್ನು ಟೀಪು ವಿಕಾಸಗೊಳಿಸಿ ಕೊಂಡಿದ್ದನು. ಅದು ಸಾರ್ವಜನಿಕ ವಲಯದ ಪಾಶ್ಚಾತ್ಯ ಮಾದರಿ ಬಂಡವಾಳ

ಶಾಹಿಯಂತಲ್ಲದೆ ಬೇರೊಂದು ಬಗೆಯದಾಗಿತ್ತು. ಇಲ್ಲಿ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆ ಎಲ್ಲವೂ ಸರಕಾರದ ಹಿಡಿತದಲ್ಲಿದ್ದವು. ತನ್ನ ಪ್ರಯೋಗಕ್ಕೆ ಸಾಕಷ್ಟು ಅವಕಾಶ ಕೊಡಲು ಟೀಪು ಬದುಕಿರಲಿಲ್ಲ. ಆದರೆ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದ ಯಶಸ್ಸು ಖಂಡಿತವಾಗಿಯೂ ಅವನಿಗೆ ಸಲ್ಲುತ್ತದೆ.ಅವನಿಗೆ ಯಾರೂ ಅದನ್ನು ವಂಚಿಸುವಂತಿಲ್ಲ. ಭಾರತದಲ್ಲಿ ಇಲ್ಲಿನ ಸನ್ನಿವೇಶಗಳಿಗೆ ಹೊಂದುವಂತೆ ಪಾಶ್ಚಾತ್ಯ ಬಂಡವಾಳಶಾಹಿಗೆ ಹೊಸ ವಿಚಾರಗಳ ಕಸಿಕಟ್ಟಿ ಒಂದು ಬಗೆಯ ರಾಜಕೀಯ ಅರ್ಥವ್ಯವಸ್ಥೆಯನ್ನು ರೂಪಿಸಿದ ಮೊತ್ತಮೊದಲನೆಯ ರಾಜನೆಂದರೆ ಟೀಪು ಎಂಬುದಾಗಿ ಚಿಚರೊವ್ ಹೇಳಿರುವುದರಲ್ಲಿ ಸತ್ಯವಿದೆ''[10] ಎಂದು ಪ್ರೊ. ಬಿ.ಷೇಕ್ ಅಲಿ ಹೇಳುತ್ತಾರೆ.

ಹಾಗೆಯೇ ಅವರು ಮುಂದುವರಿದು ಟೀಪುವಿನ ಪ್ರಯೋಗಕ್ಕೆ ಕಾರಣಗಳೇನಿರಬಹುದು ಎಂಬುದನ್ನು ಹೀಗೆ ಸೂಚಿಸುತ್ತಾರೆ :

''ಬಂಡವಾಳ ನಿರ್ಮಾಣದಲ್ಲಿ ಟೀಪುವು ಪಾಶ್ಚಾತ್ಯ ಮಾದರಿಯನ್ನು ಅನುಕರಿಸದೇ ಇದ್ದುದಕ್ಕೆ ಇನ್ನೊಂದು ಕಾರಣವಿದ್ದಿತು. ಮಾರುಕಟ್ಟೆ ಅರ್ಥವ್ಯವಸ್ಥೆಗೆ ಅತ್ಯಂತ ಆಗತ್ಯವಾದ ಸ್ಪರ್ಧಾ ಮನೋಭಾವದಲ್ಲಾಗಲೀ ಮುಕ್ತ ಉದ್ಯಮಶೀಲತೆ ಯಲ್ಲಾಗಲೀ ಅವನಿಗೆ ಆಸಕ್ತಿ ಇರಲಿಲ್ಲ. ಲೋಕಸಂಚಾರಿಗಳು, ಸಾಮ್ರಾಜ್ಯಶಾಹಿ ಕುಲದವರೂ ಆದ ಪೋರ್ಚುಗೀಸರೂ ಕೂಡ ಡಚ್ಚರ ಮಾರುಕಟ್ಟೆ ತಂತ್ರದೆದುರಿಗೆ ನಿಲ್ಲದಾದರು. ಪೌರಾತ್ಯದೇಶಗಳಲ್ಲಿ ವ್ಯಾಪಾರ ವಾಣಿಜ್ಯಗಳನ್ನು ಕುದುರಿಸಿ ಕೊಳ್ಳಲಾರದಾದರು - ಎಂಬುದನ್ನು ಟೀಪು ಗಮನಿಸಿದ್ದನು. ಅಲ್ಲದೇ ಟೀಪುವಿನಲ್ಲಿ ಪೌರಾತ್ಯ ವಿಚಾರಗಳು, ಅವು ಭಾರತೀಯವಾಗಿರಲಿ, ಇಸ್ಲಾಮಿಕ್ ಆಗಿರಲಿ ಮಡುಗಟ್ಟಿದ್ದವು. ಅವುಗಳ ಪ್ರಕಾರ ಸಂಪತ್ತು ಕೆಲವೇ ಜನರ ಮುಷ್ಟಿಯಲ್ಲಿ ಸಂಗ್ರಹವಾಗಲು ಅವಕಾಶವಿರಲಿಲ್ಲ. ಪೌರಾತ್ಯ ವಿಚಾರದ ಮಾದರಿ ಉದಾ. ''ಧಾನ್ಯದ ರಾಶಿ'' ಅದು ಪರಸ್ಪರ ಹಾಗೂ ಪುನರ್ ಹಂಚಿಕೆ ತತ್ವಗಳಲ್ಲಿ ನಂಬಿಕೆ ಇಟ್ಟಿದ್ದಿತು. ಇವುಗಳನ್ನು ಮೀರದಂತೆ ಬಂಡವಾಳ ವಿಸ್ತರಣಕ್ಕೆ ವಿರೋಧಿಯಾದ ರಾಜಕೀಯ ಹಾಗೂ ಧರ್ಮಗಳ ಸೀಮಿತತೆಗಳೂ ಇದ್ದವು''.[11] ಅಶೋಕ್ ಸೇನ್ ಹೀಗೆ ಅಭಿಪ್ರಾಯಪಡುತ್ತಾರೆ :

''ರೈತರು ಹಿಸ್ಸಾ ಪದ್ಧತಿಯನ್ನು ಇಷ್ಟಪಡುತ್ತಿದ್ದುದು ಇಲ್ಲಿ ಸಂಪತ್ತಿನ ನಿರ್ಮಾಣದ ಉದ್ದೇಶವನ್ನು, ಸಾಮರ್ಥ್ಯವನ್ನು ಹೊಂದಿದ್ದ ಒಂದು ಜನವರ್ಗವು ಉದಯಿಸುವುದಕ್ಕೆ ತಕ್ಕ ಕೃಷಿ ಆರ್ಥಿಕ ಪರಿಸ್ಥಿತಿಯ ಅಭಾವವಿದ್ದಿತೆಂಬುದನ್ನು ಸೂಚಿಸುತ್ತದೆ''.[12]

ಒಟ್ಟಾರೆಯಾಗಿ ಟಿಪ್ಪೂ ಸುಲ್ತಾನ ತನ್ನ ಆಡಳಿತಾವಧಿಯ ಕಾಲದಲ್ಲಿ ಕೃಷಿಯ ಬಗ್ಗೆ ಕೈಗೊಂಡ ನೀತಿಯನ್ನು ಈ ರೀತಿ ಸೂಚಿಸಬಹುದು :

ಈ ಕೃಷಿ ನೀತಿಯಿಂದಾಗಿ ಸರಕಾರವು ನೇರವಾಗಿ ರೈತರೊಂದಿಗೆ ಸಂಪರ್ಕ ಸಾಧಿಸುವಂತಾಯಿತು. ಪಾಳೇಗಾರ ಅಥವಾ ಜಮೀನ್ದಾರಿ ಪದ್ಧತಿಯನ್ನು ರದ್ದುಪಡಿಸಿತು. ರೈತರಿಗೂ ಸರಕಾರಕ್ಕೂ ನಡುವೆ ಇರಬೇಕಾದ ಸಂಬಂಧವನ್ನು ವಿವರಿಸುವ ನಿಯಮಾವಳಿಯನ್ನು ಖಚಿತವಾಗಿ ರೂಪಿಸಿತು. ಭೂಸ್ವರೂಪದಲ್ಲಿ ಅವನು ಮೂಲಭೂತ ಬದಲಾವಣೆಗೆ ಕೈ ಹಾಕಲಿಲ್ಲ. ವಾಣಿಜ್ಯ ಹಾಗೂ ಕೈಗಾರಿಕೆ ವಲಯಗಳಲ್ಲಿ ಹಾಗೆ ಮಾಡಿದನು. ರೈತರ ಜೀವನದ ಪರಿಸ್ಥಿತಿಗಳನ್ನು ಉತ್ತಮ ಪಡಿಸುವುದು, ಅವರನ್ನು ಮುಸುಕಿರುವ ನಿಷೇಧಗಳನ್ನು ಹೋಗಲಾಡಿಸುವುದು, ಬೇಸಾಯದ ಜಮೀನನ್ನು ವಿಸ್ತರಿಸಲು ಪ್ರೋತ್ಸಾಹ ನೀಡುವುದು, ಕಂದಾಯವನ್ನು ತಪ್ಪದೇ ಪೂರ್ತಿಯಾಗಿ ವಸೂಲು ಮಾಡುವುದು - ಈ ವಿಷಯದಲ್ಲಿ ಅವನು ಆಸಕ್ತನಾಗಿದ್ದನು. ಇದಕ್ಕಾಗಿ ಟೀಪುವು ಬೇಸಾಯವಾಗುತ್ತಿರುವ ಜಮೀನು ಮಾತ್ರವಲ್ಲದೆ, ಎಲ್ಲಾ ಹಳ್ಳಿಗಳ ಎಲ್ಲಾ ಭೂಮಿಯ ವಿವರವಾದ ಸರ್ವೇಕ್ಷಣೆಯನ್ನು ಕೈಗೊಂಡನು. ಗ್ರಾಮಾಂತರ ಪ್ರದೇಶಗಳಲ್ಲಿ ಜನರ ಜೀವನದ ಎಲ್ಲಾ ಮುಖಗಳ ಸ್ಪಷ್ಟ ಚಿತ್ರವು ತನ್ನೆದುರು ದೊರಕುವಂತೆ ಮಾಡಿಕೊಂಡನು. ಟೀಪು ನಡೆಸಿದ ಈ ಸರ್ವೆಯು ನಮಗೆ ಹಿಂದೆ ಅಕ್ಬರ್ ಚಕ್ರವರ್ತಿ ನಡೆಸಿದ ಇಂತಹದೇ ಸರ್ವೆಯ ನೆನಪು ಕೊಡುತ್ತದೆ. ಆಮೇಲೆ ವಸಾಹತುಗಾರರ ಆಡಳಿತದಲ್ಲಿ ಜನಗಣತಿ ವರದಿಗಳು ಸಿದ್ಧಗೊಂಡ ಪರಿಯನ್ನೂ ನೆನಪಿಗೆ ತರುತ್ತದೆ.

ಮಣ್ಣಿನ ಲಕ್ಷಣ, ಅದರ ಫಲವಂತಿಕೆ ಮತ್ತು ಫಸಲಿನ ಪ್ರಮಾಣ ಇವುಗಳನ್ನು ಬಹು ಜಾಗರೂಕತೆಯಿಂದ ಪರಿಶೀಲಿಸಿದ ನಂತರವಷ್ಟೇ ಕಂದಾಯವನ್ನು ನಿಗದಿ ಪಡಿಸಲಾಗುತ್ತಿದ್ದಿತು. ಭೂಮಿಗೆ ಉಳುವವನೇ ಒಡೆಯನಾಗಿದ್ದನು. ಅದು ಮಾರಬಹುದಾದ ವಸ್ತುವಾಗಿದ್ದಿತು. ರೈತರು ಭೂಮಿಯನ್ನು ಕೊಳ್ಳಬಹುದಿತ್ತು ಅಥವಾ ಮಾರಬಹುದಿತ್ತು.

ಅಲ್ಲಿಂದ ಮುಂದಕ್ಕೆ ಅಗ್ರಹಾರಗಳಾಗಲೀ, ಜಮೀನ್ದಾರರ ಜಹಗೀರುಗಳಾಗಲೀ ಇಲ್ಲವಾದವು. ರೈತರ ಹಕ್ಕುಬಾಧ್ಯತೆಗಳನ್ನು, ಕರ್ತವ್ಯಗಳನ್ನು ಉಚಿತವಾಗಿ ನಿರೂಪಿಸಲಾಯಿತು. ತಾನು ಯಾರಿಗೆ, ಎಷ್ಟು, ಯಾವಾಗ ಪಾವತಿ ಮಾಡಬೇಕಾಗಿದೆ ಎನ್ನುವುದು ರೈತನಿಗೆ ಸ್ಪಷ್ಟವಾಗಿ ತಿಳಿದಿರುತ್ತಿದ್ದಿತು. ಭೂ ಕಂದಾಯವನ್ನು ಮೂರು ಕಂತುಗಳಲ್ಲಿ ವಸೂಲಿ ಮಾಡಲಾಗುತ್ತಿದ್ದಿತು. ಫಸಲನ್ನು ಮುಖ್ಯವಾಗಿ ಮೂರು ವರ್ಗಗಳಲ್ಲಿ ಹಂಚಲಾಗುತ್ತಿದ್ದಿತು. ರೈತನಿಗೆ ಸುಮಾರಾಗಿ ೧/೩ ಪಾಲು, ಮತ್ತೆ ೧/೩ ಪಾಲು ಸರಕಾರಕ್ಕೆ ಸಲ್ಲುತ್ತಿದ್ದಿತು ; ಉಳಿಕೆಯನ್ನು ಗ್ರಾಮದ ಸಮುದಾಯವಾಗಿದ್ದ ೧೨ ಬಗೆಯ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಿದ್ದ ಘಟಕಗಳು ಮತ್ತು ಸ್ಥಳೀಯ ಅಧಿಕಾರಿಗಳು ಇವರಿಗೆ ಹಂಚಲಾಗುತ್ತಿದ್ದಿತು. ಟೀಪು ಮಾಡಿದ್ದು ಇಷ್ಟೆ ; ವಿವಿಧ ವಲಯಗಳ ಬೇಡಿಕೆಗಳು ಗೊಂದಲವನ್ನೇ ಉಂಟುಮಾಡಿ ರೈತನನ್ನು ಹಿಂಸಿಸುತ್ತಿದ್ದವು. ವಿಶೇಷತಃ ಮಧ್ಯವರ್ತಿಗಳು, ಲೇವಾದೇವಿಗಾರರು, ಜಮೀನುದಾರರು ಇವರ ಹಿಡಿತದಿಂದ ರೈತನನ್ನು ಪಾರುಮಾಡಿ, ಯಾವುದೇ ಕ್ಲೇಶವಿಲ್ಲದಂತೆ ಬೇಸಾಯದಲ್ಲಿ

ನಿರತವಾಗಲು ಅವನಿಗೆ ಎಲ್ಲಾ ಅನುಕೂಲಗಳನ್ನು ಕಲ್ಪಿಸಿಕೊಟ್ಟನು. ಹಾಗೆಯೇ ಸ್ಥಳೀಯ ಅಧಿಕಾರಿಗಳ ಶೋಷಣೆ, ಕಿರುಕುಳಗಳಿಂದಲೂ ರೈತನನ್ನು ಅವನು ಬಿಡುಗಡೆ ಮಾಡಿದನು.

ವಾಣಿಜ್ಯದ ಬಗ್ಗೆಯೂ ಟೀಪು ಬಹಳ ನಿರ್ದಿಷ್ಟವಾದ ನೀತಿಯನ್ನು ಅನುಸರಿಸಿದ. ಮೈಸೂರು ರಾಜ್ಯದಲ್ಲಿ ವಾಣಿಜ್ಯ ಬೆಳೆ ಸಮೃದ್ಧವಾಗಿತ್ತು. ಅಲ್ಲಿನ ಸುದೀರ್ಘವಾದ ಕರಾವಳಿಯಲ್ಲಿ ರಫ್ತು ಮತ್ತು ಆಮದುಗಳಿಗೆ ಸೌಲಭ್ಯವು ಹೇರಳವಾಗಿತ್ತು. ಮೆಣಸು, ಏಲಕ್ಕಿ, ರೇಷ್ಮೆ, ಶ್ರೀಗಂಧ, ಅಡಿಕೆ, ತೆಂಗಿನಕಾಯಿ, ದಂತ ಮೊದಲಾದ ವಸ್ತುಗಳಿಗೆ ಮೈಸೂರು ತುಂಬಾ ಪ್ರಸಿದ್ಧವಾಗಿದ್ದು, ಪಾಶ್ಚಿಮಾತ್ಯ ಮಾರುಕಟ್ಟೆಗಳಲ್ಲಿ ಅವಕ್ಕೆ ವಿಪುಲವಾದ ಬೇಡಿಕೆ ಇದ್ದಿತು. ಇವುಗಳ ವ್ಯಾಪಾರವು ವಿದೇಶೀಯರ ಕೈಗೆ ಬೀಳಬಾರದೆಂಬುದು ಟೀಪುವಿನ ಆಸಕ್ತಿಯಾಗಿದ್ದಿತು.

ಮೈಸೂರು ರಾಜ್ಯವು ಈ ವಸ್ತುಗಳ ಅಧಿಕ ರಫ್ತುಗಾರ ರಾಜ್ಯವಾಯಿತು. ಟೀಪುವಿನ ವ್ಯಾಪಾರೀ ನೌಕೆಗಳಲ್ಲಿ ತುಂಬಿ ಈ ವಸ್ತುಗಳನ್ನು ಹೊರಕ್ಕೆ ಕಳುಹಿಸಿಕೊಟ್ಟು ಅಲ್ಲಿಂದ ಇತರ ಅಗತ್ಯ ವಸ್ತುಗಳನ್ನು ತುಂಬಿಸಿ ತರಿಸಲಾಗುತ್ತಿತ್ತು. ಈ ಸಾಗರೋತ್ತರ ವ್ಯಾಪಾರವನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಟೀಪು ನಿರ್ವಹಿಸಿದ. ಹೊರದೇಶದಲ್ಲಿ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿ ತನ್ನ ವಾಣಿಜ್ಯ ಪ್ರತಿನಿಧಿಗಳನ್ನು ನೇಮಿಸಿ ವ್ಯಾಪಕ ಪ್ರಮಾಣದಲ್ಲಿ ನಿರ್ವಹಿಸಿದ.

ಟೀಪು ತುರ್ಕಿ ಮತ್ತು ಇತರ ದೇಶಗಳೊಂದಿಗೆ ಪತ್ರ ವ್ಯವಹಾರ ಮಾಡುವಾಗ ವ್ಯಾಪಾರ, ವಾಣಿಜ್ಯಗಳ ಕಡೆಗೆ ವಿಶೇಷ ಗಮನ ಕೊಡುತ್ತಿದ್ದ. ಭಾರತದಲ್ಲಿ ಅಗಾಧ ಪ್ರಮಾಣದ ನೈಸರ್ಗಿಕ ಸಂಪನ್ಮೂಲಗಳಿದ್ದವು. ಎಲ್ಲಾ ಬಗೆಯ ಬೆಳೆಗಳೂ ಬೆಳೆಯುತ್ತಿದ್ದವು. ಆದರೂ ಭಾರತವು ಬಡ ದೇಶವಾಗಿತ್ತು. ಅದಕ್ಕೆ ಕಾರಣ ಇಲ್ಲಿಯ ಪ್ರಜೆಗಳಿಗೆ ವ್ಯಾಪಾರ ಮತ್ತು ವಾಣಿಜ್ಯಗಳಲ್ಲಿ ಯೂರೋಪಿಯನ್ನರಂತೆ ವ್ಯಾವಹಾರಿಕ ಕೌಶಲ್ಯ ಇರದುದು. ಈ ದಿಕ್ಕಿನಲ್ಲಿ ಟೀಪು ಸುಧಾರಣೆಗಳನ್ನು ಮಾಡಲು ಬಯಸಿದನು.

ಟೀಪುವು ಬ್ರಿಟಿಷೇತರ ವಿದೇಶಗಳೊಡನೆ ವ್ಯಾಪಾರ ಸಂಬಂಧಗಳನ್ನು ಕುದುರಿಸಲು ಪ್ರಯತ್ನಿಸುತ್ತಿದ್ದ. ಇದರಿಂದ ಬ್ರಿಟಿಷ್ ವ್ಯಾಪಾರ ವಾಣಿಜ್ಯಗಳ ಮೇಲೆ ನಿರ್ಬಂಧ ಹೇರುವುದು ಅವನ ಉದ್ದೇಶವಾಗಿತ್ತು. ಈ ನೀತಿಯಿಂದ ಮಲಬಾರಿನ ಕರಿಮೆಣಸನ್ನು ಬಹುವಾಗೇ ಅವಲಂಬಿಸಿದ್ದ ಇಂಗ್ಲಿಷರಿಗೆ ಬಹುದೊಡ್ಡ ಪೆಟ್ಟು ಬಿದ್ದಿತು. ಬಹುಪಾಲು ಶ್ರೀಗಂಧವನ್ನು ಯೂರೋಪಿಗೆ ಬದಲಾಗಿ ಚೈನಾ ದೇಶಕ್ಕೆ ಕಳುಹಿಸಲಾಯಿತು. ಯೂರೋಪಿನ ಬಟ್ಟೆಗಳಿಗೆ, ಡಿಸ್ಟಿಲರಿಗಳಿಗೆ ಭಾರಿ ಬೇಡಿಕೆಯಲ್ಲಿದ್ದ ಏಲಕ್ಕಿಯ ರಫ್ತು ದಿಕ್ಕನ್ನು ಬದಲಿಸಿ, ಅರೇಬಿಯಾ ಮತ್ತು ಮಧ್ಯಪ್ರಾಚ್ಯ ದೇಶಗಳಿಗೆ ಕಳುಹಿಸಲಾಯಿತು. ಇಂಗ್ಲಿಷರಿಗೆ ಅಪಾರ ಆಸಕ್ತಿಯಾಗಿದ್ದ ಕರಿಮೆಣಸು ವ್ಯಾಪಾರ ತಪ್ಪಿದ್ದು ಅವರಿಗೆ ಬಹಳ ಕಳವಳವನ್ನುಂಟು ಮಾಡಿತು. ಅಧಗ ಬೆಲೆಗಳು ಗಗನಕ್ಕೇರಿದವು.

ಮೈಸೂರಿನಿಂದ ಮಸ್ಕತ್ತಿಗೆ ರಫ್ತಾಗುತ್ತಿದ್ದ ಸರಕುಗಳಲ್ಲಿ ಮುಖ್ಯವಾದುದು ಅಕ್ಕಿ. ಆದರೆ ಟೀಪುವಿನ ಅನುಮತಿ ಇಲ್ಲದೆ ಪೋರ್ಚುಗೀಸರಾಗಲೀ, ಡಚ್ಚರಾಗಲೀ, ಇಂಗ್ಲಿಷರಾಗಲೀ ಯಾವುದೇ ಯೂರೋಪಿಯನ್ನರಿಗೆ ಅದನ್ನು ಮತ್ತೆ ಮಾರುವಂತಿಲ್ಲ ಎಂಬ ಷರತ್ತಿನ ಮೇಲೆ ಅಕ್ಕಿಯನ್ನು ಅಲ್ಲಿ ಮಾರಾಟ ಮಾಡಲಾಗುತ್ತಿದ್ದಿತು.

ಟೀಪುವು ಹಾಕಿದ್ದ ಈ ನಿರ್ಬಂಧವು, ಅವನ ವಾಣಿಜ್ಯ ನೀತಿಯು ಶುದ್ಧಾಂಗವಾಗಿ ವಾಣಿಜ್ಯವಾಗಿರದೆ ಅದರಲ್ಲಿ ರಾಜಕೀಯ ಪರಿಗಣನೆಗಳು ಬೆರೆತಿದ್ದವು ಎಂಬುದನ್ನು ಸೂಚಿಸುತ್ತದೆ. ಅವನ ಮುಖ್ಯವಾದ ಗುರಿ ಇಂಗ್ಲಿಷರಿಗೆ ರಾಜಕೀಯವಾಗಿಯೂ, ವ್ಯಾಪಾರದಲ್ಲಿಯೂ ಪೆಟ್ಟುಕೊಡುವುದು. ಕಂಪೆನಿಯು ವರ್ತಕರ ಕೈಯಲ್ಲಿದೆ. ಭಾರತದ ವಾಣಿಜ್ಯವು ಕೈತಪ್ಪಿಹೋಗುವುದರಿಂದ ಅವರ ಲಾಭಕ್ಕೆ ಭಾಗಶಃ ಆದರೂ ಹೊಡೆತ ಬೀಳುತ್ತದೆ. ಆದ್ದರಿಂದ ಅವರ ಪ್ರಭಾವವು ಕಡಿಮೆಯಾಗುತ್ತದೆ ಎಂಬುದು ಟೀಪುವಿಗೆ ತಿಳಿದಿತ್ತು. ತನ್ನ ರಾಜ್ಯದಲ್ಲಿ ಮಾತ್ರವಲ್ಲದೆ ಮೈಸೂರಿನ ವಸ್ತುಗಳು ಎಲ್ಲೆಲ್ಲಿ ದೊರಕುತ್ತಿದ್ದುವೋ ಅಲ್ಲೆಲ್ಲ ಇಂಗ್ಲಿಷರ ವಾಣಿಜ್ಯಕ್ಕೆ ನಿರ್ಬಂಧ ಉಂಟುಮಾಡಲು ಅವನು ಬಯಸಿದ್ದ.

ಟೀಪು ಮಸ್ಕತ್ತಿನಲ್ಲಿ ಮಾತ್ರವಲ್ಲದೆ ಹಾರ್‌ಮಜ್, ಏಡನ್, ಬಸ್ರಾ, ಬುಷೈರ್ ಮತ್ತು ಜಿದ್ದಾಗಳಲ್ಲೂ ತನ್ನ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿದ. ಸರಕಾರೀ ವ್ಯಾಪಾರ ವ್ಯವಸ್ಥೆಯ ಒಂದು ಮಾದರಿಯನ್ನು ವಿಕಾಸಪಡಿಸಿದ. ಇದಕ್ಕಾಗಿ ಒಂದು ಹೊಸ ವಾಣಿಜ್ಯ ವಿಭಾಗವನ್ನೇ ಸ್ಥಾಪಿಸಿದ. ಅದೊಂದು ಖಾಯಂ ಸ್ವರೂಪದ ವಾಣಿಜ್ಯ ಮಂಡಳಿ. ಅದರಲ್ಲಿ ೯ ಮಂದಿ ಸದಸ್ಯರಿದ್ದರು. ವಿವಿಧ ವಸ್ತುಗಳ ಆಯಾತ - ನಿರ್ಯಾತಗಳ ಹೊಣೆ ಈ ಮಂಡಳಿಯದಾಗಿತ್ತು.

ಟೀಪುವಿನ ನೀತಿಯ ಮುಖ್ಯ ಗುರಿ ತನ್ನ ಸಾಮ್ರಾಜ್ಯದಲ್ಲಿ ಸರಕಾರವು ಮುಖ್ಯ ವರ್ತಕನಾಗುವಂತೆ ಮಾಡುವುದಾಗಿತ್ತೇ ಹೊರತು ಏಕೈಕ ವರ್ತಕನಾಗುವಂತಲ್ಲ.

ಕೈಗಾರಿಕಾ ಕ್ಷೇತ್ರದಲ್ಲಿ ಟೀಪುವಿನ ಅತ್ಯುತ್ತಮ ನಿರ್ಮಾಣಶೀಲತೆ ವ್ಯಕ್ತವಾಯಿತು. ಕೃಷಿ ಸುಧಾರಣೆಗಳಲ್ಲಿ ಅವನ ಹೊಸತನ್ನು ಅನ್ವೇಷಿಸುವ ಚೈತನ್ಯವು ಉತ್ತಮವಾಗಿ ಕಂಡುಬಂದಿತು; ಅದಕ್ಕಿಂತ ಮಿಗಿಲಾಗಿ ವ್ಯಾಪಾರ - ವಾಣಿಜ್ಯ ವಲಯಗಳಲ್ಲಿ ಪ್ರಕಟಗೊಂಡಿತು. ಅದರ ಅತ್ಯುತ್ತಮ ಹಂತವು ಔದ್ಯಮಿಕ ಹಾಗೂ ಕೈಗಾರಿಕಾ ವಲಯದಲ್ಲಿ ಕಾಣಿಸಿಕೊಂಡಿತು.

ಜನರ ಮುಖ್ಯ ಕಸುಬು ಈಗಿರುವಂತೆಯೇ ಆಗಲೂ ಕೃಷಿಯೇ ಆಗಿತ್ತು. ಆದರೂ ಮೈಸೂರಿನಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಟೀಪುವು ಯಾವ ಕ್ರಮವನ್ನೂ ಕೈಗೊಳ್ಳದೇ ಬಿಡಲಿಲ್ಲ. ವಿದೇಶಗಳಿಂದ ಕುಶಲಕರ್ಮಿಗಳನ್ನು, ತಂತ್ರಜ್ಞರನ್ನು ಕರೆಸಿಕೊಳ್ಳಲು ಅತಿ ಹೆಚ್ಚಿನ ಪ್ರಯತ್ನ ಮಾಡಿದನು. ವಿದೇಶೀ ಗಣ್ಯರಿಗೆ ಅವನು ಬರೆದ ಪ್ರತಿಯೊಂದು ಪತ್ರದಲ್ಲಿಯೂ ಪ್ಯಾರಿಸ್ ಆಗಲೀ, ಕಾನ್‌ಸ್ಟಾಂಟಿನೋಪಲ್ ಆಗಲೀ, ಟೆಹರಾನ್ ಆಗಲೀ, ಮಸ್ಕತ್ ಆಗಲೀ, ಯಾವುದೇ ಸ್ಥಳದ

ಗಣ್ಯರಿಗೆ ಬರೆದರೂ ಕೆಲಸದಲ್ಲಿ ನಿಪುಣರಾದ ತಂತ್ರಜ್ಞರನ್ನೂ, ಕುಶಲಕರ್ಮಿಗಳನ್ನೂ ಕಳುಹಿಸಿಕೊಡಬೇಕೆಂಬ ಕೋರಿಕೆ ಇರುತ್ತಿದ್ದಿತು. ಈ ವಿಷಯದಲ್ಲಿ ಆತನಿಗೆ ಎಷ್ಟು ಆಸಕ್ತಿಯಿದ್ದಿತೆಂದರೆ, ನೆಲೆತಪ್ಪಿದ, ಗೊತ್ತುಗುರಿಯಿರದ ಇಂಗ್ಲಿಷ್ ಜನರಿಗೆ, ಸೆರೆಯಾದವರಿಗೆ, ಯಾವುದೇ ಕಸುಬು ಚೆನ್ನಾಗಿ ಗೊತ್ತಿದ್ದರೆ ಅವನ್ನು ತನ್ನವರಿಗೆ ಕಲಿಸಿಕೊಡುವಂತೆ ಒತ್ತಾಯಪಡಿಸುತ್ತಿದ್ದ.

೧೭೮೫ರಲ್ಲಿ ತುರ್ಕಿಗೆ ಮೊದಲನೆಯ ನಿಯೋಗವನ್ನು ಕಳುಹಿಸಿದಾಗ, ಅವರಿಗೆ ಹಿಂದಿರುಗಿ ಬರುವಾಗ ತಮ್ಮೊಂದಿಗೆ ಹಡಗು ನಿರ್ಮಾಣ, ಬಂದೂಕು ತಯಾರಿಕೆ, ಗಾಜು ಹಾಗೂ ಇತರ ಉಪಯುಕ್ತ ವಸ್ತುಗಳ ತಯಾರಿಕೆಯಲ್ಲಿ ನಿಪುಣರಾದವರನ್ನು ಕರೆತರುವಂತೆ ಆದೇಶಿಸಿದ್ದ. ಆಧುನಿಕ ಕಾಲದಲ್ಲಿ ವ್ಯಾಪಾರಿ ಹಡಗು ಪಡೆಯನ್ನು ಕಟ್ಟಿದ ಮೊದಲನೆಯ ಅರಸ ಟೀಪುವೇ.

ಕೈಗಾರಿಕೋದ್ಯಮದಲ್ಲಿ ಮೈಸೂರು ೧೮ನೇ ಶತಮಾನದ ಕೊನೆಗೆ, ಭಾರತದಲ್ಲಿ ಅತ್ಯಂತ ಸಂಪದ್ಭರಿತವೂ ಪ್ರವರ್ಧಮಾನವೂ ಆದ ರಾಜ್ಯವಾಗಿ ಪರಿಣಮಿಸಿದುದಕ್ಕೆ ಟೀಪುವಿನ ಈ ಆಸಕ್ತಿಯೇ ಕಾರಣ.

ಕಬ್ಬಿಣ ಕರಗಿಸುವುದು ಮತ್ತು ಎರಕ ಹೊಯ್ಯುವ ಕೆಲಸವನ್ನು ಮಧುಗಿರಿ, ಚೆನ್ನರಾಯನದುರ್ಗ, ಹಾಗಲವಾಡಿ ಮತ್ತು ದೇವರಾಯನದುರ್ಗಗಳಲ್ಲಿ ಕೈಗೊಳ್ಳಲಾಗಿತ್ತು. ಆದರೆ ಶ್ರೀರಂಗಪಟ್ಟಣವು ಅದರ ಮುಖ್ಯ ಕೇಂದ್ರವಾಗಿತ್ತು. ಬಂದೂಕುಗಳು, ಕೋವಿಗಳು, ಫಿರಂಗಿಗಳು, ಚಾಕುಗಳು, ಕತ್ತರಿಗಳು ಮತ್ತು ಕೈಗಡಿಯಾರಗಳನ್ನು ಅಲ್ಲಿ ತಯಾರಿಸಲಾಗುತ್ತಿತ್ತು. ತುರ್ಕಿಯ ಸುಲ್ತಾನನಿಗೆ ಉಡುಗೊರೆಯಾಗಿ ಕಳುಹಿಸಿದ ಮೈಸೂರಿನಲ್ಲಿ ತಯಾರಾದ ವಸ್ತುಗಳು ಅಲ್ಲಿ ಭಾರೀ ಮೆಚ್ಚುಗೆಯನ್ನು ಪಡೆದವು. ಇಂದು ಕ್ಷಿಪಣಿ ಅಥವಾ ರಾಕೆಟ್ಟುಗಳ ಇತಿಹಾಸವನ್ನು ಗಮನಿಸುವಾಗ ಹೈದರ್ ಹಾಗೂ ಟೀಪುಸುಲ್ತಾನ್ ಈ ಕ್ಷೇತ್ರದಲ್ಲಿ ಕೆಲಸ ಮಾಡಿದ ಮೊದಲಿಗರೆಂದು ಹೇಳಲಾಗುತ್ತದೆ. ಸಮಕಾಲೀನ ಇತಿಹಾಸಕಾರ ಕೀರ್ಮಾನಿಯು ಶ್ರೀರಂಗಪಟ್ಟಣದ ಕಬ್ಬಿಣದ ಕಾರ್ಖಾನೆಯು ದೇಶಾದ್ಯಂತ ಪ್ರಸಿದ್ಧವಾಗಿದ್ದಿತು ಎಂದು ಬರೆಯುತ್ತಾನೆ. ಅಲ್ಲಿ ತಯಾರಾದ ವಸ್ತುಗಳು ಯೂರೋಪಿನ ವಸ್ತುಗಳಿಗೆ ಸರಿಸಮಾನವಾಗಿದ್ದವು. ತನ್ನ ಕಬ್ಬಿಣದ ಕಾರ್ಖಾನೆಗಳಿಗೆ ಟೀಪುವು ತಾರಾಮಂಡಲಗಳೆಂದು ಹೆಸರಿಟ್ಟಿದ್ದನು. ಅಂಥವು ರಾಜ್ಯದಲ್ಲಿ ನಾಲ್ಕು ಇದ್ದವು ; ಶ್ರೀರಂಗಪಟ್ಟಣ, ಬೆಂಗಳೂರು, ಚಿತ್ರದುರ್ಗ ಮತ್ತು ಬಿದನೂರುಗಳು. ಪ್ರಾಮುಖ್ಯದಲ್ಲೂ ಅವು ಅದೇ ಅನುಕ್ರಮದಲ್ಲಿದ್ದವು. ಶ್ರೀರಂಗಪಟ್ಟಣದ ಕಾರ್ಖಾನೆಯಲ್ಲಿ ಕಬ್ಬಿಣವನ್ನು ಉಕ್ಕಾಗಿ ಪರಿವರ್ತಿಸುವ ಐದು ಘಟಕಗಳಿದ್ದವು.

ಬುಕಾನನ್ ವಿವರಗಳ ಆಧಾರದ ಮೇಲೆ ಚಿಚರೊವ್ ಹೀಗೆ ಹೇಳುತ್ತಾರೆ :

''...... ೧೮ನೇ ಶತಮಾನದ ಎರಡನೆಯ ಅರ್ಧದಲ್ಲಿ ಮೈಸೂರಿನಲ್ಲಿ ಅಭಿವೃದ್ಧಿಗೊಂಡ ಬಂಡವಾಳಶಾಹಿ ಕೈಗಾರಿಕೆಗಳು ಮಾದರಿ ಬಂಡವಾಳಶಾಹಿ

ಉದ್ದಿಮೆಗಳಾಗಿದ್ದವು. ಆದರೆ ಒಟ್ಟಾರೆ ಕಬ್ಬಿಣದ ಕೈಗಾರಿಕೆಯ ತಾಂತ್ರಿಕತೆ ಕೆಳಮಟ್ಟದ್ದಾಗಿತ್ತು ; ಬಿಡಿ ಬಿಡಿ ಕಾರ್ಯಾಗಾರಗಳ ಉತ್ಪನ್ನ ತುಂಬಾ ಕಡಿಮೆ ಯಾಗಿತ್ತು. ಅನೇಕ ಸ್ಥಾವರಗಳಲ್ಲಿ ಕೆಲಸವು ವರ್ಷದಲ್ಲಿ ಸ್ವಲ್ಪ ಸಮಯ ಮಾತ್ರ ನಡೆಯುತ್ತಿತ್ತು. ಕಾರ್ಯಾಗಾರದ ಒಡೆಯನ ಬಳಿ ಅಗತ್ಯವಾದ ಎಲ್ಲಾ ಉಪಕರಣಗಳು ಇರುತ್ತಿರಲಿಲ್ಲ. ಕೆಲವು ಕಾರ್ಯಾಗಾರಗಳಲ್ಲಿ ಕೆಲಸದ ಹಂಚಿಕೆ ಬಹು ಶಿಥಿಲ ರೀತಿಯದಾಗಿದ್ದು ಅಲ್ಲಿಯ ಕೆಲಸಗಾರರು ಕೃಷಿಯೊಂದಿಗೆ ಸಂಬಂಧ ಪಟ್ಟಿರುತ್ತಿದ್ದರು''.[13]

ಈ ಬಗ್ಗೆ ಪ್ರೊ. ಬಿ. ಷೇಕ್ ಅಲಿ ಹೀಗೆ ಹೇಳುತ್ತಾರೆ :

'' ಒಂದು ಸೀಮಿತದೊಂದಿಗೆ ನಾವು ಚಿಚರೋವ್ ಮಾತುಗಳನ್ನು ಒಪ್ಪಬಹುದು. ಮೈಸೂರು ಮತ್ತೊಂದು ಯೂರೋಪ್ ಆಗಿದೆ ಎಂದು ಆತನು ಭಾವಿಸಿದ್ದ. ೨೦ನೇ ಶತಮಾನದ ಮಧ್ಯಭಾಗದವರೆಗೂ ಒಂದು ಗುಂಡುಸೂಜಿ ಕೂಡ ಷೆಫೀಲ್ಡ್‌ನಿಂದ ಬರಬೇಕಾಗಿತ್ತು. ೧೫ ಮತ್ತು ೧೬ನೇ ಶತಮಾನಗಳಲ್ಲಿ ಯೂರೋಪ್ ಎಚ್ಚೆತ್ತುಕೊಂಡಿತು. ಭಾರತವು ೧೮ನೆಯ ಶತಮಾನದ ಕೊನೆಯ ಭಾಗದಲ್ಲೂ ಆ ಕಾಲದಲ್ಲಿ ಯೂರೋಪ್ ಇದ್ದ ಮಟ್ಟಕ್ಕೆ ಏರಲಾರದ ಮಟ್ಟದಲ್ಲಿ ಜಡವಾಗಿದ್ದಿತು. ಅಸಂಖ್ಯಾತ ಅಡ್ಡಿಗಳ ನಡುವೆಯೂ ಟೀಪುವು ಈ ಆಲಸ್ಯವನ್ನು ತೊಡೆದು ಪಶ್ಚಿಮ ದೇಶಗಳ ಸಮಕ್ಕೆ ದೇಶವನ್ನು ಏರಿಸಲು ಪ್ರಯತ್ನಿಸುತ್ತಿದ್ದನು. ಆಗತಾನೇ ನಡೆಯಲು ಕಲಿಯುತ್ತಿರುವ ಮಗುವು ಒಬ್ಬ ತರುಣನೊಂದಿಗೆ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲ್ಲಲಾರದು. ನಮಗೆ ತುಂಬಾ ಆಶ್ಚರ್ಯವನ್ನುಂಟು ಮಾಡುವ ಸಂಗತಿಯೆಂದರೆ ಈ ಮಗುವು ಶತಮಾನಗಳ ತೆರವನ್ನು ಎಷ್ಟು ವೇಗವಾಗಿ ತುಂಬಿತೆಂದರೆ ಚಿಚರೋವ್ ಗಮನಿಸುತ್ತಲಿದ್ದನು, ಈ ಮಗುವು ಸ್ಪರ್ಧೆಯಲ್ಲಿ ಗೆದ್ದೇಬಿಡಬಹುದು ಎಂದು ! ಭಾರತದ ಕತ್ತಲ ದಿನಗಳ ಕೊನೆಯಲ್ಲಿ ಟೀಪುವು ಮೇಣದ ಬತ್ತಿಯನ್ನು ಹಚ್ಚಿದನು. ಸಾಕಷ್ಟು ದೀರ್ಘಕಾಲದಿಂದ ಪ್ರಜ್ವಲಿಸಿ ಬೆಳಗುತ್ತಿದ್ದ ಯುರೋಪಿನ ಕೋರೈಸುವ ಬೆಳಕಿನೊಂದಿಗೆ ಅದನ್ನು ಹೋಲಿಸಲು ಸಾಧ್ಯವಿರಲಿಲ್ಲ ನಿಜ. ಟೀಪುವಿನ ಕೈಕೆಳಗೆ ಮೈಸೂರಿನಲ್ಲಿ ಉತ್ಪತ್ತಿಯಾಗುತ್ತಿದ್ದ ವಸ್ತುಗಳು ಯೂರೋಪಿನಲ್ಲಿ ತಯಾರಾಗುತ್ತಿದ್ದ ವಸ್ತುಗಳೊಂದಿಗೆ ಹೋಲಿಕೆಗೆ ನಿಲ್ಲುತ್ತಿದ್ದವು ಎಂಬುದು ಟೀಪುವಿಗೆ ಸಾಕಷ್ಟು ಕೀರ್ತಿಯ ವಿಷಯ''. [14]

ಟೀಪುವು ರೇಷ್ಮೆ ಹುಳು ಸಾಕಣೆಯನ್ನು ವ್ಯಾಪಕ ಪ್ರಮಾಣದಲ್ಲಿ ಪ್ರೋತ್ಸಾಹಿಸಿದ. ಮೈಸೂರಿನಲ್ಲಿ ರೇಷ್ಮೆ ಉದ್ಯಮವನ್ನು ಅಭಿವೃದ್ಧಿಪಡಿಸಿದವನು ಟೀಪು. ರೇಷ್ಮೆ ವಸ್ತ್ರಗಳನ್ನು ನೇಯುವ ಕಸುಬು ಮಾಡುತ್ತಿದ್ದವರು ಪಟ್ಟೆಗಾರರು ಮತ್ತು ಖತ್ರಿಗಳು ಎಂಬ ಎರಡು ಪಂಗಡದ ಜನ. ಬಹಳ ಬೇಡಿಕೆ ಇರುತ್ತಿದ್ದ ಅತ್ಯಂತ ನವಿರಾದ ರೇಷ್ಮೆ ಬಟ್ಟೆಗಳನ್ನು ಅವರು ನೇಯುತ್ತಿದ್ದರು. ಬೆಂಗಳೂರಿನ ನೇಕಾರರು ಈ ಕಸುಬಿನಲ್ಲಿ ಬೇರೆ ಎಲ್ಲರನ್ನೂ ಮೀರಿಸಿದ್ದರು ಎಂದು ಬುಕಾನನ್ ಬರೆಯುತ್ತಾನೆ.

ಟೀಪುವು ಜವಳಿ ಉದ್ಯಮಕ್ಕೆ ಅಪಾರ ಪ್ರಮಾಣದ ಪ್ರೋತ್ಸಾಹ ನೀಡಿದ. ಅವನು ಸ್ಥಾಪಿಸಿದ ಬಟ್ಟೆ ಮಗ್ಗಗಳು ಬಹು ನಯವಾದ ಹತ್ತಿಬಟ್ಟೆಯನ್ನು ತಯಾರಿಸುತ್ತಿದ್ದವು. ಶಾಲುಗಳು, ಕಿಂಕಾಪುಗಳು, ಬ್ರಾಡ್ ಕ್ಲಾತ್ ಮೊದಲಾದ ಎಲ್ಲ ದೇಶಗಳ ಬಟ್ಟೆಗಳನ್ನು ನೇಯಿಸುತ್ತಿದ್ದ. ಈ ಉದ್ಯಮಗಳಿಗೆ ಸಹಸ್ರಾರು ಪೌಂಡುಗಳನ್ನು ಅವನು ವೆಚ್ಚ ಮಾಡಿದನು ಎಂದು ಕೀರ್ಮಾನಿ ಬರೆಯುತ್ತಾನೆ. ಪ್ರಖ್ಯಾತವಾದ ಭಾರತೀಯ ಮಸ್ಲಿನ್ ಬಟ್ಟೆಯು ಮೈಸೂರಿನಲ್ಲಿ ತಯಾರಾಗುತ್ತಿತ್ತು. ವಸ್ತ್ರೋದ್ಯಮಕ್ಕೆ ಬೆಂಗಳೂರು ಪ್ರಖ್ಯಾತವಾಗಿತ್ತು. ಮುಸ್ಲಿಂ ನೇಕಾರರ ಒಂದು ಪಂಗಡ ಪಟ್ಟೇಗಾರರೆಂದು ಪ್ರಸಿದ್ಧರಾದವರು ಈ ಕಲೆಯಲ್ಲಿ ಉಳಿದೆಲ್ಲರನ್ನು ಮೀರಿಸಿದ್ದರು.

ಶ್ರೀರಂಗಪಟ್ಟಣದ ಸಮೀಪದಲ್ಲೇ ಇದ್ದ ನೆಲೆಘಟ್ಟ ಬಹುಮುಖ್ಯವಾದ ಜವಳಿ ಉದ್ಯಮದ ಕೇಂದ್ರವಾಗಿತ್ತು. ಅಲ್ಲಿ ಸಾದಾಶಿಳ್ಳೆ ಎಂಬ ಹೆಸರಿನ ಒಂದು ಬಗೆಯ ಬಟ್ಟೆ ತಯಾರಾಗುತ್ತಿತ್ತು. ಗುಬ್ಬಿಯು ಸೀರೆಗಳಿಗೆ ಪ್ರಖ್ಯಾತವಾಗಿತ್ತು. ಸತ್ಯಮಂಗಲದಲ್ಲಿ ೮೦೦ರಷ್ಟು ಮಗ್ಗಗಳಿದ್ದವು. ೪೬ ಮಗ್ಗಗಳಿದ್ದ ಕೊಯಮತ್ತೂರು ಇನ್ನೊಂದು ಜವಳಿ ಉದ್ಯಮ ಕೇಂದ್ರವಾಗಿತ್ತು. ಹರಿಹರವು ಹತ್ತಿ ನೂಲಿಗೆಂದು ಹೆಸರಾಗಿತ್ತು.

ಅನೇಕ ಕಡೆಗಳಲ್ಲಿ ತೊಗಲು ಹದಮಾಡುವಿಕೆ ನಡೆದಿತ್ತು. ಎಣ್ಣೆ ಹಿಂಡುವುದಂತೂ ಸಾಮಾನ್ಯವಾಗಿತ್ತು. ಶ್ರೀರಂಗಪಟ್ಟಣದಲ್ಲೊಂದು ಕಾಗದ ಕಾರ್ಖಾನೆ ಇತ್ತು. ಮುರ್ತಡಿ ಮತ್ತು ಚನ್ನಪಟ್ಟಣಗಳಲ್ಲಿ ಗಾಜಿನ ವಸ್ತುಗಳು ತಯಾರಾಗುತ್ತಿದ್ದವು. ಕಲ್ಲಿಗೆ ಹೊಳಪು ಕೊಡುವುದು ಮತ್ತು ಕೊರೆಯುವುದು ಈ ಕೆಲಸವನ್ನು ಅನೇಕ ಕಡೆಗಳಲ್ಲಿ ಮಾಡುತ್ತಿದ್ದರು. ಮೈಸೂರಿನಲ್ಲಿ ತಯಾರಾಗುತ್ತಿದ್ದ ಮದ್ದಿನ ಪುಡಿಯು ಇಂಗ್ಲೆಂಡ್‌ನಲ್ಲಿ ತಯಾರಾಗುತ್ತಿದ್ದುದಕಿಂತಲೂ ಉತ್ತಮ ಗುಣಮಟ್ಟದ್ದಾಗಿತ್ತು. ಚನ್ನಪಟ್ಟಣದಲ್ಲಿ ಸಂಗೀತ ವಾದ್ಯಗಳಿಗೆ ಕಟ್ಟಲು ಬಳಸುವ ಒಂದು ಬಗೆಯ ತಂತಿಯನ್ನು ತಯಾರಿಸಲಾಗುತ್ತಿತ್ತು. ಅದಕ್ಕೆ ಭಾರತದ ಎಲ್ಲ ಕಡೆಗಳಿಂದಲೂ ಬೇಡಿಕೆ ಇರುತ್ತಿದ್ದಿತು. ಮೈಸೂರಿನಲ್ಲಿ ಸಾಕಷ್ಟು ಸಕ್ಕರೆ ಕಾರ್ಖಾನೆಗಳಿದ್ದವು. ಚಿಕ್ಕಬಳ್ಳಾಪುರ ಕಲ್ಲುಸಕ್ಕರೆಗೆ ಪ್ರಸಿದ್ಧವಾಗಿತ್ತು. ಚೈನಾದಿಂದ ಕರೆಸಿದ ತಜ್ಞರ ನೆರವು ಪಡೆದು ಸೊಗಸಾದ ಗುಣಮಟ್ಟದ ಸಕ್ಕರೆಯನ್ನು ತಯಾರಿಸಲಾಗುತ್ತಿತ್ತು. ಅದನ್ನು ನೋಡಿಯೇ ಟೀಪುವು ಭಾರತದಲ್ಲಿ ಉದ್ಯಮೀಕರಣ ಮತ್ತು ಬಂಡವಾಳಶಾಹಿಯ ಯುಗವನ್ನು ತೊಡಗಿಸಿದನೆಂದು ಚಿಚರೊವ್ ಹೇಳಿದ್ದು ಎಂದು ಪ್ರೊ. ಷೇಕ್ ಅಲಿ ಹೇಳುತ್ತಾರೆ. [15]

ಈ ಎಲ್ಲಾ ಬಗೆಯ ಆರ್ಥಿಕ ಚಟುವಟಿಕೆಗಳಿಗೆ ಅವನು ನೀಡಿದ ಸಾಮಾಜಿಕ ಪರಿಣಾಮವೇನು ಎಂಬುದರ ಬಗ್ಗೆ ಷೇಕ್ ಅಲಿ ಹೇಳುತ್ತಾರೆ :

''ಎಲ್ಲಾ ಬಗೆಯ ಆರ್ಥಿಕ ಚಟುವಟಿಕೆಗಳಿಗೆ ಅವನು ನೀಡಿದ ಪ್ರೋತ್ಸಾಹದಿಂದ ಕುಶಲ ಹಾಗೂ ಅಕುಶಲ ಪರಿಶ್ರಮಕ್ಕೆ ಬೇಡಿಕೆ ಅಧಿಕವಾಯಿತು. ಅನಾದಿಕಾಲದಿಂದಲೂ ಏಕೈಕ ಉದ್ಯೋಗ ಮೂಲವಾಗಿದ್ದ ಕೃಷಿಯು ಕೈತುಂಬಾ ಲಾಭ

ತರುವ ವೃತ್ತಿಯಾಗಿರಲಿಲ್ಲ. ಬಹುಪ್ರಮಾಣದಲ್ಲಿ ಪರಿಶ್ರಮವು ಅಗತ್ಯವಾಗಿದ್ದರೂ, ಅದು ವರಮಾನದಲ್ಲಿ ಅಷ್ಟೊಂದು ಲಾಭದಾಯಕವಾಗಿರಲಿಲ್ಲ. ಆಧುನಿಕ ಕೃಷಿ ವಿಧಾನಗಳನ್ನು ಅನ್ವಯಿಸುವವರೆಗೂ ಪರಿಸ್ಥಿತಿಯು ಹೀಗೆ ಇದ್ದಿತು. ಬೇರೆ ಬೇರೆ ಕೈಗಾರಿಕೋದ್ಯಮ ಕ್ಷೇತ್ರಗಳಲ್ಲಿ ಅವಕಾಶಗಳ ದಿಡ್ಡಿ ಬಾಗಿಲನ್ನು ಟೀಪುವು ತೆರೆದನು. ಅದರಿಂದಾಗಿ ಮೈಸೂರು ರಾಜ್ಯದ ಶ್ರಮಿಕ ವರ್ಗಕ್ಕೆ ಖಂಡಿತವಾಗಿಯೂ ಅಪಾರ ಲಾಭವಾಯಿತು. ಸಾಂಪ್ರದಾಯಿಕವಾಗಿ ಪ್ರಚಲಿತವಾಗಿದ್ದ ಕೃಷಿ, ವ್ಯಾಪಾರ,ವಾಣಿಜ್ಯ ಕೈಗಾರಿಕೆ , ಕಸುಬುಗಳು ಇವುಗಳ ಜೊತೆಗೆ ಟೀಪುವು ಇತರ ಸೇವಾ ಕ್ಷೇತ್ರಗಳನ್ನೂ ಬೇಕಾದ ಹಾಗೆ ವಿಸ್ತರಿಸಿದನು. ಅವನ ನೌಕಾದಳ ಮಂಡಳಿ, ವಾಣಿಜ್ಯ ವಿಭಾಗ, ಅವನು ಸ್ಥಾಪಿಸಿದ ಕಾರ್ಖಾನೆಗಳ ಬ್ಯೂರೋ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸಿದವು. ಜೊತೆಗೆ ಅಸಂಖ್ಯಾತ ಕೋಟೆಗಳನ್ನು, ಕಟ್ಟಡಗಳನ್ನು, ಸೇತುವೆ, ಕಾಲುವೆ, ಕೆರೆ ಮತ್ತು ಅಣೆಕಟ್ಟುಗಳನ್ನು ಕಟ್ಟಿದ್ದು ಕೃಷಿ ಕಾರ್ಮಿಕರಿಗೆ ಹೆಚ್ಚಿನ ವರಮಾನ ಮೂಲವನ್ನು ಒದಗಿಸಿತು. ಉತ್ಪಾದನೆಯ ವಿಧಾನಗಳಲ್ಲಿ ಅವನಿಗಿದ್ದ ಪ್ರಗತಿಪರ ದೃಷ್ಟಿ, ಆ ವಿಷಯದಲ್ಲಿ ಪಾಶ್ಚಾತ್ಯರು ಸಾಧಿಸಿದ್ದ ಪ್ರಗತಿಯ ಅರಿವು ಅವನಿಗಿದ್ದುದು, ಮೈಸೂರು ಕಾರ್ಮಿಕರ ಗುಣಮಟ್ಟವನ್ನೂ ಕೌಶಲ್ಯವನ್ನೂ ಅಪಾರವಾಗಿ ಹೆಚ್ಚಿಸಿದವು. ಅಡಕವಾಗಿ ಹೇಳಬೇಕೆಂದರೆ ವಿರೋಧೀ ಶಕ್ತಿಗಳು ಅವನ ಆಳ್ವಿಕೆಯನ್ನು ನಡುವೆಯೇ ತುಂಡರಿಸದೇ ಹೋಗಿದ್ದರೆ ಟೀಪುವು ಖಂಡಿತವಾಗಿಯೂ ಮೈಸೂರು ರಾಜ್ಯವನ್ನು ಕೈಗಾರಿಕಾ ಯುಗಕ್ಕೆ ತಂದು ನಿಲ್ಲಿಸುತ್ತಿದ್ದನು'' [16]

ಟೀಪುವು ಬದುಕಿದ್ದ ಕಾಲಾವಧಿ ಬಹಳ ಪರಿವರ್ತನಾತ್ಮಕ ಅವಧಿಯದಾಗಿತ್ತು. ರಾಜಕೀಯ ಅರ್ಥಶಾಸ್ತ್ರದ ಪಿತಾಮಹನೆನಿಸಿದ ಆಡಂ ಸ್ಮಿತ್‌ನ 'ವೆಲ್ತ್ ಆಫ್ ನೇಷನ್ಸ್' ಕೃತಿಯು ಟೀಪುವಿನ ಕಾಲದಲ್ಲಿ ಅದೇ ತಾನೇ ಪ್ರಕಟವಾಗಿತ್ತು. ಕೈಗಾರಿಕಾ ಕ್ರಾಂತಿಯು ಆಗಿನ್ನೂ ತಲೆಯೆತ್ತುತ್ತಿದ್ದಿತು. ಊಳಿಗಮಾನ್ಯ ಅರ್ಥವ್ಯವಸ್ಥೆಯಿಂದ ಆಧುನಿಕ ಅರ್ಥವ್ಯವಸ್ಥೆಗೆ ಪರಿವರ್ತನೆಯಾಗುತ್ತಿದ್ದ ಸಂಧಿಕಾಲವದು. ಘಟನೆಗಳು ಯಾವ ಆಕಾರವನ್ನು ಪಡೆದುಕೊಳ್ಳುತ್ತವೆ ಎಂಬುದು ಯಾರ ಕಲ್ಪನೆಗೂ ನಿಲುಕುವಂತಿರಲಿಲ್ಲ. ಅಂತಹ ಸಮಯದಲ್ಲಿ ಟೀಪುವು ಬಂಡವಾಳಶಾಹಿಯನ್ನು ಉತ್ಪಾದಿಸಿದ ಶಕ್ತಿಗಳ ಸಾಲಿನಲ್ಲಿ ಸೇರಿರಬೇಕಿತ್ತೆಂದಾಗಲೀ, ಯೂರೋಪಿಯನ್ ಅರ್ಥದ ಕೈಗಾರಿಕೀಕರಣದ ಪ್ರತಿನಿಧಿಯೋ ಶಿಲ್ಪಿಯೋ ಆಗಿರಬೇಕಿತ್ತೆಂದಾಗಲೀ ನಿರೀಕ್ಷಿಸುವುದು ಬಹಳ ಹೆಚ್ಚಾಗುತ್ತದೆ. ಆದರೆ ಕರ್ನಾಟಕವೂ ಕೂಡ,ಆಗ ಯೂರೋಪ್ ದೇಶಗಳು ಯಾವ ಬಗೆಯ ಪರಿವರ್ತನಾತ್ಮಕ ಪರಿಸ್ಥಿತಿಯಲ್ಲಿ ಹೊರಳಾಡುತ್ತಿದ್ದವೋ, ಅಂತಹ ಒಂದು ಪರಿಸ್ಥಿತಿಗೆ ಹೆಚ್ಚು ಕಡಿಮೆ ಸಂವಾದಿಯಾಗಿರ ಬಹುದಾದ ಮಟ್ಟದಲ್ಲಿ, ಈ ನಾಡಿನ ಔದ್ಯಮಿಕ ಹಾಗೂ ಸಾಮಾಜಿಕ ಪರಿಸ್ಥಿತಿಗಳನ್ನು ನಿರ್ಮಿಸುವೆಡೆಯಲ್ಲಿ ಆತ ಬಹುಮಟ್ಟಿಗೆ ಯಶಸ್ವಿಯಾಗಿದ್ದನೆನ್ನ ಬಹುದು. ಸಮಾಜವು ತನ್ನ ಊಳಿಗಮಾನ್ಯತೆಯಿಂದ ಬಿಡಿಸಿಕೊಂಡು ಹೊಸ ಬಗೆಯ ಆರ್ಥಿಕ, ಸಾಮಾಜಿಕ

ವಿನ್ಯಾಸಗಳ ಆಧುನಿಕತೆಯೆಡೆಗೆ ಮುಖ ಮಾಡಿತ್ತು. ಊಳಿಗಮಾನ್ಯ ಸ್ವರೂಪದಲ್ಲಿದ್ದ ಸಮಾಜವನ್ನು ಪರಿವರ್ತಿಸಲು ಅವನು ಕೈಗೊಂಡ ಆರ್ಥಿಕ ಕ್ರಮಗಳು ಬಹಳ ಆಳವಾಗಿದ್ದವು.

ಒಂದೇ ಆಜ್ಞೆಯಲ್ಲಿ ಜಮೀನ್ದಾರಿ ಪದ್ಧತಿಯನ್ನು ತೊಡೆದುಹಾಕಿದ್ದು ಒಂದು ಕ್ರಾಂತಿಕಾರಿ ಹೆಜ್ಜೆ. ಜನರು ದಲ್ಲಾಳಿಗಳ ಮುಷ್ಟಿಯಿಂದ ಬಿಡುಗಡೆ ಹೊಂದಿದರು. ಪಾಳೇಗಾರರ ಸುಲಿಗೆಗೆ ಸಿಕ್ಕ ಜನರ ಜೀವನ ಅಸಹನೀಯವಾಗಿತ್ತು. ನಮ್ಮ ರೈತಾಪಿ ವರ್ಗವೂ ಫ್ರೆಂಚ್ ಮಹಾಕ್ರಾಂತಿಗೆ ಮೊದಲು ಫ್ರಾನ್ಸಿನಲ್ಲಿದ್ದ ರೈತಾಪಿ ವರ್ಗದವರ ಸ್ಥಿತಿಯಲ್ಲೇ ಇದ್ದಿತು. ಅಸಂಖ್ಯಾತವಾಗಿದ್ದ ತೆರಿಗೆಗಳನ್ನು ರದ್ದುಪಡಿಸಿ, ರೈತರು ನೇರವಾಗಿ ಸರಕಾರದೊಂದಿಗೆ ಸಂಪರ್ಕವಿರಿಸಿಕೊಳ್ಳುವಂತೆ ವ್ಯವಸ್ಥೆ ಮಾಡಿದ್ದು, ಆರ್ಥಿಕ ಬದಲಾವಣೆ ಮಾತ್ರವಲ್ಲ ಸಾಮಾಜಿಕ ಬದಲಾವಣೆಯೂ ಆಗಿತ್ತು. ಈಗ ಸರಕಾರದ ಕಣ್ಣಿನಲ್ಲಿ ಎಲ್ಲಾ ಪ್ರಜೆಗಳೂ ಒಂದೇ ಆಗಿದ್ದರು. ಹೀಗೆ ರೈತವರ್ಗವನ್ನು ಮೇಲೇರಿಸಿದ್ದೇ ಒಂದು ದೊಡ್ಡ ಸಾಧನೆಯಾಗಿತ್ತು. ಆದರೆ ದುರದೃಷ್ಟವಶಾತ್ ವಸಾಹತುಗಾರರು ಈ ಪ್ರಕ್ರಿಯೆಯನ್ನು ಮತ್ತೆ ತಲೆಕೆಳಗು ಮಾಡಿಬಿಟ್ಟರು.

ಬ್ರಿಟಿಷರು ಮತ್ತೆ ಈ ನಾಡಿನಲ್ಲಿ ಇನಾಂ ಭೂಮಿಗಳು, ಜಾಗೀರುಗಳು ಮತ್ತು ಅಗ್ರಹಾರಗಳೆಂಬ ಊಳಿಗಮಾನ್ಯ ವ್ಯವಸ್ಥೆಯೇ ಮರುಕಳಿಸುವಂತೆ ಮಾಡಿದರು. ಟೀಪು ಕಟ್ಟಿದ್ದೆಲ್ಲ ಬಿದ್ದುಹೋಯಿತು. ೧೭೯೯ರ ನಂತರ ಮೈಸೂರು ಮತ್ತೆ ಊಳಿಗಮಾನ್ಯ ಪದ್ಧತಿಯ ಸಮಾಜವೇ ಆಗಿ ಹಿಂದಕ್ಕೆ ಸರಿಯಿತು.

ಟೀಪುವಿನ ಕಾಲದಲ್ಲಿ ಬೆಳೆಯುತ್ತಾ ಬಂದ ವ್ಯಾಪಾರಿ ಹಾಗೂ ವಾಣಿಜ್ಯ ವಲಯಗಳಲ್ಲಿನ ಬೆಳವಣಿಗೆಗಳು, ಆ ಪ್ರಭುತ್ವಕ್ಕೆ ಇದ್ದ ವ್ಯಾಪಾರಿ ಸ್ವಭಾವವನ್ನು ಸೂಚಿಸುತ್ತವೆ. ಈ ವ್ಯಾಪಾರತ್ವದ ಸತ್ವಾಂಶವೇನೆಂದರೆ , ಅದು ಪ್ರಭುತ್ವವನ್ನು ತನ್ನ ಭೌತಿಕ ಸಂಪನ್ಮೂಲಗಳ ದೃಷ್ಟಿಯಿಂದ ಬಲಪಡಿಸಿಕೊಳ್ಳುತ್ತಾ ಹೋಗುವುದು. ಅದು ರಾಷ್ಟ್ರೀಯತ್ವದ ಆರ್ಥಿಕ ಮುಖವಾಗಿದೆ. ಅದು ತನ್ನನ್ನು ಹಾಗೆ ಆರ್ಥಿಕ ಕ್ಷೇತ್ರಗಳಲ್ಲಿ ಬಲಪಡಿಸಿಕೊಳ್ಳುತ್ತಾ, ಸಾಮಾಜಿಕ ಸಂಬಂಧಗಳಲ್ಲಿ ಹಾಗೂ ಸಾಮಾಜಿಕ ವರ್ಗ ಸಮುದಾಯಗಳ ಚೈತನ್ಯದಲ್ಲಿ ಪರಿವರ್ತನೆಗಳನ್ನು ಉಂಟುಮಾಡುತ್ತದೆ.

ಆ ರಾಜ್ಯದಲ್ಲಿ ಕೃಷಿಯೇತರ ಜನಸಂಖ್ಯೆಯ ತೀವ್ರ ಹೆಚ್ಚಳವು ಪಟ್ಟಣ ಹಾಗೂ ನಗರಗಳ ತ್ವರಿತ ಬೆಳವಣಿಗೆಯಲ್ಲಿ ಪ್ರತಿಬಿಂಬಿತವಾಗಿದೆ. ಕೃಷಿಯೇತರ ಜನಸಂಖ್ಯೆಯು ಲಕ್ಷಾಂತರ ಸಂಖ್ಯೆಯಲ್ಲಿಹೆಚ್ಚಳಗೊಂಡಿದ್ದು, ಕೃಷಿ ಸರಕುಗಳಿಗೆ ಮಾತ್ರವಲ್ಲದೆ, ಕುಶಲಕರ್ಮಿಗಳ ಹಾಗೂ ಹಲವಾರು ಪಟ್ಟಣ ಪ್ರದೇಶಗಳಲ್ಲಿ ನೆಲೆಗೊಂಡಿದ್ದ ಹಲವಾರು ಕಸುಬುದಾರ ವರ್ಗಗಳ ಉತ್ಪನ್ನಗಳಿಗೂ ಪ್ರಧಾನವಾದ ಮಾರುಕಟ್ಟೆಯನ್ನು ಒದಗಿಸಿತು.

ಈ ಬಗೆಯ ಮಾರುಕಟ್ಟೆ ಸೃಷ್ಟಿ ಒಂದು ಭೌಗೋಳಿಕ ಪ್ರದೇಶದೊಳಗಿನ ನಿರ್ದಿಷ್ಟ ಜನಸಮುದಾಯಗಳ ನಡುವೆ ಸಾರಿಗೆ ಸಂಪರ್ಕಗಳನ್ನು ವೃದ್ಧಿಪಡಿಸಿದ್ದನ್ನು

ಟೀಪುವಿನ ಆಡಳಿತ ಕಾಲದ ಚಿತ್ರಣ ನಮಗೆ ಸ್ಪಷ್ಟಗೊಳಿಸುತ್ತದೆ. ಆಗಿನ ರಾಜಕೀಯ ಮತ್ತು ವಾಣಿಜ್ಯ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣ ಮತ್ತು ಬೆಂಗಳೂರುಗಳ ನಡುವೆ ಇದ್ದ ಹಲವಾರು ಪ್ರದೇಶಗಳು, ಹಲವಾರು ಸಂಕೀರ್ಣ ಬಗೆಗಳಲ್ಲಿ ಪರಸ್ಪರ ಸಾರಿಗೆಯನ್ನು ಬೆಳೆಸಿಕೊಂಡಿದ್ದನ್ನು ನಾವು ಗಮನಿಸಬಹುದಾಗಿದೆ. ರಸ್ತೆ ನಿರ್ಮಾಣಕ್ಕೆ ಅನುಕೂಲಕರವಾದ ಪ್ರದೇಶವನ್ನು ಹೊಂದಿದ್ದ ಈ ಪ್ರಾಂತ್ಯಗಳಲ್ಲಿ ಒಂದು ಸಾರಿಗೆ ಸಂಪರ್ಕಗಳ ಜಾಲವೇ ನಿರ್ಮಾಣಗೊಂಡಿತ್ತು.

೧೭೯೧ರಲ್ಲಿ ಬರೆಯಲ್ಪಟ್ಟ ಆ ಸಾಮ್ರಾಜ್ಯದ ಭೂಪಟ ನಕ್ಷೆಯು ಅಷ್ಟು ಹೆಚ್ಚಿನ ವಿವರಗಳನ್ನು ಒಳಗೊಂಡಿಲ್ಲದಿದ್ದರೂ ಸಂಪರ್ಕ ವ್ಯವಸ್ಥೆಯಲ್ಲಿ ಬೆಳವಣಿಗೆಯಾಗುತ್ತಿದ್ದ ಸಂಕೀರ್ಣತೆಯನ್ನು ನಾವು ಗ್ರಹಿಸಲು ಅದು ತಕ್ಕಷ್ಟು ಮಾಹಿತಿಯನ್ನು ಒದಗಿಸುತ್ತದೆ. ಈ ನಕ್ಷೆಯು ನಮಗೆ ೬ ಮುಖ್ಯ ಹೆದ್ದಾರಿಗಳನ್ನು ಸೂಚಿಸುತ್ತಿದೆ. ಇವೆಲ್ಲವೂ ಶ್ರೀರಂಗಪಟ್ಟಣವನ್ನು ಕೋಜಿಕೋಡಿನ ಜೊತೆಗೆ, ಕಣ್ಣೂರಿನ ಜೊತೆಗೆ, ಬಿದನೂರಿನ ಜೊತೆಗೆ, ತುಮಕೂರಿನ ಜೊತೆಗೆ, ಬೆಂಗಳೂರು ಮತ್ತು ಹೊಸೂರುಗಳ ಜೊತೆಗೆ ಸಂಯೋಜಿಸಿರುವುದನ್ನು ಕಾಣಬಹುದಾಗಿದೆ. ಇದೇ ನಕ್ಷೆಯು ಬೆಂಗಳೂರಿಗೆ ಬಂದು ಸೇರುವ ಶ್ರೀರಂಗಪಟ್ಟಣ, ಚಿತ್ರದುರ್ಗ, ಪೆನುಕೊಂಡಾ, ತದಿಮೇರಿ, ಕೋಲಾರ, ಮಾಲೂರು ಮತ್ತು ಹೊಸೂರುಗಳ ೭ ಮಾರ್ಗಗಳನ್ನು ಚಿತ್ರಿಸಿದೆ. ಈ ಬಗೆಯಲ್ಲಿ ಭೂಮಾರ್ಗದ ಮುಖಾಂತರ ಕನ್ನಡ ಭಾಷಿಕ ಸಮಾಜದ ಒಳನಾಡಿನ ಪ್ರಾಂತ್ಯಗಳು, ಅಲ್ಲದೆ ಅದರ ನೆರೆಹೊರೆಯ ಮುಖ್ಯ ವಾಣಿಜ್ಯ ಕೇಂದ್ರಗಳು, ಪರಸ್ಪರ ಸಾರಿಗೆ ಸಂಪರ್ಕದಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಂಪರ್ಕಿತವಾದುವೆಂದು ನಾವು ಗಮನಿಸಬಹುದಾಗಿದೆ. ಈ ಸಾರಿಗೆ ವ್ಯವಸ್ಥೆಯಲ್ಲಿ ಸಂಕೀರ್ಣತೆ ಬರುವುದೆಂದರೆ ಒಂದು ನಿರ್ದಿಷ್ಟ ಸಮಾಜದ ಪ್ರಾಂತ್ಯದೊಳಗಿನ ಹಲವಾರು ಸಮುದಾಯಗಳು ಮುಖ್ಯ ವಾಣಿಜ್ಯ ಕೇಂದ್ರಗಳೊಂದಿಗೆ ಸಕ್ರಿಯವಾಗಿ ವಹಿವಾಟನ್ನು ನಡೆಸುತ್ತಿರುವುದನ್ನು ಸೂಚಿಸುತ್ತದೆ.

ಸ್ವತಃ ವ್ಯಾಪಾರೀ ಸ್ವಭಾವವನ್ನು ಹೊಂದಿದ್ದ ಟೀಪು ಈ ಬಗೆಯ ಅಂತರ್ದೇಶೀಯ ಮತ್ತು ಅಂತರ್‌ಪ್ರಾಂತೀಯ ವಹಿವಾಟುಗಳನ್ನು ತನ್ನ ವಾಣಿಜ್ಯ ಹೆಚ್ಚಳದ ಉದ್ದೇಶಕ್ಕಾಗಿ ಪ್ರೋತ್ಸಾಹಿಸುತ್ತಿದ್ದನು.

ಈ ವಾಣಿಜ್ಯ ವ್ಯವಹಾರವು ಕನ್ನಡ ಸಮಾಜದ ವಿವಿಧ ಜನಸಮೂಹಗಳ ಚೈತನ್ಯ ಹೆಚ್ಚಿಸಿದ್ದನ್ನು ನಾವು ಹಿಂದಿನ ಕೆಲವು ಅಧ್ಯಾಯಗಳಲ್ಲಿ ಗಮನಿಸಿದ್ದೇವೆ. ಅನೇಕ ಬಗೆಯ ಬೆಳವಣಿಗೆಗಳು ಕರ್ನಾಟಕದಲ್ಲಿ ಟೀಪು ಕಾಲಾವಧಿಯಲ್ಲೂ ಏರ್ಪಟ್ಟು, ರಾಷ್ಟ್ರೀಯ ವರ್ತಕರ ವರ್ಗವೊಂದನ್ನು ಬಲಗೊಳಿಸುವುದರಲ್ಲಿ ನೆರವಾಗಿತ್ತು.

ಬೆಂಗಳೂರಿನ ಜವಳಿ ವಾಣಿಜ್ಯವು ಪ್ರಮುಖವಾಗಿ ನಾಲ್ಕು ವರ್ತಕ ಜಾತಿಗಳನ್ನು ಒಳಗೊಂಡಿತ್ತು. ಬಣಜಿಗರು (ಅವರು ವೀರಶೈವ ಕನ್ನಡಿಗರಾಗಿದ್ದು, ಅವರನ್ನು ಲಿಂಗ ಬಣಜಿಗ ಶೆಟ್ಟಿ ಎಂದೂ ಕರೆಯುತ್ತಾರೆ) ಬಲಿಜರು (ಅವರ ತೆಲುಗು

ಮೂಲದಿಂದಾಗಿ ಬುಕಾನನ್ ಅವರನ್ನು ತೆಲಿಂಗ ಬಣಜಿಗರು ಎನ್ನುತ್ತಾನೆ), ಕೋಮಟಿಗಳು (ತೆಲುಗು ಮೂಲದವರು) ಹಾಗೂ ನಗರ್ತರು (ತಮಿಳು ಮೂಲ) ಈ ನಾಲ್ಕು ಜಾತಿಗಳಾಗಿದ್ದವು. ನಗರ್ತರು ಸಿದ್ಧ ಬಟ್ಟೆಗಳ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದರು. ಕೋಮಟಿಗಳಿಗೆ ಜವಳಿ ಅವರ ವಾಣಿಜ್ಯ ಚಟುವಟಿಕೆಯ ಮತ್ತೊಂದು ಸರಕು; ಬಲಿಜರು ಹತ್ತಿದಾರ ಮತ್ತು ಹತ್ತಿ-ಉಣ್ಣೆಯಿಂದ ನೂಲು ಉತ್ಪಾದಿಸುತ್ತಿದ್ದರು. ಬಣಜಿಗರು ಇದೇ ಉತ್ಪಾದನೆಯಲ್ಲಿ ತೊಡಗಿದ್ದು, ನೂಲನ್ನು ನೇಕಾರರಿಗೆ ಮುಂಗಡದ ರೂಪದಲ್ಲಿ ನೀಡುತ್ತಿದ್ದರು. ಇದರಲ್ಲಿ ಬಣಜಿಗ ವರ್ತಕರದೇ ಸಿಂಹಪಾಲು.

ಗಂದಕಿ ಎಂಬ ಜಾತಿ ಈ ಜವಳಿ ಉದ್ದಿಮೆಗೆ ಸ್ವಾಭಾವಿಕ ಬಣ್ಣದ ಸಾಮಗ್ರಿಯನ್ನು ಒದಗಿಸುತ್ತಿತ್ತು. ಹತ್ತಿ, ಉಣ್ಣೆ ಮತ್ತು ಸೆಣಬಿನ ಕಚ್ಚಾವಸ್ತುಗಳು ಬಣಜಿಗ ವರ್ತಕರಿಂದ ಒದಗುತ್ತಿದ್ದವು. ಸಾಮಾನ್ಯವಾಗಿ ಈ ಬಣಜಿಗ ವರ್ತಕರು ಬಳ್ಳಾರಿ, ಆದೋನಿ, ಅಗ್ಗಡಿ, ಧಾರವಾಡ, ಹುಬ್ಬಳ್ಳಿ, ನರಗುಂದ, ನವಲಗುಂದ, ಗುತ್ತಿ, ಸವಣೂರು ಮತ್ತು ಗಜೇಂದ್ರಗಢ ಮುಂತಾದ ಕರ್ನಾಟಕದ ಪ್ರಮುಖ ಹತ್ತಿ ಬೆಳೆಗಾರ ಪ್ರದೇಶದಲ್ಲಿ ತಮ್ಮ ಕೇಂದ್ರ ಕಾರ್ಯಸ್ಥಳಗಳನ್ನು ಇಟ್ಟುಕೊಂಡಿದ್ದರು. ಇಂತಹ ವರ್ತಕರು ಸಾರಿಗೆಗಾಗಿ ಬಳಸುತ್ತಿದ್ದ ಎತ್ತುಗಳನ್ನು ಆಗಿನ ಬಡವರ್ತಕರ ಎತ್ತುಗಳ ಜೊತೆ ಹೋಲಿಸಿದರೆ ಬಹಳ ಬಲಿಷ್ಠವಾದುವಾಗಿದ್ದು, ೪೦೦ ಪೌಂಡಿಗೂ ಹೆಚ್ಚು ಭಾರದ ಸರಕನ್ನು ಹೊರುವಷ್ಟು ಸಾಮರ್ಥ್ಯ ಪಡೆದಿದ್ದವು. ಇದು ಸಾಮಾನ್ಯ ಎತ್ತುಗಳ ಸಾಮರ್ಥ್ಯಕ್ಕೆ ಹೋಲಿಸಿದರೆ ಎರಡು ಪಟ್ಟು ಸಾಮರ್ಥ್ಯವಾಗುತ್ತದೆ. ಈ ಎತ್ತುಗಳು ತಮ್ಮ ಸರಕುಗಳನ್ನು ಸಾಮ್ರಾಜ್ಯದ ವಿವಿಧ ಮಾರುಕಟ್ಟೆಗಳಿಗೆ ಕೊಂಡೊಯ್ಯುತ್ತಿದ್ದವು. ಅವು ಬೆಂಗಳೂರು, ಶ್ರೀರಂಗಪಟ್ಟಣ, ಗುಬ್ಬಿ, ನಗರ, ಚಿತ್ರದುರ್ಗ, ಚೆನ್ನಪಟ್ಟಣ, ಮಂಗಳೂರು, ಭಟ್ಕಳ, ಹೊನ್ನಾವರ, ಕಾರವಾರ ಮತ್ತು ಕೋಜಿಕೋಡ್‌ಗಳ ನಡುವೆ ಸಂಚರಿಸುತ್ತಿದ್ದವು.

ಈ ಬಗೆಯಲ್ಲಿ ಬಣಜಿಗರು ಕರ್ನಾಟಕದ ಒಂದು ತುದಿಯಿಂದ ಮತ್ತೊಂದು ತುದಿಗೆ ಸಂಬಂಧ ಜಾಲವನ್ನು ಹೆಣೆದರು. ಈ ಜವಳಿ ವ್ಯಾಪಾರದ ನೂಲುಗಳು ಕರ್ನಾಟಕವನ್ನು ಒಂದು ಸಮಗ್ರ ರಾಷ್ಟ್ರೀಯತಾ ಸಮಾಜವನ್ನಾಗಿ ನೇಯತೊಡಗಿತ್ತು.

ಕಚ್ಚಾ ರೇಷ್ಮೆಯ ಜೊತೆಗೆ ಕಚ್ಚಾ ಹತ್ತಿಯ ನೂಲುಗಳು ಬೆಂಗಳೂರಿಗೆ ಸಾಗಿಸಲ್ಪಡುತ್ತಿದ್ದವು. ಇಲ್ಲಿ ಇದನ್ನು ಪಟ್ಟೇಗಾರರಿಗೆ ತೆಲುಗು ಮತ್ತು ಕನ್ನಡ ದೇವಾಂಗದವರಿಗೆ, ಕತ್ರಿಗಳಿಗೆ, ಶ್ಯಾನೇಗಾರರಿಗೆ, ಪದ್ಮಸಾಲಿ ಮತ್ತು ಸಾಮ್ಯಸಾಲಿ ಮುಂತಾದ ನೇಕಾರ ಜಾತಿಗಳಿಗೆ ಒಪ್ಪಂದಕ್ಕೆ ಕೊಡಲಾಗುತ್ತಿತ್ತು.

ಈ ಬಗೆಯಲ್ಲಿ ಕಚ್ಚಾಹತ್ತಿ, ಹತ್ತಿನೂಲು ಹಾಗೂ ಹತ್ತಿ ಅಥವಾ ರೇಷ್ಮೆ ಎಳೆಗಳ ತಯಾರಿಕೆಯ ಪರಿಸ್ಥಿತಿಗಳು ಬಣಜಿಗ ವರ್ತಕರ ಹಣಕಾಸಿನ ನಿಯಂತ್ರಣದಲ್ಲಿ ನಡೆಯುತ್ತಿದ್ದವು. ಈ ಉತ್ಪಾದನಾ ಪ್ರಕ್ರಿಯೆ ಪರಿಸ್ಥಿತಿಗಳನ್ನು ಗಮನಿಸಿದರೆ ಅದು

'ಪುಟಿಂಗ್ ಔಟ್' ಎಂಬ ಪೂರ್ವ ಬಂಡವಾಳಶಾಹಿ ಲಕ್ಷಣವನ್ನು ತೋರಿಸುತ್ತಿದೆ ಎಂದು ಸಾಕಿ ಅಭಿಪ್ರಾಯಪಡುತ್ತಾರೆ.

ಈ ಬಗೆಯಲ್ಲಿ ಹೈದರ್ ಮತ್ತು ಟೀಪು ಆಡಳಿತಾವಧಿಯಲ್ಲಿ ಹೊಸ ವರ್ತಕ ವರ್ಗಗಳು ಪ್ರವರ್ಧಮಾನಕ್ಕೆ ಬಂದಿದ್ದನ್ನು ನಾವು ಗಮನಿಸಬಹುದಾಗಿದೆ. ಬಣಜಿಗರು ಕರ್ನಾಟಕದ ಮುಖ್ಯ ವರ್ತಕ ಸಮುದಾಯವಾಗಿ ಈ ಇತಿಹಾಸದ ಕಾಲಾವಧಿಯಲ್ಲಿ ರೂಪುಗೊಂಡಿದ್ದನ್ನು ಗಮನಿಸಿದ ಹಿನ್ನೆಲೆಯಲ್ಲಿ ಕರ್ನಾಟಕದ ವರ್ತಕ ಸಮುದಾಯದ ಬೆಳವಣಿಗೆಯಲ್ಲಿ ಮೂರು ವಿಭಿನ್ನ ಹಂತಗಳನ್ನು ಗುರುತಿಸ ಬಹುದಾಗಿದೆ.

ಸಾಕಿ ಈ ಹಂತಗಳನ್ನು ಹೀಗೆ ಗುರುತಿಸುತ್ತಾರೆ - ''ಮೊದಲ ಕಾಲಘಟ್ಟವು ೧೧, ೧೨ ಮತ್ತು ೧೩ನೇ ಶತಮಾನಗಳನ್ನು ವ್ಯಾಪಿಸಿದ್ದು, ಆ ಅವಧಿಯಲ್ಲಿ ಐಯಾಹೊಳೆ ಐನೂರ್ವರ ವರ್ತಕ ಸಮುದಾಯವು ಪ್ರವರ್ಧಮಾನಕ್ಕೆ ಬಂದಿತು, ಈ ವರ್ತಕ ಸಮುದಾಯವು ಒಂದು ಊಳಿಗಮಾನ್ಯ ವರ್ತಕ ಸಮುದಾಯವಾಗಿತ್ತು. ವಜ್ರ, ದಂತ, ಮುತ್ತುಗಳು, ಆಭರಣಗಳು ಮುಂತಾದ ಊಳಿಗಮಾನ್ಯ ಕುಲೀನವರ್ಗದ ಅಗತ್ಯಗಳಿಗೆ ಬೇಕಾಗಿರುವ ಸರಕುಗಳನ್ನು ಮಾತ್ರ ವ್ಯಾಪಾರಕ್ಕೆ ಬಳಸುತ್ತಿದ್ದು, ತನ್ನ ವಹಿವಾಟಿಗೆ ನಾಣ್ಯಗಳ ಬದಲು ಬಂಗಾರವನ್ನು ಬಳಸುತ್ತಿತ್ತು. ಈ ಐಯಾಹೊಳೆ ಐನೂರ್ವರ ವರ್ತಕ ಸಮುದಾಯವು ಆರಂಭಿಕ ಊಳಿಗಮಾನ್ಯ ಅವಧಿಯನ್ನು ಪ್ರತಿನಿಧಿಸುತ್ತದೆ.

ವಿಜಯನಗರದ ಉಗಮದೊಂದಿಗೆ ಪತನಕ್ಕೆ ಗುರಿಯಾದ ಐಯಾಹೊಳೆ ಐನೂರ್ವರ ಸಂಘವು ಸಾಲುಮೂಲೆ ಬಣಜಿಗರ ಉತ್ಕರ್ಷವನ್ನು ಸೂಚಿಸಿತು. ಇದು ೧೪, ೧೫ ಮತ್ತು ೧೬ನೇ ಶತಮಾನಗಳ ಅವಧಿಗೆ ಸೇರಿದ್ದು, ಈ ವರ್ತಕ ವರ್ಗವು ಪ್ರಮುಖವಾಗಿ ಧಾನ್ಯ ವ್ಯಾಪಾರಿಗಳಾಗಿದ್ದು, ನಗರಗಳಲ್ಲಿ ಪ್ರಾಧಾನ್ಯತೆಯನ್ನು ಪಡೆದು ಮೇಯರ್‌ಗಳಾಗುವ ಹಂತಕ್ಕೆ ಬೆಳೆದಿದ್ದಿತು. ಈ ಸಾಲುಮೂಲೆ ಬಣಜಿಗ ವರ್ತಕ ಸಮುದಾಯದ ಉತ್ಕರ್ಷವು, ಮಧ್ಯಮ ಊಳಿಗಮಾನ್ಯ ಅವಧಿಯ ಕಾಲಘಟ್ಟವನ್ನು ಪ್ರತಿನಿಧಿಸುತ್ತದೆ.

ಉತ್ತರ ಊಳಿಗಮಾನ್ಯತೆಯ ಮೂರನೇ ಅವಧಿಯು ೧೭ ಮತ್ತು ೧೮ನೇ ಶತಮಾನಕ್ಕೆ ಸೇರಿದ್ದು, ಸಾಲುಮೂಲೆ ಬಣಜಿಗ ವರ್ತಕ ಸಮುದಾಯವು, ಬಣಜಿಗ ಶೆಟ್ಟಿ ಸಮುದಾಯದಿಂದ ಸ್ಥಾನಾಂತರಗೊಂಡುದನ್ನು ಗಮನಿಸಬಹುದಾಗಿದೆ. ಈ ಬಣಜಿಗರು ಜವಳಿ ಕ್ಷೇತ್ರದ ವರ್ತಕರಾಗಿದ್ದು, ಆ ಸಮಯದ ಪ್ರಧಾನ ಉತ್ಪಾದನಾ ಕ್ಷೇತ್ರವಾಗಿದ್ದ ಜವಳಿ ಸರಕುಗಳ ವಹಿವಾಟಿಗೆ ಸಂವಾದಿಯಾಗಿ ಇವರು ಪ್ರಧಾನ ವರ್ತಕರಾದರು.

ಐಯಾಹೊಳೆ ಐನೂರ್ವರು ಅಥವಾ ಸಾಲುಮೂಲೆ ಬಣಜಿಗರು ಆರಂಭಿಕ ಮತ್ತು ಮಧ್ಯಮ ಊಳಿಗಮಾನ್ಯತೆಯ ಅವಧಿಗೆ ಸೇರಿದವರಾಗಿದ್ದು, ಅವರಂತಲ್ಲದೆ

ಬಣಜಿಗ ಶೆಟ್ಟರು ಕೃಷಿ ಹಾಗೂ ಉತ್ಪಾದನೆಯ ನಡುವೆ ಸಾವಯವ ಸಂಬಂಧ ಹೊಂದಿದ್ದ ಸರಕೊಂದರ ವಹಿವಾಟಿನಲ್ಲಿದ್ದರು. ಅದು ಪಟ್ಟಣ ಹಾಗೂ ಗ್ರಾಮಸೀಮೆಗಳನ್ನು ಬೆಸೆಯುತ್ತಿತ್ತು. ಅದು ತನ್ನ ಭವಿಷ್ಯವನ್ನು ಹತ್ತಿ ಮಗ್ಗದ ಮೇಲೆ ತೊಡಗಿಸಿದ್ದು ಅದರ ಉತ್ಪಾದನೆಯ ಪ್ರತಿಯೊಂದು ಹಂತದಲ್ಲೂ ತೊಡಗಿಕೊಂಡಿತ್ತು. ಅದರ ಸಾಗುವಳಿಯಿಂದ ಅದನ್ನು ಹಿಂಜುವವರೆಗೂ, ಅದರ ನೂಲು ತೆಗೆಯುವುದರಿಂದ ಹಿಡಿದು ಆ ತಯಾರಿತ ಬಟ್ಟೆಯ ಮಾರಾಟದವರೆಗೂ ಇಡೀ ಪ್ರಕ್ರಿಯೆಯಲ್ಲಿ ಇವರು ಪಾಲ್ಗೊಂಡಿದ್ದರು. ಆ ಅವಧಿಯ ಭಾರತ ಮತ್ತು ಕರ್ನಾಟಕದ ಆರ್ಥಿಕ ಕ್ಷೇತ್ರಗಳಲ್ಲಿ ಅತ್ಯಂತ ಪ್ರಮುಖವಾಗಿದ್ದ ಜವಳಿ ಕ್ಷೇತ್ರದೊಂದಿಗೆ ಬಣಜಿಗರು ಸಂಬಂಧ ಹೊಂದಿದ್ದರು. ಈ ಬಗೆಯಲ್ಲಿ ಅವರ ಉತ್ಕರ್ಷವೆಂಬುದು ಜವಳಿ ಆರ್ಥಿಕತೆಯ ಉತ್ಕರ್ಷದೊಂದಿಗೆ ಸಂಬಂಧಪಟ್ಟಿರುವುದರಿಂದ ಒಂದು ಪ್ರಗತಿಪರ ದಿಕ್ಕನ್ನು ಪಡೆದುಕೊಂಡಿತು''.[17]

ಈ ವರ್ತಕವರ್ಗವು ತನ್ನ ಸಮುದಾಯದೊಳಗಿಂದ ಹಲವಾರು ಮೇಯರ್‌ಗಳನ್ನು ಹಾಗೂ ಮೈಸೂರು ಅಧಿಕಾರಶಾಹಿಯ ಉನ್ನತ ಸ್ತರಗಳ ಪ್ರತಿನಿಧಿಗಳನ್ನು ಬೆಳೆಸಿತು. ಉದಾ. : ನಲ್ಲಪ್ಪಶೆಟ್ಟಿ. ಅಲ್ಲದೆ ಹೊಸ ಬಗೆಯ 'ಹೈದರ್‌ನಾಮಾ'ದಂತಹ ಊಳಿಗಮಾನ್ಯತೆಯ ಹಿಡಿತಗಳಿಂದ ಮುಕ್ತವಾಗಿಸಿಕೊಂಡಿದ್ದ ಸಾಹಿತ್ಯ ಕೃತಿಗಳನ್ನೂ ನೀಡಲು ಅದು ಆರಂಭಿಸಿತು.

''ಈ ಬಣಜಿಗರು ಜವಳಿಯ ವರ್ತಕರಾಗಿದ್ದು, ಹೊಸದಾಗಿ ಉಗಮವಾದ ವರ್ತಕ ವರ್ಗಕ್ಕೆ ಖಚಿತವಾದ ಉಜ್ವಲ ಪ್ರತಿನಿಧಿಗಳಾಗಿದ್ದಾರೆ. ಕರ್ನಾಟಕದ ಜೀವನಾಡಿಯಂತಿದ್ದ ಒಂದು ಕ್ಷೇತ್ರದಿಂದ ಅವರು ತಮ್ಮ ವಾಣಿಜ್ಯ ಉತ್ಕರ್ಷವನ್ನು ಆರಂಭಿಸಿದ್ದರು. ಆದ್ದರಿಂದಲೇ ಬ್ರಿಟಿಷ್ ವಸಾಹತುಶಾಹಿಗಳು ತಾವು ಗೆದ್ದ ಪ್ರಥಮದಲ್ಲೇ ಈ ವರ್ಗವನ್ನು ಹಾನಿಗೊಳಿಸಿ ಪತನಗೊಳಿಸಲು ಕ್ರಮ ಕೈಗೊಂಡರು. ಯಾಕೆಂದರೆ, ಈ ವರ್ತಕ ಸಮುದಾಯವು ಬ್ರಿಟಿಷ್ ವಹಾಹತುಶಾಹಿಯೊಂದಿಗೆ ಹೊಂದಿದ್ದ ವೈರುಧ್ಯ ತಕ್ಷಣದ್ದು ಹಾಗೂ ನೇರವಾದದ್ದು. ಈ ವರ್ಗದ ನಿಜವಾದ ಪ್ರತಿನಿಧಿಗಳಾಗಿದ್ದ ಹೈದರ್ ಮತ್ತು ಟೀಪು, ಇನ್ನೂ ಕರ್ನಾಟಕದ ರಾಷ್ಟ್ರೀಯ ಮಾರುಕಟ್ಟೆಯ ಮೇಲೆ ತನ್ನ ಹಿಡಿತದ ಮುದ್ರೆಯನ್ನೊತ್ತಲು ಸಂಘರ್ಷಿಸುತ್ತಿದ್ದ ಈ ವರ್ಗದ ಚಲನಶೀಲತೆಯನ್ನು ಮತ್ತು ಗುರಿಯನ್ನು ಬಹಳ ಚೆನ್ನಾಗಿ ಗ್ರಹಿಸಬಲ್ಲವರಾಗಿದ್ದರು. ಅವರು ಹೋರಾಡಿದ್ದು ಈ ಬಣಜಿಗ ವರ್ತಕ ಸಮುದಾಯದ ಕಾರಣಗಳಿಗಾಗಿ ಮಾತ್ರವಲ್ಲ, ಬ್ರಿಟಿಷ್ ವಸಾಹತುಶಾಹಿಗಳೊಂದಿಗೆ ಅವರ ಹೋರಾಟ ಏರ್ಪಟ್ಟಿದ್ದು, ಅದು ತಾವು ಪ್ರತಿನಿಧಿಸುತ್ತಿರುವ ಸಮಸ್ತ ಜನವರ್ಗದ ಜೀವನದ ಪ್ರಶ್ನೆಯಾಗಿದೆ ಎಂಬುದಕ್ಕಾಗಿ. ಟೀಪು ಪತನದ ನಂತರ ತಕ್ಷಣದಲ್ಲೇ ಈ ವರ್ತಕ ಸಮುದಾಯದ ಪ್ರಾಬಲ್ಯವು ನಶಿಸಿಹೋಗಿದ್ದು, ಇತಿಹಾಸದಲ್ಲಿ ರಾಜಕೀಯ ವ್ಯವಸ್ಥೆಯೊಂದು ಹೇಗೆ ತನ್ನ ಆರ್ಥಿಕ ತಳಹದಿಯೊಂದಿಗೆ ಸಂಬಂಧಪಟ್ಟುಕೊಂಡಿತ್ತು ಎಂಬುದನ್ನು ಸೂಚಿಸುತ್ತದೆ''.[18]

ಇದು ಕೇವಲ ರಾಜಕೀಯ ಮತ್ತು ಅರ್ಥ ವ್ಯವಸ್ಥೆಗೆ ಮಾತ್ರ ಸಂಬಂಧಪಟ್ಟ ವಿಷಯವಾಗಿರದೆ, ಅವೆರಡರ ಸಾರಾಂಶದ ಸಾಮಾಜಿಕ ಸಂಬಂಧಗಳನ್ನೂ ಆವರಿಸಿಕೊಂಡಿರುತ್ತದೆ. ಸಮಾಜವೊಂದರಲ್ಲಿ ಬರುವ ಆರ್ಥಿಕ ಮುನ್ನಡೆಗಳು ಆ ಸಮಾಜದ ವರ್ಗವಿನ್ಯಾಸದಲ್ಲಿ ಹಲವಾರು ಬಗೆಯ ಪ್ರಕ್ರಿಯೆಗಳನ್ನು ಉಂಟು ಮಾಡುತ್ತವೆ. ಈ ಪ್ರಕ್ರಿಯೆಗಳ ಮುಖ್ಯಾಂಶಗಳನ್ನು ೧೮ನೇ ಶತಮಾನದ ಕೊನೆಯ ಭಾಗಕ್ಕೆ ಸಂಬಂಧಿಸಿದಂತೆ ನಾವು ಕೆಲವು ವಿವರಗಳೊಂದಿಗೆ ನೋಡಬಹುದು.

ಕರ್ನಾಟಕದ ಜಾತಿ ಸಮುದಾಯದೊಳಗೆ ಸರಕು ಉತ್ಪಾದನೆಯ ಹೆಚ್ಚಳ ವೆಂಬುದು, ಮೊದಲನೆಯದಾಗಿ, ಜಾತಿ ಜಾತಿಗಳ ನಡುವೆ ಕೆಲವು ವಿಭಜನೆಗಳನ್ನು ಸೃಷ್ಟಿಸಿತು. ಎರಡನೆಯದಾಗಿ, ಹಲವು ಜಾತಿಗಳ ಸದಸ್ಯರನ್ನು ಒಟ್ಟಿಗೆ ತರಲು ಕಾರಣವಾಯಿತಲ್ಲದೆ, ಅದರ ಇನ್ನೂ ಮುಂದುವರಿದ ಹಂತಗಳಲ್ಲಿ, ಅಂತಹ ಹಲವು ಜಾತಿಗಳನ್ನು ಒಂದು ಜಾತಿಯನ್ನಾಗಿ ರೂಪಿಸುವ ಐಕ್ಯತೆಯ ಪರಿಸ್ಥಿತಿಗಳನ್ನು ನಿರ್ಮಿಸಿತು.

ಥರ್‌ಸ್ಟನ್ ನಮಗೆ ಗೆಜ್ಜೆಗಾರ ಎಂಬ ಉಪಜಾತಿಯೊಂದರ ಆವಿರ್ಭಾವವನ್ನು ಸೂಚಿಸುತ್ತಾರೆ. ಅದು ಪಾಂಚಾಳ ಜಾತಿಗಳಿಂದ ಉದಯಿಸಿದ್ದಾಗಿದ್ದು ಗೆಜ್ಜೆಗಳನ್ನು ಮಾಡುವ ಕೆಲಸದಲ್ಲಿ ವಿಶೇಷ ಪರಿಣತಿ ಹೊಂದಿತ್ತು.

ಬುಕಾನನ್ ನೀಲಿಗ ಎಂಬ ಬಟ್ಟೆಗಳಿಗೆ ಬಣ್ಣ ಮಾಡುವ ಕಸುಬನ್ನೇ ಪರಿಣತಿ ಮಾಡಿಕೊಂಡಿದ್ದ ಉಪಜಾತಿಯ ಆವಿರ್ಭಾವವನ್ನು ಸೂಚಿಸುತ್ತಾರೆ. ಇವರು ಕುಂಬಾರರ ಜಾತಿಗೆ ಸೇರಿದವರಾಗಿದ್ದು, ಈಗ ನೀಲಿಗಾರ ಎಂಬ ಉಪಜಾತಿಯಾಗಿ ಪರಿಣಮಿಸಿದರು. ಅದೇ ರೀತಿಯಲ್ಲಿ ತಿಗಳ ಜಾತಿಗೆ ಸೇರಿದ್ದ ಸಮುದಾಯವೊಂದು, ಗೋಣಿನಾರಿನ ಕೆಲಸದಲ್ಲೇ ಹೆಚ್ಚು ಪರಿಣಿತಿ ಹೊಂದಿದ್ದು, ಗೋಣಿಗ ಎಂಬ ಉಪಜಾತಿಯಾಗಿ ರಚಿತವಾಗಿದ್ದನ್ನು ಗಮನಿಸಬಹುದು.

ಈ ಬಗೆಯ ವಿಭಾಗೀಕರಣ ಊಳಿಗಮಾನ್ಯತೆಯ ಕೆಳಹಂತದಲ್ಲಿದ್ದ ಜಾತಿಗಳ ವಿಷಯದಲ್ಲೂ ನಾವು ಗಮನಿಸಬಹುದಾಗಿದೆ.

ಹೊಲೆಯರು ಕೃಷಿಯಲ್ಲಿ ಜೀತಕ್ಕಿದ್ದ ಜನರಾಗಿದ್ದರು. ಇವರಲ್ಲಿ ಗಣನೀಯ ಸಂಖ್ಯೆಯ ಜನ, ಸರಕು ಉತ್ಪಾದನೆಯ ಬೆಳವಣಿಗೆಯೊಂದಿಗೆ ಕೃಷಿ ಕೂಲಿಕಾರರಾಗಿ ಮಾರ್ಪಟ್ಟರು. ಅಲ್ಲದೆ ಸಣ್ಣಪುಟ್ಟ ವ್ಯಾಪಾರಗಳಲ್ಲೂ ತೊಡಗಿಕೊಂಡರು. ಸುಣ್ಣ ವ್ಯಾಪಾರದಲ್ಲಿ, ನಾರಿನ ಹಗ್ಗಗಳನ್ನು ಮಾಡುವುದರಲ್ಲಿ ಅವರು ನಿರತರಾದರು. ತೋಟಿ ಹಾಗೂ ನೀರುಗಂಟಿಗಳಾಗಿಯೂ ಅವರು ರೂಪುಗೊಂಡರು. ಅವರಲ್ಲಿ ಒಂದು ವರ್ಗ, ಖೋರಾ ಹತ್ತಿಬಟ್ಟೆಗಳನ್ನು ಗ್ರಾಮೀಣ ಬಡವರಿಗಾಗಿ ತಯಾರಿಸುವ ಕೆಲಸಕ್ಕಿಳಿದು, ಒಂದು ಉಪಜಾತಿಯಾಗಿ ರೂಪುಗೊಂಡಿತು. ಅದೇ ರೀತಿಯಲ್ಲಿ ಒಡ್ಡರು ಕಾಲುವೆ ಕೆರೆಗಳನ್ನು ತೋಡುವುದು, ರಸ್ತೆಗಳನ್ನು ಮಾಡುವುದು ಮುಂತಾದ ಉದ್ಯೋಗಗಳಲ್ಲದೆ, ಉಪ್ಪು ಮತ್ತು ಧಾನ್ಯಗಳ ವ್ಯಾಪಾರದಲ್ಲೂ ತೊಡಗಿ ಹೊಸ

ಉಪಜಾತಿಯಾಗಿ ರಚಿತಗೊಂಡರು. ಈ ಕೆಲವು ಉದಾಹರಣೆಗಳು, ಬೆಳೆಯುತ್ತಿದ್ದ ಸರಕು ಉತ್ಪಾದನೆಯು ಹಳೆಯ ಊಳಿಗಮಾನ್ಯ ಜಾತಿಗಳನ್ನು, ಉದ್ಯೋಗಾಧಾರಿತವಾಗಿ ಹೇಗೆ ವಿಭಾಗೀಕರಣಕ್ಕೆ ಗುರಿಮಾಡುತ್ತಿತ್ತು ಎಂಬುದನ್ನು ಸೂಚಿಸುತ್ತದೆ.

ಇನ್ನೊಂದು ಬಗೆಯ ಪ್ರಕ್ರಿಯೆಯೆಂದರೆ, ಹೊಸ ಜಾತಿಗಳಾಗಿ ರೂಪುಗೊಳ್ಳುವ ಐಕ್ಯತೆಯ ಪ್ರಕ್ರಿಯೆ ; ಇದು ಪ್ರಮುಖವಾಗಿ ಸರಕು ಉತ್ಪಾದನೆಯ ಮುಂದುವರೆದ ಹಂತಗಳಿಗೆ ಸೇರಿದ್ದುದಾಗಿದೆ. ಬುಕಾನನ್ ಪಾಂಚಾಳರ ನಿದರ್ಶನವೊಂದನ್ನು ಒದಗಿಸುತ್ತಾರೆ: ''ಪಾಂಚಾಳರು ಎಂಬ ಹೆಸರು ಮುಸಲ್ಮಾನರಿಂದ ಫಾನ್‌ಸ್ಕಲ್ ಎಂಬುದಾಗಿ ಅಪಭ್ರಂಶಗೊಳಿಸಲ್ಪಟ್ಟಿತು. ಇವರಲ್ಲಿ ಬಗೆಬಗೆಯ ಲೋಹಗಳಿಗೆ ಸಂಬಂಧಪಟ್ಟ ಉಪಜಾತೀಕರಣವಿದ್ದುದು, ಸರಕು ಉತ್ಪಾದನೆ ಬೆಳೆದ ಹಾಗೆ ಆ ವಿಭೇದವು ನಶಿಸಿ, ಕಮ್ಮಾರ, ಬಡಗಿ, ಚಿನಿವಾರ, ತಾಮ್ರದ ಕೆಲಸಗಾರ ಮುಂತಾದವರೆಲ್ಲ , ತಮ್ಮ ತಮ್ಮ ನಡುವೆ ಬಯಸಿದರೆ ಯಾವುದೇ ಲೋಹವೃತ್ತಿಗೆ ಬದಲಾಗಬಹುದಾದಂತಹ ನಮ್ಯತೆಯನ್ನು ರೂಢಿಸಿಕೊಂಡರು. ಹಳೆಯ ಜಾತಿ ಕಟ್ಟುಪಾಡುಗಳಿಂದ ಹೊರಬಂದು ಒಂದೇ ಔದ್ಯೋಗಿಕ ಗುಂಪಾಗಿ ನೆಲೆಗೊಳ್ಳುವ ಪ್ರಕ್ರಿಯೆಯನ್ನು ಇದು ಸೂಚಿಸುತ್ತದೆ''.[19]

ಹಾಗೆಯೇ ಆ ಸಮಯದಲ್ಲಿ, ಬಂಡವಾಳಶಾಹಿ ಸಹಕಾರ ಹಾಗೂ ಬಂಡವಾಳಶಾಹಿ ಉತ್ಪಾದನೆಯ ಆರಂಭ, ಇವುಗಳೊಂದಿಗೆ ವ್ಯಾಪಾರೀ ಮತ್ತು ಕೈಗಾರಿಕಾ ಬಂಡವಾಳದ ನಡುವೆ ಹೆಚ್ಚುತ್ತಿದ್ದ ಐಕ್ಯತೆ, ಮುಂತಾದವು ಆಗಿನ ಸಮಾಜದಲ್ಲಿ ಜಾತಿಗಳ ಸಂರಚನೆಯಲ್ಲಿ ಹಲವಾರು ಬದಲಾವಣೆಗಳನ್ನು ತಂದವು.

೧೮ನೇ ಶತಮಾನದ ಉತ್ತರಾರ್ಧದಲ್ಲಿ ಪಟ್ಟಣಗಳೊಳಗೆ ಬ್ರಾಹ್ಮಣರ ಶಕ್ತಿ ಹಾಗೂ ಪ್ರಾಬಲ್ಯಗಳು ಇಳಿಮುಖವಾಗಿದ್ದನ್ನು ಸ್ಪಷ್ಟವಾಗಿ ಗಮನಿಸಬಹುದು. ಹೊಸಬಗೆಯ ಉತ್ಪಾದನಾ ಸಂಬಂಧಗಳನ್ನು ಪ್ರತಿನಿಧಿಸುತ್ತಿದ್ದ ಈ ನಗರ ಕೇಂದ್ರಗಳು, ಹಳೆಯ ಊಳಿಗಮಾನ್ಯ ಸಂಬಂಧಗಳ ಮತ್ತು ಜಾತಿವ್ಯವಸ್ಥೆಯ ಪ್ರತಿನಿಧಿಯಾಗಿದ್ದ ಬ್ರಾಹ್ಮಣರನ್ನು ಸ್ಥಾನಾಂತರಗೊಳಿಸಿದವು. ಹಾಗೆಯೇ ಗ್ರಾಮೀಣ ಜಮೀನುದಾರಿಕೆಯ ಪ್ರತಿನಿಧಿಗಳಂತಿದ್ದ ಒಕ್ಕಲಿಗರು ಮತ್ತು ಸಾಧು ಲಿಂಗಾಯಿತರು, ಪಟ್ಟಣಗಳ ವಿಷಯದಲ್ಲಿ ಯಾವ ಪ್ರಾಮುಖ್ಯತೆಯನ್ನೂ ಪಡೆದಿರಲಿಲ್ಲ. ಆವರೆಗೂ ಪಟ್ಟಣ ಮತ್ತು ಹಳ್ಳಿಗಳನ್ನು ಒಂದಾಗಿಟ್ಟುಕೊಂಡಿದ್ದ ಪಾಳೇಗಾರರ ವರ್ಗ, ತಮ್ಮ ಊಳಿಗಮಾನ್ಯ ನಾಯಕತ್ವದಿಂದ ನಿವಾರಿಸಲ್ಪಟ್ಟಿದ್ದರಿಂದ ಜಾತಿಗಳ ರಾಜಕೀಯ ಸಂಬಂಧದಲ್ಲಿ ವ್ಯತ್ಯಾಸ ಉಂಟಾಯಿತು.

ವರ್ತಕ ಬಂಡವಾಳದ ಬಣಜಿಗರು ಪಟ್ಟಣಗಳನ್ನು ಆಳತೊಡಗಿದರು. ಬಂಡವಾಳಶಾಹಿ ಉತ್ಪಾದನೆಯ ಹೊಸ ಹಂತಗಳು ನೆಲೆಮಾಡಿಕೊಂಡಿದ್ದ ಬೆಂಗಳೂರಿನಂತಹ ನಗರಗಳಲ್ಲಿ ಪಟ್ಟೇಗಾರ, ಖತ್ರಿ, ದೇವಾಂಗ, ಪದ್ಮಸಾಲಿ ಮತ್ತು ಸಾಮ್ಯಸಾಲಿಯಂತಹ ಕುಶಲಕರ್ಮಿ ಜಾತಿಗಳು, ಬಣಜಿಗರ ನಂತರದಲ್ಲಿ ಅದೇ

ಬಗೆಯ ಉತ್ಕರ್ಷದಲ್ಲಿದ್ದವು. ಈ ಬಂಡವಾಳದ ಒಡೆಯರಲ್ಲದೆ, ಮಳವಳ್ಳಿ ಮುಂತಾದ ಕಡೆಗಳಲ್ಲಿ ಶ್ರೀಮಂತ ಕಮ್ಮಾರರು, ತಾಮ್ರ ಕೆಲಸಗಾರರು, ಬೆಳ್ಳಿ ಕೆಲಸಗಾರರು ಮುಂತಾದವರು ಕೂಡ ಬಂಡವಾಳದ ಮಾಲೀಕರಾಗಿದ್ದರು.

''ಸುಮಾರು ೨೦ ಜಾತಿಗಳಿಂದ ಉದ್ಭವವಾಗಿದ್ದ ಈ ಬಗೆಯ ಹೊಸ ಬಂಡವಾಳದ ಮಾಲೀಕರು ಜವಳಿ, ಕಬ್ಬಿಣ ಮತ್ತು ಉಕ್ಕು, ತೈಲ, ಗಾಜು ಮುಂತಾದ ಕ್ಷೇತ್ರದಲ್ಲಿ ಬಂಡವಾಳವನ್ನು ಹೊಂದಿದ್ದು, ವರ್ತಕ ಜಾತಿಗಳ ಹಾಗೂ ಇತರೆ ಕುಶಲಕರ್ಮಿ ಜಾತಿಗಳ ಜೊತೆಗೆ, ಬಂಡವಾಳಶಾಹಿ ಉತ್ಪಾದನೆಯ ಹೊಸ ಸಂಬಂಧಗಳನ್ನು ಪ್ರತಿನಿಧಿಸತೊಡಗಿದ್ದರು. ಇವೆಲ್ಲದರಿಂದಾಗಿ ಬ್ರಾಹ್ಮಣರ ಆಧಿಪತ್ಯದ ತೀವ್ರ ಇಳಿಮುಖತೆಗೆ ಕಾರಣವಾಯಿತು''[20] ಎಂದು ಸಾಕಿ ಹೇಳುತ್ತಾರೆ. ಅಗಸರಂತಹ ಒಂದು ಜಾತಿ ಸಾಬೂನು ತಯಾರಿಕೆಯ ಕ್ಷೇತ್ರಕ್ಕಿಳಿದು, ತನ್ನ ಹಿಂದಿನ ಊಳಿಗಮಾನ್ಯ ಸಂಬಂಧಗಳಡಿಯಲ್ಲಿದ್ದ ಕೇವಲ ಬಟ್ಟೆ ಒಗೆಯುವ ಕಾಯಕದಿಂದ ಬದಲುಗೊಂಡು, ಬದಲಾದ ಪರಿಸ್ಥಿತಿಗಳಲ್ಲಿ ಉತ್ಪಾದಕ ಮಾರಾಟಗಾರ ಪಂಗಡವೂ ಆಗಿ ಮಾರ್ಪಟ್ಟ ನಿದರ್ಶನವನ್ನು ಬೆಂಜಮಿನ್ ಹೇಸ್ ನೀಡುತ್ತಾರೆ.[21]

ಈ ಬಗೆಯಲ್ಲಿ ಬಂಡವಾಳಶಾಹಿ ಸಂಬಂಧಗಳು, ಬಂಡವಾಳದ ಅಭಿವೃದ್ಧಿಯೊಂದಿಗೆ ಮುನ್ನಡೆಯುತ್ತಲೇ ಹೋಗಿದ್ದ ಪಕ್ಷದಲ್ಲಿ, ಜಾತಿಪದ್ಧತಿಗೆ ವಿರೋಧವಾಗಿದ್ದ ಕೆಳಜಾತಿಗಳು ಬಲಗೊಳ್ಳುತ್ತಾ ಸಾಗುತ್ತಿದ್ದವೆಂಬುದನ್ನು ನಾವು ಊಹಿಸಬಹುದಾಗಿದೆ.

ವಾಣಿಜ್ಯ ಸಂಬಂಧಗಳು ಹಾಗೂ ಸರಕು ಉತ್ಪಾದನೆ ಬೆಳೆಯುತ್ತಾ ಹೋದಂತೆ, ಎಷ್ಟೋ ಕೆಳಜಾತಿಗಳಿಂದ ಕೂಡ ವರ್ತಕರು ಉಗಮಿಸಿ ಬಲಗೊಂಡಿದ್ದನ್ನು ನಾವು ಕಾಣಬಹುದಾಗಿದೆ. ಮುಸ್ಲಿಂ ಲಾಡರು, ಪಕಾನತ್ ಜೋಗರು, ಇರುಳಿಗರು, ಲಂಬಾಣಿಗಳು ಇದರಲ್ಲಿ ಸೇರಿದ್ದರು. ಇವರಲ್ಲದೆ ಬುಕಾನನ್ ಕಂಬಳಿ ಕುರುಬರ ಬಗ್ಗೆ ಹೇಳುತ್ತಾರೆ. ಆ ಕಾಲದ ಪ್ರಧಾನ ವಾಣಿಜ್ಯದ ವಸ್ತುಗಳಲ್ಲೊಂದಾಗಿದ್ದ ಕಂಬಳಿ ಉತ್ಪಾದನೆ ಮತ್ತು ಮಾರಾಟದಿಂದ, ಕುರಿಗಳನ್ನು ಸಾಕುತ್ತಿದ್ದವರು ವಾಣಿಜ್ಯದ ಬಂಡವಾಳಿಗರಾಗಿ ಪರಿವರ್ತನೆಗೊಳ್ಳತೊಡಗಿದರು.

ಇದೇ ಸಮಯದಲ್ಲಿ ವೈಷ್ಣವ ಭಕ್ತಿಪಂಥದ ಪ್ರಭಾವವು, ಪಟ್ಟಣ ಕೇಂದ್ರಗಳಲ್ಲಿ ಪ್ರಬಲಗೊಂಡಿದ್ದುದನ್ನು ನಾವು ಕಾಣಬಹುದಾಗಿದೆ. ಬೆಂಗಳೂರಿನಂತಹ ನಗರದ ವಿಷಯದಲ್ಲಿ ಶೈವವಾದದ ಮೇಲೆ ವೈಷ್ಣವವಾದವು ಪ್ರಾಬಲ್ಯ ಗಳಿಸಿದುದನ್ನು ನಾವು ಗಮನಿಸಬಹುದಾಗಿದೆ. ವೀರಶೈವ ಹಿನ್ನೆಲೆಯಿಂದ ಬಂದಿದ್ದ ವರ್ತಕರ ಜಾತಿಗಳನ್ನು ಹೊರತುಪಡಿಸಿದರೆ, ಮಿಕ್ಕ ಸರಕು ಉತ್ಪಾದಕ ಹಾಗೂ ವರ್ತಕ ಜಾತಿಗಳು ವೈಷ್ಣವ ನೆಲೆಯಲ್ಲಿ ತಮ್ಮನ್ನು ಗುರುತಿಸಿಕೊಂಡವು.

ಈ ವೈಷ್ಣವ ಭಕ್ತಿ ಪಂಥವು, ನಗರಗಳಲ್ಲಿ ಬ್ರಾಹ್ಮಣರ ನಿಬಂಧನೆಗಳ ಮೇಲೆ ಪ್ರಚಲಿತಗೊಳ್ಳದೆ, ಶೂದ್ರಜಾತಿಗಳ ಆಶೋತ್ತರಗಳನ್ನು ಅನುಸರಿಸುತ್ತ ಪ್ರಾಬಲ್ಯಕ್ಕೆ

ಬಂದಿತು. ಎಲ್ಲಾ ರೀತಿಯಲ್ಲಿ, ಅರ್ಚಕ ವೃತ್ತಿಯೊಂದನ್ನು ಹೊರತು ಪಡಿಸಿ, ಈವರೆಗೆ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿದ್ದ ಎಷ್ಟೋ ಸಾಂಸ್ಕೃತಿಕ ಮೌಲ್ಯ ಹಾಗೂ ಸಂಕೇತಗಳನ್ನು ಈ ಅಬ್ರಾಹ್ಮಣ ಜಾತಿಗಳು ಗಳಿಸಿಕೊಂಡವು. ಅವರ ಜಾತಿ ಹೆಸರುಗಳಾಗಿದ್ದ ಜೇಡ ಅಥವಾ ಗಾಣಿಗ ಎಂಬುದನ್ನು ಸಂಸ್ಕೃತೀಕರಣಗೊಳಿಸಿ ಕೊಂಡು ದೇವಾಂಗ ಅಥವಾ ಜ್ಯೋತಿಪಣ ಎಂಬಂತಹ ಹೆಸರುಗಳಾಗಿ ಮಾರ್ಪಡಿಸಿಕೊಂಡವು. ಹಲವಾರು ಶೂದ್ರ ಜಾತಿಗಳು ತಮ್ಮ ಜಾತಿ ಪುರಾಣಗಳನ್ನು ರಚಿಸಿಕೊಂಡವಲ್ಲದೆ, ದೇವಾಂಗ ಜಾತಿಯವರಾದರೆ ತಮ್ಮನ್ನು ಇತಿಹಾಸದಲ್ಲಿ ಬ್ರಾಹ್ಮಣರೆಂದೇ ಕರೆದುಕೊಂಡರು.

ಈ ಎಲ್ಲಾ ಬಗೆಯ ಬದಲಾವಣೆಗಳು, ಆ ಜಾತಿಗಳ ನಡುವೆ ಉಂಟಾದ ಭೌತಿಕ ಸಂಪತ್ತಿನ ಬೆಳವಣಿಗೆ ಹಾಗೂ ಪಟ್ಟಣಗಳಲ್ಲಿ ಹೆಚ್ಚುತ್ತಿದ್ದ ಅವರ ರಾಜಕೀಯ ಅಂತಸ್ತಿನ ಹಿನ್ನೆಲೆಯಿಂದಾಗಿ ಉಂಟಾದವು ಎಂಬುದನ್ನು ನಾವು ಮರೆಯಬಾರದು.

ಈ ಹಿಂದೆ ಈಗಾಗಲೇ ಪ್ರಸ್ತಾಪಗೊಂಡಿದ್ದ ಎಡಗೈ ಹಾಗೂ ಬಲಗೈ ಜಾತಿ ಶ್ರೇಣಿಗಳ ಏಂಗಡೀಕರಣವು ಈ ಸಮಯದಲ್ಲಿ ಮುಂದುವರೆಯಿತು. ಬಲಗೈನ ವಾಣಿಜ್ಯ ಪಂಗಡಗಳಿಗೂ, ಎಡಗೈನ ಉತ್ಪಾದಕ ಪಂಗಡಗಳಿಗೂ, ಅಭಿವೃದ್ಧಿಗೊಂಡ ಸರಕು ಉತ್ಪಾದಕ ಸನ್ನಿವೇಶಗಳಲ್ಲಿ ವೈರುಧ್ಯಗಳು ಬಲಿಯುತ್ತಲೇ ಹೋದವು. ೧೮ನೇ ಶತಮಾನದ ಉತ್ತರಾರ್ಧದಲ್ಲಿ, ಈ ಎರಡೂ ವಿಭಾಗಗಳ ನಡುವಿನೊಳಗಿನ ವೈರುಧ್ಯಗಳು ಅತ್ಯಂತ ತೀವ್ರ ಹಾಗೂ ಉಗ್ರ ಸ್ವರೂಪಕ್ಕೆ ತಲುಪಿದವು. ಈ ಅವಧಿಯಲ್ಲಿ ವರ್ತಕ ಬಂಡವಾಳವು 'ಪುಟಿಂಗ್ ಔಟ್' ವ್ಯವಸ್ಥೆಯೊಂದಿಗೆ ಕ್ರಮೇಣ ಕೈಗಾರಿಕಾ ಬಂಡವಾಳವಾಗಿ ಮಾರ್ಪಡುತ್ತಿದ್ದುದರಿಂದ , ಆವರೆಗೆ ಮುಂದಾಳತ್ವದಲ್ಲಿದ್ದ ಎಡಗೈ ಜಾತಿಗಳನ್ನು ಸ್ಥಾನಾಂತರಿಸಿ ಬಲಗೈ ನಾಯಕರು ಮುಂದಕ್ಕೆ ಬಂದದ್ದು ಕೂಡ, ಈ ಬಗೆಯ ಸಂಘರ್ಷದ ಉತ್ಕರ್ಷಕ್ಕೆ ಕಾರಣವಾಗಿತ್ತು.

೧೨ನೇ ಶತಮಾನದಿಂದ ಆರಂಭವಾಗಿದ್ದ ಜಾತಿಗಳು ತಮ್ಮ ಹಳೆಯ ಕವಚಗಳನ್ನು ಕಳೆದುಕೊಳ್ಳುವ ಪ್ರಕ್ರಿಯೆಯು, ತಮ್ಮ ಸಮುದಾಯದ ಸದಸ್ಯರು ಹೊಸ ಹೊಸ ವೃತ್ತಿಗಳಲ್ಲಿ, ಅದರಿಂದ ಏರ್ಪಡುವ ಹೊಸ ಬಗೆಯ ಸಾಮಾಜಿಕ ಸಂಬಂಧಗಳಲ್ಲಿ ತೊಡಗಿಸಿಕೊಳ್ಳತೊಡಗಿದ್ದುದರಿಂದ , ಅದನ್ನು ಮತ್ತಷ್ಟು ತೀವ್ರ ಗೊಳಿಸಿಕೊಂಡವು. ಎಡಗೈ ಮತ್ತು ಬಲಗೈ ಜಾತಿ ಶ್ರೇಣಿಗಳ ಒಕ್ಕೂಟವು ಹಳೆಯ ಜಾತಿ ಪದ್ಧತಿಯ ಮುಂದುವರಿಕೆಯಾಗದೆ, ಅದು ಆ ಬಗೆಯ ಸಂಬಂಧಗಳಲ್ಲಿ ಒಂದು ವಿಸ್ತಾರ ತಳಹದಿಯನ್ನು, ಆ ಮೂಲಕ ಹಳೆಯ ಜಾತಿ ಸೀಮಿತತೆಗಳ ಮುರಿಯುವಿಕೆಯನ್ನು ಹಾಗೂ ಒಂದು ಪರಿವರ್ತನೆಯನ್ನೂ ಸೂಚಿಸುತ್ತಿದೆ.

ಇದೇ ಬಗೆಯಲ್ಲಿ ಹೈದರ್ ಮತ್ತು ಟೀಪುವಿನ ಪ್ರಭುತ್ವದಲ್ಲಿ ಚಾಲ್ತಿಯಲ್ಲಿದ್ದ ಇಸ್ಲಾಂ ಧರ್ಮದ ಮೌಲ್ಯಗಳು , ಬಹಳಷ್ಟು ಕೆಳಜಾತಿಗಳಿಗೆ ಅಧಿಕಾರಶಾಹಿ ವಲಯದಲ್ಲಿ ಹೊಸ ಸ್ಥಾನಮಾನಗಳನ್ನು ಪಡೆದುಕೊಳ್ಳುವ ಅವಕಾಶಗಳನ್ನು

ಕಲ್ಪಿಸಿದವು. ಈ ಬಗೆಯಲ್ಲಿ ಏರ್ಪಟ್ಟ ಹಲವು ಸನ್ನಿವೇಶಗಳಿಂದ, ಈ ಅವಧಿಯಲ್ಲಿ, ಒಂದು ಬಲಿಷ್ಠ ಮಾರುಕಟ್ಟೆಯೂ ಮತ್ತು ಅದರ ಆಧಾರದಲ್ಲಿ ಕನ್ನಡ ರಾಷ್ಟ್ರೀಯತೆಯ ಎಚ್ಚರಗೊಳ್ಳುವಿಕೆಯ ಪೂರ್ವ ಪ್ರಕ್ರಿಯೆಯೂ ಮೂಡಿಬಂದವು.

ಅಡಿಟಿಪ್ಪಣಿ

1. ಪ್ರೊ. ಬಿ. ಷೇಕ್ ಅಲಿ - ಸಂಪುಟ ಸಂಪಾದಕರ ಮಾತು, ಕರ್ನಾಟಕ ಚರಿತ್ರೆ, ಸಂ. ೫
2. ಅದೇ
3. ಅದೇ.
4. ಲೆಫ್ಟಿನೆಂಟ್ ಮೂರ್, ಉಲ್ಲೇಖಿತ, ಪ್ರೊ. ಬಿ. ಷೇಕ್ ಅಲಿ- ಕರ್ನಾಟಕ ಚರಿತ್ರೆ, ಸಂ. ೫, ಪು. ೪೨೮.
5. ಥಾಮಸ್ ಮನ್ರೋ, ಉಲ್ಲೇಖಿತ, ಪ್ರೊ. ಬಿ. ಷೇಕ್ ಅಲಿ ಕರ್ನಾಟಕ ಚರಿತ್ರೆ, ಸಂ. ೫, ಪು. ೪೫೧.
6. ಪ್ರೊ. ಬಿ. ಷೇಕ್ ಅಲಿ- ಕರ್ನಾಟಕ ಚರಿತ್ರೆ, ಸಂ. ೫, ಪು. ೪೫೫.
7. A.I. Chicherov, ಉಲ್ಲೇಖಿತ, ಅದೇ ಪು. ೪೬೧.
8. ಪ್ರೊ. ಬಿ. ಷೇಕ್ ಅಲಿ, ಅದೇ ಪು. ೪೬೧.
9. ಪ್ರೊ. ಬಿ. ಷೇಕ್ ಅಲಿ, ಅದೇ ಪು. ೪೬೧, ೪೬೨.
10. ಅದೇ, ಪು. ೪೬೨-೪೬೩.
11. ಪ್ರೊ. ಬಿ. ಷೇಕ್ ಅಲಿ, ಅದೇ ಪು. ೪೬೩.
12. ಅಶೋಕ್ ಸೇನ್, ಉಲ್ಲೇಖಿತ, ಪ್ರೊ. ಬಿ. ಷೇಕ್ ಅಲಿ - ಕರ್ನಾಟಕ ಚರಿತ್ರೆ, ಸಂ. ೫, ಪು. ೪೬೪.
13. A.I. Chicherov, ಉಲ್ಲೇಖಿತ, ಪ್ರೊ. ಬಿ. ಷೇಕ್ ಅಲಿ - ಕರ್ನಾಟಕ ಚರಿತ್ರೆ, ಸಂ. ೫, ಪು. ೪೮೦-೪೮೧.
14. ಪ್ರೊ. ಬಿ. ಷೇಕ್ ಅಲಿ, ಅದೇ, ಪು. ೪೮೧.
15. ಅದೇ ಪು. ೪೮೩.
16. ಪ್ರೊ. ಬಿ. ಷೇಕ್ ಅಲಿ, ಅದೇ, ಪು. ೪೮೫-೪೮೬.
17. SAKI- Making History, Vol. 1, ಪು. ೪೬೨-೪೬೩.
18. ಅದೇ, ಪು. ೪೬೩
19. ಅದೇ, ಪು. ೫೨೩
20. ಅದೇ, ಪು. ೫೨೪
21. ಅದೇ ಪು. ೫೨೪.

✤ ✤ ✤ ✤

ಅಧ್ಯಾಯ -೭

ಸ್ಥಳೀಯ ಮಾರುಕಟ್ಟೆಯ ರಚನೆ :

ಕರ್ನಾಟಕತ್ವದ ತಳಹದಿ ನಿರ್ಮಾಣ

೧೮ನೇ ಶತಮಾನದ ಪೂರ್ವಾರ್ಧದಲ್ಲಿ, ಈ ಹಿಂದೆ ನಾವು ವಿವರಿಸಿದ ಎಲ್ಲ ಬೆಳವಣಿಗೆಗಳಿಂದ, ಕರ್ನಾಟಕದ ಭೌಗೋಳಿಕ ಪ್ರದೇಶದೊಳಗೆ ಕೃಷಿ ಮತ್ತು ಕೈಗಾರಿಕೆಗಳಲ್ಲಿ ಒಂದು ಪ್ರಾಂತೀಯ ಶ್ರಮವಿಭಜನೆಗೆ ಸನ್ನಿವೇಶ ನಿರ್ಮಾಣವಾಗಿ, ಆದರಿಂದ ಸ್ಥಳೀಯ ಮಾರುಕಟ್ಟೆಯೊಂದು ಸೃಷ್ಟಿಯಾಗಿ, ಆ ಮೂಲಕ ಕನ್ನಡ ರಾಷ್ಟ್ರೀಯತೆಯ ಆವಿರ್ಭಾವಕ್ಕೆ ತಳಹದಿ ನಿರ್ಮಾಣವಾಯಿತು ಎಂದು ಸಾಕಿ ಹೇಳುತ್ತಾರೆ.[1]

ಈ ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿದ ಹಾಗೆ, ಕರ್ನಾಟಕದ ವಿವಿಧ ಜಿಲ್ಲೆಗಳ ನಡುವೆ ಅವುಗಳ ಭೌಗೋಳಿಕ ಹಾಗೂ ವಾತಾವರಣದ ಕಾರಣದಿಂದ ಏರ್ಪಟ್ಟಿದ್ದ ಬೆಳೆಗಳ ವೈವಿಧ್ಯತೆಯು, ಸರಕು ಉತ್ಪಾದನೆಯ ಹೆಚ್ಚಳದೊಂದಿಗೆ, ಕೃಷಿಯೊಳಗೆ ಬಂಡವಾಳಶಾಹಿ ಸಂಬಂಧಗಳನ್ನು ಪ್ರವೇಶಮಾಡುವಂತೆ ಮಾಡಿತು. ಈ ಬಂಡವಾಳಶಾಹಿ ಸಂಬಂಧಗಳು, ಭೌಗೋಳಿಕ ವೈವಿಧ್ಯತೆಯನ್ನು ಸರಕು ಉತ್ಪಾದನೆಯ ವಿಶಿಷ್ಟೀಕರಣವನ್ನಾಗಿ ಮಾರ್ಪಡಿಸಿದವು. ಪ್ರಾಂತೀಯ ಶ್ರಮವಿಭಜನೆಯೆನ್ನುವುದು, ಈ ಪ್ರಾಂತ್ಯಗಳ ನಡುವೆ ಪರಸ್ಪರ ಅವಲಂಬನೆಯನ್ನು, ಆ ಮೂಲಕ ಹುಟ್ಟುವ ಸಾಮಾಜಿಕ ಸಂಪರ್ಕವನ್ನು, ಆರ್ಥಿಕತೆಯ ಏಕೀಕರಣವನ್ನು ಆಗು ಮಾಡುವ ಪ್ರಕ್ರಿಯೆಯನ್ನು ಮೊದಲಿಟ್ಟಿತು.

ಕೃಷಿಯಲ್ಲದೆ, ಈ ಅವಧಿಯ ಕೈಗಾರಿಕೆಗಳಲ್ಲೂ ಜಿಲ್ಲಾವಾರು ಶ್ರಮವಿಭಜನೆ ಏರ್ಪಟ್ಟು, ಆರ್ಥಿಕ ಸಂಬಂಧಗಳ ಏಕೀಕರಣ ಉಂಟಾಗಲು ಕಾರಣವಾಯಿತು.

ಕೈಗಾರಿಕಾ ಉತ್ಪಾದನೆಯ ಪ್ರಾಂತೀಯ ಶ್ರಮವಿಭಜನೆ, ಆ ಅವಧಿಯ ಮೈಸೂರು ಸಾಮ್ರಾಜ್ಯದಲ್ಲಿ ಈ ಕೆಳಕಂಡಂತಿತ್ತು :

ದಕ್ಷಿಣಕನ್ನಡ ಮತ್ತು ಉತ್ತರ ಕನ್ನಡ - ಉಪ್ಪು ಮತ್ತು ಹಡಗು ನಿರ್ಮಾಣ.

ಮೈಸೂರು - ಕಬ್ಬಿಣ ಮತ್ತು ಉಕ್ಕು.

ಮಂಡ್ಯ - ಶಸ್ತ್ರಾಸ್ತ್ರಗಳು, ಹಗ್ಗ ತಯಾರಿಕೆ, ಸಕ್ಕರೆ ಮತ್ತು ಬೆಲ್ಲ.

ಬೆಂಗಳೂರು - ಶಸ್ತ್ರಾಸ್ತ್ರಗಳು, ನೇಕಾರಿಕೆ, ಬಟ್ಟೆ, ಬಣ್ಣ ಮಾಡುವುದು, ತೈಲ ತಯಾರಿಕೆ, ನೀಲಿ ಬಣ್ಣ ತಯಾರಿಕೆ, ಗೋಣಿಚೀಲ ತಯಾರಿಕೆ, ಕಬ್ಬಿಣ ಮತ್ತು ಉಕ್ಕು ಹಾಗೂ ಔಷಧಿಗಳು.

ಚಿತ್ರದುರ್ಗ - ಕಂಬಳಿ, ಕಬ್ಬಿಣ ಮತ್ತು ಉಕ್ಕು, ಸಾಬೂನುಗಳು.

ಬಳ್ಳಾರಿ, ಧಾರವಾಡ, ರಾಯಚೂರು ಮತ್ತು ಬಿಜಾಪುರ - ಕಂಬಳಿಗಳು ಮತ್ತು ಹತ್ತಿ ನೂಲು.

ಮೇಲ್ಕಂಡ ಬೆಳವಣಿಗೆಗಳಲ್ಲದೆ, ಈ ಅವಧಿಯಲ್ಲಿ ಕೃಷಿ ಮತ್ತು ಕೈಗಾರಿಕೆಗಳ ನಡುವೆ ಒಂದು ಸಾವಯವ ಅಂತರ್‌ಸಂಬಂಧ ಉಂಟಾದುದನ್ನು ನಾವು ಗಮನಿಸಬೇಕು. ಉದಾ. ಹತ್ತಿ ಬೆಳೆಯುವುದು ಜವಳಿ ಕ್ಷೇತ್ರಕ್ಕೆ ನೇರವಾಗಿ ಸಂಬಂಧಿತವಾಗಿದ್ದುದರಿಂದ, ನೂಲು ತೆಗೆಯುವ ಮತ್ತು ನೇಕಾರಿಕೆಯ ಕೈಗಾರಿಕೆಗಳಿಂದ ಹತ್ತಿ ಬೆಳೆಯುವಿಕೆಯು ಪ್ರೋತ್ಸಾಹಿಸಲ್ಪಟ್ಟಿತು. ಬಣ್ಣ ಹಾಕುವ ಕೈಗಾರಿಕೆಯ ಅಗತ್ಯಗಳು ಹೆಚ್ಚಿದಂತೆಲ್ಲ, ಎಣ್ಣೆಕಾಳುಗಳ ಮತ್ತು ತೆಂಗಿನಕಾಯಿಯ ಬೆಳೆಯುವಿಕೆ ಪ್ರೋತ್ಸಾಹಿಸಲ್ಪಟ್ಟಿತು. ಸಕ್ಕರೆ ಮತ್ತು ಬೆಲ್ಲಗಳ ತಯಾರಕರಿಂದ ಕಬ್ಬು ಬೆಳೆಯುವಿಕೆಯೂ, ಕಂಬಳಿ ತಯಾರಕರಿಂದ ಹುಣಿಸೆಮರ ನೆಡುವಿಕೆಗೂ ಪ್ರೋತ್ಸಾಹ ದೊರೆಯಿತು.

ಆದರೆ, ಕೈಗಾರಿಕಾ ಮತ್ತು ಉತ್ಪನ್ನಗಳು ಹಿಂತಿರುಗಿ ಕೃಷಿಕ್ಷೇತ್ರ ಪ್ರವೇಶಿಸುವುದು ಆಗಿನ್ನೂ ಶುರುವಾಗತೊಡಗಿತ್ತು. ಯಾಕೆಂದರೆ ಕೃಷಿಯೊಳಗಡೆ ಬಂಡವಾಳಶಾಹಿ ಸಂಬಂಧಗಳು ಆಗ ತಾನೇ ಉಗಮವಾಗತೊಡಗಿದ್ದವು.

ಕೈಗಾರಿಕೆ ಮತ್ತು ಕೃಷಿಗಳ ನಡುವೆ, ಕರ್ನಾಟಕದಲ್ಲಿ ಈ ಅವಧಿಯಲ್ಲಿ ಏರ್ಪಟ್ಟ ಅಂತರ್‌ಸಂಬಂಧೀಕರಣ, ಅದರೊಳಗಡೆ ಬಂದ ಹಣಕಾಸಿನ ಚಲಾವಣೆಯಿಂದ ಕೃಷಿಯು ವಾಣಿಜ್ಯೀಕರಣಗೊಳ್ಳುವುದನ್ನು, ಅದರಿಂದ ಶ್ರೀಮಂತ ರೈತವರ್ಗವೊಂದು ಸೃಷ್ಟಿಯಾಗಿ, ಅವರ ಮೂಲಕ ಜವಳಿ, ಬೆಲ್ಲ ಮತ್ತು ಕಬ್ಬಿಣ ಕೈಗಾರಿಕೆಗಳಿಗೆ ಒಂದಷ್ಟು ಮಾರುಕಟ್ಟೆಯನ್ನು ಸೃಷ್ಟಿಸಿತು. ಈ ಬೆಳವಣಿಗೆಗಳು, ಸ್ಥಳೀಯ ಮಾರುಕಟ್ಟೆಯ ಮೇಲೆ ವರ್ತಕ ವರ್ಗಕ್ಕೆ ಹೆಚ್ಚಿನ ಆಸಕ್ತಿಯನ್ನುಂಟುಮಾಡಿ, ಅದನ್ನು ತನ್ನ ಬಳಕೆಗೆ ಉಳಿಸಿಕೊಳ್ಳುವ ಪ್ರವೃತ್ತಿಯೊಂದಕ್ಕೆ ಅಂದರೆ ರಾಷ್ಟ್ರೀಯತ್ವದ ಆರಂಭಿಕ ಮಾನಸಿಕ ತಳಹದಿ ರಚನೆಗೆ ಎಡೆಮಾಡಿಕೊಟ್ಟವು.

ಬ್ರಿಟಿಷ್ ವಿರೋಧಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ಅಚಂಚಲ ದೇಶಪ್ರೇಮಕ್ಕೆ, ಈ ಸ್ಥಳೀಯ ಮಾರುಕಟ್ಟೆಯ ಪ್ರಶ್ನೆ ಅವಿನಾಭಾವ ಸಂಬಂಧ

ಹೊಂದಿದೆ. ಈ ಸ್ಥಳೀಯ ಮಾರುಕಟ್ಟೆಯನ್ನು ಕಾಪಾಡಿಕೊಳ್ಳುವುದು ಮತ್ತು ವಿಸ್ತರಿಸಿಕೊಳ್ಳುವುದು ಅವರ ವಸಾಹತುಶಾಹಿ ವಿರೋಧಿ ದೇಶಭಕ್ತಿಗೆ ಭದ್ರ ಅಡಿಗಲ್ಲಾಗಿತ್ತು. ವಾಣಿಜ್ಯ ಬಂಡವಾಳದಿಂದ ಉತ್ಪಾದನೆಯ ವಿವಿಧ ರಂಗಗಳಲ್ಲಿ ಏರ್ಪಟ್ಟ ಸಂಯೋಜನೆಯು, ವಿಶಿಷ್ಟೀಕರಣದ ಅಂಶಗಳನ್ನು ಪ್ರದರ್ಶಿಸಲು ಆರಂಭಿಸಿದ್ದು, ಕರ್ನಾಟಕತ್ವದ ಉದಯವನ್ನು ಸಾಕಷ್ಟು ಭದ್ರ ತಳಪಾಯದ ಮೇಲೆ ನಿಲ್ಲಿಸಿತ್ತು. ಸಾಕಿ ಹೇಳುವ ಹಾಗೆ ''ಈ ಅವಧಿಯಿಂದ ಮುಂದಕ್ಕೆ ಯಾವೊಂದು ಭೌಗೋಳಿಕ ಬಿಡಿಭಾಗವೂ ಕರ್ನಾಟಕದಲ್ಲಿ ಪ್ರತ್ಯೇಕ ಅಸ್ತಿತ್ವವನ್ನು ಉಳಿಸಿ ಕೊಳ್ಳುವುದು ಸಾಧ್ಯವಿಲ್ಲ. ಹಾಗೇನಾದರೂ ಪ್ರತ್ಯೇಕ ಅಸ್ತಿತ್ವ ಸಾಧ್ಯವಾಗಬೇಕಾದರೆ, ಕೆಲವು ಶತಮಾನಗಳಿಂದ ಉಂಟಾಗುತ್ತಾ ಬಂದಿದ್ದ ಚಾರಿತ್ರಿಕ ಪ್ರಕ್ರಿಯೆಯನ್ನು ತಲೆಕೆಳಗು ಮಾಡುವ ಕಷ್ಟಕ್ಕೆ ಗುರಿಯಾಗಬೇಕಾಗುತ್ತದೆ''.[2]

ಟೀಪುವಿನ ಮೈಸೂರು ರಾಜ್ಯವು, ಇಂದಿನ ಕರ್ನಾಟಕದ ಗಡಿರೇಖೆಗಳೊಂದಿಗೆ ಪೂರ್ತಿಯಾಗಿ ಹೊಂದಿಕೊಳ್ಳದಿದ್ದರೂ, ಆಧುನಿಕ ಕರ್ನಾಟಕದ ಬಹುಭಾಗವನ್ನು, ಅದರೆಲ್ಲಾ ಮುಖ್ಯಭಾಗಗಳನ್ನು, ಅದರ ನಾಡಿಕೇಂದ್ರವಾದ ಬೆಂಗಳೂರನ್ನು ಒಳಗೊಂಡಿತ್ತು. ಕೈಗಾರಿಕಾ ಕೇಂದ್ರವಾಗಿದ್ದ ಬೆಂಗಳೂರಿನ ಸಮೀಪದಲ್ಲಿ, ಅದರ ರಾಜಕೀಯ ಕೇಂದ್ರವಾದ ಶ್ರೀರಂಗಪಟ್ಟಣವಿದ್ದ ಅಂಶವು, ಸ್ಥಳೀಯ ಮಾರುಕಟ್ಟೆಯ ಸದೃಢೀಕರಣಕ್ಕೆ ಬಹಳಷ್ಟು ನೆರವಾಯಿತು. ಈಗಾಗಲೇ ಹೇಳಿರುವಂತೆ ೧೮ನೇ ಶತಮಾನದ ಮೈಸೂರು ಸಾಮ್ರಾಜ್ಯವು, ಅದು ಬೆಳಗಾಂ ಮತ್ತು ಬಿಜಾಪುರದಂತಹ ಮರಾಠರ ಕೈವಶದಲ್ಲಿದ್ದ ಪ್ರದೇಶಗಳೂ ಸೇರಿದಂತೆ, ಆಧುನಿಕ ಕರ್ನಾಟಕದ ಇಂದಿನ ಎಲ್ಲ ಭಾಗಗಳನ್ನು ಬೆಂಗಳೂರಿನ ಮುಖಾಂತರ ಒಂದು ಆರ್ಥಿಕ ವ್ಯವಸ್ಥೆಗೆ ಒಳಪಡಿಸಿಕೊಂಡಿತ್ತಾದ್ದರಿಂದ, ಕರ್ನಾಟಕತ್ವದ ಉಗಮವು ಆರಂಭಗೊಂಡಿತ್ತು. ಗುಲ್ಬರ್ಗಾ ಮತ್ತು ಬೀದರ್‌ಗಳು ಮಾತ್ರ, ಆ ಅವಧಿಯಲ್ಲಿ ಅಖಿಲ ಕರ್ನಾಟಕದ ಮಾರುಕಟ್ಟೆಯ ಬೆಳವಣಿಗೆಯಲ್ಲಿ ಹೊರಗುಳಿದುಕೊಂಡಿದ್ದವು.

ಆಗಿನ ಮೈಸೂರು ಸಾಮ್ರಾಜ್ಯವು ಕೇರಳ, ತಮಿಳುನಾಡು ಹಾಗೂ ಆಂಧ್ರಪ್ರದೇಶಗಳ ಕೆಲವು ಭೂಭಾಗಗಳನ್ನು ಒಳಗೊಂಡಿತ್ತಾದರೂ, ಆರ್ಥಿಕ ದೃಷ್ಟಿಯಿಂದ ಅದರ ಸುಸಂಯೋಜನೆ, ಇಂದಿನ ಕರ್ನಾಟಕದ ಪ್ರದೇಶದೊಳಗೇ ಹೆಚ್ಚು ಜೀವಂತವಾದ, ಸಾಂದ್ರವಾದ ಹೆಣಿಗೆಯನ್ನು ಪಡೆದುಕೊಂಡಿತ್ತು ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು.

ಈ ಕುರಿತು ಚಿಚರೋವ್ ಹೇಳುತ್ತಾರೆ ''ಈ ವಿಧಾನದಲ್ಲಿ ಸ್ಥಳೀಯ ಮಾರುಕಟ್ಟೆ, ಪ್ರತಿಯೊಂದು ಸಾಮ್ರಾಜ್ಯದೊಳಗೂ, ವಿಸ್ತೃತ ಆಡಳಿತಾತ್ಮಕ ಪ್ರದೇಶದೊಳಗೂ ಬೆಳೆಯಲು ಅಗತ್ಯವಾದ ಪೂರ್ವಾವಶ್ಯಕತೆಗಳು ಸೃಷ್ಟಿಯಾಗಿದ್ದವು. ಅವು ಒಂದು ಪ್ರಮಾಣದಲ್ಲಿ, ಈ ಉಪಖಂಡದ ಮೂಲ ರಾಷ್ಟ್ರೀಯತೆಗಳ ಒಂದು

ಅಥವಾ ಎರಡು ಪ್ರಾಂತ್ಯಗಳ ಗಡಿರೇಖೆಗಳೊಂದಿಗೆ ಕಾಕತಾಳೀಯವಾಗಿ ಸಾರೂಪ್ಯ ಪಡೆದುಕೊಂಡಿದ್ದವು''.[3] ಈ ಪ್ರವೃತ್ತಿಗಳು ಮುಂದುವರಿದು, ''ಇತರೆಲ್ಲ ಅಂಶಗಳ ಜೊತೆ ಭಾರತದಲ್ಲಿ, ರಾಷ್ಟ್ರಗಳ ಸಂರಚನೆಯ ಪ್ರಕ್ರಿಯೆಯನ್ನು ಉತ್ತೇಜಿಸಿದವು''.[4]

ಫ್ರಡರಿಕ್ ಏಂಗೆಲ್ಸ್ ತಮ್ಮ 'ಡಿಕ್ಲೈನ್ ಆಫ್ ಫ್ಯೂಡಲಿಸಂ ಅಂಡ್ ದಿ ರೈಸ್ ಆಫ್ ದಿ ಬೂರ್ಷ್ವಾಸಿ' ಲೇಖನದಲ್ಲಿ ಯೂರೋಪಿನ ಪರಿಸ್ಥಿತಿಯ ಬಗ್ಗೆ ಹೀಗೆ ಹೇಳುತ್ತಾರೆ: ''ಇಡೀ ಮಧ್ಯಯುಗಕ್ಕೂ, ಭಾಷಾತೀತ ಸಮುದಾಯದ ಗಡಿರೇಖೆಗಳು ಹಾಗೂ ಅದನ್ನಾಳುತ್ತಿದ್ದ ಪ್ರಭುತ್ವದ ಗಡಿರೇಖೆಗಳು ಯಾವ ಕಾರಣಕ್ಕೂ ಒಂದೇ ಆಗಿಲ್ಲದಿದ್ದಾಗಲೂ, ಪ್ರತೀ ರಾಷ್ಟ್ರೀಯತೆಯು, ಬಹುಶಃ ಇಟಲಿಯೊಂದನ್ನು ಹೊರತುಪಡಿಸಿ, ಯೂರೋಪಿನಲ್ಲಿ ಒಂದು ನಿರ್ದಿಷ್ಟ ಏಕಪ್ರಭುತ್ವದಿಂದ ಪ್ರತಿನಿಧಿಸಲ್ಪಟ್ಟಿದ್ದವು. ಒಂದೇ ಪ್ರಭುತ್ವ ಹೊಂದಿರಬೇಕೆಂಬ ರಾಷ್ಟ್ರೀಯತಾ ರಾಜ್ಯಗಳ ಪ್ರವೃತ್ತಿಗೆ, ಅನಂತರದಲ್ಲಿ ಬಹಳ ವೇಗವಾಗಿ ಬಲಿತುಕೊಂಡ ಈ ಪ್ರವೃತ್ತಿಗೆ, ಇದು ಆರಂಭವಾಗಿತ್ತು. ಎಂಬುದು ಮಧ್ಯಮಯುಗದ ಪ್ರಧಾನ ಪ್ರಗತಿಪರ ಲಕ್ಷಣಗಳಲ್ಲಿ ಒಂದಾಗಿದೆ''. [5]

ಪಾಳೇಗಾರವರ್ಗದ ಅಸ್ತಿತ್ವಕ್ಕೆಡೆಯಿಲ್ಲದೆ ಸಾಧಿತಗೊಂಡ ಈ ಆರ್ಥಿಕ ಸಂಯೋಜನೆಯೆಂಬುದು, ಕರ್ನಾಟಕದ ವಿಕಾಸಕ್ಕೆ ಈ ಅವಧಿಯಲ್ಲಿ ಅತ್ಯಂತ ದೃಢವಾದ ಪರಿಸ್ಥಿತಿಯನ್ನು ಒದಗಿಸಿತು ಎಂದು ಸಾಕಿ ಅಭಿಪ್ರಾಯ ಪಡುತ್ತಾರೆ. [6]

ಭಾರತದಲ್ಲಿ ೧೭, ೧೮ನೆಯ ಶತಮಾನಗಳ ಅವಧಿಯಲ್ಲಿ ರೂಪುಗೊಂಡ ರಾಷ್ಟ್ರೀಯತೆಗಳೆಲ್ಲ ಒಳ್ಳೆಯ ಕರಾವಳಿಯ ತೀರವನ್ನು, ಆ ಮೂಲಕ ಏರ್ಪಟ್ಟ ಸಾಗರೋತ್ತರ ವಾಣಿಜ್ಯದ ಉತ್ಕರ್ಷವನ್ನು ಆಧರಿಸಿದ್ದವು ಎಂಬುದನ್ನು ನಾವು ಗಮನಿಸಬಹುದಾಗಿದೆ. ಹೀಗಿದ್ದಾಗ ಕರ್ನಾಟಕದ ಪ್ರದೇಶಗಳಲ್ಲಿಈ ಕರಾವಳಿ ಅನುಕೂಲವನ್ನು ಒದಗಿಸುವ ಭೂಭಾಗವಿರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ. ಆ ಭೂಭಾಗ ಸಂಬಂಧವೊಂದೇ ಇದಕ್ಕೆ ಸಾಗರ ತೀರವನ್ನು ಒದಗಿಸಿಕೊಡುತ್ತದೆ. ಮುಖ್ಯ ಬಂದರಾಗಿರುವ ಮಂಗಳೂರು ತುಳುನಾಡಿನಲ್ಲಿ ನೆಲೆಗೊಂಡಿತ್ತು. ಸಾಗರ ತೀರದ ಸೌಲಭ್ಯವನ್ನು ಪಡೆಯುವುದಕ್ಕೆ ಕರ್ನಾಟಕಕ್ಕೆ ಅದರ ಭೌಗೋಳಿಕ ಸನ್ನಿವೇಶದಲ್ಲಿ ಮಲೆನಾಡು ಒಂದು ದೊಡ್ಡ ತಡೆಗೋಡೆಯಾಗಿ ನಿಂತಿತ್ತು. ಈ ದೌರ್ಬಲ್ಯದ ನಡುವೆಯೂ ಕರ್ನಾಟಕವು ಒಂದು ಉತ್ತಮ ಪ್ರಮಾಣದ ಸರಕು ಉತ್ಪಾದನೆಯನ್ನು ಸಾಧಿಸಿತ್ತು. ಅದರೊಂದಿಗೆ ತನ್ನ ರಾಷ್ಟ್ರೀಯತೆಯ ಉದಯಕ್ಕೆ ತಳಹದಿಗಳನ್ನು ನಿರ್ಮಿಸಿ ಕೊಂಡಿತು. ಇದು ಮುಖ್ಯವಾಗಿ ಪಾಳೇಗಾರ ವಿರೋಧೀ ಸುಧಾರಣಾ ಚಳುವಳಿಯ ಮುಖಾಂತರ ಸ್ಥಳೀಯ ಮಾರುಕಟ್ಟೆಯ ಉಗಮಕ್ಕೆ ಪ್ರಚೋದನೆಯಾಯಿತು. ಆ ಮೂಲಕ ರಾಷ್ಟ್ರೀಯತ್ವದ ಪ್ರಜ್ಞೆಯೊಂದು ಜೀವಂತಗೊಂಡಿತು.[7]

ಅಡಿಟಿಪ್ಪಣಿ

1. SAKI- Making History, Vol. 1, ಪು. ೫೪೦
2. ಅದೇ ಪು. ೫೪೨
3. A.I. Chicherov, ಉಲ್ಲೇಖಿತ, ಅದೇ ಪು. ೫೪೩
4. A.I. Chicherov, ಉಲ್ಲೇಖಿತ, ಅದೇ ಪು. ೫೪೩
5. Frederick Engles, ಉಲ್ಲೇಖಿತ, ಅದೇ ಪು. ೫೪೩
6. SAKI- Making History, Vol. 1, ಪು. ೫೪೩
7. ಅದೇ ಪು. ೫೪೩, ೫೪೪.

❖ ❖ ❖ ❖

ಅಧ್ಯಾಯ -೮

೧೯ನೇ ಶತಮಾನದ ಮೊದಲರ್ಧ

ವಸಾಹತುಶಾಹಿ ಆಕ್ರಮಣದ ಆಘಾತ

ಡಾ. ಸಬಾಸ್ಟಿಯನ್ ಜೋಸೆಫ್, ಟೀಪುವಿನ ಮರಣಾನಂತರದ ಮೈಸೂರು ರಾಜ್ಯದ ಬಗ್ಗೆ ಹೇಳುವಂತೆ, ''೧೭೯೯ನೇ ವರ್ಷವು ಕರ್ನಾಟಕದ ಜನರ ಇತಿಹಾಸದಲ್ಲಿ ಒಂದು ಹೊಸ ಹಂತದ ಪ್ರಾರಂಭವನ್ನು ಗುರುತಿಸುತ್ತದೆ. ಅದು ವಸಾಹತುಶಾಹಿ ಹಂತ; ಅದನ್ನು ಖಚಿತವಾದ ಅರ್ಥದಲ್ಲಿ ಆಧುನಿಕ ಹಂತ ಎಂದು ಕರೆಯಬೇಕಾಗಿಲ್ಲ. ಯೂರೋಪಿನಲ್ಲಿ ಆಧುನಿಕ ಯುಗದ ಲಕ್ಷಣಗಳಾದ ಫ್ಯೂಡಲಿಸಂ ಅವನತಿ, ಭೌಗೋಳಿಕ ಪರಿಶೋಧನೆಗಳು, ಪುನರುಜ್ಜೀವಿತ ವ್ಯಾಪಾರ - ವಾಣಿಜ್ಯ, ವೈಜ್ಞಾನಿಕ ಆವಿಷ್ಕಾರಗಳು ಮತ್ತು ಬಂಡವಾಳಶಾಹಿಯ ಉದಯ, ಇವು ಕಾಣಿಸಿಕೊಂಡಿದ್ದವು. ಹೆನ್ರಿ ಪಟುಲ್ಲೋ ಮತ್ತು ಫಿಲಿಪ್ ಫ್ರಾನ್ಸಿಸ್ ಇವರು ಫ್ಯೂಡಲ್ ಅಚ್ಚಿನಲ್ಲಿ ಬಂಗಾಳೀ ಜಮೀನ್ದಾರರ ಸ್ವರೂಪವನ್ನು ಚಿತ್ರಿಸಿಕೊಳ್ಳುತ್ತಿದ್ದಾಗ, ಇಲ್ಲಿ ಟೀಪು ಸುಲ್ತಾನನ ರಾಜ್ಯಾಡಳಿತ ವ್ಯವಸ್ಥೆಯು, ೧೮ನೇ ಶತಮಾನದ ಕೊನೆಯ ಬಾಗಿಲಲ್ಲಿ ಫ್ಯೂಡಲ್ ರೂಪಗಳನ್ನು ಅನೇಕಾನೇಕ ವಿಧಾನಗಳಿಂದ ಅರೆದು ಹಾಕುತ್ತಿದ್ದಿತು. ಅಲ್ಲದೆ ಆ ಕಾಲಾವಧಿಯಲ್ಲಿ ನೂತನ ತಾಂತ್ರಿಕತೆಗಳ ಆವಿಷ್ಕಾರ ಮತ್ತು ಅಳವಡಿಕೆ, ಏಷ್ಯಾ ಖಂಡದ ದೊಡ್ಡ ಗ್ರಂಥಾಲಯಗಳಲ್ಲೇ ಒಂದಾದ ಗ್ರಂಥಾಲಯವನ್ನು ಶ್ರೀರಂಗಪಟ್ಟಣದಲ್ಲಿ ಸ್ಥಾಪಿಸಿ, ಆಧುನಿಕ ಜ್ಞಾನವನ್ನು, ನೂತನ ವಿಚಾರಗಳನ್ನು ಪಡೆಯಲು ಪ್ರಯತ್ನಿಸಿದುದು, ಯುದ್ಧ ಸಾಧನಗಳನ್ನು ತಯಾರಿಸುವ ಕೈಗಾರಿಕೆಗಳ ಸ್ಥಾಪನೆ, ರೇಷ್ಮೆ ಬೇಸಾಯ, ಮುತ್ತು ತೆಗೆಯುವುದು, ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ಬದಲೀ ಮಾರ್ಗಗಳ ಅನ್ವೇಷಣೆ ಮೊದಲಾದ ಆಧುನಿಕ ಪ್ರವೃತ್ತಿಗಳು ಕಂಡು ಬಂದವು. ವಸಾಹತುಶಾಹಿಗೆ ಅಧೀನವಾಗದ ಆಧುನಿಕ ರಾಜ್ಯವನ್ನು ಕಟ್ಟಲು ಟೀಪು ಪ್ರಯತ್ನಿಸಿದನು. ಆದರೆ ಅವನ ಪರಾಭವ ಮತ್ತು ೧೭೯೯ರಲ್ಲಿ ಮರಣ ಇವುಗಳಿಂದಾಗಿ, ವಸಾಹತುಶಾಹಿಯಿಲ್ಲದೆ ಆಧುನಿಕ ರಾಜ್ಯ ನಿರ್ಮಾಣದ ಅವನ ಪ್ರಯೋಗವು ಶ್ರೀರಂಗಪಟ್ಟಣದ ಮರಳು ಹಾಸಿನ ಮೇಲೆ ನುಚ್ಚುನೂರಾಗಿ ಹೋಯಿತು''.[1]

''ವಸಾಹತುಶಾಹಿ ಮತ್ತು ಆಧುನಿಕತೆಗಳು ಸಮಾನಾರ್ಥಕಗಳಲ್ಲ. ವಸಾಹತುಶಾಹಿ ಇತಿಹಾಸ ಲೇಖಕರು, ಅವರನ್ನು ಅನುಸರಿಸಿದ ರಾಷ್ಟ್ರೀಯ ಇತಿಹಾಸ ಲೇಖಕರು ತಪ್ಪಾಗಿ ಹಾಗೆ ಚಿತ್ರಿಸಿದ್ದಾರೆ. ವಾಸ್ತವವಾಗಿ ಬ್ರಿಟನ್ನಿನಲ್ಲಿ ಲೌಕಿಕ ಮತ್ತು ಸಾಂಸ್ಕೃತಿಕ ಪ್ರಗತಿಗೆ ಕಾರಣವಾದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕಾಂಶಗಳು; ಅದೇ ಸಮಯಕ್ಕೆ ವಸಾಹತು ದೇಶದಲ್ಲಿ ಬೆಳವಣಿಗೆಯ ಕೊರತೆ ಮತ್ತು ಹಿಂದುಳಿದಿರುವಿಕೆಯನ್ನು ಸೃಷ್ಟಿಸಿತು. ಇದು ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಮಾತ್ರವಲ್ಲದೆ ಸಾಂಸ್ಕೃತಿಕ ರಂಗಗಳಲ್ಲೂ ಸಂಭವಿಸಿತು... ಕ್ರಿ.ಶ. ೧೮೦೦ರಿಂದ ೧೯೦೦ರವರೆಗಿನ ಕರ್ನಾಟಕದ ಇತಿಹಾಸವನ್ನು ಅರಿಯಲು ಈ ವೈರುಧ್ಯವನ್ನು ತಿಳಿದುಕೊಳ್ಳುವುದು ಮಹತ್ವದ್ದಾಗುತ್ತದೆ''.[2]

''ವಸಾಹತುಶಾಹಿಯ ಆಗಮನದಿಂದಾಗಿ, 'ಆಧುನಿಕ' ಎಂದು ಕರೆಯಬಹುದಾದ ೧೮ನೇ ಶತಮಾನದ ಮೈಸೂರಿನಲ್ಲಿ ಕಂಡುಬಂದಿದ್ದ ಕೆಲವು ಪ್ರವೃತ್ತಿಗಳನ್ನು ಮೊಳಕೆಯಲ್ಲೇ ಚಿವುಟಿಹಾಕಲಾಯಿತು. ಮೊದಲನೆಯದಾಗಿ ರಾಜ್ಯವನ್ನು ಮೈಸೂರು ಸಂಸ್ಥಾನ, ಬ್ರಿಟಿಷ್ ಕರ್ನಾಟಕ, ಹೈದರಾಬಾದ್ ಕರ್ನಾಟಕ ಇತ್ಯಾದಿಯಾಗಿ ಪರಾಧೀನ ತುಂಡುಗಳನ್ನಾಗಿ ಒಡೆಯಲಾಯಿತು. ಕರ್ನಾಟಕವನ್ನು ವಸಾಹತುಶಾಹಿಯು ವಶಪಡಿಸಿಕೊಂಡು, ಕೊನೆಯ ಪಕ್ಷ ಐವತ್ತು ತುಂಡುಗಳನ್ನಾಗಿ ಚೂರು ಚೂರು ಮಾಡಿತು. ಅವುಗಳಲ್ಲಿ ಸಣ್ಣ ಸಣ್ಣ ರಾಜ್ಯಾಡಳಿತಗಳು, ದಂಡು ಪ್ರದೇಶಗಳು ಕೂಡ ಸೇರಿದ್ದು - ವಸಾಹತುಶಾಹಿಯ ನಿಯಂತ್ರಣಕ್ಕೆ ಒಳಪಟ್ಟವು''.[3]

'' ೧೭೯೯ರಿಂದ ೧೮೩೧ರವರೆಗೆ ಮೈಸೂರು ಸಂಸ್ಥಾನವು ಬ್ರಿಟಿಷರ ಪರೋಕ್ಷ ವಸಾಹತುಶಾಹಿ ಆಡಳಿತಕ್ಕೆ ಸೇರಿತ್ತು. ೧೮೩೧ರಿಂದ ೧೮೮೧ರ ಅಧಿಕಾರ ಹಸ್ತಾಂತರದವರೆಗೆ ಮೈಸೂರು ಸಂಸ್ಥಾನವು ಬ್ರಿಟಿಷರ ನೇರ ವಸಾಹತು ಆಡಳಿತಕ್ಕೆ ಒಳಪಟ್ಟಿತು. ೧೮೮೧ರಿಂದ ಶತಮಾನದ ಕೊನೆಯವರೆಗೆ ಮೈಸೂರು ಸಂಸ್ಥಾನವು ನೂತನ ಹಂತವೊಂದನ್ನು ಕಂಡಿತು. ಪ್ರಾತಿನಿಧಿಕ ಸಂಸ್ಥೆಗಳ ಪ್ರವೇಶವಾಗಿ, ನೂತನ ಸಾಮಾಜಿಕ ರಾಜಕೀಯ ಶಕ್ತಿಗಳು ಆವಿರ್ಭವಿಸಿದವು; ಮಾದರಿ ರಾಜ್ಯದ ನಿರ್ಮಾಣಕ್ಕೆ ಒಂದು ಪೂರ್ವಾಭ್ಯಾಸವಾಯಿತು''.[4]

ಅಲ್ಲಿಯವರೆಗೆ ಟಿಪ್ಪುವಿನ ಆಡಳಿತಾವಧಿಯಲ್ಲಿ, ವರ್ತಕ ಹಾಗೂ ಕೈಗಾರಿಕಾ ಬಂಡವಾಳದ ಆರಂಭಿಕ ಹಂತಗಳನ್ನು ತಲುಪಿದ್ದ ಕರ್ನಾಟಕವು, ಬ್ರಿಟಿಷ್ ವಸಾಹತುಶಾಹಿಯ ಆಕ್ರಮಣದೊಂದಿಗೆ ಬಹಳ ದುಸ್ಥಿತಿಯನ್ನು, ಅವಮಾನಗಳನ್ನು ಎದುರಿಸಬೇಕಾಗಿ ಬಂದಿತು. ಪೋರ್ಚುಗೀಸರು ಕರ್ನಾಟಕದ ಕರಾವಳಿಯಲ್ಲಿ ಕಾಲಿಟ್ಟ ಮೇಲೆ ಒಂದು ದಲ್ಲಾಳಿ ವರ್ತಕ ಸಮುದಾಯವನ್ನು ನಿರ್ಮಿಸಿಕೊಂಡ ರೀತಿಯಲ್ಲಿಯೇ, ಬ್ರಿಟಿಷರು ಮೈಸೂರು ರಾಜ್ಯದಲ್ಲಿ ತಮ್ಮ ರಾಜಕೀಯ ನಿಯಂತ್ರಣ ವನ್ನು ಆರಂಭಿಸುವಾಗ ದಲ್ಲಾಳಿ ರಾಜಕೀಯವರ್ಗವೊಂದನ್ನು ನಿರ್ಮಿಸಿಕೊಂಡರು. ಈ ದಲ್ಲಾಲಿ ಆಡಳಿತವರ್ಗವು ವಸಾಹತುಶಾಹಿ ಬಂಡವಾಳದ ಆರ್ಥಿಕ

ಹಿತಾಸಕ್ತಿಗಳನ್ನು ಬಹಳ ಚೆನ್ನಾಗಿ ಈಡೇರಿಸಿತು. ಆ ವರ್ಗವು ಅಧಿಕಾರಕ್ಕೆ ಬಂದುದೇ ಕೆಲವು ಅವಮಾನಕಾರಿ ಅಸಮ ಒಪ್ಪಂದಗಳ ಮೂಲಕ. ಮೈಸೂರು ಸಬ್ಸಿಡಿಯರಿ ಒಪ್ಪಂದಕ್ಕೆ ಮಹಾರಾಜ ಮುಮ್ಮಡಿ ಕೃಷ್ಣರಾಜಒಡೆಯರ್ ಮತ್ತು ಬ್ರಿಟಿಷ್ ಕಮಿಷನರ್ ಸಹಿ ಮಾಡಿದರು. ಸಬ್ಸಿಡಿಯರಿ ಒಪ್ಪಂದದ ಅವಕಾಶಗಳ ಪ್ರಕಾರ ಮೈಸೂರು ಪ್ರತಿ ವರ್ಷವೂ ಬ್ರಿಟಿಷ್ ಖಜಾನೆಗೆ ಇಪ್ಪತ್ತನಾಲ್ಕುವರೆ ಲಕ್ಷ ರೂಪಾಯಿಗಳ ಪೊಗದಿಯನ್ನು ಪಾವತಿ ಮಾಡಬೇಕಾಯಿತು. ಇದು ಮಹಾರಾಜನಿಗೆ ಸೇರಿದ ರಾಜ್ಯಭಾಗಗಳ ರಕ್ಷಣೆಗೋಸ್ಕರ ಕೊಡುತ್ತಿದ್ದ ಶುಲ್ಕ.

೧೮೯೯ರ ಜುಲೈ ೮ರಂದು ಈಸ್ಟ್ ಇಂಡಿಯಾ ಕಂಪನಿಯು ಮೈಸೂರು ರಾಜರೊಂದಿಗೆ ಮಾಡಿಕೊಂಡ ಸಬ್ಸಿಡಿಯರಿ ಒಪ್ಪಂದದ ಎರಡನೆಯ ಪರಿಚ್ಛೇದವು ಹೀಗೆ ಹೇಳುತ್ತದೆ: ''ಗೌರವಾನ್ವಿತ ಈಸ್ಟ್ ಇಂಡಿಯಾ ಕಂಪೆನಿ ಬಹದೂರ್ ಕೊಡಲು ಮತ್ತು ಮೈಸೂರಿನ ಮಹಾರಾಜ ಕೃಷ್ಣರಾಜ ಒಡೆಯರ್ ಇವರು ಸ್ವೀಕರಿಸಲು ಒಪ್ಪಿರುವ ಒಂದು ಸೈನ್ಯದ ಉದ್ದೇಶವು ಮಹಾರಾಜರ ರಾಜ್ಯದ ರಕ್ಷಣೆ ಮತ್ತು ಸುಭದ್ರತೆಯಾಗಿದೆ ; ಅಂತಹ ಸಂರಕ್ಷಣೆಗೆ ಪ್ರತಿಫಲವಾಗಿ ಮಹಾರಾಜರು ೭ ಲಕ್ಷ ಸ್ಟಾರ್ ಪಗೋಡಗಳನ್ನು ಮೇಲೆ ಹೇಳಿದ ಈಸ್ಟ್ ಇಂಡಿಯಾಕಂಪನಿಗೆ ೧೨ ಸಮಾನ ಮಾಸಿಕ ಕಂತುಗಳಲ್ಲಿ ಪಾವತಿಮಾಡಲು ಒಪ್ಪಿರುತ್ತಾರೆ. ಇದು ಕ್ರಿ.ಶ. ೧೮೯೯ ಜುಲೈ ಒಂದನೇ ತಾರೀಖಿನಿಂದ ಆರಂಭವಾಗುತ್ತದೆ''. [5]

ಈ ಬಗೆಯ ಅಸಮ ಒಪ್ಪಂದಗಳ ಮೂಲಕ ರಾಜ್ಯಾದಾಯದ ಪ್ರಧಾನ ಭಾಗವನ್ನು ಬ್ರಿಟಿಷರಿಗೆ ಪೊಗದಿ ಕೊಡುವುದಕ್ಕಾಗಿ ಒಪ್ಪಿಕೊಂಡು ಅಧಿಕಾರಕ್ಕೆ ಬಂದ ಒಡೆಯರ್ ವಂಶವು ತನ್ನ ಅಧೀನ ಪ್ರವೃತ್ತಿಯಲ್ಲಿ ಬ್ರಿಟಿಷರಿಗೆ ಸಾಮಂತನಾಗಿ, ಈ ಹಿಂದಿದ್ದ ಮೈಸೂರು ಸಾಮ್ರಾಜ್ಯದ ಘನತೆಯನ್ನು ಮಣ್ಣುಪಾಲು ಮಾಡಿ, ನಾಮಮಾತ್ರಕ್ಕೆ ಸಣ್ಣ ಸಂಸ್ಥಾನವೊಂದರ ಅಧಿಪತಿಯಾಗಿ ಉಳಿದುಕೊಳ್ಳಬೇಕಾಯಿತು. ಟೀಪುವನ್ನು ಸೋಲಿಸಿದ್ದ ಯುದ್ಧದಲ್ಲಿ ಮೂರು ಪಾಲುದಾರರಿದ್ದರು ; ಬ್ರಿಟಿಷರು, ಹೈದರಾಬಾದಿನ ನಿಜಾಮ ಹಾಗೂ ಮರಾಠರು. ಈ ವಿಜಯಶಾಲಿಗಳು ಮೈಸೂರು ರಾಜ್ಯವನ್ನು ಹಂಚಿಕೊಳ್ಳಲು ಒಂದು ಒಪ್ಪಂದವನ್ನು ಮಾಡಿಕೊಂಡರು.

ನಿಜಾಮನ ಭಾಗಕ್ಕೆ ಈಗಿನ ಬಳ್ಳಾರಿ, ಅನಂತಪುರ, ಕಡಪಾ ಮತ್ತು ಕರ್ನೂಲು ಜಿಲ್ಲೆಗಳು ಹೋದವು. ಮರಾಠರ ಭಾಗಕ್ಕೆ ಮುಂಬೈ- ಕರ್ನಾಟಕವೆಂದು ಕರೆಯಲಾಗುವ ತುಂಗೆಯ ಉತ್ತರದಿಕ್ಕಿನ ಪ್ರದೇಶವು ಹೋಯಿತು. ಆದರೆ ಉತ್ತರ ಕನ್ನಡ ಜಿಲ್ಲೆಯನ್ನು ಅದು ಸಮುದ್ರ ತೀರದ ನೆಲವಾದುದರಿಂದ ಬ್ರಿಟಿಷರು ತಮ್ಮ ಭಾಗಕ್ಕೆ ಉಳಿಸಿಕೊಂಡರು. ದಕ್ಷಿಣ ಕನ್ನಡ ಜಿಲ್ಲೆಯನ್ನು, ಹಳೆಯ ಮೈಸೂರಿನ ಪಶ್ಚಿಮ ದಕ್ಷಿಣ ಪೂರ್ವ ದಿಕ್ಕಿನ ಪ್ರದೇಶಗಳನ್ನು ಬ್ರಿಟಿಷರೇ ಆಕ್ರಮಿಸಿಕೊಂಡರು.

''೧೮೬೨ರವರೆಗೆ ಕಡಲತೀರದ ಕನ್ನಡ ಪ್ರದೇಶವೆಲ್ಲ ಒಂದೇ ಭಾಗವಾಗಿತ್ತು. ಕುಂದಾಪುರಕ್ಕೆ ಉತ್ತರಕ್ಕಿರುವ ಕನ್ನಡದ ನೆಲವನ್ನು ಉತ್ತರ ಕನ್ನಡವೆಂದು ವಿಭಜಿಸಿ

ಆಮೇಲೆ ಅದನ್ನು ಮುಂಬೈ ಪ್ರಾಂತ್ಯಕ್ಕೆ ಸೇರಿಸಿದವರು ಬ್ರಿಟಿಷರು. ಸಮುದ್ರ ತೀರದಲ್ಲಿರುವ ದೇಶಭಾಗವೆಲ್ಲ ತಮ್ಮ ಸ್ವಾಧೀನದಲ್ಲಿರುವುದು ಅನುಕೂಲವೆಂದು ಬ್ರಿಟಿಷರು ಕೈಗೊಂಡ ತೀರ್ಮಾನ ಇದು. ತೀರ ಪ್ರದೇಶವಾವುದೂ ತಮ್ಮ ಭಾರತೀಯ ಮಿತ್ರರ ಅಧೀನದಲ್ಲಿರದಂತೆ ಅವರು ತುಂಬಾ ಎಚ್ಚರ ವಹಿಸಿದರು. ಟಿಪ್ಪುವಿನಂತೆ ಈ ಮಿತ್ರರು ಫ್ರೆಂಚರಂತಹ ಸಮುದ್ರ ಸಂಚಾರಿ ಶಕ್ತಿಗಳೊಡನೆ ಸಂಧಾನ ಮಾಡಿಕೊಂಡು ತಮಗೆದುರು ಬಿದ್ದಾರೆಂದು, ಪ್ರತಿಕೂಲ ಸಂದರ್ಭವನ್ನು ತಪ್ಪಿಸಲು ಬ್ರಿಟಿಷರು ಸರ್ವದಾ ಜಾಗರೂಕರಾಗಿದ್ದರು. ಹೀಗೆ ಮಿತ್ರತ್ರಯರಲ್ಲಿ ರಾಜ್ಯವನ್ನು ಹರಿದು ಹಂಚಿದ್ದಾದ ಮೇಲೆ ಉಳಿದ ಹಳೆಯ ಮೈಸೂರು ರಾಜ್ಯಭಾಗವನ್ನು ಬ್ರಿಟಿಷರು ಅದರ ಪ್ರಾಚೀನ ರಾಜವಂಶೀಯರಿಗೆ ಪುನಃ ಸ್ವಾಧೀನ ಮಾಡಿಕೊಡಲು ನಿರ್ಧರಿಸಿದರು'' ಎಂದು ಕೆ. ಸಂಪದ್ಗಿರಿರಾವ್ ಹೇಳುತ್ತಾರೆ.[6]

ವಾಸ್ತವವಾಗಿ, ಮೈಸೂರು ರಾಜ್ಯವು ೧೭೯೯ರ ಒಪ್ಪಂದದಿಂದಾಗಿ ಕೇವಲ ಕೃಷಿ ಜಮೀನುಗಳಿಂದ ಸುತ್ತುವರಿದ ಪುಟ್ಟರಾಜ್ಯವಾಗಿ ಕುಗ್ಗಿತ್ತು. ಟೀಪು ಸುಲ್ತಾನನ ಪರಾಭವದ ನಂತರ ಹೀಗೆ ಕತ್ತರಿಸಿ ಹೋದ ರಾಜ್ಯವು, ವಿಸ್ತೃತವಾದ ಕರಾವಳಿ ಇಲ್ಲದೆ ಒಡೆಯರಿಗೆ ಮರಳಿ ಹಸ್ತಗತವಾದಾಗ, ಅದು ರಾಜ್ಯದ ವಾಣಿಜ್ಯ ಪರಿಸ್ಥಿತಿಯ ಮೇಲೆ ನಿಜವಾಗಿಯೂ ದುಷ್ಪರಿಣಾಮವನ್ನುಂಟುಮಾಡಿತು. ಏಕೆಂದರೆ ಟೀಪು ಸುಲ್ತಾನನ ಕಾಲದಲ್ಲಿ ಹೊಗೆಸೊಪ್ಪು , ಗಂಧದ ಮರ, ಮೆಣಸು, ಅಮೂಲ್ಯ ಲೋಹಗಳು ಇತ್ಯಾದಿಗಳ ಸರಕಾರೀ ಸ್ವಾಮ್ಯವಿತ್ತು. ಟೀಪುವು ಕಚ್, ಮಸ್ಕತ್, ಜಿದ್ದಾ, ಆರ್ಮೇಜ್ ಪೆಗೂಗಳಲ್ಲಿ ವಾಣಿಜ್ಯ ಕೇಂದ್ರಗಳನ್ನುಸ್ಥಾಪಿಸಿದ್ದನು. ಹಾಗೂ ಒಂದು ವಾಣಿಜ್ಯ ಇಲಾಖೆಯನ್ನೇ ಏರ್ಪಡಿಸಿದ್ದನು. ಮೈಸೂರಿನಲ್ಲಿ ಕಂಡುಬಂದ ವಸಾಹತುಶಾಹಿ ಅವಧಿಯ, ಕೃಷಿವಸ್ತುಗಳ ಬೆಲೆಕುಸಿತದ ಪ್ರಶ್ನೆಯನ್ನು ಉತ್ತರಿಸಲು ಹೆಚ್ಚು ಸಂಗತವಾದ ವಿಧಾನವೆಂದರೆ, ೧೭೯೯ರಲ್ಲಿ ಟೀಪುವಿನ ವಾಣಿಜ್ಯ ಸಂರಚನೆಯು ಕುಸಿದು ಹೋದುದರಿಂದ ಮೈಸೂರಿನಲ್ಲಿ ಉಂಟಾದ ಆಘಾತವನ್ನು ಪರಿಶೀಲಿಸುವುದು . ಅಷ್ಟೇ ಮಟ್ಟಿಗೆ ಮುಖ್ಯವಾದ ಇನ್ನೊಂದು ಅಂಶ, ಕೃಷ್ಣರಾಜ ಒಡೆಯರು ರಾಜ್ಯದ ವರಮಾನವನ್ನು ಹೆಚ್ಚಿಸುವ ಸಲುವಾಗಿ ವಿಧಿಸಿದ ಹಳೆಯ ಸಾಗಣೆ ಸುಂಕಗಳನ್ನು ಪರಿಶೀಲಿಸುವುದು.

ವಾಸ್ತವವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಗಿಂತ ಮೊದಲು, ದನಕರುಗಳು ಮತ್ತು ಧಾನ್ಯಗಳನ್ನು ಒಯ್ದು ಮಾರುತ್ತಿದ್ದ ಅಲೆಮಾರಿ ವ್ಯಾಪಾರಿಗಳಾದ ಬಂಜಾರಿಗಳಿಗೆ ಯಾವ ತೆರಿಗೆಯನ್ನೂ ಹಾಕುತ್ತಿರಲಿಲ್ಲ. ಒಂದು ಸಂದರ್ಭದಲ್ಲಿ ಬ್ರಿಟಿಷ್ ರೆಸಿಡೆಂಟನು 'ಹಿಂದೆಂದೂ ಸರಕು ಸಾಗಣೆ ಸುಂಕವಿರಲಿಲ್ಲ' ಎಂದು ಹೇಳಿದನು. ಸುಂಕಗಳನ್ನು ವಿಧಿಸುವುದರ ಅನೌಚಿತ್ಯವನ್ನು ಮನಗಂಡ ಮಹಾರಾಜರು ರಫ್ತು ಮಾಡಿದ ಧಾನ್ಯಗಳ ಮೇಲೆ ಸುಂಕವನ್ನು ಮನ್ನಾ ಮಾಡಿದರು. ಆದರೆ ಸ್ವಲ್ಪ ಕಾಲದ ನಂತರ ಅವು ಮರಳಿ ಜಾರಿಗೆ ಬಂದವು. ಗುಣಾಂಶಗಳು ಏನೇ ಇರಲಿ ಸರಕು ಸಾಗಣೆಯ ಕಿರುಕುಳದ ವ್ಯವಸ್ಥೆಯಿಂದ ಮೈಸೂರು ಸಂಸ್ಥಾನದಲ್ಲಿ ಕೃಷಿ

ಉತ್ಪನ್ನಗಳ ವ್ಯಾಪಾರದ ಮೇಲೆ ದುಷ್ಪರಿಣಾಮವಾದುದಂತೂ ನಿಜ. ಅದರಿಂದಾಗಿ ದೇಶದೊಳಗಿನ ಮಾರುಕಟ್ಟೆಗಳಿಗೆ ರಫ್ತಾಗಬಹುದಾದ ಸರಕುಗಳು ಹರಿದುಬಂದವು. ಅವುಗಳ ಬೆಲೆ ತೀರಾ ಕೆಳಕ್ಕೆ ಕುಸಿದುಹೋಯಿತು. [7]

೧೮೫೯ರ ನಂತರ ಮೈಸೂರಲ್ಲಿ ಹೊಗೆಸೊಪ್ಪು, ಅಡಿಕೆ, ಧಾನ್ಯಗಳು ಮೊದಲಾದವುಗಳ ಮೇಲೆ ತೆರಿಗೆಯನ್ನು ಹೇರಲಾಯಿತು. ತಂಬಾಕು ಮತ್ತು ಅಡಿಕೆಗಳ ತೆರಿಗೆ ಸಂಗ್ರಾಹಕರಿಗೆ ಹೆಚ್ಚಿನ ಅಧಿಕಾರವು ಬಂದಿತು. ಅವರು ಬಡರೈತರ ಮನೆಗಳನ್ನು ಶೋಧಿಸಬಹುದಾಯಿತು. ಇದು ಮನೆಯಲ್ಲಿದ್ದ ಹೆಂಗಸರ ಬಗೆಗೆ ಅಗೌರವದಿಂದ ಹೀನವಾಗಿ ವರ್ತಿಸುವುದಕ್ಕೂ ಅವಕಾಶಕೊಟ್ಟಿತು. ಪರಿಸ್ಥಿತಿಯು ಅಸಹನೀಯ ಹಂತವನ್ನು ಮುಟ್ಟಿದಾಗ , ರೈತರು ಆ ವಸ್ತುಗಳ ಮೇಲಿನ ಸುಂಕವನ್ನು ರದ್ದುಪಡಿಸಬೇಕು ಇಲ್ಲವೇ ಭೂಕಂದಾಯದಲ್ಲೇ ಸೇರಿಸಿಬಿಡಬೇಕು ಎಂದು ಮಹಾರಾಜರನ್ನು ಅಕ್ಷರಶಃ ಬೇಡಿಕೊಂಡರು.

ಮೇಲೆಯೇ ಸೂಚಿಸಿರುವಂತೆ ೧೯ನೇ ಶತಮಾನದ ಎರಡನೇ ದಶಕದಲ್ಲಿ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ತೀವ್ರ ಕುಸಿತವಾಗಿ, ರೈತರು ಸರಕಾರದ ಪಾಲಿಗಾಗಿ ತಮ್ಮ ಬಹುತೇಕ ಪಾಲನ್ನು ಕೊಟ್ಟುಬಿಡಬೇಕಾಯಿತು. ಆದ್ದರಿಂದ ಓೀಗೆ ಬೆಲೆಯ ಪರಿವರ್ತನೆ ಮಾಡುವ ಕ್ರಮವನ್ನು ಅವರು ವಿರೋಧಿಸಿದ್ದು ಸಹಜವೇ ಆಗಿದೆ. ಆದರೆ ಆ ಬೇಡಿಕೆಗಳು ೧೯ನೇ ಶತಮಾನದ ಮೈಸೂರಿನ ಕೃಷಿ ವಿದ್ಯಮಾನದ ಬಗೆಗೆ ಸಂಪೂರ್ಣವಾಗಿ ಕಿವುಡಾಗಿದ್ದ ಕಿವಿಗಳ ಮೇಲೆ ಬಿದ್ದವು ಅಷ್ಟೆ. ಅದರಿಂದ ಏನೂ ಪ್ರಯೋಜನವಾಗಲಿಲ್ಲ.

ಹೀಗೆ ಬೆಲೆ ಕುಸಿತ, ಸರಕು - ಸಾಗಣೆ ಸುಂಕ ಮತ್ತು ವ್ಯಾಪಾರದ ಏರು ಇಳಿವುಗಳ ಮಧ್ಯೆ ನಿಕಟವಾದ ಒಂದು ಸಂಬಂಧವು ಏರ್ಪಟ್ಟಿದ್ದುದನ್ನು ನೋಡಬಹುದು. ೧೯ನೇ ಶತಮಾನದ ಮೈಸೂರಿನ ಪರಿಸ್ಥಿತಿಯು, ಸರಕು ಉತ್ಪಾದನೆಯ ಮಾಲು ಮತ್ತು ನಗದು ಹಣ ಮಧ್ಯ ಪ್ರವೇಶಗಳ ಒಂದು ಮಾದರಿಯಾಗಿತ್ತು. ವಸಾಹತುಸಾಹಿ ಪೂರ್ವ ಮೈಸೂರಿನ ಅವಶೇಷಗಳು ಇನ್ನೂ ಮುಂದುವರಿದಿದ್ದವು. ಕರಿಮೆಣಸು, ಏಲಕ್ಕಿ, ಅಡಿಕೆಗಳು ಮೈಸೂರಿನ ಹೊರಗೆ ಮಾರಕಟ್ಟೆಯನ್ನು ಕಂಡುಕೊಳ್ಳಬೇಕಾಯಿತು. ಇದಕ್ಕೆ ನೂರಾರು ಸಾಯರ್‌ಕಟ್ಟೆಗಳ ಸ್ಥಾಪನೆ ದೊಡ್ಡ ಅಡ್ಡಿಯಾಯಿತು. ಏಕೆಂದರೆ ಅವುಗಳಿಂದಾಗಿ ಹಳ್ಳಿಯಿಂದ ಹಳ್ಳಿಗೆ ತಾಲೂಕಿನಿಂದ ತಾಲೂಕಿಗೆ ಈ ಸರಕುಗಳು ಚಲಿಸುವುದು ದುಸ್ತರವಾಯಿತು. ಇದರಿಂದ ಈ ವಸ್ತುಗಳು ರಾಜ್ಯದ ಹೊರಕ್ಕೆ ರಫ್ತಾಗಿ ಹರಿಯುವ ಬದಲು ರಾಜ್ಯದೊಳಗೆ ಮಡುಗಟ್ಟಿ ನಿಂತುದನ್ನು ನೋಡುತ್ತೇವೆ. ಇದನ್ನು ಬ್ರಿಟಿಷ್ ದಾಖಲೆಗಳು ಗಮನಿಸಿವೆ. ಆದರೆ ಬ್ರಿಟಿಷ್ ಲೇಖಕರು ಮತ್ತು ಮೈಸೂರಿನ ಮುಂದಿನ ಇತಿಹಾಸಕಾರರು ಇದನ್ನು ತಪ್ಪಾಗಿ ವ್ಯಾಖ್ಯಾನಿಸಿದ್ದಾರೆ.

"ನಮ್ಮ ಇತಿಹಾಸಲೇಖನ ಸಂಪ್ರದಾಯದಲ್ಲಿ ಕಂಡುಬಂದಿರುವ ಒಂದು ಬಲವಾದ ಭಾವನೆಯೆಂದರೆ ಭಾರತದ ಔದ್ಯಮೀಕರಣ ಮತ್ತು ಆಧುನೀಕರಣಗಳಿಗೆ ವಹಾಸತುಶಾಹಿಯು ಅತ್ಯಗತ್ಯವಾಗಿತ್ತು ಎಂಬುದು. ಫರ್ನಿವಾಲ್ ಅಂತಹ ವಿದ್ವಾಂಸರೂ ಕೂಡ ಆಧುನಿಕ ಭಾರತವು ಆಧುನಿಕ ಯೂರೋಪಿನಂತೆಯೇ ಬೆಳೆಯಿತು ಎಂಬ ಭಾವನೆಯನ್ನು ಇಟ್ಟುಕೊಂಡಿದ್ದರು. ಆತನ ಪ್ರಕಾರ ಭಾರತದಲ್ಲಿ ವಸಾಹತುಶಾಹಿ ಆರ್ಥಿಕತೆಯ ಬೆಳವಣಿಗೆ ಮತ್ತು ಬ್ರಿಟನ್ನಿನ ಕೈಗಾರಿಕಾ ಬಂಡವಾಳದ ಬೆಳವಣಿಗೆ ಏಕಕಾಲದಲ್ಲಿ ಆದಂಥವು. ಪರಸ್ಪರ ಹೆಣೆದುಕೊಂಡಿದ್ದುವು. ಫರ್ನಿವಾಲ್ ಮತ್ತು ಇತರರು ಮಾಡಿದ ಈ ಪ್ರಚಾರದ ಮಿಥ್ಯೆಯನ್ನು ಕೆಲವು ಭಾರತೀಯ ಇತಿಹಾಸಕಾರರು ಖಂಡಿಸಿದ್ದಾರೆ. ಹಾಗಾದರೆ ಅತ್ಯಂತ ಅಭಿವೃದ್ಧ ಔದ್ಯಮಿಕ ರಾಷ್ಟ್ರಗಳ ಆಡಳಿತಕ್ಕೆ ೨೦೦ ವರ್ಷಗಳಷ್ಟು ದೀರ್ಘಕಾಲ ಒಳಪಟ್ಟಿದ್ದರೂ ಇಲ್ಲಿ ಬಂಡವಾಳ ಶಾಹಿಯು ಏಕೆ ಬೆಳೆಯಲಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ. ವಸಾಹತುಶಾಹಿ ಆಧುನೀಕರಣ ಎಂಬ ಹೆಸರಿನಲ್ಲಿ ೧೯ನೇ ಶತಮಾನದ ಭಾರತದಲ್ಲಿ ವಾಸ್ತವವಾಗಿ ಆದುದಾರೂ ಏನು ? ಅದು ಭಾರತವನ್ನು ಮಾದರಿ ವಸಾಹತು ದೇಶವಾಗಿ, ಮಾದರಿ ಅನಭಿವೃದ್ಧಿ ದೇಶವಾಗಿ ಪರಿವರ್ತಿಸಿದುದು"[8] ಎಂದು ಸೆಬಾಸ್ಟಿಯನ್ ಜೋಸೆಫ್ ಹೇಳುತ್ತಾರೆ.

ತಿರುವಾಂಕೂರ್, ಕೊಚ್ಚಿನ್ ಮೊದಲಾದ ರಾಜ್ಯಗಳು ಮೆಣಸು ಮೊದಲಾದ ವಸ್ತುಗಳ ರೂಪದಲ್ಲಿ ಸಬ್ಸಿಡಿಯರಿಯನ್ನು ಪಾವತಿ ಮಾಡುತ್ತಿದ್ದರೂ, ಮೈಸೂರು ಮಾತ್ರ ನಗದು ಗಟ್ಟಿ ಹಣವಾಗಿಯೇ ಪಾವತಿ ಮಾಡಬೇಕಾಯಿತು. ಕಂದಾಯವನ್ನು ರೈತರಿಂದ ನಗದಾಗಿ ವಸೂಲಿ ಮಾಡತೊಡಗಿದುದಕ್ಕೆ ಇದೇ ಕಾರಣ. ಹಾಗೆಯೇ ಬೆಳೆಗಳನ್ನು ಕೊಯ್ಲಿಗೆ ಮೊದಲೇ ಮಾರಿಬಿಡುವ ಅಥವಾ ಅಡಮಾನ ಹಾಕುವ ಕಡ್ಡಾಯ ಪರಿಸ್ಥಿತಿ ಉಂಟಾಗುವುದಕ್ಕೂ ಇದೇ ಕಾರಣ.

ಮೈಸೂರು ಸಂಸ್ಥಾನವು ಹೆಚ್ಚುಮಟ್ಟಿಗೆ ಕೃಷಿ ಜಮೀನುಗಳಿಂದ ಸುತ್ತುವರಿದ ರಾಜ್ಯವಾಗಿ ಮಾತ್ರ ಉಳಿದುಕೊಂಡಿದ್ದುದರಿಂದ ಅಂತಾರಾಷ್ಟ್ರೀಯ ವ್ಯಾಪಾರ ವಾಣಿಜ್ಯಗಳಿಗೆ ಅವಕಾಶ ಕೊಡುವ ಹೆಚ್ಚಿನ ಕರಾವಳಿ ಭಾಗವಿರಲಿಲ್ಲ. ಮೈಸೂರು ಆರ್ಥಿಕವಾಗಿ ಸ್ವತಂತ್ರವಾಗುವುದು ಬ್ರಿಟಿಷ್ ಪ್ರಭುತ್ವಕ್ಕೆ ಇಷ್ಟವಿರಲಿಲ್ಲ. ಆದ್ದರಿಂದ ಉಪ್ಪು ಮತ್ತು ಶ್ರೀಗಂಧಗಳ ಮೇಲೆ ಬ್ರಿಟಿಷ್‌ಸ್ವಾಮ್ಯವನ್ನು ಹೇರಲಾಯಿತು. ಪರೋಕ್ಷಾಡಳಿತ ಸಮಯದಲ್ಲಿ ಸಂಪನ್ಮೂಲ ವರ್ಧನೆಗೆ ರಾಜ್ಯವು ಹೆಚ್ಚು ಪ್ರಯತ್ನ ಮಾಡಲು ಬ್ರಿಟಿಷ್‌ನೀತಿ ಅವಕಾಶ ಕೊಡಲಿಲ್ಲ.

"೧೮೬೩ರಲ್ಲಿ ಒಂದು ಸರ್ವೆ ಮತ್ತು ಸೆಟ್ಲ್‌ಮೆಂಟ್ ಇಲಾಖೆಯನ್ನು ಸ್ಥಾಪಿಸಲಾಯಿತು. ಆಮೇಲೆ ೧೮೬೮ರಲ್ಲಿ ಇನಾಮ್ ಕಮಿಷನ್ ಅಸ್ತಿತ್ವಕ್ಕೆ ಬಂದಿತು. ಕಂದಾಯ ವ್ಯವಸ್ಥೆಯಲ್ಲಿ ಕಂಡುಬರುತ್ತಿದ್ದ ಮೋಸ, ವಂಚನೆ, ಭ್ರಷ್ಟಾಚಾರಗಳಿಗೆ ಶಾನುಭೋಗರು, ಪಟೇಲರು ಮೊದಲಾದವರ ಸಾಂಪ್ರದಾಯಿಕ ಆಡಳಿತಶಾಹಿಯೇ

ಕಾರಣ ಎಂದು ಬೌರಿಂಗ್ ದೂರಿದನು. ಒಣ ಜಮೀನುಗಳ ಮೇಲೆಯೇ ೫೯೬ ಕಂದಾಯ ದರಗಳಿದ್ದವು ಎಂಬುದನ್ನು ತೋರಿಸಿದನು. ದರಗಳು ರೈತರಿಂದ ರೈತರಿಗೆ, ಸ್ಥಳದಿಂದ ಸ್ಥಳಕ್ಕೆ ಬದಲಾಗುತ್ತಿದ್ದವು. ಆದರೆ ಬೌರಿಂಗ್‌ನೂ ಸ್ಥಳೀಯ ಪರಿಸ್ಥಿತಿಯ ಅರಿವಿರದ, ದುರುಪಯೋಗಕ್ಕೆ ಪ್ರಸಿದ್ಧರಾದ ಯುರೋಪಿಯನ್ ಸೂಪರಿಂಟೆಂಡೆಂಟ್‌ರ ಬಗ್ಗೆ ಏನನ್ನೂ ಹೇಳದೆ ಮೌನವಾದನು. ಚಿತ್ರದುರ್ಗ ವಿಭಾಗವೊಂದರಲ್ಲೇ ಜಮೀನಿನ ೧೧ ಬಗೆಗಳಿದ್ದವು. ೪೬೫ ಕಂದಾಯ ದರಗಳಿದ್ದವು. ಬೌರಿಂಗ್‌ನ ಸರ್ವೆ ಸೆಟ್ಲ್‌ಮೆಂಟ್‌ನಲ್ಲಿಯೂ ಏಕರೂಪದ ನಿಯಮಗಳನ್ನು ಅನುಸರಿಸಲಾಗಲಿಲ್ಲ. ಉದಾಹರಣೆಗೆ ಶಿವಮೊಗ್ಗದ ತೋಟಗಳ ಮಾಲೀಕರು ಇಮ್ಮಟಿ ಅಧಿಕ ಭೂಕಂದಾಯವನ್ನು ಪಾವತಿ ಮಾಡಬೇಕಾಗಿತ್ತು. ಜೊತೆಗೆ ಸರಕಿನ ಮೇಲೆ ಸಾಯರ್ ಸುಂಕಗಳನ್ನು ತೆರಬೇಕಾಗಿತ್ತು''. [9]

''ಇನ್ನೊಂದು ಮುಖ್ಯವಾದ ಕೊರತೆ - ಬಹಳವಾಗಿ ಬಡಾಯಿ ಕೊಚ್ಚಿಕೊಂಡ ರಯತ್‌ವಾರಿ ಪದ್ಧತಿಯ ಜೊತೆ ಜೊತೆಗೆ ಇನಾಂದಾರಿ ಕಂದಾಯ ನಿಗದಿಯು ಇದ್ದುದು. ಬೌರಿಂಗ್‌ನು ಮಾಡಿದ ಕಂದಾಯ ನಿಗದಿಯಿಂದ ವಸಾಹತು ಖಜಾನೆಗೆ ಹೆಚ್ಚಿನ ವರಮಾನವೇನೋ ಹರಿದುಬಂದಿತು. ಆದರೆ ಬೇಗನೆಯೇ ರೈತರ ಶವಪೆಟ್ಟಿಗೆಯ ಕೊನೆಯ ಮೊಳೆಯನ್ನು ಹೊಡೆಯಲಾಯಿತು. ೧೮೭೪-೭೮ರ ಕ್ಷಾಮ ಮತ್ತು ಆರ್ಥಿಕ ಬಿಕ್ಕಟ್ಟಿಗೂ, ೧೯ನೇ ಶತಮಾನದ ೭ನೇ ದಶಕಗಳಲ್ಲಿ ನಡೆದ ಸರ್ವೆ ಸೆಟ್ಲ್‌ಮೆಂಟ್‌ಗಳಿಗೂ ಬಹುವಾದ ಸಂಬಂಧವಿದ್ದಿತು'' [10] ಎಂದು ಡಾ. ಸೆಬಾಸ್ಟಿಯನ್ ಜೋಸೆಫ್ ಅಭಿಪ್ರಾಯಪಡುತ್ತಾರೆ.

ಈ ಬಗೆಯಲ್ಲಿ ವಹಾಸತುಪೂರ್ವ ಕರ್ನಾಟಕದಲ್ಲಿ, ಸರಕು ಉತ್ಪಾದನೆ, ವಾಣಿಜ್ಯ ವ್ಯವಹಾರಗಳ ಅತ್ಯಂತ ಭರಾಟೆಗೆ ತಳಹದಿಯಾಗಿದ್ದ ಕೃಷಿಕ್ಷೇತ್ರವು, ಬ್ರಿಟಿಷರ ಪರೋಕ್ಷ ಹಾಗೂ ಪ್ರತ್ಯಕ್ಷ ಆಡಳಿತದಿಂದಾಗಿ ಸಂಪೂರ್ಣವಾಗಿ ನೆಲಕಚ್ಚಿತು. ಕರ್ನಾಟಕದ ಇತಿಹಾಸವು ೮ನೇ ಶತಮಾನದಿಂದ ೧೮ನೇ ಶತಮಾನದವರೆಗೆ ಒಂದು ಕ್ರಮಾನುಗತವಾದ ವಿಕಾಸವನ್ನು ಸಾಧಿಸುತ್ತಾ ಕೈಗಾರಿಕಾ ಉತ್ಪಾದನೆಯ ಮೊದಲ ಹಂತಕ್ಕೆ ಬಂದು ತಲುಪಿತ್ತು. ಆದರೆ ಬ್ರಿಟಿಷರು ಈ ರಾಜ್ಯವನ್ನು ತಮ್ಮ ಸಾಮ್ರಾಜ್ಯಶಾಹಿ ಆರ್ಥಿಕತೆಯ ಕೃಷಿ ಅನುಬಂಧ ಪ್ರದೇಶವನ್ನಾಗಿ ಮಾರ್ಪಡಿಸಿ ಕೊಂಡಿದ್ದರಿಂದ ವಿಕಾಸದ ಪ್ರಕ್ರಿಯೆ ತಿರುವುಮುರುವಾಯಿತು.

ಮೊದಲೇ ಚರ್ಚಿಸಿದಂತೆ ಕೃಷಿವರ್ಗದ ಬಗೆಗೆ ವಸಾಹತುಶಾಹಿ ನೀತಿಯೇ ಗ್ರಾಮೀಣ ಬಡತನಕ್ಕೆ ಬಹುವಾಗಿ ಕಾರಣವಾಯಿತು. ಕೃಷಿ ಹಿಂದುಳಿದಿರುವಿಕೆಗೂ , ಸಾವಿರಾರು ಜನ ಭೂರಹಿತರ ಕೃಷಿ ಕೂಲಿಕಾರರ ನಿರುದ್ಯೋಗಕ್ಕೂ ಅದೇ ಹೊಣೆ. ಚಲಗೇಣಿದಾರರು ಮತ್ತು ಸಣ್ಣ ಜಮೀನುದಾರರು ಗೇಣಿಯನ್ನಾಗಲೀ, ತೆರಿಗೆಯನ್ನಾಗಲೀ ಪೂರ್ತಿ ಪಾವತಿ ಮಾಡಲು ಸಾಧ್ಯವಾಗದೇ ಕಷ್ಟಪಡುತ್ತಿದ್ದರು. ಬ್ರಿಟಿಷರ ನೀತಿಯು ಬಂಡವಾಳದ ಅಥವಾ ಹೆಚ್ಚುವರಿಯ ಸಂಗ್ರಹ ಮಾಡಿಕೊಳ್ಳಲು

ಮಧ್ಯಮ ಮತ್ತು ಕೆಳ ಕೃಷಿ ವರ್ಗಗಳಿಗೆ ಅವಕಾಶ ಕೊಡುತ್ತಿರಲಿಲ್ಲ. ಆದ್ದರಿಂದ ಅವರು ಯಾವಾಗಲೂ ಲೇವಾದೇವಿಗಾರರ ಬಳಿಗೆ, ಇಲ್ಲವೇ ವರ್ತಕರ ಬಳಿಗೆ, ಇಲ್ಲವೇ ದೊಡ್ಡ ಜಮೀನುದಾರರ ಬಳಿಗೆ ಬಂಡವಾಳಕ್ಕಾಗಿ ಹೋಗಿ ನಿಲ್ಲುತ್ತಿದ್ದರು. ಕೆಲವರು ತಮ್ಮ ಬೆಳೆಯನ್ನೇ ಒತ್ತೆಯಿಡುತ್ತಿದ್ದರು. ಇತರರು ರೆವಿನ್ಯೂ ಬಾಕಿ ವಸೂಲಿಗಾಗಿ ಅವರ ಭೂಮಿಯನ್ನು ಸರಕಾರವು ಮಾರಿದ್ದರಿಂದ, ಅಥವಾ ನ್ಯಾಯಾಲಯದ ಮೂಲಕ ಸಾಲ ತೀರುವೆಗಾಗಿ ಮಾರಿದ್ದರಿಂದ ನಿರ್ಗತಿಕರಾದರು.

ಹೀಗೆ ೧೯ನೇ ಶತಮಾನದ ವಸಾಹತುಶಾಹಿ ವ್ಯವಸ್ಥೆಯಲ್ಲಿನ ಪರಿಸ್ಥಿತಿಯು, ಸಾವಿರಾರು ಜನ ಸಣ್ಣ ಮತ್ತು ಮಧ್ಯಮವರ್ಗದ ರೈತರು ಹಾಗೂ ಗೇಣಿದಾರರಿಗೆ ಬಿಕ್ಕಟ್ಟಿನದಾಯಿತು. ೨೦ನೇ ಶತಮಾನದಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯ ಅಸ್ತವ್ಯಸ್ತತೆಯಿಂದಾಗಿ ಮತ್ತು ಜಾಗತಿಕ ಯುದ್ಧಗಳಿಂದಾಗಿ ಅವರ ಬಡತನ ಇನ್ನೂ ಅಧಿಕವಾಯಿತು. ವಸಾಹತು ಆಡಳಿತದಲ್ಲಿ ಈ ವರ್ಗಗಳಲ್ಲಿ ಉಂಟಾದ ಹತಾಶೆ, ರಾಷ್ಟ್ರೀಯತಾಪ್ರಜ್ಞೆಯನ್ನು ಸ್ಪಷ್ಟವಾಗಿ ಕೆರಳಿಸಿದ ಅಂಶಗಳಲ್ಲಿ ಒಂದಾಯಿತು.

ಈ ಬಗೆಯ ಬೆಳವಣಿಗೆಯೊಂದಿಗೆ ಕರ್ನಾಟಕದ ಭೂಭಾಗಗಳನ್ನು ಬ್ರಿಟಿಷರು ಒಡೆದು ಹಂಚಿದ್ದರಿಂದ ರೂಪುಗೊಳ್ಳತೊಡಗಿದ್ದ ಒಂದು ರಾಷ್ಟ್ರೀಯತಾ ಸಮುದಾಯದ ವಿವಿಧ ಪ್ರಾಂತ್ಯಗಳ ನಡುವೆ ಅಸಮ ಬೆಳವಣಿಗೆಗಳನ್ನು ಉಂಟುಮಾಡಿತು. ೧೯ನೇ ಶತಮಾನದ ಉತ್ತರಾರ್ಧದ ವೇಳೆಗೆ ಬ್ರಿಟಿಷರು ಗೆದ್ದುಕೊಂಡಿದ್ದ ಹಾಗೂ ವಿವಿಧ ಆಡಳಿತದ ಪರಿಧಿಯಲ್ಲಿ ಹಂಚಿಹೋಗಿದ್ದ ಕನ್ನಡ ಭೂ ಪ್ರದೇಶಗಳ ಸಂಖ್ಯೆ ೨೨ ಆಗಿತ್ತು. ಅಲ್ಲದೆ ಇದರ ಜೊತೆಗೆ ೩ ಕಂಟೋನ್ಮೆಂಟ್‌ಗಳು, ೯ ಜಹಗೀರುಗಳು ಇದ್ದವು. ಇವುಗಳಲ್ಲಿ ಮುಂಬೈ - ಕರ್ನಾಟಕದ ಪ್ರದೇಶಗಳು ಸೇರಿಕೊಂಡಿದ್ದವು. ಬ್ರಿಟಿಷ್ ಅಧಿಕಾರಿಗಳು, ಕೋರ್ಟ್, ಕಛೇರಿ, ಕಾನೂನು, ಪೋಲೀಸರು, ಸೇನೆ, ಶಿಕ್ಷಣ, ಕಂದಾಯ ಹಾಗೂ ಆಡಳಿತದ ವಿಚಾರದಲ್ಲಿ ಎದುರಾಗುತ್ತಿದ್ದ ತೊಡಕುಗಳನ್ನು ನಿವಾರಿಸಿಕೊಳ್ಳಲು ಐದು ಪ್ರಮುಖ ಆಡಳಿತ ಘಟಕಗಳನ್ನಾಗಿ ವಿಂಗಡಿಸಿದರು. ಇದರಿಂದ ಕನ್ನಡಿಗರು ಮುಂಬೈ-ಕರ್ನಾಟಕ, ಮೈಸೂರು-ಕರ್ನಾಟಕ (ಸಂಸ್ಥಾನ) ಹೈದರಾಬಾದ್-ಕರ್ನಾಟಕ (ನಿಜಾಮ), ಮದರಾಸು-ಕರ್ನಾಟಕ ಹಾಗೂ ಕೊಡಗು ಘಟಕಗಳಲ್ಲಿ ಹರಿದು ಹಂಚಿ ಹೋಗುವಂತೆ ಆಯಿತು.

ಮುಂಬೈ-ಕರ್ನಾಟಕವು ನಾಲ್ಕು ಜಿಲ್ಲೆಗಳನ್ನು ಒಳಗೊಂಡಿದ್ದ ಭೂಪ್ರದೇಶ. ಅವು ಬಿಜಾಪುರ, ಧಾರವಾಡ, ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳು, ಇವುಗಳಲ್ಲದೇ, ಸಾಂಗ್ಲಿ, ಮುಧೋಳ, ರಾಮದುರ್ಗ, ಜಮಖಂಡಿ, ಕೊಲ್ಲಾಪುರ, ಔದ್, ಮೀರಜ್, ಕುರಂದವಾಡ, ಜತ್ತಾ, ಅಕ್ಕಲಕೋಟೆ, ಸವಣೂರು ಸಂಸ್ಥಾನಗಳನ್ನು ಹಾಗೂ ಜಹಗೀರುಗಳನ್ನು ಹೊಂದಿದ್ದ ಪ್ರದೇಶವಾಗಿತ್ತು. ಬ್ರಿಟಿಷರ ಸೇನೆ ಇದ್ದಂತೆ ಬೆಳಗಾವಿಯ ದಂಡು ಪ್ರದೇಶವೂ ಈ ಘಟಕದ್ದೇ. ಈ ಘಟಕದಲ್ಲಿ

ಬಂಗಾಳಿ, ಗುಜರಾತಿ, ಸಿಂಧಿ, ಮರಾಠಿ ಮೊದಲಾದ ಭಿನ್ನ ಭಾಷಿಕರ ಒತ್ತಡಗಳಿಂದ ಕನ್ನಡ ನಾಡು-ನುಡಿ ಸಂಸ್ಕೃತಿಗಳ ಅನನ್ಯತೆಗೆ ತೀವ್ರವಾದ ಆಘಾತವಾಗಿತ್ತು.

ಇದರಂತೆಯೇ ಹೈದರಾಬಾದ್ - ಕರ್ನಾಟಕ ಎನ್ನುವುದು ಬೀದರ್, ಗುಲ್ಬರ್ಗಾ, ರಾಯಚೂರು, ಈ ಮೂರು ಜಿಲ್ಲೆಗಳ ಪ್ರದೇಶಗಳನ್ನು ಒಳಗೊಂಡಿತ್ತು. ಟೀಪುವಿನ ನಂತರ ಹೈದರಾಬಾದ್‌ನ ನಿಜಾಮನ ಆಡಳಿತಕ್ಕೆ ಈ ಪ್ರಾಂತ್ಯ ಸೇರಿದುದರಿಂದ, ಅಲ್ಲಿ ಕೃಷಿ ಪದ್ಧತಿ ಲೂಟಿಗೊಳಗಾಯಿತು. ಭಾಷೆ ಮತ್ತು ಸಂಸ್ಕೃತಿ ವಿಕಾಸಗಳ ವಿಷಯದಲ್ಲಿಯೂ ಕನ್ನಡ ರಾಷ್ಟ್ರೀಯತೆಯು ಒಟ್ಟಾರೆ ಪ್ರಗತಿಯ ದಿಕ್ಕಿನಿಂದ ದೂರ ಸರಿಯುವಂತಾಯಿತು.

ಬ್ರಿಟಿಷ್ ಆಡಳಿತವು ರೂಪುಗೊಳ್ಳತೊಡಗಿದ್ದ ಕನ್ನಡ ರಾಷ್ಟ್ರೀಯತೆಯ ಪ್ರಾಂತ್ಯಗಳನ್ನು ಹರಿದು ಹಂಚಲು ಬಹಳ ಮುಖ್ಯವಾದ ಕಾರಣವೆಂದರೆ ಅವರ ಆರ್ಥಿಕ ಹಿತಾಸಕ್ತಿಯ ರಕ್ಷಣೆಗಾಗಿ, ಅವರ ವಸಾಹತು ಅಧಿಕಾರವನ್ನು ಇಲ್ಲಿ ಭದ್ರವಾಗಿ ನೆಲೆಯೂರುವಂತೆ ಮಾಡಿಕೊಳ್ಳುವುದಾಗಿತ್ತು. ನಾವಿಲ್ಲಿ ಗಮನಿಸಬೇಕಾಗಿರುವ ಒಂದು ಅಂಶವೆಂದರೆ ಭಾರತಕ್ಕೆ ಬಂದು ವಸಾಹತುಶಾಹಿಗಳಾಗಿ ವರ್ತಿಸುತ್ತಿದ್ದ ಇಂಗ್ಲಿಷರು,ಒಂದು ಭಾಷಾತ್ಮಕ ಸಮುದಾಯವಾಗಿ, ಒಂದೇ ಸಾಮ್ರಾಜ್ಯದಡಿಯಲ್ಲಿ ಬದುಕುತ್ತಾ, ರಾಷ್ಟ್ರತ್ವದ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುತ್ತಾ, ಒಂದು ರಾಷ್ಟ್ರ ಪ್ರಭುತ್ವವಾಗಿ ಹಾಗೂ ರಾಷ್ಟ್ರೀಯತಾ ದೇಶವಾಗಿ ರೂಪುಗೊಂಡವರಾಗಿದ್ದರು. ಅವರೊಳಗೆ ಈ ಬಗೆಯ ರಾಷ್ಟ್ರಪ್ರಜ್ಞೆ ಬಹಳ ಬಲವಾದ ಅಂಶವಾಗಿ ಕೆಲಸ ಮಾಡುತ್ತಿತ್ತು. ಆ ಅನುಭವದ ಹಿನ್ನೆಲೆಯಲ್ಲಿ ಭಾರತದ ಯಾವುದೇ ಒಂದು ರಾಷ್ಟ್ರೀಯ ಪ್ರಾಂತ್ಯವನ್ನು ಒಂದೇ ಆಗಿ ಇರಲು ಬಿಟ್ಟರೆ, ಕಾಲಕ್ರಮೇಣ ಅದು ತನ್ನ ರಾಷ್ಟ್ರೀಯತಾ ಸ್ವಭಾವವನ್ನು ದೃಢಪಡಿಸಿಕೊಂಡು, ತನ್ನ ಆರ್ಥಿಕ ಮತ್ತು ರಾಜಕೀಯ ಆಧಿಪತ್ಯದ ವಿರುದ್ಧ ತಿರುಗಿಬೀಳುತ್ತದೆ ಎಂಬುದನ್ನು ಅವರು ತರ್ಕಿಸಬಲ್ಲವರಾಗಿದ್ದರು. ಆದ್ದರಿಂದಲೇ ಟೀಪುವಿನ ಸಮಯದ ಹೊತ್ತಿಗೆ ಒಂದು ಸುಸಂಘಟಿತ ಆರ್ಥಿಕ ರಾಷ್ಟ್ರೀಯ ಘಟಕವಾಗಿ ರೂಪುಗೊಂಡಿದ್ದ ಮೈಸೂರು ಸಾಮ್ರಾಜ್ಯವನ್ನು ವಿವಿಧ ಪ್ರಾಂತ್ಯಗಳಾಗಿ ಹರಿದು ಹಂಚಿದರು.

ಬ್ರಿಟಿಷರ ಆಕ್ರಮಣವು ನಡೆದ ಮಾರನೆಯ ವರ್ಷದಿಂದಲೇ ಕನ್ನಡ ಭೂಪ್ರದೇಶಗಳಲ್ಲಿ ಆರಂಭವಾದ ಬಂಡಾಯಗಳು, ರೈತದಂಗೆಗಳು ಮುಂತಾದವುಗಳು, ಬ್ರಿಟಿಷರಿಗೆ ಈ ನಾಡಿನ ಜನ ತಮ್ಮ ಪರಕೀಯ ಆಳ್ವಿಕೆಗೆ ಸುಲಭವಾಗಿ ಬಗ್ಗುವವರಲ್ಲ ಎಂಬ ಭಾವನೆಯನ್ನು ಮೂಡಿಸಿದ್ದವು. ೧೮೦೦ರಲ್ಲಿ ನಡೆದ ದೊಂಡಿಯಾ ವಾಗನ ಪ್ರತಿಭಟನೆ, ೧೮೧೯ರಲ್ಲಿ ನಡೆದ ಕೊಪ್ಪಳದ ಬಂಡಾಯ, ೧೮೩೦ರಲ್ಲಿ ನಡೆದ ಬೀದರ್ ಪ್ರತಿಭಟನೆ, ೧೮೨೪ರಲ್ಲಿ ಸಿಂದಗಿಯ ಬಂಡಾಯ, ೧೮೨೪ರಲ್ಲಿ ಕಿತ್ತೂರು ಚೆನ್ನಮ್ಮನ ಪ್ರತಿರೋಧ, ೧೮೨೯-೩೦ರಲ್ಲಿ ಸಂಗೊಳ್ಳಿರಾಯಣ್ಣನ ದಂಗೆ, ೧೮೩೦-೩೧ರಲ್ಲಿ ನಗರ ಹಾಗೂ ಕೆನರಾಗಳ

ಬಂಡಾಯ, ೧೮೩೫ರಲ್ಲಿ ಕೊಡಗಿನಲ್ಲಿ ಪ್ರತಿಭಟನೆ, ೧೮೫೭ರಲ್ಲಿ ಸುರಪುರದ ದಂಗೆ, ಹಲಗಲಿಯ ಬೇಡರ ಪ್ರತಿಭಟನೆ, ನರಗುಂದ, ಮುಂಡರಗಿ, ಸೂಪ ಮುಂತಾದ ಪ್ರತಿರೋಧಗಳು,ಇಲ್ಲಿ ವ್ಯಕ್ತವಾಗುತ್ತಿದ್ದ ಪರಕೀಯ ಆಳ್ವಿಕೆಯ ವಿರುದ್ಧದ ಸ್ವಾತಂತ್ರ್ಯಾಕಾಂಕ್ಷಿ ಹೋರಾಟಗಳಾಗಿದ್ದವು.

ಈ ಹಿನ್ನೆಲೆಯಲ್ಲಿ ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಗನುಗುಣವಾಗಿ ಹಾಗೂ ತಮ್ಮ ಕಚ್ಚಾ ವಸ್ತು ಪೂರೈಕೆಯ ಉದ್ದೇಶಕ್ಕನುಗುಣವಾಗಿ, ಈ ಪ್ರಾಂತ್ಯಗಳನ್ನು ಛಿದ್ರಗೊಳಿಸಿ ಬೇರೆ ಬೇರೆ ಆಡಳಿತ ಘಟಕಗಳಡಿ ಜೋಡಿಸಿ ದಮನಿಸಿದರು. ಟಿಪ್ಪು ಕಾಲಾವಧಿಯ ಹೊತ್ತಿಗೆ, ವಾಣಿಜ್ಯ ಕ್ಷೇತ್ರದಲ್ಲಿ ರಾಷ್ಟ್ರೀಯ ವರ್ತಕರಾಗಿ ಸ್ಥಳೀಯ ಮಾರುಕಟ್ಟೆಯನ್ನಾಧರಿಸಿ ಬೆಳೆದಿದ್ದ ಸಮುದಾಯಗಳನ್ನು ಗಮನಿಸಿದ್ದೇವೆ. ಹಾಗೆಯೇ ಹಲವಾರು ವೃತ್ತಿನಿರತ ಶೂದ್ರ ಜಾತಿಗಳು, ಸರಕು ವಹಿವಾಟಿನ ಹಿನ್ನೆಲೆಯಲ್ಲಿ ಬಂಡವಾಳಿಗರಾಗಿ ಮಾರ್ಪಡುವ ಪ್ರಕ್ರಿಯೆಗೆ ಒಳಗಾಗಲು ಆರಂಭಿಸಿದ್ದುದನ್ನು ಗಮನಿಸಿದ್ದೇವೆ. ಕೃಷಿ ಹಾಗೂ ಕೈಗಾರಿಕೆಗಳ ನಡುವೆ ಅವಿನಾಭಾವಸಂಬಂಧ, ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳ ನಡುವೆ ಏರ್ಪಟ್ಟ ಅಂತರ್‌ಪ್ರಾಂತೀಯ ಶ್ರಮವಿಭಜನೆ, ಸರಕುಗಳ ವಿಶಿಷ್ಟೀಕರಣ, ಪರಸ್ಪರಾವಲಂಬನೆ ಮುಂತಾದ ಆರ್ಥಿಕ ಏಕತೆಯ ಅಂಶಗಳನ್ನು ಗಮನಿಸಿದ್ದೇವೆ. ಉತ್ಪನ್ನಗಳ ವ್ಯಾಪಕ ವಹಿವಾಟಿನಿಂದ ಸಾರಿಗೆ ಸಂಪರ್ಕವು ಒಂದು ವ್ಯವಸ್ಥಿತ ಜಾಲವಾಗಿ ರೂಪುಗೊಂಡಿದ್ದುದನ್ನೂ ಗಮನಿಸಿದ್ದೇವೆ. ವರ್ತಕರ ಬಂಡವಾಳವು ಕೈಗಾರಿಕಾ ಬಂಡವಾಳವಾಗಿ ಮಾರ್ಪಡಲು ಶುರುವಾಗಿದ್ದ ಪ್ರಕ್ರಿಯೆಯ ಆರಂಭಿಕ ಸ್ಥಿತಿಯನ್ನು ಕನ್ನಡ ರಾಷ್ಟ್ರೀಯತೆಯ ಸಮುದಾಯವು ತಲುಪಿತ್ತು ಎಂಬುದನ್ನು ಗುರುತಿಸಿದ್ದೇವೆ. ಬ್ರಿಟಿಷ್ ಆಡಳಿತವು ತನ್ನ ವಸಾಹತು ನೀತಿಯಿಂದ ಕನ್ನಡ ರಾಷ್ಟ್ರೀಯತಾ ಬೆಳವಣಿಗೆಯ ಪ್ರಕ್ರಿಯೆಗಳನ್ನು ನುಚ್ಚುನೂರು ಮಾಡಿತು.

ಹೊಸದಾಗಿ, ಮತ್ತೆ ಮರುಕಳಿಸಿದ ಊಳಿಗಮಾನ್ಯ ಪಾಳೇಗಾರ ವರ್ಗಗಳ ಆಧಿಪತ್ಯ, ಹೊಸ ಕಂದಾಯ ನೀತಿ, ವಿದೇಶೀ ಸರಕುಗಳನ್ನು ತಂದು ಇಲ್ಲಿ ತುಂಬಿದ್ದು, ಕೃಷಿಯನ್ನು ಕೇವಲ ತಮ್ಮ ಸಾಮ್ರಾಜ್ಯಶಾಹಿ ಆರ್ಥಿಕತೆಗೆ ವಸಾಹತು ಅನುಬಂಧ ವನ್ನಾಗಿ ರೂಪಿಸಿದ್ದು ಕರ್ನಾಟಕತ್ವದ ಬೆಳವಣಿಗೆಗೆ ಹಾಗೂ ಅದರ ಜನನಕ್ಕೆ ಆಘಾತಕಾರಿ ಪೆಟ್ಟು ನೀಡಿತು. ಅದು ಈ ರಾಷ್ಟ್ರೀಯತೆಯು ಉದಯವಾಗುವ ಸಮಯಕ್ಕೆ ಹಲವು ಅಂಶಗಳಲ್ಲಿ ವಿಕಲಾಂಗವಾಗಿ ಉಳಿಯುವಂತಹ ಆಘಾತಗಳನ್ನು ಉಂಟುಮಾಡಿತ್ತು.

ಅದು ಸಂಸ್ಥಾನ ಪ್ರಾಂತ್ಯವಾಗಿರಲಿ, ಮುಂಬೈ-ಕರ್ನಾಟಕವಾಗಿರಲಿ, ಹೈದರಾಬಾದ್ ಕರ್ನಾಟಕವಾಗಿರಲಿ, ಕೊಡಗು - ಕರ್ನಾಟಕವಾಗಿರಲಿ, ಕರಾವಳಿ - ಕರ್ನಾಟಕವಾಗಿರಲಿ ಎಲ್ಲ ಕಡೆಗಳಲ್ಲಿ ಅದು ಮಾಡಿದ ಕೆಲಸವೊಂದೇ -

ವಸಾಹತುಶಾಹಿ ಲೂಟಿ. ಇಡೀ ಭಾರತವೇ ಅಂದು ಬ್ರಿಟಿಷ್ ವಸಾಹತು ಲೂಟಿಕಾರರ ಕೈಯಲ್ಲಿ, ಅವರ ಆರ್ಥಿಕ ವ್ಯವಸ್ಥೆಯ ಗಾಣದಲ್ಲಿ ಕಬ್ಬಾಗಿ ಅರೆಯಲ್ಪಡುತ್ತಿತ್ತು. ಅದರ ಸಿಹಿ ಸಾರವೆಲ್ಲ ವಸಾಹತುಶಾಹಿಯ ಮಾತೃದೇಶಕ್ಕೆ ಹರಿಯತೊಡಗಿತ್ತು. ವ್ಯಾಪಾರೀ ಆಶಯದಿಂದಲೇ ಭಾರತಕ್ಕೆ ಬಂದ ಆಂಗ್ಲರು ತಮ್ಮ ಎಲ್ಲಾ ಚಟುವಟಿಕೆಗಳನ್ನು ಬ್ರಿಟನ್ನಿನ ಅಭಿವೃದ್ಧಿಗೆ ಸೀಮಿತಗೊಳಿಸಿದ್ದರು ಎಂಬುದನ್ನು ಗ್ರಹಿಸಬೇಕಾಗಿದೆ. ಇವರ ಎಲ್ಲ ರೀತಿಯ ಉದಾರವಾದಿ, ಪ್ರಗತಿಪರ ಧೋರಣೆಗಳು ಇಂಡಿಯನ್ನರ ಪುರೋಭಿವೃದ್ಧಿಗಾಗಿ ಎಂಬುದನ್ನು ಆಮೂಲಾಗ್ರವಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಸರಿಸುಮಾರಾಗಿ ತಮ್ಮ ಮುನ್ನೂರೈವತ್ತು ವರ್ಷಗಳ ಕಾಲಾವಧಿಯಲ್ಲಿ ಬ್ರಿಟಿಷರು ಭಾರತದ ಸಂಪತ್ತನ್ನು ಆರ್ಥಿಕವಾಗಿ ಬರಿದು ಮಾಡುವ ನಿಟ್ಟಿನಲ್ಲಿಯೇ ಮಗ್ನರಾಗಿದ್ದರು.

''ಹೀಗೆ ಬರಿದು ಮಾಡಿದುದರ ಪ್ರಕ್ರಿಯೆಯ ಬಗ್ಗೆ ಅಧ್ಯಯನ ಮಾಡಿದ ಭಾರತೀಯ ವಿದ್ವಾಂಸರು 'ಬಸಿತ ಸಿದ್ಧಾಂತ' (ಡ್ರೈನ್ ಥಿಯರಿ) ವೊಂದನ್ನೇ ಹುಟ್ಟುಹಾಕಿದ್ದಾರೆ. ಈ ನಿಟ್ಟಿನಲ್ಲಿ ಆರ್ಥಿಕ ತಜ್ಞ ದಾದಾಭಾಯಿ ನವರೋಜಿ ಅವರ ಆರ್ಥಿಕ ಚಿಂತನೆಗಳು ಬಹಳ ಮುಖ್ಯವಾದವು. ಇವರು ತಮ್ಮ 'ಪಾವರ್ಟಿ ಅಂಡ್ ದಿ ಬ್ರಿಟಿಷ್ ರೂಲ್ ಇನ್ ಇಂಡಿಯಾ' (೧೮೭೧) ಕೃತಿಯಲ್ಲಿ ಇಂಡಿಯಾದ ಸಂಪನ್ಮೂಲಗಳು ಯಾವ ಮೌಲ್ಯ ಹಾಗೂ ಪ್ರಮಾಣದಲ್ಲಿ ಇಂಗ್ಲೆಂಡಿಗೆ ಹರಿದವು ಎಂಬುದನ್ನು ದಾಖಲಿಸಿದ್ದಾರೆ. ಅಲ್ಲದೆ ಇಂಡಿಯಾದ ಬಡತನಕ್ಕೆ ಇಂಗ್ಲಿಷರು ಸಂಪತ್ತನ್ನು ಬಸಿದುಕೊಂಡಿದ್ದೇ ಪ್ರಮುಖ ಕಾರಣವೆಂದು ರುಜುವಾತುಪಡಿಸಿದ್ದಾರೆ. ಈ ನೆಲೆಯಲ್ಲಿ ಆರ್.ಸಿ. ದತ್, ಜಿ.ಸಿ. ಸಿನ್ಹ, ಎಸ್.ಎನ್. ಬ್ಯಾನರ್ಜಿ, ಎಂ.ಜಿ. ರಾನಡೆ, ಜೋಷಿ ಮೊದಲಾದವರ ಆರ್ಥಿಕ ವಿಚಾರಗಳು ಹಾಗೂ ಅಂಕಿ - ಅಂಶಗಳು ಇಂಡಿಯಾದ ಈ ಹೊತ್ತಿನ ಆರ್ಥಿಕ ಹಿಂದುಳಿದಿರುವ ರೀತಿಗೂ ಸ್ಪಷ್ಟ ಕಾರಣಗಳಾಗಿ ಪರಿಣಮಿಸುತ್ತವೆ ''.[11]

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಇಲ್ಲಿನ ಚಿನ್ನ ಹಾಗೂ ಸಂಪನ್ಮೂಲಗಳನ್ನು ಇಂಗ್ಲೆಂಡಿಗೆ ರವಾನಿಸುತ್ತಿದ್ದುದರ ಬಗ್ಗೆ ಸ್ಪಷ್ಟ ಚಿತ್ರಣ ಸಿಗುತ್ತದೆ. ಅಂದರೆ ಇಲ್ಲಿಂದ ರಫ್ತಾಗುತ್ತಿದ್ದ ಕಚ್ಚಾ ಪದಾರ್ಥಗಳು ಸಿದ್ಧವಸ್ತುಗಳಾಗಿ ಬಂದು ಇಂಡಿಯಾದ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದ್ದವು. ಹೀಗೆ ಮಾರಾಟವಾದ ವಸ್ತುಗಳಿಂದ ಬಂದ ಲಾಭವು ಸಹ ಇಂಗ್ಲೆಂಡನ್ನೇ ತಲುಪುತಿತ್ತು. ಇದರಿಂದ ಇಲ್ಲಿ ಸಹಸ್ರಾರು ಬೃಹತ್ ಮತ್ತು ಸಣ್ಣ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು, ಕುಶಲಕರ್ಮಿಗಳು, ರೈತರು, ವ್ಯಾಪಾರಸ್ಥರು ಆರ್ಥಿಕವಾಗಿ ಪತನಗೊಂಡಿದ್ದರು. ೧೯ನೇ ಶತಮಾನದಲ್ಲಿ ಬಹಳ ತೀವ್ರವಾಗಿ ಈ ಪರಿಣಾಮ ಕಾಣಿಸಿಕೊಂಡಿತು.

ವಸಾಹತುಶಾಹಿ ಸರಕಾರದ ಆಡಳಿತ ವೆಚ್ಚ, ಬ್ರಿಟಿಷ್ ಅಧಿಕಾರಿಗಳ ಕುಟುಂಬ ನಿರ್ವಹಣಾ ವೆಚ್ಚ, ಅವರು ನಿವೃತ್ತರಾಗಿ ಇಂಗ್ಲೆಂಡಿಗೆ ತೆರಳಿದ ಮೇಲೂ ನಿವೃತ್ತಿ

ವೇತನ, ವಸಾಹತು ವಿಸ್ತರಣೆಗಾಗಿ ಇಂಡಿಯಾದ ಸೈನ್ಯ ಬಳಕೆಯ ಖರ್ಚು, ರಸ್ತೆ, ರೈಲು, ಟೆಲಿಗ್ರಾಫ್, ಸಂಪರ್ಕಗಳಿಗಾಗಿ ಭಾರತದ ಹಣ ಬಳಕೆ, ಆಹಾರ ಧಾನ್ಯ, ಸಾಂಬಾರ ಪದಾರ್ಥಗಳ ರವಾನೆ, ಕಚ್ಚಾ ಸಂಪನ್ಮೂಲಗಳ ರಫ್ತು ಹೀಗೆ ಹತ್ತು ಹಲವು ರೀತಿಯಲ್ಲಿ ಭಾರತವನ್ನು ಲೂಟಿ ಮಾಡಲಾಯಿತು. ಇಂತಹ ಆರ್ಥಿಕ ಶೋಷಣೆ ಭಾರತದ ಇನ್ನುಳಿದ ಪ್ರದೇಶಗಳ ಮೇಲೆ ಬೀರಿದ ಪ್ರಭಾವವನ್ನೇ ಕರ್ನಾಟಕದ ಮೇಲೂ ಬೀರಿತು. ನವರೋಜಿ, ಬ್ಯಾನರ್ಜಿ, ದತ್ತ ಮೊದಲಾದವರು ೧೯ನೇ ಶತಮಾನದಲ್ಲಿ ಮಿಲಿಯಗಟ್ಟಲೆ ಪೌಂಡ್, ಸ್ಟರ್ಲಿಂಗ್‌ಗಳ ರೂಪದಲ್ಲಿ ಭಾರತದ ಸಂಪತ್ತು ಇಂಗ್ಲೆಂಡಿಗೆ ತಲುಪಿದ್ದನ್ನು ಅಂಕಿ ಅಂಶಗಳ ಸಮೇತವಾಗಿ ನಿರೂಪಿಸಿದ್ದಾರೆ. ಬಹುಶಃ ವಿಶ್ವದ ಇನ್ನಾವುದೇ ರಾಷ್ಟ್ರದಿಂದಲೂ ಹರಿಯದೇ ಇದ್ದಷ್ಟು ಮೊತ್ತ ಭಾರತದಿಂದ ಹರಿದಿದೆ ಎನ್ನಲಾಗಿದೆ.[12]

ಬ್ರಿಟಿಷರ ವಸಾಹತು ನೀತಿಯು, ಇಲ್ಲಿನ ಸಂಪನ್ಮೂಲಗಳನ್ನು ಲೂಟಿ ಹೊಡೆದು, ತಮ್ಮ ದೇಶದಿಂದ ಸಿದ್ಧಸರಕುಗಳನ್ನು ತಂದು ಇಲ್ಲಿನ ಸ್ಥಳೀಯ ಮಾರುಕಟ್ಟೆಗಳಿಗೆ ತುಂಬಿದ್ದರಿಂದ, ವೃತ್ತಿನಿರತ ಕಸುಬುದಾರರ ಪಂಗಡಗಳು ಹೇಗೆ ನೆಲೆತಪ್ಪಿಹೋದವು ಎಂಬುದನ್ನು ಗಮನಿಸಲು ಮುಂಬೈ - ಕರ್ನಾಟಕ ಪ್ರಾಂತ್ಯದ ನಿದರ್ಶನವೊಂದನ್ನು ಉಲ್ಲೇಖಿಸಬಹುದು.

''ಕಮ್ಮಾರರು, ಕುಂಬಾರರು, ಗಾಣಿಗರು, ನೇಕಾರರು, ಕಲಾಯಿಗಾರರು, (ಮುಸ್ಲಿಮರು), ಬಡಗಿಗಳು, ಚಮ್ಮಾರರು, ಸೊನ್ನಗಾರರು, ಉಪ್ಪಾರರು, ಸಮ್ಮಗಾರರು, ಡೋಹರು ಮೊದಲಾದ ಕಸುಬುದಾರರು ಮುಂಬೈ - ಕರ್ನಾಟಕದ ಕೈಗಾರಿಕಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಲ್ಲದೇ ಈ ಭಾಗದಲ್ಲಿ ಕಾಗದ, ಪಾತ್ರೆಗಳು, ಬಳೆಗಳು, ಚಂದನದ ವಸ್ತುಗಳು ಮೊದಲಾದವುಗಳನ್ನು ತಯಾರಿಸುವ ಕೈಗಾರಿಕೆಗಳಿದ್ದವು. ಮುಂಬೈ - ಕರ್ನಾಟಕದ ಕೈಗಾರಿಕೆಗಳನ್ನು ಕಾರ್ಖಾನೆದಾರ್, ಮಾರವಾಡಿ, ಸ್ವತಂತ್ರ ಕುಶಲಕರ್ಮಿಗಳು ಹಾಗೂ ಸಣ್ಣ ಕೈಗಾರಿಕಾ ಕಾರ್ಮಿಕರು ನಡೆಸುತ್ತಿದ್ದರು. ಹತ್ತಿ ಇಲ್ಲಿನ ಮುಖ್ಯ ವಾಣಿಜ್ಯ ಬೆಳೆಯಾದ್ದರಿಂದ ಹತ್ತಿಯಾಧಾರಿತ ಕೈಗಾರಿಕೆಗಳು ಸ್ಥಾಪಿತವಾಗಿದ್ದವು. ಹತ್ತಿಯನ್ನು ಹರಿಯುವ, ಗಂಟುಕಟ್ಟುವ, ನೇಯುವ, ಬಣ್ಣ ಹಾಕುವ ಕಾರ್ಖಾನೆಗಳು ಇಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಖಾದಿಗೆ ಈ ಪ್ರದೇಶದಲ್ಲಿ ಹೆಚ್ಚಿನ ಪ್ರಾಶಸ್ತ್ಯವಿತ್ತು. ಮುಂಬೈ-ಕರ್ನಾಟಕದ ಗೋಕಾಕ, ಚಿಕ್ಕೋಡಿ, ಸಂಕೇಶ್ವರ, ಬೈಲಹೊಂಗಲ, ಬೆಳಗಾವಿ, ಮುರಗೋಡು, ಅಥಣಿ, ದೇಶನೂರು, ಶಹಾಪುರ, ಸವದತ್ತಿ, ಕಿತ್ತೂರು, ಮನ್ನೊಳ್ಳಿ, ಹುಬ್ಬಳ್ಳಿ, ಗದಗ, ಬೆಟಗೇರಿ, ಲಕ್ಕುಂಡಿ, ನರಗುಂದ, ಅಣ್ಣಿಗೇರಿ, ಇಲಕಲ್ಲು, ಹುನಗುಂದ, ಗೂಡೂರು, ಮಲ್ಲಾಪುರ, ಬಾಗಲಕೋಟೆ ಮೊದಲಾದ ಗ್ರಾಮಗಳಲ್ಲಿ ಸೀರೆ, ಧೋತಿ, ರುಮಾಲು ಜಮಖಾನೆ ಹಾಗೂ ಖಾದಿ ಸಿದ್ಧ ಉಡುಪುಗಳನ್ನು ತಯಾರಿಸುವ ಕೈಗಾರಿಕೆಗಳು ಕಾರ್ಯ ನಿರ್ವಹಿಸುತ್ತಿದ್ದವು. ಬ್ರಿಟಿಷರ ತಂತ್ರಜ್ಞಾನ ಹಾಗೂ ಅವರ ವೈಜ್ಞಾನಿಕ

ಪವರ್ ಲೂಮ್‌ಗಳಿಂದಾಗಿ ಸ್ಥಳೀಯವಾಗಿ ಅನೇಕ ತೊಂದರೆಗಳನ್ನು ಈ ಕೈಗಾರಿಕೆಗಳು ಅನುಭವಿಸುವಂತಾಯಿತು. ಈ ಪ್ರದೇಶದ ಹತ್ತಿಯು ಭಾರತದ ಇತರ ಭಾಗಗಳ ಹತ್ತಿಯ ಜೊತೆಗೆ ಲಾಂಕಾಷೈರ್, ಮ್ಯಾಂಚೆಸ್ಟರ್‌ಗಳಿಗೆ ರಫ್ತಾಗಿ ಸಿದ್ಧ ಉಡುಪುಗಳ ರೂಪದಲ್ಲಿ ಹಿಂದಿರುಗುತ್ತಿತ್ತು. ಈ ಪ್ರಕ್ರಿಯೆಯಿಂದ ಲಕ್ಷಾಂತರ ಜನರು ತಮ್ಮ ಉದ್ಯೋಗದಲ್ಲಿನ ಬೇಡಿಕೆ ಹಾಗೂ ಹಿಡಿತವನ್ನು ಕಳೆದುಕೊಂಡರು. ಬ್ರಿಟಿಷರ ಆರ್ಥಿಕ ಶೋಷಣೆಯ ಜೊತೆಗೆ ಪ್ರಕೃತಿ ವಿಕೋಪದ ಕ್ಷಾಮವೂ ಸಹ ಈ ಕಡೆಯ ಜನರನ್ನು ಬಲಿ ತೆಗೆದುಕೊಂಡಿತು. ಅಂದರೆ ೧೯ನೇ ಶತಮಾನದ ೧೮೨೪-೧೮೩೧, ೧೮೩೩-೧೮೫೦, ೧೮೬೬, ೧೮೭೫-೭೭, ೧೮೮೩-೮೫, ೧೮೯೧-೯೨ ಹಾಗೂ ೧೯೦೦ರ ವರ್ಷಗಳು ಆಹಾರ ಪದಾರ್ಥಗಳ ತೀವ್ರ ಅಭಾವವನ್ನು ಉಂಟು ಮಾಡಿದವು. ೧೮೭೫-೭೭ರ ಐತಿಹಾಸಿಕ ಕ್ಷಾಮವಂತೂ ಲಕ್ಷಾಂತರ ಜನರನ್ನು ಆಹುತಿ ತೆಗೆದುಕೊಂಡಿತು. ಈ ತರದ ಪರಿಣಾಮಗಳು ಆರ್ಥಿಕ ವ್ಯವಸ್ಥೆಯನ್ನು ಅಸಮತೋಲನಗೊಳಿಸಿದವು''. [13]

ಮೈಸೂರಿನಲ್ಲೂ ೧೮೭೬-೭೭ರಲ್ಲಿ ವ್ಯವಸ್ಥಿತ ಸರ್ವೇ ಮತ್ತು ಸೆಟ್ಲ್‌ಮೆಂಟ್ ಆಗುತ್ತಿದ್ದಾಗಲೇ ಭಯಾನಕ ಕ್ಷಾಮವು ಸಂಭವಿಸಿ ಹೆಚ್ಚುಕಮ್ಮಿ ೧೦ ಲಕ್ಷ ಜನರು ನಾಶವಾದರು ಎಂದು ಡಾ. ಸೆಬಾಸ್ಟಿಯನ್ ಜೋಸೆಫ್ ಹೇಳುತ್ತಾರೆ. [14]

ಈ ಅವಧಿಯ ಭೀಕರ ಬರಗಾಲವು ಅಪಾರ ಸಂಖ್ಯೆಯ ಜನ ಮತ್ತು ಜಾನುವಾರುಗಳನ್ನು ಬಲಿ ತೆಗೆದುಕೊಂಡಿತು. ಅದು ಮೈಸೂರಿನ ವಸಾಹತುಶಾಹಿ ಇತಿಹಾಸದಲ್ಲಿ ಒಂದು ದುಃಖದ ಅಧ್ಯಾಯ. ವಸಾಹತುಶಾಹಿಗಳು ತಮ್ಮ ಬೇಜವಾಬ್ದಾರಿಯನ್ನು ಮಳೆಯ ವೈಫಲ್ಯದ ಮೇಲೆ ಜಾರಿಸಲು ಪ್ರಯತ್ನಿಸಿದರು. ಆದರೆ ಮಳೆಯ ಕೊರತೆ, ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿಯನ್ನು ಉಂಟು ಮಾಡಿರಬಹುದು ನಿಜ. ಆದರೆ ಮೂಲತಃ ಆಹಾರ ಮತ್ತು ಕುಡಿಯುವ ನೀರಿನ ಕೊರತೆ ಮಾತ್ರವೇ ಅದಕ್ಕೆ ಕಾರಣವಾಗಿರಲಿಲ್ಲ. ೧೮೭೭-೭೮ರ ಆಡಳಿತ ವರದಿಯು ವಸ್ತುತಃ ಆಹಾರ ಧಾನ್ಯಗಳ ಹೆಚ್ಚುವರಿಯನ್ನೇ ತೋರಿಸುತ್ತದೆ. ಆಹಾರ ಧಾನ್ಯಗಳು ರಫ್ತಾಗುತ್ತಿದ್ದಂತೆಯೇ ಬೀದಿಗಳಲ್ಲಿ ಹಸಿದು ಸಾಯುವವರ ಸಂಖ್ಯೆ ಅಧಿಕವಾಯಿತು. ಕ್ಷಾಮಪೀಡಿತ ಪ್ರದೇಶಗಳಲ್ಲಿ ಆಹಾರದ ರಫ್ತಿಗೆ ಮುಕ್ತ ಅವಕಾಶವನ್ನು ಬ್ರಿಟಿಷ್ ಅಧಿಕಾರಿಗಳು ನೀಡಿದ್ದು, ಇಲ್ಲಿ ಬ್ರಿಟಿಷ್ ವಸಾಹತುಶಾಹಿಯು ತೋರಿಸಿದ ಶೋಷಕ ಸ್ವರೂಪಕ್ಕೆ ಶಾಶ್ವತ ಸಾಕ್ಷಿಯಾಗಿ ಉಳಿಯುತ್ತದೆ.

ಕೃಷಿ ಕ್ಷೇತ್ರದಲ್ಲಿ ಬಂದ ಹಿನ್ನಡೆ, ಅಲ್ಲಿನ ಒಳನಾಡಿನ ವಾಣಿಜ್ಯದಲ್ಲಿ ಬಂದ ಸ್ಥಗಿತತೆ, ಜನರ ಜೀವನ ಮಟ್ಟದಲ್ಲಿ ಬಂದ ಕುಸಿತ ಮುಂತಾಗಿ ಕನ್ನಡ ರಾಷ್ಟ್ರೀಯತಾ ಸಮಾಜವು ವಸಾಹತುಶಾಹಿ ಆಕ್ರಮಣದಿಂದ ಅನುಭವಿಸಿದ ಸ್ಥಗಿತತೆಯನ್ನು ಗಮನಿಸಲು, ವಸಾಹತುಪೂರ್ವ ಒಳನಾಡು ವಾಣಿಜ್ಯ ಮಾರ್ಗಗಳ ವಹಿವಾಟನ್ನು, ಬ್ರಿಟಿಷರ ಆಕ್ರಮಣದ ನಂತರ ಕಂಡುಬರುವ ಅವುಗಳ ದುಸ್ಥಿತಿಯನ್ನು ಹೋಲಿಸಿ ತಿಳಿಯಬಹುದಾಗಿದೆ.

ಟೀಪುವಿನ ಕಾಲದಲ್ಲಿ ಬೆಂಗಳೂರನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ಕರ್ನಾಟಕದ ಎಲ್ಲಾ ಭಾಗಗಳಿಗೆ ವ್ಯಾಪಾರ ಮಾರ್ಗಗಳು ಹಾದುಹೋಗಿರುವುದನ್ನು ಬ್ರಿಟಿಷರು ಗಮನಿಸಿದ್ದರು. ನಗರ ಜಿಲ್ಲೆಯ ಬಿದನೂರು, ಶೃಂಗೇರಿ, ಕೊಪ್ಪ ಮೊದಲಾದ ಹಲವು ಸ್ಥಳಗಳಲ್ಲಿ ಗಣನೀಯ ಪ್ರಮಾಣದ ವ್ಯಾಪಾರ ನಡೆಯುತ್ತಿದ್ದಿತು. ಅಡಿಕೆ, ಕರಿಮೆಣಸು, ಶ್ರೀಗಂಧ ಮತ್ತು ಏಲಕ್ಕಿಗಳನ್ನು ಬೆಂಗಳೂರಿನ ವರ್ತಕರು ಈ ಪ್ರದೇಶಗಳಿಂದ ಬೃಹತ್ ಪ್ರಮಾಣದಲ್ಲಿ ತರಿಸಿಕೊಳ್ಳುತ್ತಿದ್ದರು. ಅದಕ್ಕೆ ಬದಲಾಗಿ ಧಾನ್ಯಗಳು, ತಂಬಾಕು, ಹುಣಿಸೇಹಣ್ಣು, ಕಂಬಳಿಗಳು, ಮಸ್ಲಿನ್ ಮುಂಡಾಸುಗಳು, ಬಣ್ಣದ ಹತ್ತಿಬಟ್ಟೆಗಳು ಮತ್ತು ರೇಷ್ಮೆಗಳನ್ನು ಕಳುಹಿಸಿಕೊಡುತ್ತಿದ್ದರು. ಎಲ್ಲಾ ಸರಕುಗಳು ಸ್ಥಳೀಯವಾಗಿ ಉತ್ಪಾದಿತವಾಗುತ್ತಿದ್ದವು. ಜೊತೆಗೆ ನಗರದಿಂದ ಕೆಳ ಕರ್ನಾಟಕ ಪ್ರದೇಶಕ್ಕೆ ಮೆಣಸನ್ನು ರಫ್ತುಮಾಡಲಾಗುತ್ತಿತ್ತು. ಸಗಟು ವ್ಯಾಪಾರವು ಹೆಚ್ಚು ಪ್ರಚುರವಾಗಿದ್ದಿತು. ವರ್ತಕರು ಏಜೆಂಟರುಗಳ ಮೂಲಕ ದೇಶದ ವಿವಿಧ ಭಾಗಗಳ ಸಂತೆಗಳಲ್ಲಿ ಭಾಗವಹಿಸಿ ವ್ಯಾಪಾರ ನಿರ್ವಹಿಸುತ್ತಿದ್ದರು. ಬೆಂಗಳೂರಿನಿಂದ ನಗರಕ್ಕೆ ಬರುತ್ತಿದ್ದ ಸರಕುಗಳ ವ್ಯವಹಾರದಲ್ಲಿ ಮುಕ್ಕಾಲುಭಾಗ ನಗದಾಗಿ ನಡೆಯುತ್ತಿತ್ತು. ಗುಬ್ಬಿ ಮತ್ತು ನೆರೆಯ ಪ್ರದೇಶಗಳಿಂದ ಕರಿಮೆಣಸು, ಅಡಿಕೆ ಮತ್ತು ತೆಂಗಿನಕಾಯಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಅಲ್ಲಿನ ವಾರದ ಸಂತೆಗಳಲ್ಲಿ ಬೆಂಗಳೂರು ವರ್ತಕರು ಸರಕುಗಳನ್ನು ಕೊಳ್ಳುತ್ತಿದ್ದರು. ಅರಿಶಿನವು ಸಾಕಷ್ಟು ಪ್ರಮಾಣದಲ್ಲಿ ವ್ಯಾಪಾರವಾಗುತ್ತಿತ್ತು.

ಬೆಂಗಳೂರು ಮತ್ತು ಮೈಸೂರಿನ ಪಶ್ಚಿಮ ಭಾಗಗಳ ನಡುವೆಯೂ ಗಣನೀಯ ಪ್ರಮಾಣದ ವ್ಯಾಪಾರವು ನಡೆಯುತ್ತಿದ್ದಿತು. ಮುಖ್ಯವಾದ ರಫ್ತು ಸರಕುಗಳು, ಅಡಿಕೆ, ಕರಿಮೆಣಸು, ಶ್ರೀಗಂಧ ಮತ್ತು ಏಲಕ್ಕಿ. ಆಮದು ಸರಕುಗಳು - ಧಾನ್ಯಗಳು, ತಂಬಾಕು, ಅರಿಶಿನ, ಕಂಬಳಿಗಳು, ಮಸ್ಲಿನ್ ಮುಂಡಾಸುಗಳು, ಬಣ್ಣದ ಹತ್ತಿ ಬಟ್ಟೆ ಮತ್ತು ರೇಷ್ಮೆ. ಎಲ್ಲಾ ಬಗೆಯ ವಸ್ತುಗಳನ್ನು ಎಮ್ಮೆ ಮತ್ತು ಕತ್ತೆಗಳು ಕೂಡಿದಂತೆ ವಿವಿಧ ಪ್ರಾಣಿಗಳ ಮೇಲೆ ಹೇರಿ ಸಾಗಿಸುತ್ತಿದ್ದರು. ಬೆಂಗಳೂರಿನಿಂದ ನಗರಕ್ಕೆ ಪ್ರತಿಫಲವು ಮುಕ್ಕಾಲು ಬಾಗ ನಗದಾಗಿಯೇ ಬರುತ್ತಿತ್ತು. ಗುಬ್ಬಿ ಮತ್ತು ನೆರೆ ನಾಡುಗಳಿಂದ ಕರಿಮೆಣಸು, ಅಡಿಕೆ ಮತ್ತು ತೆಂಗಿನಕಾಯಿಗಳನ್ನು ತರಿಸಿಕೊಳ್ಳುತ್ತಿದ್ದರು. ಬೆಂಗಳೂರಿನಲ್ಲಿ ವರ್ತಕರು ಅಲ್ಲಿ ವಾರದ ಸಂತೆಗಳಲ್ಲಿ ಕೊಂಡುಕೊಳ್ಳುತ್ತಿದ್ದರು. ಗಣನೀಯ ಪ್ರಮಾಣದ ಅರಿಶಿನವು ವ್ಯಾಪಾರವಾಗುತ್ತಿದ್ದಿತು. ಬಳ್ಳಾರಿ, ಆದೋನಿ, ಧಾರವಾಡ, ಹುಬ್ಬಳ್ಳಿ, ನರಗುಂದ ಮತ್ತು ನವಲಗುಂದಗಳಲ್ಲಿ ವರ್ತಕರ ಏಜಂಟರು ಬೆಂಗಳೂರಿಗೆ ಬರುತ್ತಿದ್ದರು. ನಿಜಾಮ್ ಪ್ರದೇಶ ಮತ್ತು ಮರಾಠ ಪ್ರದೇಶಗಳಿಂದ ಮುಖ್ಯವಾದ ಆಮದುಗಳೆಂದರೆ ಎಕ್ಕದ ಹತ್ತಿ, ಒರಟು ಹತ್ತಿಬಟ್ಟೆಗಳು, ಮಸ್ಲಿನ್, ಧೋತ್ರಗಳು, ಎರಡೋ ಮೂರೋ ಪಗೋಡ ಬೆಲೆಬಾಳುವ ಕಂಬಳಿಗಳು, ಗೋಧಿ ಮತ್ತು ಕೆಂಪು ರಂಗು. ಬೆಂಗಳೂರಿನಿಂದ ಅಲ್ಲಿಗೆ

ಮುಖ್ಯವಾಗಿ ನಗದಾಗಿ ಪ್ರತಿಫಲವು ಬಂದುಬಿಡುತ್ತಿತ್ತು. ಆದರೆ ಸ್ವಲ್ಪ ಬಣ್ಣದ ಹತ್ತಿ ಬಟ್ಟೆ ಮತ್ತುರೇಷ್ಮೆಗಳು ಬರುತ್ತಿದ್ದವು. ವರ್ತಕರು ಮಂಗಳೂರಿಗೂ ಬಿಳುಪು ಮತ್ತು ಬಣ್ಣದ ಹತ್ತಿ ಬಟ್ಟೆಗಳನ್ನು ಕಳಿಸುತ್ತಿದ್ದರು. ಅಲ್ಲಿಂದ ಕಚ್ಚಾ ರೇಷ್ಮೆಯನ್ನು, ರೇಷ್ಮೆ ಬಟ್ಟೆಗಳನ್ನು ತರಿಸಿಕೊಳ್ಳುತ್ತಿದ್ದರು.

ಚೋಕ್ಸೆ ಅವರ ಬರವಣಿಗೆಗಳಿಂದ ಆಧುನಿಕ ಕರ್ನಾಟಕದ ಪಶ್ಚಿಮ ಹಾಗೂ ವಾಯವ್ಯ ಭಾಗಗಳಲ್ಲಿ ನಡೆಯುತ್ತಿದ್ದ ವಾಣಿಜ್ಯ ಚಟುವಟಿಕೆಗಳ ಒಂದು ಚಿತ್ರಣವನ್ನು ನಾವು ಕಟ್ಟಿಕೊಳ್ಳಬಹುದಾಗಿದೆ. ಬೆಳಗಾಂ ಒಂದು ಮುಖ್ಯವಾದ ವ್ಯಾಪಾರ ಕೇಂದ್ರವಾಗಿತ್ತು. ಗೋವಾದಿಂದ ಅಲ್ಲಿಗೆ ಉಪ್ಪು, ಮಲಬಾರಿನಿಂದ ಸಂಬಾರ ವಸ್ತುಗಳು, ತೆಂಗಿನ ಕಾಯಿ, ಕೊಬ್ಬರಿ, ಅಡಿಕೆ ಮತ್ತು ಅಲಂಕಾರಿಕ ವೆನಿಷಿಯನ್ ಬಿಲ್ಲೆಗಳು ಆಮದಾಗಿ ಬರುತ್ತಿದ್ದವು. ರೇಷ್ಮೆ ಕಿರುಮಂಜಿ ಮತ್ತು ಕೆಲವು ಔಷಧಿಗಳನ್ನು ಮುಂಬೈಯಿಂದಲೂ, ಹಲವು ಬಗೆಯ ಬಟ್ಟೆಗಳನ್ನು ನಾಗಪುರದಿಂದಲೂ ತರಿಸಿಕೊಳ್ಳಲಾಗುತ್ತಿದ್ದಿತು. ಕರ್ನಾಟಕದ ಸುತ್ತಮುತ್ತಣ ಪ್ರದೇಶಗಳೊಂದಿಗೆ ಕೂಡ ಬೆಳಗಾವಿಗೆ ವ್ಯಾಪಾರ ಸಂಪರ್ಕವಿದ್ದಿತು. ಬಳ್ಳಾರಿಯಿಂದ ಜೋರಿ ಎಂಬ ಉತ್ತಮ ದರ್ಜೆಯ ಬಟ್ಟೆ ಬರುತ್ತಿದ್ದಿತು. ಕಿತ್ತೂರು ಮತ್ತು ಹುಬ್ಬಳ್ಳಿಗಳಿಂದ ಹತ್ತಿ ಮತ್ತು ಎಣ್ಣೆ ಬೀಜಗಳು ಬೆಳಗಾವಿಗೆ ಹೋಗುತ್ತಿದ್ದವು. ಅಲ್ಲಿಂದ ಗೋವಾಕ್ಕೆ ಅಕ್ಕಿಯು, ಪುಣೆಗೆ ಸ್ವಲ್ಪ ಬಣ್ಣದ ಬಟ್ಟೆಯು ಸೋಗುತ್ತಿದ್ದವು. ಕೊಂಕಣದಿಂದ ಸ್ವಲ್ಪ ಮಟ್ಟಿಗೆ ಕಬ್ಬಿಣವು ಬೆಳಗಾವಿಗೆ ಬರುತ್ತಿದ್ದಿತು. ವಾಸ್ತವವಾಗಿ ಬೆಳಗಾವಿ ಭಾರತದ ಪಶ್ಚಿಮ ಕರಾವಳಿಗೂ ದೇಶದ ಇಂತಹ ಒಳಭಾಗಗಳಿಗೂ ನಡುವೆ ಇದ್ದ ಬಹುಮುಖ್ಯವಾದ ವ್ಯಾಪಾರಕೇಂದ್ರವಾಗಿತ್ತು. ಚೋಕ್ಸೆ ಬರೆಯುತ್ತಾರೆ, ''ಪ್ರತಿಯೊಂದು ಸಂತೆಯ ದಿನದಲ್ಲೂ ಬೆಳಗಾವಿಗೆ ಪೂರ್ವದ ಸಮತಲ ಜಿಲ್ಲೆಗಳಿಂದಲೂ,ಆಗ್ನೇಯ ಭಾಗದಿಂದಲೂ ಉಪ್ಪು, ಬಟ್ಟೆ, ಧಾನ್ಯಗಳನ್ನು ಹೊತ್ತ ೧೫೦೦ ಎತ್ತುಗಳು ಬಂದು ಸೇರುತ್ತಿದ್ದವು. ಧಾರವಾಡದಾಚೆಯ ಸ್ಥಳಗಳಿಂದಲೂ ಬರುತ್ತಿದ್ದವು''[15]

ಹುಬ್ಬಳ್ಳಿ ಬಹುದೀರ್ಘ ಕಾಲದಿಂದಲೂ ವಾಣಿಜ್ಯ ಮಹತ್ವವುಳ್ಳ ಪ್ರದೇಶ. ಇಲ್ಲಿನ ಮುಖ್ಯವ್ಯಾಪಾರವಸ್ತು ಹತ್ತಿ ಬಟ್ಟೆ. ಸ್ಥಳದ ಹೆಂಗಸರು ಹತ್ತಿಯನ್ನು ನೂಲುತ್ತಿದ್ದರು. ಅದನ್ನು ಅನೇಕ ನೇಕಾರರಿಗೆ ಒದಗಿಸುತ್ತಿದ್ದರು. ಅವರು ಬಟ್ಟೆಯನ್ನು ನೇಯುತ್ತಿದ್ದರು. ಹುಬ್ಬಳ್ಳಿಯ ದಕ್ಷಿಣಕ್ಕಿದ್ದ ಧಾರವಾಡ ಮುಖ್ಯವಾದ ಮಾರುಕಟ್ಟೆಯಾಗಿತ್ತು. ಅಲ್ಲಿ ಮುಖ್ಯವಾಗಿ ಮಾರಾಟವಾಗುತ್ತಿದ್ದುದು ಬಯಲು ಗ್ರಾಮಗಳ ಹತ್ತಿ, ಅಕ್ಕಿ ಮತ್ತು ಸಕ್ಕರೆ. ಬಳ್ಳಾರಿ ಮತ್ತು ಮೈಸೂರು ಒಂದು ಕಡೆ, ಧಾರವಾಡ ಮತ್ತು ಕೆನರಾ ಇನ್ನೊಂದು ಕಡೆ - ಈ ಸ್ಥಳಗಳ ನಡುವೆ ವರ್ತಕರು ವ್ಯಾಪಕವಾಗಿ ವಹಿವಾಟು ನಡೆಸುತ್ತಿದ್ದರು. ಧುಂಡಿಣಿಗೆ, ಬೆಳಗಾಂ, ಕಿತ್ತೂರು ಮತ್ತು ಎಂಬತ್ತರಿಂದ ನೂರು ಮೈಲು ಪರಿಧಿಯಲ್ಲಿದ್ದ ಎಲ್ಲಾ ಮುಖ್ಯ ಸ್ಥಳಗಳಿಂದಲೂ ವರ್ತಕರು ಬರುತ್ತಿದ್ದರು. ತಿಂಗಳು ತಿಂಗಳೂ ಅಕ್ಕಿ , ಬೆಲ್ಲ , ಸಕ್ಕರೆ, ಎಣ್ಣೆ ಮತ್ತು

ಎಣ್ಣೆಬೀಜಗಳನ್ನು ಕರಾವಳಿಯ ಕಡೆಗೆ ಸಾಗಿಸುತ್ತಿದ್ದರು. ಸಕ್ಕರೆಯನ್ನು ಮುಂಬೈ ಮಾರುಕಟ್ಟೆಗಾಗಿ ಕುಮಟಾಕ್ಕೆ ಕಳುಹಿಸುತ್ತಿದ್ದರು ಎಂದು ಚೋಕ್ಸೆ ಬರೆಯುತ್ತಾರೆ.[16]

ಕರ್ನಾಟಕದ ವಾರದ ಸಂತೆಗಳಲ್ಲಿ, ಬ್ರಾಹ್ಮಣರ ಹೊರತು ಬೇರೆ ಎಲ್ಲಾ ಜಾತಿಗಳಿಗೆ ಸೇರಿದ ಬಡಹೆಂಗಸರು ನೂಲುವುದಕ್ಕಾಗಿ ಹತ್ತಿಯನ್ನು ಕೊಳ್ಳುತ್ತಿದ್ದರು. ಕುಟುಂಬಕ್ಕೆ ಬೇಕಿಲ್ಲದ ಹೆಚ್ಚುವರಿ ನೂಲನ್ನು ನೇಕಾರರಿಗೆ ಮಾರುತ್ತಿದ್ದರು. ತೊಗಟರು ಮತ್ತು ಹೊಲೆಯ ನೇಕಾರರು ಬಡಜನರು ಉಪಯೋಗಿಸುವ ಮಂದವಾದ ಬಿಳಿಯ ಹತ್ತಿ ಬಟ್ಟೆಯನ್ನು ತಯಾರಿಸುವಲ್ಲಿ ನಿರತರಾಗಿರುತ್ತಿದ್ದರು.[17]

ಈ ಬಗೆಯ ವಹಿವಾಟಿನ ಚಿತ್ರಣವನ್ನು ಒದಗಿಸಿದ್ದ ಸಂಚಾರಿ ಮಾರ್ಗಗಳ ಪರಿಸ್ಥಿತಿಯು ವಸಾಹತುಶಾಹಿ ಆಳ್ವಿಕೆ ಶುರುವಾದ ನಂತರ ಏನಾಯಿತೆಂಬುದನ್ನು ಈ ಚಿತ್ರಣದೊಂದಿಗೆ ಗಮನಿಸೋಣ :

''ದುರದೃಷ್ಟವಶಾತ್ ಈ ಮಾರ್ಗಗಳು ಟೀಪುವಿನ ಮರಣಾನಂತರ ಸೂಕ್ತವಾದ ದುರಸ್ತಿಯಿಲ್ಲದೆ ಹಾಳಾದವು. ಮಾರ್ಗಗಳನ್ನು ನಿರ್ಮಿಸಿದ್ದಕ್ಕಾಗಿ ಟೀಪುವನ್ನು ಪ್ರಶಂಸಿಸಿದ ಮೂಲವೇ ಈ ಅಂಶದ ಕಡೆಗೆ ಗಮನ ಸೆಳೆಯಿತು. ಮಲಬಾರಿನಂತೆ ಭಾರೀ ಮಳೆ ಸುರಿಯುವ ಬೆಟ್ಟಗಾಡಿನ ಜಿಲ್ಲೆಯಲ್ಲಿ ರಸ್ತೆಗಳನ್ನು ಗಮನವಿಟ್ಟು ದುರಸ್ತಿಗೊಳಿಸುತ್ತಲೇ ಇರಬೇಕಾಗುತ್ತದೆ. ಟೀಪುವು ನೀರಿನ ಹರಿವನ್ನು ಗಮನಿಸಿ, ಭತ್ತದ ಗದ್ದೆಗಳನ್ನು ನಿವಾರಿಸಿ ಉತ್ತಮವಾದ ರೀತಿಯಲ್ಲಿ ನಿರ್ಮಿಸಿದ್ದ ರಸ್ತೆಗಳು ಸರಿಯಾಗಿ ಪಾಲನೆಯಿಲ್ಲದೇ ನೀರು ಹರಿದುಹೋಗುವ ವ್ಯವಸ್ಥೆಯಿಲ್ಲದೇ ಬೇಗನೆ ಹಾಳಾಗಿಹೋದವು.

೧೮೩೧ರ ವೇಳೆಗೆ ಹೆಸರಿಸಬಹುದಾದ ಮೂರು ಮಾರ್ಗಗಳು ಮಾತ್ರ ಉಳಿದಿದ್ದವು. ಮೊದಲನೆಯದು, ನಾರ್ತ್‌ಕೆನರಿಯಿಂದ ಮೈಸೂರಿಗೆ ಬೆಂಗಳೂರು ಮಾರ್ಗವಾಗಿ ; ಎರಡನೆಯದು ಶ್ರೀರಂಗಪಟ್ಟಣದಿಂದ ಸಿರಾ ಮೂಲಕ ಬಳ್ಳಾರಿಗೆ; ಮೂರನೆಯದು ಬೆಂಗಳೂರಿನಿಂದ ಹರಿಹರಕ್ಕೆ - ಈ ಮೂರೂ ರಸ್ತೆಗಳ ಸ್ಥಿತಿ ಶೋಚನೀಯವಾಗಿತ್ತು. ಕೆಲವು ಕಡೆ ಅಲ್ಲೆಲ್ಲಾ ಕಾಡು ಬೆಳೆದಿತ್ತು. ಇನ್ನೂ ಕೆಲವು ಕಡೆ ಪಕ್ಕದಲ್ಲಿ ಹರಿಯುವ ನದಿಗಳು ರಸ್ತೆಯನ್ನು ಕೊಚ್ಚಿಬಿಟ್ಟಿದ್ದವು. ಇದ್ದುದ್ದರಲ್ಲಿ ರಸ್ತೆ ಉತ್ತಮವಾಗಿದ್ದಾಗಲೂ ಸೇತುವೆಗಳಿಲ್ಲದುದು ತುಂಬಾ ದೊಡ್ಡ ಅನಾನುಕೂಲವಾಗಿತ್ತು. ನದಿಗಳ ಮೇಲೆ ದೋಣಿಯಲ್ಲಿ ದಾಟುವುದು ಕಷ್ಟವಾಗಿತ್ತು. ನೈರುತ್ಯ ಮುಂಗಾರು ಮಳೆಯು ವರ್ಷದಲ್ಲಿ ೬ ತಿಂಗಳು ಧಾರಾಕಾರವಾಗಿ ಸುರಿಯುತ್ತಿದ್ದಿತು. ಹಾಗಾಗಿ ಒಂದು ಸೇನಾ ತುಕಡಿಯೋ ಒಬ್ಬ ಅಂಚೆರನ್ನರ್ರೋ, ಬೆಂಗಳೂರು ಬಳಿ ಹದಿನಾರು ಮೈಲಿ ದೂರದ ಒಂದು ಹುಲ್ಲಾದಲ್ಲಿ ಅನೇಕ ದಿನಗಳ ಕಾಲ ತಡೆದು ನಿಲ್ಲುವುದು ಸಾಮಾನ್ಯ ದೃಶ್ಯವಾಗಿತ್ತು. ಹಲವು ಬಗೆಯ ಇತರ ತೊಂದರೆಗಳು ಮೇಲಿನ ಮೂರು ಮಾರ್ಗಗಳಲ್ಲಿ ಸಾಮಾನ್ಯವಾಗಿ ಎದುರಾಗುತ್ತಿದ್ದವು. ೧೮೩೧ರಲ್ಲಿ ಪಶ್ಚಿಮ ಘಟ್ಟಗಳ ಮೂಲಕ ಹೊರೆ ಹೊತ್ತ ಹೋರಿಗಳು ನಡೆದು ಹೋಗಬಹುದಾದ ಒಂದೇ

ಒಂದು ದಾರಿಯೂ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚು ಬಳಕೆಯಲ್ಲಿದ್ದುದು ಆಗುಂಬೆ ಘಟ್ಟಮಾರ್ಗ. ಅಲ್ಲಿ ಒಂದು ಹೊರೆಗೆ ಅರ್ಧರೂಪಾಯಿ ಬೆಲೆ ಪಡೆದು ಸರಕುಗಳನ್ನು ಕೂಲಿಗಳು ಸಾಗಿಸುತ್ತಿದ್ದರು. ಸಾಕಷ್ಟು ಸಂಖ್ಯೆಯ ಕೂಲಿಗಳು ದೊರಕದೇ ಹೋದರೆ ವರ್ತಕರು ಎಲ್ಲೋ ಒಂದು ಕಡೆ ೧೦ ರಿಂದ ೧೫ ದಿನಗಳ ಕಾಲ ನಿಂತುಬಿಡಬೇಕಾಗುತ್ತಿತ್ತು. ಘಟ್ಟದಾರಿಯು ಎಷ್ಟು ಒರಟಾಗಿದ್ದಿತೆಂದರೆ ಹೋರಿಗಳು ಸತ್ತು ಹೋಗುತ್ತಿದ್ದವು. ಇಲ್ಲವೇ ಬಹಕಷ್ಟಪಟ್ಟು ಹೇಗೋ ದಾಟುತ್ತಿದ್ದವು. ೧೮೪೦ ಮತ್ತು ೫೦ರಲ್ಲಿ ಮುಂಬೈ ದಖ್ಖನಿನ ಸರ್ವೆ ಮತ್ತು ಸೆಟ್ಲ್‌ಮೆಂಟ್ ಅಧಿಕಾರಿಯಾದ ಜಾರ್ಜ್ ವಿಂಗೇಟ್ ಹೀಗೆ ಬರೆದನು :

''ಈ ದೇಶದ ಒಳನಾಡ ಸಂಪರ್ಕಮಾರ್ಗಗಳನ್ನು ವ್ಯಾಪಕ ಪ್ರಮಾಣದಲ್ಲಿ ದುರಸ್ತಿ ಮಾಡದ ಹೊರತು ಬೇರೆ ದಾರಿಯೇ ಇಲ್ಲ. ಅತಿ ಬೇಗನೆ ಈ ಕೆಲಸವನ್ನು ಕೈಗೊಳ್ಳಲೇಬೇಕು. ಇಲ್ಲವಾದರೆ ಈ ಪ್ರೆಸಿಡೆನ್ಸಿಯ ಕಂದಾಯವೂ, ವ್ಯಾಪಾರವೂ ಎಂದೆಂದಿಗೂ ಚೇತರಿಸಿಕೊಳ್ಳಲಾಗದ ಆಘಾತಕ್ಕೆ ಒಳಗಾಗುತ್ತವೆ''.[18]

ಈ ಎರಡೂ ಹೋಲಿಕೆಗಳನ್ನು ನಾವು ಗಮನಿಸಿದರೆ, ರೂಪುಗೊಳ್ಳುತ್ತಿದ್ದ ಒಂದು ರಾಷ್ಟ್ರೀಯತಾ ಸಮಾಜದ ಭೌತಿಕ ಸಂರಚನೆಯ ರಕ್ತನಾಳಗಳಂತಿದ್ದ ಸಾರಿಗೆ ಸಂಪರ್ಕ ಮಾರ್ಗಗಳು ಕೆಟ್ಟುಹೋಗಿದ್ದರ ದುರಂತವನ್ನು ನಾವು ಕಾಣಬಹುದಾಗಿದೆ. ಇದರಿಂದ ಆ ರಾಷ್ಟ್ರೀಯತೆಯು ಜಡತ್ವಕ್ಕೆ ನಿಷ್ಕ್ರಿಯತೆಗೆ ಗುರಿಯಾಯಿತು. ಆಗ ತಾನೇ ತನ್ನ ಪಕ್ವತೆಯ ಕಾಲಘಟ್ಟವನ್ನು ಸಮೀಪಿಸುತ್ತಿದ್ದ ಕನ್ನಡ ರಾಷ್ಟ್ರೀಯತೆಯ ಭ್ರೂಣವು ರಕ್ತಸಂಚಾರವಿಲ್ಲದೇ, ಮುಂದಿನ ಬೆಳವಣಿಗೆಗೆ ಪೋಷಕಾಂಶಗಳಿಲ್ಲದೇ, ಬಾಲಾರಿಷ್ಟಕ್ಕೆ ಭ್ರೂಣದಲ್ಲೇ ಗುರಿಯಾಯಿತು. ಒಂದು ರಾಷ್ಟ್ರೀಯತೆಯ ಸಂರಚನಾ ಪ್ರಕ್ರಿಯೆ ಯನ್ನು ಭ್ರೂಣವೊಂದರ ಜೈವಿಕ ಬೆಳವಣಿಗೆಯ ರೀತಿಗೆ ಹೋಲಿಸುವುದನ್ನು ಡಾ. ಕೆ.ವಿ. ನಾರಾಯಣ ವಿಚಾರ ಸಂಕಿರಣದ ಚರ್ಚೆಯೊಂದರಲ್ಲಿ ಆಕ್ಷೇಪಿಸಿದರು.[19] ಯಾಕೆಂದರೆ ಜೈವಿಕ ಭ್ರೂಣಕ್ಕೆ ಪೆಟ್ಟು ತಗುಲಿದರೆ ಅದು ಆ ಮಟ್ಟಿಗೆ ಬೆಳವಣಿಗೆಯ ಹಿನ್ನಡೆಯೋ ಅಥವಾ ಶಾಶ್ವತ ಊನತೆಯೋ ಆಗಿ ಉಳಿಯುತ್ತದೆ. ಆದರೆ ರಾಷ್ಟ್ರೀಯತೆಯ ಬೆಳವಣಿಗೆಯೆಂಬುದು ಒಂದು ಸಾಮಾಜಿಕ ಪ್ರಕ್ರಿಯೆಯಾಗಿದ್ದು, ತನಗೆ ಬಿದ್ದ ಪೆಟ್ಟುಗಳನ್ನು ಕಾಲಾಂತರದಲ್ಲಿ ಪರಿವರ್ತಿತ ಬೆಳವಣಿಗೆಯನ್ನಾಗಿ, ಬೇಕಾದರೆ ಮತ್ತೊಂದು ಮುಖದಲ್ಲಿ ಹೊರಹೊಮ್ಮಿಸಬಲ್ಲುದು. ಆಘಾತವು ಕಾಲಾಂತರದಲ್ಲಿ ಆಂತರಿಕ ಚೈತನ್ಯವಾಗಿ ಮೈಗೂಡಿ, ಆ ಸ್ಥಿತಿಯಿಂದ ಮುನ್ನಡೆಯುವ ಕಸುವನ್ನು ಒದಗಿಸುವ ವಿಶಿಷ್ಟ ಕ್ರಿಯೆ, ಸಾಮಾಜಿಕ ಪ್ರಕ್ರಿಯೆಗೆ ಇರುತ್ತದೆಯಾದ್ದರಿಂದ, ಒಂದು ಜೈವಿಕ ಭ್ರೂಣದ ಬೆಳವಣಿಗೆಗೂ ಒಂದು ರಾಷ್ಟ್ರೀಯತೆಯ ಸಮುದಾಯದ ವಿಕಾಸದ ನಡೆಗೂ ಹೋಲಿಕೆ ಸಾಧುವಲ್ಲ ಎಂಬುದು ಅವರ ಆಶಯವಾಗಿತ್ತೆಂದು ಕಾಣುತ್ತದೆ. ಈ ಬಗೆಯ ವಾದದಲ್ಲಿ ಸಮ್ಮತಾರ್ಹ ಅಂಶಗಳಿವೆಯಾದರೂ, ರಾಷ್ಟ್ರತ್ವವೊಂದರ ಬೆಳವಣಿಗೆ ಜೈವಿಕ ವಿಕಾಸದಂತೆ ನೇರಗತಿಯಲ್ಲಿ ನಡೆದು ನಿಶ್ಚಿತ

ಕಾಲಾವಧಿ ಬಂದೊಡನೆ ಪೂರ್ವನಿಗದಿತ ಬೆಳವಣಿಗೆ ಸಂಭವಿಸಿಬಿಡುವುದಿಲ್ಲ ವಾದರೂ, ಇತಿಹಾಸದ ಕಾಲಗರ್ಭದೊಳಗೆ ಅದು ಒಮ್ಮೆ ಗರ್ಭಾಂಕುರಗೊಂಡು ಭ್ರೂಣವಾಗಿ ಬೆಳೆದು, ಮಗುವಾಗಿ ಜನಿಸುವ ಅವಸ್ಥಾಂತರಗಳಲ್ಲಿ, ಆಯಾ ಸಮಾಜದ ಭೌತಿಕ ದ್ರವ್ಯಗಳ ಅನುಸಾರ ದೀರ್ಘವಾಗುವ, ಹ್ರಸ್ವವಾಗುವ, ಏರುವ, ಇಳಿಯುವ ಕೆಲವೊಮ್ಮೆ ತಿರುವು ಹಾದಿ ಹಿಡಿಯುವ, ನಾನಾ ಅವಸ್ಥೆಗಳಲ್ಲಿ ಅದು ರೂಪುಗೊಳ್ಳುತ್ತದೆ.

ಆದ್ದರಿಂದ ಹೋಲಿಕೆಗಾಗಿ ಮಾತ್ರ ಬಳಸುತ್ತಿರುವ, ಅಂದರೆ ಅದರ ಆಗಿನ ಬೆಳವಣಿಗೆಯ ಹಂತವನ್ನು ಗುರುತಿಸುವುದಕ್ಕಾಗಿ ಬಳಸುತ್ತಿರುವ ರಾಷ್ಟ್ರೀಯತ್ವದ ಭ್ರೂಣವು ವಸಾಹತುಶಾಹಿಯ ಆಕ್ರಮಣ ಹಾಗೂ ಲೂಟಿಯ ಆಘಾತಕ್ಕೆ ತುತ್ತಾಯಿತು. ಕಾಲಾನಂತರದಲ್ಲಿ ಅದು ತನ್ನ ಬೆಳವಣಿಗೆಯ ಪ್ರಕ್ರಿಯೆಗಳನ್ನು ಮತ್ತೊಂದು ರೂಪದಲ್ಲಿ ಮೈಗೂಡಿಸಿಕೊಂಡಿತಾದರೂ, ತನ್ನ ಪಕ್ವತೆ ಸಮೀಪಿಸುವ ಕಾಲಘಟ್ಟಕ್ಕಿಂತ ಸ್ವಲ್ಪ ಮೊದಲು ಬಿದ್ದ ಈ ಆಘಾತದ ಕಲೆ ಈಗಲೂ ಅದರ ಸಾಮಾಜಿಕ ಸನ್ನಿವೇಶದ ಅಸ್ತಿತ್ವದೊಳಗಡೆಯಿಂದ ತೊಲಗಿಹೋಗಿಲ್ಲ. ವಸಾಹತುಶಾಹಿ ಆಕ್ರಮಣಕ್ಕೆ ಮೊದಲು ಅದು ಇದ್ದ ಪರಿಸ್ಥಿತಿಯಲ್ಲೇ ಯಾವಾಗ ಪೂರ್ಣ ರಾಷ್ಟ್ರತ್ವವಾಗಿ ಪ್ರಕಟಗೊಳ್ಳುತ್ತಿತ್ತೆಂಬುದನ್ನು ಹೇಳಲು ಸಾಧ್ಯವಿಲ್ಲದಿದ್ದರೂ, ವಸಾಹತುಶಾಹಿಯ ಪರೋಕ್ಷ ಹಾಗೂ ಪ್ರತ್ಯಕ್ಷ ಆಡಳಿತಗಳಿಂದ ಅದರ ವಿಕಾಸದ ಪ್ರಕ್ರಿಯೆ ತಿರುಚಲ್ಪಟ್ಟಿತು ಎಂಬುದು ಮಾತ್ರ ವಾಸ್ತವ.

ಅಡಿಟಿಪ್ಪಣಿಗಳು

1. ಡಾ. ಸೆಬಾಸ್ಟಿಯನ್ ಜೋಸೆಫ್, ಸಂಪುಟ ಸಂಪಾದಕರ ಮಾತು, ಕರ್ನಾಟಕ ಚರಿತ್ರೆ, ಸಂ. ೬.
2. ಅದೇ.
3. ಅದೇ
4. ಅದೇ
5. ಉಲ್ಲೇಖಿತ, ಡಾ. ಸೆಬಾಸ್ಟಿಯನ್ ಜೋಸೆಫ್ - ವಸಾಹತುಶಾಹಿಯ ಆಗಮನ, ಕರ್ನಾಟಕ ಚರಿತ್ರೆ , ಸಂ. ೬, ಪು. ೧೮.
6. ಕೆ. ಸಂಪದ್ಗಿರಿರಾವ್ - ರಾಜಕೀಯ ಇತಿಹಾಸ, ಕರ್ನಾಟಕದ ಪರಂಪರೆ, ಸಂ. ೨, ಪು. ३೧೬.
7. ಡಾ. ಸೆಬಾಸ್ಟಿಯನ್ ಜೋಸೆಫ್, ವಸಾಹತುಶಾಹಿಯ ಆಗಮನ, ಕರ್ನಾಟಕ ಚರಿತ್ರೆ, ಸಂ. ೬, ಪು. ೧೮.
8. ಅದೇ, ಪು. ೧೯

9. ಅದೇ ಪು. ೨೦, ೨೧,
10. ಅದೇ , ಪು. ೨೧.
11. ಡಾ. ಸಿ.ಆರ್. ಗೋವಿಂದರಾಜು - ರಾಜನೀತಿ, ಸಮಾಜ ಮತ್ತು ಆರ್ಥಿಕತೆ ಮುಂಬೈ ಕರ್ನಾಟಕ, ಕರ್ನಾಟಕ ಚರಿತ್ರೆ, ಸಂ. ೬, ಪು. ೧೬೦.
12. ಅದೇ, ಪು. ೧೬೧.
13. ಅದೇ , ಪು. ೧೬೨.
14. ಡಾ. ಸೆಬಾಸ್ಟಿಯನ್ ಜೋಸೆಫ್, ವಸಾಹತುಶಾಹಿಯ ಆಗಮನ, ಕರ್ನಾಟಕ ಚರಿತ್ರೆ, ಸಂ. ೬, ಪು. ೨೧.
15. ಚೋಕ್ಸೆ, ಉಲ್ಲೇಖಿತ ಪ್ರೊ. ನಿಖಿಲೇಶ್ ಗುಹಾ - ಕರ್ನಾಟಕ ಒಳನಾಡ ಮತ್ತು ಹೊರನಾಡ ವ್ಯಾಪಾರ, ಕರ್ನಾಟಕ ಚರಿತ್ರೆ, ಸಂ. ೬, ಪು. ೨೦೬-೨೦೭
16. ಅದೇ, ಪು. ೨೦೭.
17. ಪ್ರೊ. ನಿಖಿಲೇಶ್ ಗುಹಾ - ಕರ್ನಾಟಕ ಒಳನಾಡ ಮತ್ತು ಹೊರನಾಡ ವ್ಯಾಪಾರ, ಕರ್ನಾಟಕ ಚರಿತ್ರೆ, ಸಂ. ೬, ಪು. ೨೦೭.
18. ಅದೇ, ಪು. ೨೨೨, ೨೨೩.
19. ಡಾ. ಕೆ.ವಿ. ನಾರಾಯಣ - ಕನ್ನಡ ರಾಷ್ಟ್ರೀಯತೆ ಕುರಿತು ಕ.ವಿ.ವಿ. ಆವರಣದಲ್ಲಿ ನಡೆದ ವಿಷಯ ಮಂಡನೆಯ ಚರ್ಚೆಯಲ್ಲಿ ಭಾಗವಹಿಸುತ್ತಾ ಸೂಚಿಸಿದ ಅಭಿಪ್ರಾಯ, ೧೯೯೮.

✤ ✤ ✤ ✤

ಅಧ್ಯಾಯ -೯

೧೯ನೇ ಶತಮಾನದ ಉತ್ತರಾರ್ಧ, ೨೦ನೇ ಶತಮಾನದ ಮೊದಲ ದಶಕಗಳು

ವಸಾಹತುಶಾಹಿ ನೀತಿಗನುಸಾರವಾಗಿ ಆರ್ಥಿಕ ಬೆಳವಣಿಗೆ

ಮೈಸೂರಿನಲ್ಲಿ ೧೮೩೦ರ ರೈತ ದಂಗೆಗಳ ಪರಿಣಾಮದಿಂದ,ಮೈಸೂರು ರಾಜನು ಆಡಳಿತಾತ್ಮಕವಾಗಿ ವಿಫಲಗೊಂಡಿದ್ದಾನೆಂದು, ಬ್ರಿಟಿಷ್ ಪ್ರಭುತ್ವವು ಕಮೀಷನರುಗಳ ನೇರಾಡಳಿತವನ್ನು ೧೮೩೧ರಿಂದ ಆರಂಭಿಸಿತು. ''೧೮೩೨ರಲ್ಲಿ ರಾಜ್ಯದ ಜ್ಯೂನಿಯರ್ ಕಮಿಷನರ್ ಆಗಿ ನೇಮಕಗೊಂಡು ಸರ್ ಮಾರ್ಕ್ ಕಬ್ಬನ್ ಬಂದುದು ಮೈಸೂರಿನ ಇತಿಹಾಸದಲ್ಲಿ ಹೊಸದೊಂದು ಅಧ್ಯಾಯವನ್ನೇ ತೆರೆಯಿತು''[1] ಎಂದು ಪ್ರೊ. ನಿಖಿಲೇಶ್ ಗುಹಾ ಹೇಳುತ್ತಾರೆ.

೧೮೩೪ರಲ್ಲಿ ಅವನು ಮೈಸೂರಿನ ಏಕೈಕ ಕಮೀಷನರ್ ಆದನು. ೧೮೬೧ರ ಜೂನ್‌ವರೆಗೂ ಆ ಹುದ್ದೆಯಲ್ಲಿ ಮುಂದುವರಿದನು. ಅವನ ಕಾರ್ಯಶ್ರದ್ಧೆ ಮತ್ತು ಅತಿ ಸಣ್ಣ ವಿವರಗಳಿಗೂ ಗಮನಕೊಡುತ್ತಿದ್ದ ರೀತಿಗಳು ಸರಕಾರದ ಒಟ್ಟಾರೆ ಪುನರ್ ವ್ಯವಸ್ಥೆಗೆ ಕಾರಣವಾದವು ಎಂದೂ ಅವರು ಹೇಳುತ್ತಾರೆ.

ಬ್ರಿಟಿಷರು ರಾಜ್ಯದ ಆಡಳಿತವನ್ನು ವಹಿಸಿಕೊಳ್ಳುವ ಸಮಯದಲ್ಲಿ, ಒಟ್ಟಿನಲ್ಲಿ ೫೩೭ ಬಗೆಯ ಒಳತೆರಿಗೆಗಳಿದ್ದು ಅವು ಮೂರು ಬಗೆಯಾಗಿದ್ದವು :

೧) ಭರಮಾರ್ಗ ಅಂದರೆ ಸಾಗಣೆ ಸುಂಕ

೨) ಸ್ಥಳಭರ್ತಿ ಅಂದರೆ ಉತ್ಪಾದನೆ ಮೇಲೆ ಸುಂಕ

೩) ಕರ್ಗ್‌ಪಡಿ ಅಂದರೆ ಮಾರಾಟ ತೆರಿಗೆ

ಈ ತೆರಿಗೆಗಳಿಂದ ವರ್ತಕರು ಬಹಳ ಕಷ್ಟಕ್ಕೊಳಗಾದರು. ಇವು ರಾಜ್ಯದ ಗಡಿಯಲ್ಲಿ ಸುತ್ತಲೂ ಇದ್ದುದಲ್ಲದೆ ಎಲ್ಲಾ ರಸ್ತೆಗಳಲ್ಲೂ ಕನಿಷ್ಟ ೧೩ ಮೈಲಿಗಳಿಗೊಂದರಂತೆ ಇದ್ದವು. ೧೮೧೦ರಲ್ಲಿ ಪೂರ್ಣಯ್ಯ ಈ ಕಟ್ಟೆಗಳಲ್ಲಿ ಉಪಯೋಗಿಸುವು

ದಕ್ಕೆ ದರಪಟ್ಟಿಗಳನ್ನು ಸಿದ್ಧಪಡಿಸಿಕೊಟ್ಟಿದ್ದನು. ಆದರೆ ೧೮೩೧ರ ವೇಳೆಗೆ ಅವು ಮೂಲೆಗುಂಪಾಗಿದ್ದವು. ಯಾವುದೇ ಒಂದು ಸರಕಿನ ಬಗೆಗೆ ಕೂಡ ಸುಂಕದಲ್ಲಿ ಒಂದು ಏಕರೂಪದ ದರವಿರಲಿಲ್ಲ.

ಮಾರ್ಗದಲ್ಲಿ ಎದುರಾಗುವ ಒಂದೊಂದು ಚೌಕಿಯಲ್ಲೂ ಅದರದೇ ದರಗಳಿದ್ದವು. ಸರಕಿನ ಪ್ರಮಾಣವಾಗಲೀ, ಸಾಗಿಸುತ್ತಿರುವ ವಿಧಾನವಾಗಲೀ, ಅಲ್ಲಿ ಲೆಕ್ಕಕ್ಕೆ ಬರುತ್ತಿರಲಿಲ್ಲ. ಸ್ಥಳಭರ್ತಿ ಮತ್ತು ಕರ್ಗ್‌ಪಡಿಗಳು ಎಲ್ಲಾ ಸರಕುಗಳನ್ನು ಒಳಗೊಂಡು ಉತ್ಪಾದನೆಗೆ ಮತ್ತು ವ್ಯಾಪಾರಕ್ಕೆ ಅತ್ಯಂತ ಹಾನಿಕಾರಕವಾಗಿ ಪರಿಣಮಿಸಿದ್ದವು.

ಕಡೂರಿನಲ್ಲಿ ತಾವು ಬೆಳೆದ ಹೊಗೆಸೊಪ್ಪನ್ನು ಮಾರಾಟಮಾಡಬಯಸುವ ರೈತರು ಮೊದಲು ಸರಕಾರದ ಗುಮಾಸ್ತನಿಗೆ ಹೇಳಿಕಳಿಸಬೇಕಾಗಿತ್ತು. ತೂಕ ಮಾಡಿದ ಮೇಲೆ ವಿವಿಧ ಕಟ್ಟೆಗಳ ಮೂಲಕ ಸಾಗಿಸುವಾಗ ಪ್ರತಿಯೊಂದು ಕಟ್ಟೆಯಲ್ಲೂ ಸಾಗಣೆ ಸುಂಕವನ್ನು ತೆರಬೇಕಾಗಿತ್ತು.

ಹಾಗೆಯೇ ಕರ್ಗ್‌ಪಡಿಯನ್ನೂ ಲೆಕ್ಕ ಹಾಕಿದರೆ, ಬೆಳೆದು ಉತ್ಪಾದಿಸುವುದಕ್ಕಿಂತಲೂ ಬೆಲ್ಲ, ಎಣ್ಣೆ, ರೇಷ್ಮೆ, ತಂಬಾಕು ಮೊದಲಾದವನ್ನು ಆಮದು ಮಾಡಿಕೊಳ್ಳುವುದೇ ಅಗ್ಗವಾಗಿ ತೋರುತ್ತಿತ್ತು. ಹೀಗೆ ಸುಂಕಗಳ ಸಂಗ್ರಹಣೆಯಲ್ಲಿ ವಿಪರೀತ ಗೊಂದಲ, ಗೋಜಲು. ಸಂಗ್ರಹದ ಗುತ್ತಿಗೆದಾರರು ಜನರ ಮೇಲೆ ದಬ್ಬಾಳಿಕೆ ದೌರ್ಜನ್ಯಗಳನ್ನೆಸಗುತ್ತಿದ್ದರು. ಅದೇ ವೇಳೆಗೆ ಸರಕುಗಳು ಮುಕ್ತವಾಗಿ ಹರಿಯಲು ಅಡ್ಡಿಯಾಗಿದ್ದರು.

ಈ ಸುಂಕಗಳನ್ನು ನಿಧಾನವಾಗಿ ರದ್ದುಪಡಿಸಲಾಯಿತು. ೧೮೩೨ರಲ್ಲಿ ಎಲ್ಲಾ ಧಾನ್ಯಗಳ ಮೇಲೆ ಸಾಗಣೆಯವು ಹೊರತುಪಡಿಸಿ, ಬೇರೆ ಎಲ್ಲಾ ಬಗೆಯ ಸುಂಕಗಳನ್ನು ತೆಗೆದುಕೊಳ್ಳಲಾಯಿತು. ಎರಡು ವರ್ಷಗಳ ಆನಂತರ ಆ ಸರಕುಗಳ ಮೇಲಿನ ಸಾಗಣೆ ಸುಂಕವನ್ನು ರದ್ದುಪಡಿಸಲಾಯಿತು. ೧೮೩೬ರಲ್ಲಿ ಇನ್ನೂ ಕೆಲವು ಬದಲಾವಣೆಗಳು ಜಾರಿಗೆ ಬಂದವು. ಸಾಯರ್ ಪಾವತಿಯಿಂದ ಅಧಿಕಾರಿಗಳು ಅದುವರೆಗೆ ಅನುಭವಿಸುತ್ತಿದ್ದ ವಿನಾಯಿತಿಗಳೆಲ್ಲ ಕೊನೆಗೊಂಡವು. ಯೂರೋಪಿಯನ್ ಉತ್ಪನ್ನಗಳೆಲ್ಲಕ್ಕೂ ಮೊದಲು ಅಧಿಕವಾಗಿ ತೆರುತ್ತಿದ್ದ ತೆರಿಗೆಗಳನ್ನು ರದ್ದುಪಡಿಸಿ ಅವು ಪ್ರಾಂತ್ಯಾದ್ಯಂತ ಅನಿರ್ಬಂಧಿತವಾಗಿ ಪ್ರವಹಿಸುವಂತೆ ಮಾಡಲಾಯಿತು. ತರಕಾರಿಗಳ ಮೇಲೆ ಮತ್ತು ಕೂಲಿಗಳಿಗೆ ಕೊಡುವ ವೇತನಗಳ ಮೇಲೆ ವಿಧಿಸಲಾಗಿದ್ದ ಸಣ್ಣಪುಟ್ಟ ಸುಂಕಗಳೆಲ್ಲವನ್ನು ೧೮೩೬-೩೭ರಲ್ಲಿ ತೊಡೆದು ಹಾಕಲಾಯಿತು.

ಕಬ್ಬಿಣ, ಉಕ್ಕು ಮತ್ತು ದನಕರುಗಳು ಸುಂಕಮುಕ್ತವಾದವು. ಇದರ ಫಲವಾಗಿ ದನಕರುಗಳ ರಫ್ತಿನ ಸಂಖ್ಯೆಯು ಕೆಲವೇ ವರ್ಷಗಳಲ್ಲಿ ೩೦೦೦ ದಿಂದ ೧೨೦೦೦ಕ್ಕೆ ಏರಿತು. ಸ್ಥಳೀಯ ಉಪಯೋಗಕ್ಕೆ ಕಬ್ಬಿಣದ ಬಳಕೆ ಹಾಗೂ ಉಕ್ಕಿನ ರಫ್ತು ಇನ್ನೂ

ಹೆಚ್ಚಿತು. ಅಡಕಗಳು ಅಥವಾ ಮಾರಾಟಕ್ಕೆಂದು ಸಂತೆಗೆ ತರುತ್ತಿದ್ದ ಸರಕುಗಳ ಮೇಲಿನ ಸುಂಕಗಳನ್ನು ೧೮೪೧ರಲ್ಲಿ ರದ್ದುಪಡಿಸಲಾಯಿತು. ಮೆಣಸು, ಏಲಕ್ಕಿ, ಅಡಿಕೆಗಳ ಸಾಗಣೆ ಸುಂಕ ಆ ಮುಂದಿನ ವರ್ಷದಿಂದ ರದ್ದಾಯಿತು. ಮೊಟ್ಟೆಗಳು, ಕೋಳಿಗಳು, ಬಿದಿರು, ಕುರಿತುಪ್ಪಟ ಮತ್ತು ಕಂಬಳಿ ಇಂತಹ ವಿವಿಧ ವಸ್ತುಗಳ ಮೇಲಿನ ಎಲ್ಲಾ ಸುಂಕಗಳನ್ನು ೧೮೪೫ರೊಳಗೆ ಪೂರ್ತಿ ತೊಡೆದುಹಾಕಲಾಯಿತು.

ತಂಬಾಕಿನ ಮೇಲೆ ಹೇರಿದ್ದ ಸುಂಕವು ೧೮೪೫ರಲ್ಲಿ ಅವಗಣನೆಗೆ ಒಳಗಾಯಿತು. ತೆರಿಗೆ ಗುತ್ತಿಗೆದಾರರು ವಿಧಿಸಿದ್ದ ಎಲ್ಲಾ ಮೇಲು ಸುಂಕಗಳನ್ನು ರದ್ದುಪಡಿಸಲಾಯಿತು. ಒಂದು ಏಕರೂಪದ ತೆರಿಗೆ ಜಾರಿಗೆ ಬಂದಿತು. ಸ್ಥಳೀಯ ಮಾರುಕಟ್ಟೆಗಾಗಿ ಬರುವ ತಂಬಾಕಿಗೆ ೧ ರೂಪಾಯಿ ; ರಫ್ತು ಮಾಡಲು ಆಯ್ಕೆಯಾಗಿರುವುದಕ್ಕೆ ೧ ರೂ. ನಾಲ್ಕು ಆಣೆ ; ಇದರಿಂದಾಗಿ ತಂಬಾಕಿನಿಂದ ಬರುತ್ತಿದ್ದ ವರಮಾನವು ಏರಿತು.

ಹಾಗೆಯೇ ಜಮೀನಿಗೆ ಎಕರೆವಾರು ತೆರಿಗೆ ಹಾಕಬಾರದೆಂಬ ನೀತಿಯಿಂದ ರೈತರಿಗೆ ಅನುಕೂಲಕರವಾಯಿತು.

ನಿಕಾಲಿಹಾಸಿಲ್ ಅಥವಾ ಮೊದಲು ಯಾವುದೇ ಸುಂಕವನ್ನು ಕೊಟ್ಟಿರಲಿ ಬಿಡಲಿ, ಸರಕನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯುವಾಗ ವಿಧಿಸುತ್ತಿದ್ದ ಸುಂಕ, ಇದನ್ನು ೧೮೪೬-೪೭ರಲ್ಲಿ ತೆಗೆದು ಹಾಕಲಾಯಿತು. ಸಕ್ಕರೆ ಮತ್ತು ಬೆಲ್ಲವೂ ಸೇರಿದಂತೆ ವಿವಿಧ ವಸ್ತುಗಳನ್ನು ಗುತ್ತಿಗೆಗೆ ಕೊಡುತ್ತಿದ್ದ ಪದ್ಧತಿ ಮೊದಲು ನಗರ ಮತ್ತು ಚಿತ್ರದುರ್ಗ ವಿಭಾಗಗಳಲ್ಲಿ ೧೮೪೮ರಲ್ಲೂ, ಆಮೇಲೆ ಇಡೀ ರಾಜ್ಯದಲ್ಲೂ ರದ್ದಾಯಿತು. ಸಾಧು ಸಂತರು ಮತ್ತು ಧಾರ್ಮಿಕ ಸಂಸ್ಥೆಗಳು ಅನುಭವಿಸುತ್ತಿದ್ದ ವಿಶೇಷ ಸವಲತ್ತುಗಳನ್ನು ೧೮೫೫ರಲ್ಲಿ ತೆಗೆದುಹಾಕಲಾಯಿತು. ಧಾರ್ಮಿಕಸಂಸ್ಥೆಗಳನ್ನು ಮೊದಲ ಬಾರಿಗೆ ೧೮೪೩ರಲ್ಲಿ ಸಾಯರ್‌ಗೆ ಒಳಪಡಿಸಲಾಯಿತು.

೧೮೦೦ರ ಜನವರಿಯಿಂದ ಸರಕುಗಳ ಉತ್ಪಾದನೆ, ರಫ್ತು, ಸಗಟು ಮತ್ತು ರೋಖ ವ್ಯಾಪಾರಗಳಿಗೆ ಸಂಬಂಧಿಸಿದ ೩೦ರಷ್ಟು ತೆರಿಗೆಗಳನ್ನು ನಿಲ್ಲಿಸಲಾಯಿತು. ೨೦ ವಸ್ತುಗಳ ಮೇಲೆ ಅವುಗಳ ಅಂದಾಜು ಬೆಲೆಗನುಸಾರವಾಗಿ ನಿಗದಿತ ಶೇಕಡಾ ವಾರಿನಂತೆ, ಒಂದು ಸರಳವಾದ ಸುಂಕಿನಂತೆ ಒಂದೇ ಒಂದು ಸಾರಿ ಮಾರಾಟವಾಗುವ ಅಥವಾ ರಫ್ತಾಗುವ ಸ್ಥಳದಲ್ಲಿ ಕೊಡುವಂತೆ ವಿಧಿಸಲಾಯಿತು. ಅಲ್ಲಿಂದ ಮುಂದಕ್ಕೆ ವರ್ತಕನಿಗೆ ಬೇರೆಲ್ಲೂ ಕಿರುಕುಳವಾಗಲೀ, ತಡೆಗಟ್ಟುವಿಕೆಯಾಗಲೀ, ಹಣ ಸುಲಿಯುವುದಾಗಲೀ ಇರುತ್ತಿರಲಿಲ್ಲ.

ಮೈಸೂರಿನಲ್ಲಿ ಬಡಜನರು ಹೊದೆಯಲು ಬಳಸುತ್ತಿದ್ದ ಒರಟು ಕಂಬಳಿಗಳ ಹೊರತು ಮಿಕ್ಕವುಗಳಿಗೆ ಶೇಕಡಾ ೫ರ ಏಕರೂಪದ ದರವನ್ನು ನಿಗದಿಪಡಿಸಲಾಯಿತು. ಯಾವುದೇ ಸಂದರ್ಭದಲ್ಲಿ ಹೊಸತೆರಿಗೆಯನ್ನು ವಿಧಿಸಲಿಲ್ಲ.

ಸಾರಿಗೆಯ ಸಂಕಷ್ಟಗಳಿಂದಾಗಿ ಮೈಸೂರಿನ ಅಡಿಕೆ ವರ್ತಕರಿಗೆ ಇನ್ನೂ ಹೆಚ್ಚಿನ ತೊಂದರೆ ಇತ್ತು. ಮಲೆನಾಡಿನ ದೊಡ್ಡ ದೊಡ್ಡ ವರ್ತಕರಿಗೆ ಮಾತ್ರ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸುವ ಶಕ್ತಿ ಇತ್ತು. ಪಶ್ಚಿಮ ಘಟ್ಟಗಳಿಗೆ ಸಂಪರ್ಕಮಾರ್ಗಗಳನ್ನು ಪ್ರಾರಂಭ ಮಾಡಿದುದರೊಂದಿಗೆ ದೊಡ್ಡ ರೈತರ ಏಕಸ್ವಾಮ್ಯವು ಗಣನೀಯವಾಗಿ ಕುಂಠಿತವಾಯಿತು.

ಟೀಪುವಿನ ಕಾಲದಲ್ಲಿ ಅಗಾಧವಾಗಿ ಬಳಕೆಯಲ್ಲಿದ್ದ ಹಾಗೂ ಚೆನ್ನಾಗಿ ನಿರ್ವಹಿಸಲ್ಪಡುತ್ತಿದ್ದ ಸಂಪರ್ಕ ಮಾರ್ಗಗಳು, ಬ್ರಿಟಿಷ್ ಆಡಳಿತಾವಧಿಯ ಮೊದಲ ನಾಲ್ಕು ದಶಕಗಳಲ್ಲಿ ಪೂರ್ಣ ದುಸ್ಥಿತಿಗೆ ಗುರಿಯಾಗಿದ್ದವು ಎಂಬುದನ್ನು ಈ ಹಿಂದಿನ ಅಧ್ಯಾಯದಲ್ಲಿ ಗಮನಿಸಿದ್ದೇವೆ. ಕಮೀಷನರುಗಳ ಅವಧಿಯಲ್ಲಿ ಈ ರಸ್ತೆಗಳ ದುರಸ್ತಿ, ಸಂಪರ್ಕ ಮಾರ್ಗಗಳ ನಿರ್ಮಾಣ ಮುಂತಾದವು ೧೮೪೮ರಿಂದ ಆರಂಭವಾದವು. ೧೮೪೫ರಲ್ಲಿ ಹುಬ್ಬಳ್ಳಿ ಮತ್ತು ಸಿರ್ಸಿ ನಡುವೆ ಬಂಡಿ ಮಾರ್ಗವು ಸಿದ್ಧವಾಯಿತು.

ಆಮೇಲೆ ಮೈಸೂರುರಾಜ್ಯದಲ್ಲಿ ಮಾರ್ಗಗಳ ನಿರ್ಮಾಣ ಮತ್ತು ದುರಸ್ತಿಯ ಕಡೆಗೆ ಸರಕಾರವು ಹೆಚ್ಚಿನ ಗಮನವನ್ನು ನೀಡಿತು. ಇದಕ್ಕೆ ಬಹುಮಟ್ಟಿಗೆ ಕಾರಣನಾದವನು ಮೈಸೂರಿನಲ್ಲಿ ಚೀಫ್ ಇಂಜಿನಿಯರ್ ಆಗಿದ್ದ ಕರ್ನಲ್ ಚಾರ್ಲ್ಸ್‌ಗ್ರೀನ್. ೧೮೫೪ರಲ್ಲಿ ಮೈಸೂರಿನಲ್ಲಿ ಸ್ಥಾಪಿತವಾದ ಲೋಕೋಪಯೋಗಿ ಇಲಾಖೆಯು ಅವನ ವಶಕ್ಕೆ ಬಂದಿತು. ಈ ಕಾಲದಲ್ಲಿ ನಿರ್ಮಿತವಾದ ಹೊಸ ಮುಖ್ಯರಸ್ತೆಗಳಲ್ಲಿ ಒಂದು ಬೆಂಗಳೂರನ್ನು ಶಿವಮೊಗ್ಗಕ್ಕೆ ಕೂಡಿಸಿತು. ಮೊದಲೇ ಇದ್ದ ಬೆಂಗಳೂರು - ಹರಿಹರ ಮಾರ್ಗದಲ್ಲಿ ತುಮಕೂರಿನಲ್ಲಿ ಅದು ಕವಲೊಡೆದು ಗುಬ್ಬಿಯ ಮೂಲಕ ಸಾಗುತ್ತಿತ್ತು. ಗುಬ್ಬಿ ಅಡಿಕೆ ಮತ್ತು ಕಾಫಿಗಳ ಮುಖ್ಯ ಕೇಂದ್ರವಾಗಿತ್ತು. ನಗರ ಹಾಗೂ ಚಿತ್ರದುರ್ಗದ ಪಶ್ಚಿಮ ತಾಲ್ಲೂಕುಗಳ ಉತ್ಪಾದನೆಗಳನ್ನು ಅಲ್ಲಿ ಕೆಳ ಕರ್ನಾಟಕ ಪ್ರದೇಶದ ವರ್ತಕರು ಕೊಂಡುಕೊಳ್ಳುತ್ತಿದ್ದರು. ಹೊಸದಾಗಿ ನಿರ್ಮಿತವಾದ ದಾರಿಯು ತೆಂಗು ಮತ್ತು ಅಡಿಕೆ ತೋಟಗಳಿಗೆ ಹಾಗೂ ಕಬ್ಬಿಣದ ಅದಿರು ತುಂಬಿದ ಬೆಟ್ಟಗಳಿಗೆ ಪ್ರಸಿದ್ಧವಾದ ಚಿತ್ರದುರ್ಗದಿಂದ ೭ ಮೈಲುಗಳ ಒಳಗೆ ಹಾದು ಹೋಗುತ್ತಿದ್ದಿತು. ಈ ದಾರಿಯು ಹಿಂದೆ ಹೇಳಿದ ಬೆಂಗಳೂರು ಹರಿಹರ ಹೆದ್ದಾರಿಯನ್ನು ತಿಪಟೂರು ಎಂಬ ಇನ್ನೊಂದು ಮುಖ್ಯವಾದ ವಾಣಿಜ್ಯ ಕೇಂದ್ರದಲ್ಲಿ ಸಂಧಿಸುತ್ತಿದ್ದಿತು. ಸರ್ ಲೆವಿನ್ ಬೌರಿಂಗ್ ಕಮೀಷನರ್ ಆಗಿದ್ದಾಗ ರೈತರಿಂದ ನೇಗಿಲ ತೆರಿಗೆಯ ರೂಪದಲ್ಲಿ ಸಂಗ್ರಹಿಸಿದ ಹಣದಿಂದ, ಸ್ಥಳದ ಸಣ್ಣ ರಸ್ತೆಗಳನ್ನು ದುರಸ್ತಿಗೊಳಿಸುವ ಕೆಲಸವನ್ನು ಕೈಗೊಳ್ಳಲಾಯಿತು. ದೊಡ್ಡಬಳ್ಳಾಪುರ ಗೌರಿಬಿದನೂರು ರಸ್ತೆಯು ಈ ಕಾಲದಲ್ಲಿ ನಿರ್ಮಿತವಾಯಿತು. ಇದೇ ರೀತಿ ರಸ್ತೆಗಳ ವಿಸ್ತಾರಣಾ ಕಾರ್ಯವನ್ನು ಮುಂಬೈ - ಕರ್ನಾಟಕ ಪ್ರದೇಶದಲ್ಲಿ ಕೈಗೊಳ್ಳಲಾಯಿತು.

ಈ ಬಗೆಯಲ್ಲಿ ರಸ್ತೆಗಳ ನಿರ್ಮಾಣ ಕಾರ್ಯ ಮತ್ತೆ ಆದುದರಿಂದ ಉಂಟಾದ ಪರಿಣಾಮಗಳ ಬಗ್ಗೆ ಪ್ರೊ. ನಿಖಿಲೇಶ್ ಗುಹಾ ಹೀಗೆ ಹೇಳುತ್ತಾರೆ :

"ಹೊಸದಾಗಿ ದಾರಿಗಳನ್ನು ನಿರ್ಮಿಸಿದುದರಿಂದ ದೇಶದ ವ್ಯಾಪಾರ ವಾಣಿಜ್ಯಗಳ ಮೇಲೆ ತುಂಬಾ ಲಾಭದಾಯಕ ಪರಿಣಾಮಗಳುಂಟಾದವು. ನಗರದ ಸಿವಿಲ್ ಆಡಳಿತದ ಹೊಣೆಯನ್ನು ಎಂಟು ವರ್ಷಗಳ ಕಾಲ ಹೊತ್ತಿದ್ದ ಕರ್ನಲ್ ವಿಲಿಯಂ ಕ್ಯಾಂಪ್‌ಬೆಲ್ ಆನ್‌ಸ್ಲೊ, ೧೮೫೮ರಲ್ಲಿ ಬರೆದನು "ಶತಮಾನಗಳ ಕಾಲದಿಂದ ತಮ್ಮ ಹಳ್ಳಿಯನ್ನು ಬಿಟ್ಟು ಹೊರಗೆ ಬಂದಿರದ ಜನರು ಅಥವಾ ತಮ್ಮ ಹಳ್ಳಿಯಿಂದ ೧೦ ಮೈಲಿಗಿಂತ ದೂರಕ್ಕೆ ಎಂದೂ ಹೋಗಿರದ ರೈತರು ದೇಶವನ್ನು ಸುತ್ತುವ ಅಭ್ಯಾಸವನ್ನು ಮಾಡಿಕೊಂಡರು". ರೈತರೇ ಮಾರುಕಟ್ಟೆಗಳಿಗೆ ಬಂದರು. ಕುಬರ್‌ಲೇಕ್ ಘಟ್ಟದ ಹಾದಿಯನ್ನು ತೆರೆದುದರಿಂದ ಬಿಜಾಪುರ ಮತ್ತು ಭಾರತದ ಪಶ್ಚಿಮ ಕರಾವಳಿಗಳ ನಡುವೆ ಸಾರಿಗೆ ಸಂಪರ್ಕ ಸಾಧ್ಯವಾಯಿತು. ಹೀಗೆ ನೂತನ ಮಾರ್ಗಗಳ ನಿರ್ಮಾಣವು ಎಷ್ಟು ಪ್ರಯೋಜನಕಾರಿಯಾಗಿತ್ತೆಂಬುದನ್ನು ೧೮೭೬-೭೭ರ ಕ್ಷಾಮದ ಸಮಯದಲ್ಲಿ ಅರಿವಿಗೆ ಬಂದಿತು".[2]

ಬೆಂಜಮಿನ್ ಲೂಯಿರೈಸ್ ಹೀಗೆ ಅಭಿಪ್ರಾಯಪಟ್ಟರು :

"ರಸ್ತೆಗಳ ಜಾಲವು ಕೊನೆಯೇ ಕಾಣಿಸದ ಬಂಡಿಸಾಲುಗಳ ಭಾರದಿಂದ ಮುಲುಗಿತು. ದೊಡ್ಡ ಮಾರುಕಟ್ಟೆಗಳಲ್ಲಿ ಅಥವಾ ಕೊನೇಕೊಂಪೆಯ ಸಂತೆಯಲ್ಲಿ ಕಣ್ಣಿಗೆ ಬಿದ್ದ ಅಕ್ಕಿ ಮತ್ತು ರಾಗಿಯ ಒಂದೊಂದು ಕಾಳೂ ರೈಲು ನಿಲ್ದಾಣದಿಂದ ಬಂದವು. ಇಲ್ಲವೇ ಪಶ್ಚಿಮ ಘಟ್ಟಗಳನ್ನು ಏರಿಬಂದವು. ಸ್ಥಳೀಯ ಉದ್ಯಮಿಗಳ ಪರಿಶ್ರಮದಿಂದ ಪ್ರಾಂತ್ಯಾದ್ಯಂತ ಹಂಚಿದಂಥವು ಆಗಿದ್ದವು".[3]

೧೮೫೭ರ ನಂತರ ಮೈಸೂರಿನಲ್ಲಿ ಸೇತುವೆಗಳನ್ನು ನಿರ್ಮಿಸಿ ರೈಲ್ವೆ ಹಾದಿಗಳನ್ನು ಹಾಕಲಾಯಿತು. ಹಾಸನ ಜಿಲ್ಲೆಯಲ್ಲಿ ಹೇಮಾವತಿ ನದಿಗೆ ಅಡ್ಡಲಾಗಿ ಶ್ರೀರಾಮದೇವ ಅಣೆಕಟ್ಟನ್ನು ಬೌರಿಂಗ್ ಕಮೀಷನರ್ ಆಗಿದ್ದಾಗ ನಿರ್ಮಿಸಲಾಯಿತು. ತುಂಗಭದ್ರಾನದಿಗೆ ಅಡ್ಡಲಾಗಿ ಹರಿಹರ ಸೇತುವೆಯನ್ನು ೧೮೬೮ರಲ್ಲಿ ತೆರೆಯಲಾಯಿತು. ಇದು ಮುಂಬೈ ಮತ್ತು ಮದರಾಸ್ ಪ್ರೆಸಿಡೆನ್ಸಿಗಳಿಂದ ಬಂದು ಹೋಗುವ ಸಾರಿಗೆಯ ಕೂಡುಸ್ಥಳವಾಯಿತು. ನಗರದಲ್ಲಿ ಸಕಲೇಶಪುರ ಸೇತುವೆಯು ಕಾಫಿ ಪ್ಲಾಂಟರುಗಳಿಗೆ ಬಹಳ ಸಹಾಯಕವಾಯಿತು. ೧೮೫೯ರಲ್ಲಿ ಬೆಂಗಳೂರಿಗೂ - ಜೋಲಾರ್‌ಪೇಟೆಗೂ ರೈಲು ಸಂಪರ್ಕ ಬಂದಿತು. ಮದರಾಸು - ಬೆಂಗಳೂರು ರೈಲು ಹಾದಿಯು ೧೮೬೪ರಲ್ಲಿ ಪ್ರಾರಂಭವಾಯಿತು. ೧೮೮೨ರಲ್ಲಿ ಬೆಂಗಳೂರು - ಮೈಸೂರು ರೈಲು ಸಂಚಾರ ಪ್ರಾರಂಭವಾಯಿತು.

ರೈಲುಹಾದಿಗಳ ನಿರ್ಮಾಣಕ್ಕೆ ಪೈನ್‌ಮರದ ಸ್ಲೀಪರ್‌ಗಳು, ಯುರೋಪಿನಿಂದ ಸಮುದ್ರದ ಮೂಲಕ ಬಂದು ಮದರಾಸಿನಿಂದ ಬೆಂಗಳೂರಿಗೆ ರೈಲಲ್ಲಿ ಬರುತ್ತಿದ್ದವು. ಮೈಸೂರು ಅರಣ್ಯಗಳಲ್ಲಿ ದೊರಕುತ್ತಿದ್ದ ಮರವನ್ನು ಸ್ವಲ್ಪಮಟ್ಟಿಗೆ ಉಪಯೋಗಿಸಲಾಯಿತು. ಬೆಂಗಳೂರು-ಮೈಸೂರು ರೈಲುದಾರಿಯ ವೆಚ್ಚವನ್ನು ಬಹುಮಟ್ಟಿಗೆ ರಾಜ್ಯದ ಸಾಮಾನ್ಯ ತೆರಿಗೆ ವರಮಾನದಿಂದಲೇ ನಿರ್ವಹಿಸಲಾಯಿತು. ಗುಬ್ಬಿಯಿಂದ

ಹರಿಹರದವರೆಗಿನ ಮಾರ್ಗವನ್ನು ವಿದೇಶೀ ಬಂಡವಾಳದಿಂದ ನಿರ್ಮಿಸಬಹುದೆಂದು ಭಾರತ ಸರ್ಕಾರವು ಸಲಹೆ ಮಾಡಿತು. ಸದರನ್ ಮರಾಠ ರೈಲ್ವೇ ಕಂಪೆನಿಗೆ ತಿಪಟೂರಿನಿಂದ ಹರಿಹರಕ್ಕೆ ಮಾರ್ಗವನ್ನು ಹಾಕುವ ಹೊಣೆ ನೀಡಲಾಯಿತು. ೧೮೮೫ರ ವೇಳೆಗೆ ಮೈಸೂರು ಸರ್ಕಾರವು ರೈಲು ಮಾರ್ಗ ನಿರ್ಮಿಸಲು ೬೮ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದ್ದಿತು. ಸದರನ್ ಮರಾಠ ರೈಲ್ವೆ ಕಂಪನಿಯ ಸಾಲದ ಹಣದಿಂದ ಈ ವೆಚ್ಚವನ್ನು ಕಳೆದ ಮೇಲೆ ಉಳಿಯುವ ಹಣವನ್ನು ೧೮೭೭ರಲ್ಲಿ ಪಡೆದಿದ್ದ ಕ್ಷಾಮದ ಸಾಲವನ್ನು ಮರುಪಾವತಿ ಮಾಡಲು (೮೦ ಲಕ್ಷ ರೂಪಾಯಿ) ಬಳಸುವುದೆಂದಾಯಿತು. ಮೈಸೂರು ರಾಜ್ಯಕ್ಕೂ ಸದರನ್ ರೈಲ್ವೇ ಕಂಪನಿಗೂ ಆದ ಒಪ್ಪಂದವನ್ನು ಕುರಿತು ಯೋರ್ನ್ ಹೆಟ್ನೆ ಹೀಗೆ ಹೇಳುತ್ತಾರೆ :

'' ಮೈಸೂರು ನೂತನವಾಗಿ ಗಳಿಸಿಕೊಂಡ ರೈಲ್ವೆ ಮಾರ್ಗವನ್ನು ಒಂದು ವಿದೇಶೀ ಕಂಪನಿಗೆ ಒಪ್ಪಿಸಬೇಕಾಯಿತು. ಅಲ್ಲದೇ ಮುಂದಿನ ರೈಲ್ವೆ ವಿಸ್ತರಣಾ ಕಾರ್ಯವನ್ನು ವಿದೇಶೀ ನಿಯಂತ್ರಣಕ್ಕೆ ಒಳಪಡಿಸಬೇಕಾಯಿತು. ಇದು ಅರೆ ಸ್ವಯಮಾಡಳಿತ ರಾಜ್ಯವೊಂದರ ಅತೀ ಬಿಕ್ಕಟ್ಟಾದ ಆರ್ಥಿಕ ಪರಿಸ್ಥಿತಿಯನ್ನು, ಸಾಮ್ರಾಜ್ಯಶಾಹಿಯ ಪರೋಕ್ಷ ನಿಯಂತ್ರಣದ ಸಾಮರ್ಥ್ಯವನ್ನು ಸೂಚಿಸುತ್ತದೆ''.[4]

ಬೆಂಗಳೂರು - ಹರಿಹರ ರೈಲ್ವೆಯು ೧೮೮೯ರಲ್ಲಿ ಕಾರ್ಯಶೀಲವಾಯಿತು. ಒಂದು ಮಾರ್ಗವು ಬೆಂಗಳೂರಿನಿಂದ ಹಿಂದೂಪುರಕ್ಕೆ ; ಇನ್ನೊಂದು ಮಾರ್ಗವು ಬೆಂಗಳೂರಿನಿಂದ ಕೋಲಾರದ ಚಿನ್ನದ ಗಣಿಗೆ ; ದಕ್ಷಿಣದಲ್ಲಿ ಮೈಸೂರಿನಿಂದ ನಂಜನಗೂಡಿಗೆ ; ಪಶ್ಚಿಮದಲ್ಲಿ ಬೀರೂರು ಮತ್ತು ಶಿವಮೊಗ್ಗಗಳು - ರೈಲ್ವೆ ಸಂಪರ್ಕ ಪಡೆದವು. ಕೋಲಾರ ಗೋಲ್ಡ್ ಫೀಲ್ಡ್ ರೈಲ್ವೆಯನ್ನು ಮದರಾಸ್ ರೈಲ್ವೇ ಕಂಪನಿಗೆ ವಹಿಸಲಾಗಿತ್ತು. ಅದೊಂದು ಬಿಟ್ಟರೆ ಮಿಕ್ಕ ಎಲ್ಲಾ ಮಾರ್ಗಗಳು ಒಂದು ನಿರ್ದಿಷ್ಟ ಸಮಯದವರೆಗೆ ಸದರನ್ ಮರಾಠಾ ರೈಲ್ವೇ ಕಂಪನಿಯ ನಿರ್ವಹಣೆಯಲ್ಲಿದ್ದವು. ಪುಣೆಯಿಂದ ಒಂದು ಮಾರ್ಗವು ಬೆಳಗಾಮನ್ನು ಕೂಡಿಸಿತ್ತು. ಆಮೇಲೆ ಲೋಂಡಾದಲ್ಲಿ ಸದರನ್ ಮರಾಠ ರೈಲ್ವೆಯನ್ನು ಸಂಧಿಸಿ ಅಲ್ಲಿಂದ ಪೂರ್ವಕ್ಕೆ ತಿರುಗಿ, ಧಾರವಾಡ, ಹುಬ್ಬಳ್ಳಿ , ಬಂಕಾಪುರ, ರಾಣೆಬೆನ್ನೂರುಗಳನ್ನು ಕೂಡಿಸಿ ಹರಿಹರದ ಮೂಲಕ ಮೈಸೂರನ್ನು ಪ್ರವೇಶಿಸುತ್ತಿತ್ತು. ಒಂದು ಕಡೆ ಗದಗ - ಬಳ್ಳಾರಿ ಇನ್ನೊಂದು ಕಡೆ ಹುಬ್ಬಳ್ಳಿ ಈ ಸಂಪರ್ಕಗಳಿಂದ ಮೈಸೂರಿನ ಹತ್ತಿ ಬೆಳೆಯುವ ಜಿಲ್ಲೆಗಳನ್ನು ಅಂತಾರಾಷ್ಟ್ರೀಯ ವ್ಯಾಪಾರಕ್ಕೆ ತೆರೆಯಿತು.

ಕರ್ನಾಟಕದ ಹತ್ತಿ ಬೆಳೆಯುವ ಪ್ರದೇಶಗಳಿಗೆ ಸಂಪರ್ಕವನ್ನು ಕಲ್ಪಿಸುವುದು ರೈಲ್ವೆ ನಿರ್ಮಾಣದ ಹಿಂದಿದ್ದ ಮುಖ್ಯವಾದ ಪರಿಗಣನೆಗಳಲ್ಲಿ ಒಂದು . ಚೋಕ್ಸೆ ಹೇಳುವಂತೆ ಹತ್ತಿ ಬೆಳೆಯುವ ಪ್ರದೇಶದಿಂದ ಕರ್ನಾಟಕದ ಪ್ರಾಮುಖ್ಯತೆ ಹೆಚ್ಚುತ್ತಿದ್ದಿತು. ಬ್ರಿಟಿಷರಿಗೆ, ಗಣನೀಯ ಪ್ರಮಾಣದಲ್ಲಿ ಹತ್ತಿಯನ್ನು ಲಾಭಕರವಾಗಿ ಬೆಳೆಯುವ ಪ್ರದೇಶವು ಭಾರತದಲ್ಲಿ ಇನ್ನೊಂದಿದೆ ಎಂಬ ಅರಿವನ್ನು ಇದು

ಉಂಟುಮಾಡಿತು. ಆದ್ದರಿಂದ ೧೮೫೦-೧೮೬೦ರ ನಡುವೆ ಕೆನರಾ ಮೂಲಕ ಪಶ್ಚಿಮ ಕರಾವಳಿಯೊಂದಿಗೆ ಸಂಪರ್ಕ ಬೆಳೆಸುವುದರಲ್ಲಿ ಹೆಚ್ಚಿನ ಮುನ್ನಡೆಯನ್ನು ಸಾಧಿಸಲಾಯಿತು.

ಧಾರವಾಡವು ಮುಂಬೈ ಪ್ರೆಸಿಡೆನ್ಸಿಗೆ ಸೇರಿದ ಮೇಲೆ ಬ್ರಿಟಿಷರು ೧೮೧೯ರಲ್ಲಿ ಮತ್ತು ೧೮೨೯ರಲ್ಲಿ ಹತ್ತಿ ಉತ್ಪಾದನೆಯನ್ನು ಉತ್ತಮಪಡಿಸಲು ಪ್ರಯತ್ನಿಸಿದರು. ಅಷ್ಟೇನೂ ಪರಿಣಾಮ ಕಂಡುಬರಲಿಲ್ಲ. ೧೮೪೦ರಲ್ಲಿ ಮುಂಬೈ-ಕರ್ನಾಟಕದಲ್ಲಿ ಅಮೆರಿಕನ್ ಹತ್ತಿಯನ್ನು ಬಿತ್ತಿ ನೋಡಲಾಯಿತು. ಬೆಲೆ ನಿರೀಕ್ಷಿಸಿದಷ್ಟು ಪ್ರಮಾಣದಲ್ಲಿ ಬರಲಿಲ್ಲ . ಬೆಳಗಾಂನಲ್ಲಿ ಆ ಪ್ರಯೋಗವನ್ನು ಕೈ ಬಿಡಲಾಯಿತು. ಆದರೆ ಧಾರವಾಡದಲ್ಲಿ ಅದು ಯಶಸ್ವಿಯಾಯಿತು.

ಅಮೆರಿಕನ್ ಸಿವಿಲ್‌ವಾರ್ ಸಮಯದಲ್ಲಿ ದಕ್ಷಿಣ ಅಮೆರಿಕಾದ ಹತ್ತಿಯು ಇಂಗ್ಲೆಂಡಿಗೆ ಬರಲಿಲ್ಲವಾಗಿ, ದಖ್ಖನ್ ಮತ್ತು ಬಾಂಬೆ ಕರ್ನಾಟಕಗಳಲ್ಲಿ ಬೆಳೆದ ಹತ್ತಿಯನ್ನು ಅಲ್ಲಿಯ ಹತ್ತಿ ಗಿರಣಿಗಳು ತರಿಸಿಕೊಳ್ಳತೊಡಗಿದವು. ಇದರಿಂದ ಹತ್ತಿ ಬೇಸಾಯದ ವ್ಯಾಪ್ತಿಯು ಹೆಚ್ಚಿತು. ಅಮೆರಿಕನ್ ಸಿವಿಲ್‌ವಾರ್ ಮುಗಿಯುತ್ತಿದ್ದಂತೆ ಭಾರತದ ಹತ್ತಿಗೆ ಮಾರುಕಟ್ಟೆ ಕುಗ್ಗಿತು. ರೈತರ ಬದುಕು ಕರುಣಾಜನಕವಾಯಿತು. ೧೮೭೦ರ ಮೊದಲಲ್ಲಿ ದಖ್ಖನ್ ದಂಗೆಗಳು ಸಂಭವಿಸಿದುದಕ್ಕೆ ಮುಖ್ಯ ಕಾರಣಗಳಲ್ಲಿ ಅದೂ ಒಂದು.

ತನ್ನ ಕೈಗಾರಿಕೆಗಳ ಹಿತಾಸಕ್ತಿಗಾಗಿ ಇಲ್ಲಿನ ಕೃಷಿಯಲ್ಲಿ ವಾಣಿಜ್ಯ ಬೆಳೆಗಳನ್ನು, ಅದೂ ಒಂದೇ ಬಗೆಯಾದ ವಾಣಿಜ್ಯ ಬೆಳೆಗಳನ್ನು ವಿಸ್ತರಿಸುತ್ತಾ ಹೋದ ವಸಾಹತುಶಾಹಿಯು ಅಂತಾರಾಷ್ಟ್ರೀಯ ಮಾರುಕಟ್ಟೆಯ ಏರುಪೇರುಗಳಿಗೆ ಕರ್ನಾಟಕದ ರೈತರನ್ನು ಬಲಿಪಶು ಮಾಡಲು ಆರಂಭಿಸಿದ್ದನ್ನು ಇಲ್ಲಿ ನಾವು ಗಮನಿಸಬಹುದಾಗಿದೆ. ವಸಾಹತುಪೂರ್ವ ಅವಧಿಯಲ್ಲಾಗಿದ್ದರೆ ಇಲ್ಲಿ ಹೆಚ್ಚುತ್ತಲೇ ಹೋದ ಸಾರಿಗೆ ಸಂಪರ್ಕ ಮಾರ್ಗಗಳು ಹಾಗೂ ಹತ್ತಿಬೆಳೆಯ ಉತ್ಪಾದನೆಯು, ಇಲ್ಲಿ ಸ್ಥಳೀಯವಾಗಿ ವಿಸ್ತರಣೆಯಾಗುತ್ತಲೇ ಹೋದ ಕೈಗಾರಿಕಾ ಚಟುವಟಿಕೆಗಳನ್ನು, ಅದರಿಂದ ವಿಸ್ತರಣೆಯಾಗುತ್ತಾ ಹೋದ ಕಸುಬುದಾರಿ ವರ್ಗದ ಹೆಚ್ಚಳವನ್ನು, ಕನ್ನಡ ರಾಷ್ಟ್ರೀಯತೆಯ ವಿವಿಧ ಸಮುದಾಯಗಳೊಳಗೆ ಸಂಚಯಗೊಳ್ಳತೊಡಗಿದ ವಾಣಿಜ್ಯ ಬಂಡವಾಳವನ್ನು - ಅವು ನಿರ್ಮಿಸುತ್ತಿದ್ದವು. ಆದರೆ ವಸಾಹತುಶಾಹಿ ಆರ್ಥಿಕ ನೀತಿಯ ಫಲವಾಗಿ ರೈತರು ಹತ್ತಿ ಬೆಳೆಯುವುದೆಂಬುದು ಅಂತಾರಾಷ್ಟ್ರೀಯ ಮಾರುಕಟ್ಟೆಯ ಅಗತ್ಯತೆಗಳಿಗೆ, ಬ್ರಿಟಿಷ್ ಜವಳಿ ಕಾರ್ಖಾನೆಗಳಿಗಾಗಿ ಅಗ್ಗದ ಕಚ್ಚಾವಸ್ತುಗಳನ್ನು ಪೂರೈಸುವುದು ಮಾತ್ರ ಎಂಬಂತಾಗಿ, ಬೆಲೆಯ ಏರುಪೇರುಗಳಿಗೆ, ನಷ್ಟಗಳಿಗೆ ಗುರಿಮಾಡಿತು. ಕೃಷಿಯ ಒಂದು ಕ್ಷೇತ್ರದಲ್ಲಿ ವಾಣಿಜ್ಯ ಬೆಳವಣಿಗೆ ಉಂಟಾಗುತ್ತಿದೆಯೆಂಬುದು ನಿಜವಾದರೂ, ಅದಕ್ಕೆ ಪೂರಕವಾಗಿ ಕೈಗಾರಿಕೋದ್ಯಮಗಳು ಇಲ್ಲಿ ವಿಸ್ತರಣೆಯಾಗಲಿಲ್ಲವಾದ್ದರಿಂದ, ಲಾಭಾಂಶವು ಕರ್ನಾಟಕದ

ಕೈಯೊಳಗಿನಿಂದ ಬ್ರಿಟಿಷ್ ವರ್ತಕಮಂಡಳಿಗಳಿಗೆ ಹರಿಯ ತೊಡಗಿತ್ತು. ಹಿಂದೆ ಟೀಪುವಿನ ಕಾಲದವರೆಗೆ ಆದಿಮ ಬಂಡವಾಳ ಸಂಚಯನದ ಪ್ರಕ್ರಿಯೆಯು ಆರಂಭಗೊಂಡಿತ್ತಾದರೂ ಅದು ಪಸಾಹತುಶಾಹಿಯ ಆಕ್ರಮಣದ ನಂತರ ನಿಂತುಹೋಯಿತು. ಕರ್ನಾಟಕದೊಳಗೆ ಕೆಲವು ದಲ್ಲಾಳಿವರ್ಗಗಳನ್ನು ಬಿಟ್ಟರೆ ಬೇರೆ ಯಾವ ಉತ್ಪಾದಕ ಮತ್ತು ವರ್ತಕ ಸಮುದಾಯಗಳ ಕೈಯಲ್ಲೂ ಬಂಡವಾಳ ಸಂಚಯನವಾಗಲೇ ಇಲ್ಲ. ಆದ್ದರಿಂದ ಮುಂದೆ ಇಲ್ಲಿ ಸ್ವತಂತ್ರ ಕೈಗಾರಿಕೆಗಳ ಸ್ಥಾಪನೆಯಾಗಲೀ, ಅದಕ್ಕಾಗಿ ವೈಜ್ಞಾನಿಕ ತಾಂತ್ರಿಕ ಆವಿಷ್ಕಾರಗಳ ಅಗತ್ಯವಾಗಲೀ ಏರ್ಪಡದೆ ನಮ್ಮ ಸಮಾಜವು ಈ ಸಾಮ್ರಾಜ್ಯಶಾಹಿ ದೇಶಗಳ ನೆರವನ್ನು ಬಹುವಿಧದಲ್ಲಿ ಅವಲಂಬಿಸಿರಬೇಕಾದ ಚಾರಿತ್ರಿಕ ದುಸ್ಥಿತಿಯನ್ನು, ಈ ಬಗೆಯ ಅಸಮ ಬೆಳವಣಿಗೆಯು ಉಂಟುಮಾಡಿತು ಎಂಬುದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ.

ಇತರೆ ವಾಣಿಜ್ಯ ಬೆಲೆಗಳ ಹೆಚ್ಚಳವೂ ಕೂಡ ಹತ್ತಿಯ ಮಾದರಿಯನ್ನೇ ಅನುಸರಿಸಿದುದಾಗಿತ್ತು. ಉದಾ. : '' ೧೮೭೫ರವರೆಗೆ ಕಾಫಿಯನ್ನು ಮೈಸೂರಿನಲ್ಲಿ ರಫ್ತಿಗಾಗಿ ಮಾತ್ರವೇ ಬೆಳೆಯಲಾಗುತ್ತಿತ್ತು. ಅದರಲ್ಲಿ ವರಮಾನವನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಯನ್ನು ಮೊದಲು ಕಬ್ಬನ್ ಮನಗಂಡನು. ೧೮೩೮ರಲ್ಲಿ ಅವನು ಮಣಕ್ಕೆ ೧ರೂ. ತೆರಿಗೆ ವಿಧಿಸಿದನು. ಇದು ಆಗ ಬೆಲೆಯ ೧/೪ ಭಾಗವಾಗಿತ್ತು. ಆದರೆ ಮುಂದೆ ಕಾಫಿಯ ಬೆಲೆ ಮಾರುಕಟ್ಟೆಯಲ್ಲಿ ಕುಸಿದುದರಿಂದ ತೆರಿಗೆಯ ಬೆಲೆಯನ್ನು ಮೊದಲು ಎಂಟು ಆಣೆಗೆ, ನಂತರ ನಾಲ್ಕು ಆಣೆಗೆ ಇಳಿಸಲಾಯಿತು. ಕಾಫಿ ಪ್ಲಾಂಟರುಗಳಲ್ಲಿ ಮುಕ್ಕಾಲು ಜನ ಭಾರತೀಯರು. ಜಮೀನಿನ ಸರ್ವೇ ಆಗಿರಲಿಲ್ಲವಾದ್ದರಿಂದ ಕಾಫಿ ಬೆಳೆಯಿಂದ ಸರಕಾರಕ್ಕೆ ಏನಾದರೂ ವರಮಾನ ಬರುವುದಿದ್ದರೆ ಅದು ಈ ತೆರಿಗೆಯಿಂದಾಗಿಯೇ.... ಆದರೆ ಹಾಗೆ ವಿಧಿಸಿದ ತೆರಿಗೆಯು ಅಧಿಕವಾಯಿತು ಎಂದು ಬೆಳೆಗಾರರು ದೂರಿದರು''.[5]

೧೮೫೭ರಲ್ಲಿ ಮೈಸೂರಿನಲ್ಲಿ ಕಾಫಿ ತೋಟಗಳ ಸಂಖ್ಯೆ ೧೦ಕ್ಕಿಂತ ಕಡಿಮೆ. ಆದರೆ ೧೮೬೦ರ ವೇಳೆಗೆ ಸಮಕಾಲೀನ ಪ್ಲಾಂಟರನ್ನೊಬ್ಬ ಹೀಗೆ ಬರೆದನು :

''ಈಗ ಮೈಸೂರು - ಯೂರೋಪಿಯನ್ ನೆಲಸಿಗರು, ಕಾಫಿ ಪ್ಲಾಂಟರರು ಮತ್ತು ಇತರರಿಂದ ತುಂಬಿ ಹೋಗಿದೆ. ಪ್ರತಿದಿನವೂ ಅವರ ಸಂಖ್ಯೆ ಹೆಚ್ಚುತ್ತಿದೆ''.[6]

೧೮೪೪ರಲ್ಲಿ ಕಬ್ಬನ್ ಹೀಗೆ ಹೇಳಿದನು : '' ಮೈಸೂರಿನಲ್ಲಿ ಕಬ್ಬಿನ ಬೇಸಾಯಕ್ಕೆ ಮಿತಿಯನ್ನು ಹಾಕುವುದು ಕಷ್ಟವಾಗುತ್ತಿದೆ. ಏಕೆಂದರೆ ಇಲ್ಲಿಯ ವಾಯುಗುಣ ಮತ್ತು ಮಣ್ಣು ಅದಕ್ಕೆ ಅನುಕೂಲಕರವಾಗಿದೆ. ರೈತರು ಕಬ್ಬಿನ ಬೇಸಾಯವನ್ನು ಬಹಳ ಇಷ್ಟಪಡುತ್ತಾರೆ''.[7]

ಮಾರಿಷಸ್, ಚೀನಾ ಮತ್ತು ದಕ್ಷಿಣ ಸಮುದ್ರ ಪ್ರದೇಶಗಳಿಂದ ಹೊಸ ಮಾದರಿಯ ಕಬ್ಬು ತರಿಸಿ ಮೈಸೂರಿನಲ್ಲಿ ಯಶಸ್ವಿಯಾಗಿ ಬೆಳೆಸಲಾಯಿತು. ಕಬ್ಬನ್‌ನು

ಬೆಂಗಳೂರಿನಲ್ಲಿ ಮಲ್‌ಬರಿ ಬೆಳೆಯಲು ಒಂದು ತೋಟವನ್ನು ಸ್ಥಾಪಿಸಿದನು. ಫಿಲಿಪ್ಪೈನ್ಸ್‌ನಿಂದ ತರಿಸಿದ ಬಿತ್ತನೆಯ ತುಂಡುಗಳ ಜೊತೆಗೆ ಚೈನಾ ಮತ್ತು ಸೇಂಟ್ ಹೆಲೆನಾಗಳಿಂದ ತರಿಸಿದ ಬೀಜಗಳನ್ನುಬಿತ್ತಲಾಯಿತು.

ಈ ಮೇಲ್ಕಂಡ ಬೆಳೆಗಳೆಲ್ಲವೂ ಬ್ರಿಟಿಷರ ಸಕ್ಕರೆ ಉತ್ಪನ್ನದ ಅಗತ್ಯಕ್ಕೆ ಪ್ರಧಾನವಾಗಿ ಉದ್ದೇಶಿಸಿದ್ದುವಾಗಿದ್ದವು. ಆದ್ದರಿಂದ ಕಾಫಿ, ಕಬ್ಬು, ರೇಷ್ಮೆ, ನೀಲಿ, ತಂಬಾಕು ಹೀಗೆ ಅವರು ಯಾವುದೇ ವಾಣಿಜ್ಯ ಬೆಳೆಯನ್ನು ವಿಸ್ತರಿಸಲಿ ಅದು ಸಮಾಜದ ಇತರೆಲ್ಲ ವರ್ಗಗಳಿಗೆ ಅನುಕೂಲಕರವಾಗುವಂತೆ, ಉದ್ಯಮೀಕರಣ ಪ್ರಕ್ರಿಯೆಯನ್ನು, ಬಂಡವಾಳದ ಸಂಚಯವನ್ನು ಉಂಟುಮಾಡುತ್ತಿರಲಿಲ್ಲವಾದ್ದರಿಂದ, ಹಾಗೂ ದುಬಾರಿ ಕಂದಾಯಗಳು, ಸುಂಕಗಳು ಮುಂತಾದವುಗಳಿಂದ ರೈತರ ಕೈಯಲ್ಲೂ ಏನೂ ಉಳಿಯುತ್ತಿರಲಿಲ್ಲವಾದ್ದರಿಂದ ಚಟುವಟಿಕೆಗಳ ಭರಾಟೆಯೇನೋ ಬೆಳೆಯಿತು. ಆದರೆ ಸಮಾಜದ ಬಹುಪಾಲು ಜನವರ್ಗಗಳು ಬರಿಗೈಯಾಗಿ ಉಳಿದಿದ್ದಂತಹ ವಿಷಾದಕರ ಸನ್ನಿವೇಶ ನೆಲೆಗೊಂಡಿತ್ತು.

ಮೇಲ್ಕಂಡ ಅಂಶಗಳ ಜೊತೆಗೆ ನಾವು ಕಮಿಷನರ್‌ರ ಆಡಳಿತದ ಕಾಲಾವಧಿಯಲ್ಲಿ ಸೂಚಿಸಬಹುದಾದುದು ಏನೆಂದರೆ, ಮೈಸೂರಿನ ಯುದ್ಧಕಾಲೀನ ಆರ್ಥಿಕತೆಯ ಸ್ಥಾನದಲ್ಲಿ ಕ್ರಮೇಣ ೧೯ನೇ ಶತಮಾನದ ಸುಧಾರಿತ ಆರ್ಥಿಕತೆ ಕಾಣಿಸಿಕೊಂಡಿತು ಎನ್ನುವುದು ವ್ಯಕ್ತವಾಗುತ್ತದೆ. ಈ ಬಗ್ಗೆ ನಿಖಿಲೇಶ ಗುಹಾ ಹೀಗೆ ಹೇಳುತ್ತಾರೆ :

''ಕಮಿಷನರ್‌ರ ಆಡಳಿತವೇನೋ (೧೮೩೧-೮೧) ಮೈಸೂರಿನ ಮಾರುಕಟ್ಟೆಯನ್ನು ಒಟ್ಟುಗೂಡಿಸುವ ಸಂಪರ್ಕಜಾಲದ ನಿರ್ಮಾಣವನ್ನು ಕಂಡಿತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಆಗಲೂ ನಾವು ಒಂದು ವಿಷಯವನ್ನು ನೆನಪಿನಲ್ಲಿಡಬೇಕು. ರೈಲುಹಾದಿಗಳ ನಿರ್ಮಾಣಕ್ಕೆ ತಗಲುವ ಬಂಡವಾಳವನ್ನು ಬ್ರಿಟಿಷ್ ಕಂಪೆನಿಗಳಿಂದ ಸಾಲವಾಗಿ ಪಡೆಯಲಾಯಿತು. ಈ ಕಂಪನಿಗಳಿಗೆ ಸರಕಾರದ ಭರವಸೆಯಿದ್ದಿತು. ಅಪಾರವಾದ ಲಾಭವನ್ನು ಅವು ಬಾಚಿಕೊಂಡವು. ಯೂರೋಪಿಯನ್ ನೆಲಸಿಗನು ಮೈಸೂರಿಗೆ ಬರುವಂತೆ ಆಕರ್ಷಿಸಿದ ವಾಣಿಜ್ಯ ಅನುಕೂಲತೆಯನ್ನು, ಮತ್ತೆ ಮಹಾರಾಜರಿಗೆ ರಾಜ್ಯವನ್ನು ವಹಿಸದಿರಲು ಒಂದು ವಾದವಾಗಿ ಮಂಡಿಸಲಾಯಿತು. ಮರಳಿ ವಹಿಸುವುದರಿಂದ ಮತ್ತೆ ದುರಾಡಳಿತಕ್ಕೆ ಎಡೆಯಾಗಬಹುದು ಎಂಬ ಹೆದರಿಕೆಯನ್ನು ವ್ಯಕ್ತಪಡಿಸಲಾಯಿತು. ವಾಣಿಜ್ಯ ವ್ಯಾಪಾರಗಳಿಗೆ ಕಿರುಕುಳ ಕೊಡುತ್ತಿದ್ದ ತೆರಿಗೆಗಳನ್ನು ರದ್ದುಪಡಿಸಿದುದೇನೋ ಪ್ರಗತಿಯುತ ಕ್ರಮವಾಗಿತ್ತು. ಆದರೆ ಇಲ್ಲೂ ಅದರ ಅನುಕೂಲವನ್ನು ರಾಜ್ಯದ ವಾಯುವ್ಯ ಭಾಗದ ಅಡಿಕೆ ಬೆಳೆಗಾರರು ಅನುಭವಿಸಲಿಲ್ಲ ಎನ್ನುವುದನ್ನು ನೆನಪಿನಲ್ಲಿಡಬೇಕು. ಬ್ರಿಟಿಷ್ ಆಡಳಿತದಲ್ಲಿ ಮೈಸೂರಿನ ಆರ್ಥಿಕ ಪ್ರಗತಿಯು ಸಮಗ್ರವಾಗಿರಲಿಲ್ಲ, ಸರ್ವತೋಮುಖವಾಗಿರಲಿಲ್ಲ. ಬದಲು ಭಾಗಶಃ ಆಗಿತ್ತು. ಏಕಮುಖವಾಗಿತ್ತು.

ಹಿಂದೆ ಸ್ಥಳೀಯ ಅಗತ್ಯಗಳನ್ನು ಪೂರೈಸುತ್ತಿದ್ದ ನೇಯ್ಗೆಯಂತಹ ದೇಸೀಯ ವೃತ್ತಿಗಳು ಕುಂಠಿತವಾದುದನ್ನೂ ಗಮನಿಸದೇ ಹೋಗುವುದು ಸಾಧ್ಯವಿಲ್ಲ''.[8]

ಇದರೊಂದಿಗೆ ಈ ಯಾವ ಬೆಳವಣಿಗೆಗಳೂ ಕೂಡ ಈ ಹಿಂದಿನಂತೆ ಒಂದು ಏಕೀಕೃತ ಬಲಿಷ್ಠ ರಾಜ್ಯವಾಗಿ, ಒಂದು ರಾಷ್ಟ್ರೀಯತಾ ಸಮುದಾಯವಾಗಿ ಕರ್ನಾಟಕವನ್ನು ಚೈತನ್ಯಯುಕ್ತಗೊಳಿಸುವ ಹಾದಿಯಲ್ಲಿರಲಿಲ್ಲ ಎಂಬುದನ್ನು ಆಗ ಸುಮಾರು ಐವತ್ತು ಭಾಗಗಳಾಗಿ ಹರಿದು ಹಂಚಿಹೋಗಿದ್ದ ಕರ್ನಾಟಕ ರಾಜ್ಯವು ನೆನಪಿಸುತ್ತದೆ.

ಈ ಅವಧಿಯಲ್ಲಿಯೇ ಕರ್ನಾಟಕದಲ್ಲಿ ಹಲವಾರು ಕೈಗಾರಿಕೋದ್ಯಮಗಳು ಹುಟ್ಟಿಕೊಂಡವು. ಅವು ಮುಖ್ಯವಾಗಿ ಇಲ್ಲಿನ ಸಂಪನ್ಮೂಲವನ್ನು ಕೃಷಿಕ್ಷೇತ್ರದಂತೆಯೇ ದೋಚುವ ಉದ್ದೇಶವನ್ನು ಒಳಗೊಂಡಿದ್ದವು ಎಂಬುದನ್ನು ನಾವು ಮರೆಯುವಂತಿಲ್ಲ. ಆಗ ಆರಂಭವಾದ ಆಧುನಿಕ ಕೈಗಾರಿಕೆಗಳ ಪಟ್ಟಿ ಈ ರೀತಿ ಇದೆ -

ಜಾನ್‌ಟೇಲರ್ ಮತ್ತು ಪುತ್ರರ ಕೋಲಾರ ಚಿನ್ನದ ಗಣಿ ಕಂಪೆನಿ, ರಾಯಚೂರು - ದೋಆಬ್ ಪ್ರದೇಶದ ಚಿನ್ನದ ಗಣಿ (೧೮೮೨), ಮೈಸೂರು ಸ್ಪಿನ್ನಿಂಗ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಕಂಪನಿ (೧೮೮೩), ಬೆಂಗಳೂರು ಕಾಟನ್ ಮತ್ತು ಸಿಲ್ಕ್ ಮಿಲ್ಲು ಮತ್ತು ದಾವಣಗೆರೆ ಕಾಟನ್ ಜಿನ್ನಿಂಗ್ ಫ್ಯಾಕ್ಟರಿ, ಗುಲ್ಬರ್ಗಾದ ಎಂ.ಎಸ್.ಕೆ. ಮಿಲ್ಲುಗಳು, ಬೆಂಗಳೂರಿನ ಕಾಫಿ ಕ್ಯೂರಿಂಗ್ ವರ್ಕ್ಸ್ (೧೮೮೪), ಕಾವೇರಿ ಜಲವಿದ್ಯುತ್ ಯೋಜನೆ ಮತ್ತು ಶಿವಮೊಗ್ಗದ ಮ್ಯಾಂಗನೀಸ್ ಕಂಪೆನಿ (೧೮೯೦) ಇವು ೧೯ನೇ ಶತಮಾನದ ಕೊನೆಯ ಎರಡು ದಶಕಗಳ ಪ್ರಮುಖ ಕೈಗಾರಿಕೆಯ ಬೆಳವಣಿಗೆಗಳಾಗಿದ್ದವು. ಕರ್ನಾಟಕವು ಆಧುನಿಕ ಕೈಗಾರಿಕಾ ಕ್ಷೇತ್ರವೊಂದನ್ನು ಈ ದಶಕಗಳಲ್ಲಿ ಸ್ಥಾಪಿಸಿತು ಎಂಬುದು ಈ ಬೆಳವಣಿಗೆಯಿಂದ ವ್ಯಕ್ತವಾಗುವುದು. ಈ ಕೈಗಾರಿಕೆಯ ಬೆಳವಣಿಗೆಯಲ್ಲಿ ಖಾಸಗಿ ಉದ್ಯಮಶೀಲರ ಪಾತ್ರ ಮುಖ್ಯವಾಗಿದ್ದಿತು. ಮೈಸೂರು ಸರ್ಕಾರವು ಕಂಪೆನಿಗಳ ಷೇರು ಕೊಳ್ಳುವುದು, ಸುಲಭ ಷರತ್ತುಗಳ ಪ್ರಕಾರ ಸಾಲ ನೀಡುವುದು ಮತ್ತು ಇತರ ಅನೇಕ ರೂಪಗಳಲ್ಲಿ ವಿಶೇಷ ಆಸಕ್ತಿಯಿಂದ ಕೈಗಾರಿಕೆಯ ಬೆಳವಣಿಗೆಗೆ ಉತ್ತೇಜನ ಕೊಟ್ಟಿತು.

೧೯೧೪ರ ವೇಳೆಗೆ ಮೇಲೆ ಹೇಳಿರುವ ಉದ್ಯಮಗಳ ಜೊತೆಗೆ ಅನೇಕ ಗಿರಣಿಗಳು, ಅಕ್ಕಿಯ ಗಿರಣಿಗಳು, ಹೆಂಚಿನ ಕಾರ್ಖಾನೆಗಳು, ಮರಗೆಲಸದ ಕಾರ್ಖಾನೆಗಳು, ಪ್ರಿಂಟಿಂಗ್ ಪ್ರೆಸ್ಸುಗಳು, ಸಿಗರೇಟಿನ ಕಾರ್ಖಾನೆಗಳು, ಕಬ್ಬಿಣ ಮತ್ತು ಹಿತ್ತಾಳೆ ಫೌಂಡ್ರಿಗಳು ಸ್ಥಾಪಿಸಲ್ಪಟ್ಟವು.

ಗಣಿಗಳನ್ನು ಬಿಟ್ಟರೆ ೧೯೧೩-೧೪ರಲ್ಲಿ ಮೈಸೂರು ಸಂಸ್ಥಾನದಲ್ಲಿ ೪,೪೫೧ ಜನರಿಗೆ ಉದ್ಯೋಗ ನೀಡಿದ್ದ ಮತ್ತು ವರ್ಷಕ್ಕೆ ಸುಮಾರು ೧.೬ ಕೋಟಿ ರೂಪಾಯಿಗಳ ಬೆಲೆಯ ಸರಕುಗಳನ್ನು ಉತ್ಪಾದಿಸುತ್ತಿದ್ದ ೭೫ ಕಾರ್ಖಾನೆಗಳಿದ್ದವು.

೧೫ ಚಿನ್ನದ ಗಣಿ ಕಂಪನಿಗಳು ೨೪,೩೦೦ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿದ್ದುದೇ ಅಲ್ಲದೆ ವರ್ಷಕ್ಕೆ ಸುಮಾರು ೧೯ ಲಕ್ಷ ರೂಪಾಯಿ ಬೆಲೆ ಬಾಳುವ ೫ ಲಕ್ಷ ಔನ್ಸ್‌ಗಳಷ್ಟು ಚಿನ್ನವನ್ನು ಉತ್ಪಾದಿಸುತ್ತಿದ್ದವು.

ಹೀಗಿದ್ದರೂ ಈ ಆಧುನಿಕ ಕೈಗಾರಿಕೆಗಳಲ್ಲಿ ನಿರತರಾಗಿದ್ದವರು ಒಟ್ಟು ಕೈಗಾರಿಕಾ ಜನಸಂಖ್ಯೆಯ ಸುಮಾರು ನಾಲ್ಕುವರೆ ಲಕ್ಷ ಜನ, ಅಂದರೆ ಜನಸಂಖ್ಯೆಯ ಸುಮಾರು ಶೇಕಡಾ ೮ರಷ್ಟು ಅಲ್ಪಭಾಗ ಮಾತ್ರವೇ ಆಗಿದ್ದಿತು.

ಈ ಅವಧಿಯಲ್ಲೇ ಬ್ಯಾಂಕು ಮತ್ತು ವ್ಯಾಪಾರೀ ಕಂಪೆನಿಗಳು ಹೆಚ್ಚು ಹೆಚ್ಚಾಗಿ ಸ್ಥಾಪನೆಯಾದುದು ವ್ಯಾಪಾರದ ಬೆಳವಣಿಗೆಯನ್ನು ಸೂಚಿಸುತ್ತದೆ. ೧೮೯೪-೯೫ರಲ್ಲಿ ೯೨ ಬ್ಯಾಂಕ್ ಮತ್ತು ವಾಣಿಜ್ಯ ಕಂಪನಿಗಳಿದ್ದವು.

೧೯೧೧ರ ವೇಳೆಗೆ ಪಟ್ಟಣಗಳ ಸಂಖ್ಯೆ ಹಿಂದಿಗಿಂತಲೂ ಹೆಚ್ಚಾಗಿದ್ದವಾದರೂ ಇವುಗಳು ಅಷ್ಟೇನೂ ಮಿತಿಮೀರಿದ ಜನಸಾಂದ್ರತೆ ಹೊಂದಿರಲಿಲ್ಲ. ೫೦೦೦ಕ್ಕೆ ಮೀರಿದ ಜನಸಂಖ್ಯೆಯಿದ್ದ ಪಟ್ಟಣಗಳು ಕೇವಲ ೨೭ ಮಾತ್ರವಾಗಿದ್ದವು. ೮೬,೬೫೧ ಜನರಿದ್ದ ಬೆಂಗಳೂರು ಮತ್ತು ೭೧,೩೦೬ ಜನರಿದ್ದ ಮೈಸೂರು ಇವೆರಡೇ ಮೈಸೂರು ರಾಜ್ಯದಲ್ಲಿ ಹೆಚ್ಚಾಗಿ ಬೆಳೆದ ಪಟ್ಟಣಗಳಾಗಿದ್ದವು.

ರಾಜ್ಯದ ಕಾಫಿ ಮತ್ತು ಅಡಿಕೆ ತೋಟಗಳು, ಮಲ್ನಾಡಿನ ಭತ್ತದ ಸಾಗುವಳಿಯೂ, ಉತ್ತರ ಹಾಗೂ ದಕ್ಷಿಣ ಕನ್ನಡ ಮತ್ತು ಮಲಬಾರು ಪ್ರಾಂತ್ಯಗಳ ಶ್ರಮಜೀವಿಗಳನ್ನು ಹೆಚ್ಚಾಗಿ ಅವಲಂಬಿಸಿದ್ದವು. ಕೋಲಾರದ ಚಿನ್ನದ ಗಣಿಗಳಿಗೂ, ಬೆಂಗಳೂರಿನಲ್ಲಿ ಸ್ಥಾಪನೆಯಾದ ಕೆಲವು ಗಿರಣಿಗಳು ಮತ್ತು ನಿರ್ಮಾಣ ಕೈಗಾರಿಕೆಗಳೂ ಉತ್ತರ ಅರ್ಕಾಟು, ಬಳ್ಳಾರಿ, ಅನಂತಪುರ, ಕಡಪಾ ಜಿಲ್ಲೆಗಳಿಂದ ಕಾರ್ಮಿಕರನ್ನು ತೆಗೆದುಕೊಳ್ಳಲಾಯಿತು. ಹಾಗೆಯೇ ನಮ್ಮ ರಾಜ್ಯದ ಕಾರ್ಮಿಕರು ಮುಖ್ಯವಾಗಿ ಕೊಡಗು ಮತ್ತು ಸಿಲೋನ್‌ಗಳಿಗೆ ಸ್ಥಳಾಂತರವಾದರು.

೧೯೧೪-೧೯೨೪ರ ದಶಕದಲ್ಲಿ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್, ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ ಮತ್ತು ಗೌರ್ನಮೆಂಟ್ ಇಂಡಸ್ಟ್ರಿಯಲ್ ವರ್ಕ್‌ಷಾಪ್ ಇವುಗಳು ಸರ್ಕಾರಿ ವಲಯದಲ್ಲಿಯೂ, ಮಿನರ್ವ ಮತ್ತು ಕೃಷ್ಣರಾಜೇಂದ್ರ ಮಿಲ್ಲುಗಳು, ಮಹಾಲಕ್ಷ್ಮಿ ವುಲನ್ ಮತ್ತು ಸಿಲ್ಕ್ ಟೆಕ್ಸ್‌ಟೈಲ್‌ಮಿಲ್ಲು, ಮೈಸೂರು ಪ್ರೀಮಿಯರ್ ಮೆಟಲ್ ಫ್ಯಾಕ್ಟರಿ, ಸ್ಟ್ಯಾಂಡರ್ಡ್ ಟೈಲ್ ಅಂಡ್ ಕ್ಲೇವರ್ಕ್ಸ್, ಬೆಂಗಳೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪೆನಿ, ಕೆಯೊಲಿನ್ ಸಿಂಡಿಕೇಟ್, ಮೈಸೂರು ಅಸ್ಬೆಸ್ಟಾಸ್, ಸಿಂಧುವಳ್ಳಿ ಕ್ರೋಮೈಟ್ ಮತ್ತು ಅನೇಕ ಇತರ ಉದ್ಯಮಗಳು ಖಾಸಗಿ ವಲಯದಲ್ಲಿಯೂ ಸ್ಥಾಪಿಸಲ್ಪಟ್ಟವು. ಇಂಜಿನಿಯರಿಂಗ್ ಕಾಲೇಜು, ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್ ಮತ್ತು ಮೈಸೂರು ಬ್ಯಾಂಕು ಇವುಗಳ ಸ್ಥಾಪನೆಯೂ ಗಮನಾರ್ಹ ಬೆಳವಣಿಗೆಗಳಾಗಿದ್ದವು. ಇವೆಲ್ಲವುಗಳ ಜೊತೆಗೆ ವೈಜ್ಞಾನಿಕ, ವ್ಯವಸಾಯಿಕ, ಕೈಗಾರಿಕಾ ಹಾಗೂ ವಾಣಿಜ್ಯ ಅಭಿವೃದ್ಧಿಗಳಿಗೆ

ಸಂಬಂಧಪಟ್ಟಂತೆ ಸೌತ್ ಇಂಡಿಯನ್ ಸೈನ್ಸ್ ಅಸೋಸಿಯೇಷನ್, ಅಗ್ರಿಕಲ್ಚರ್ ಅಂಡ್ ಎಕ್ಸ್‌ಪೆರಿಮೆಂಟಲ್ ಯೂನಿಯನ್ ಮತ್ತು ಛೇಂಬರ್ ಆಫ್ ಕಾಮರ್ಸ್ ಇತ್ಯಾದಿ ಸಂಸ್ಥೆಗಳ ಸ್ಥಾಪನೆ ಆದುದು ರಾಜ್ಯದ ಪ್ರಗತಿಶೀಲ ದೃಷ್ಟಿಯನ್ನು ಸೂಚಿಸುವುದು.

ಕಾಗದ, ಸಿಮೆಂಟು, ವ್ಯವಸಾಯೋಪಯೋಗಿ ಉಪಕರಣಗಳು, ಪೋರ್ಸಿಲಿನ್ ಸರಕುಗಳು, ಲ್ಯಾಂಪು, ಟ್ರಾನ್ಸ್‌ಫಾರ್ಮರು, ಬ್ಯಾಟರಿ ಮತ್ತು ಇನ್‌ಸುಲೇಟರ್ ಇತ್ಯಾದಿ ವಿದ್ಯುಚ್ಛಕ್ತಿ ಸರಕುಗಳು, ಗಾಜು ಮತ್ತು ಎನಾಮಲ್ ವಸ್ತುಗಳು, ಬೇಕಲೈಟ್ ಉತ್ಪನ್ನಗಳು, ಬೆಂಕಿಕಡ್ಡಿ, ಯಂತ್ರೋಪಕರಣಗಳು, ಅರಗು ಮತ್ತು ಬಣ್ಣಗಳು, ಸ್ಟೋನ್‌ವೇರ್ ಕೊಳವೆಗಳು, ಸಕ್ಕರೆ, ಆಲ್ಕೋಹಾಲ್, ರಾಸಾಯನಿಕ ವಸ್ತುಗಳು ಮತ್ತು ಗೊಬ್ಬರ, ಕ್ರೋಮ್ ಮತ್ತು ಚರ್ಮದ ಸಾಮಾನುಗಳು, ಶುದ್ಧಗೊಳಿಸಿದ ಹೊಗೆಸೊಪ್ಪು ಮತ್ತು ಕಾಫಿ, ವನಸ್ಪತಿ ತೈಲ ಮತ್ತು ತುಪ್ಪ, ಫಿಲೇಚರ್ ರೇಷ್ಮೆ, ರಸ್ತೆನಿರ್ಮಾಣದ ವಸ್ತುಗಳು - ಈ ಅನೇಕ ವಿಧದ ಸರಕುಗಳ ಉತ್ಪಾದನೆಗಾಗಿ ಫ್ಯಾಕ್ಟರಿಗಳು ಸ್ಥಾಪಿಸಲ್ಪಟ್ಟವು. ಈ ಉದ್ಯಮಗಳೆಲ್ಲವೂ ಸರ್ಕಾರಿ ಒಡೆತನದಲ್ಲಿದ್ದ ಅಥವಾ ಸರ್ಕಾರಿ ಸಹಾಯಪಡೆದ ಉದ್ಯಮಗಳಾಗಿದ್ದವು. ಇವುಗಳ ಜೊತೆಗೆ ಅನೇಕ ಖಾಸಗಿ ಉದ್ಯಮಗಳೂ ಆರಂಭಿಸಲ್ಪಟ್ಟವು. ಈ ಉದ್ಯಮಗಳು ಮುಖ್ಯವಾಗಿ ವ್ಯವಸಾಯ ಹಾಗೂ ಭಾರಿ ತೋಟಗಾರಿಕೆ, ಬಸ್ಸು, ಸಾರಿಗೆ, ಇಂಜಿನಿಯರಿಂಗ್ ಕೆಲಸಗಳು, ನಿಯಾನ್ ಚಿಹ್ನೆಗಳು, ಸಿನೆಮಾ ತಯಾರಿಕೆ, ವೃತ್ತಪತ್ರಿಕೆಗಳು ಮತ್ತು ವ್ಯಾಪಾರ ಈ ವಿಧದ ಕ್ಷೇತ್ರಗಳಿಗೆ ಸಂಬಂಧಪಟ್ಟ ಉದ್ಯಮಗಳಾಗಿದ್ದವು.

ಎರಡನೆಯ ಪ್ರಪಂಚಯುದ್ಧ ಕಾಲದಲ್ಲಿ ಹಿಂದೂಸ್ಥಾನ್ ಏರ್‌ಕ್ರಾಫ್ಟ್, ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಇತ್ಯಾದಿ ಕೆಲವು ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟವು. ಅಲ್ಲದೆ ರೇಡಿಯೋ ಅಂಡ್ ಇಲೆಕ್ಟ್ರಿಕಲ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ, ಕಿರ್ಲೋಸ್ಕರ್ ಲಿ. ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಇಂತಹ ಹಿರಿಯ ಕೈಗಾರಿಕೋದ್ಯಮಗಳು ಆರಂಭಿಸಲ್ಪಟ್ಟವು. ಮೈಸೂರು ರಾಜ್ಯದಲ್ಲಿಯೇ ದಾಖಲಾದ ಕೂಡುಬಂಡವಾಳ ಸಂಸ್ಥೆಗಳ ಸಂಖ್ಯೆಯೂ ಇವುಗಳ ಬಂಡವಾಳವೂ ೧೯೨೧ರಲ್ಲಿ ಕ್ರಮವಾಗಿ ೧೧೭ ಮತ್ತು ೪ ಕೋಟಿ ರೂ. ಗಳಿದ್ದುದು ೧೯೪೭ರ ವೇಳೆಗೆ ಕ್ರಮವಾಗಿ ೩೧೫ ಮತ್ತು ೨೦ ಕೋಟಿ ರೂಪಾಯಿಗಳಿಗೆ ಹೆಚ್ಚಿದವು. ಇವೇ ಅಲ್ಲದೆ ರಾಜ್ಯದ ಹೊರಗಡೆ ದಾಖಲಾಗಿದ್ದ ಆದರೆ ರಾಜ್ಯದ ಒಳಗಡೆ ಕಾರ್ಯಾಚರಣೆ ನಡೆಸುತ್ತಿದ್ದ ಕಂಪನಿಗಳ ಸಂಖ್ಯೆಯೂ ೧೯೨೧ರಲ್ಲಿ ೨೧ ಮಾತ್ರ ಇದ್ದುದು ೧೯೪೭ರ ಹೊತ್ತಿಗೆ ೧೬೭ಕ್ಕೆ ಏರಿತ್ತು. ಹೀಗೆ ಕರ್ನಾಟಕದ ಹೆಚ್ಚು ಭಾಗವಾಗಿದ್ದ ಅಂದಿನ ಮೈಸೂರು ಸಂಸ್ಥಾನದ ಕೈಗಾರಿಕಾ ಪ್ರಗತಿಯು ಗಣನೀಯವಾಗಿದ್ದಿತೆಂದು ಹೇಳಬಹುದು.

ಮೈಸೂರು ಸಂಸ್ಥಾನ ಬಿಟ್ಟು ಕರ್ನಾಟಕದ ಉಳಿದ ಭಾಗಗಳಲ್ಲಿ ಕೈಗಾರಿಕಾ ಅಭಿವೃದ್ಧಿಯು ಅಷ್ಟು ಗಣನೀಯವಾಗಿರಲಿಲ್ಲವಾದರೂ ಕೆಲವು ಗಮನಾರ್ಹ ವಾದ ಬೆಳವಣಿಗೆಗಳಾಗಿದ್ದವು. ಮಂಗಳೂರಿನಲ್ಲಿ ಹೆಂಚಿನ ಕಾರ್ಖಾನೆಗಳೂ, ಪ್ರಿಂಟಿಂಗ್ ಪ್ರೆಸ್ಸುಗಳೂ, ಮೀನುಗಾರಿಕೆಯೂ, ಗೋಡಂಬಿ ಕಾರ್ಖಾನೆಗಳೂ, ಷಹಾಬಾದಿನ ಸಿಮೆಂಟ್ ಫ್ಯಾಕ್ಟರಿಯೂ, ಹುಬ್ಬಳ್ಳಿಯ ಲೋಹ ಕೈಗಾರಿಕೆಗಳೂ, ರೈಲ್ವೆ ಕಾರ್ಖಾನೆಯೂ, ಗುಲ್ಬರ್ಗಾ ಧಾರವಾಡ ಮತ್ತು ಬೆಳಗಾವಿಯ ಬಟ್ಟೆಗಿರಣಿಗಳೂ, ಕೊಡಗಿನ ಕಾಫಿ ಶೋಧನ ಕೇಂದ್ರ, ಅಕ್ಕಿ ಮಿಶನ್ನುಗಳು, ಮರಗೆಲಸ ಕಾರ್ಖಾನೆಗಳು ಮತ್ತು ಜೇನು ಸಾಕಣೆ ಕೇಂದ್ರಗಳು ಇವೆಲ್ಲವೂ ಗಮನಾರ್ಹವಾದ ಬೆಳವಣಿಗೆಗಳಾಗಿದ್ದವು .

ಭಾರತದಲ್ಲಿ ಜಲವಿದ್ಯುಚ್ಛಕ್ತಿ ಕೇಂದ್ರ ಸ್ಥಾಪಿಸಿದ ಮೊದಲ ಸಂಸ್ಥಾನಗಳಲ್ಲಿ ಮೈಸೂರು ಒಂದಾಗಿದ್ದಿತು. ಪ್ರಥಮತಃ ೧೯೦೨ರಲ್ಲಿ ಸ್ಥಾಪಿಸಲಾದ ಶಿವನಸಮುದ್ರದ ವಿದ್ಯುಚ್ಛಕ್ತಿ ಕೇಂದ್ರವೂ, ತರುವಾಯ ಸ್ಥಾಪಿಸಲಾದ ಶಿಂಷಾ ಮತ್ತು ಜೋಗ ಕೇಂದ್ರಗಳೂ ಸೇರಿ ರಾಜ್ಯದಲ್ಲಿ ಕೈಗಾರಿಕೆ ಮತ್ತು ನೀರಾವರಿಗೂ, ರಸ್ತೆ ಮತ್ತು ಮನೆದೀಪಗಳಿಗೂ ಅವಶ್ಯಕವಾದ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದವು. ಮೈಸೂರು ಸಂಸ್ಥಾನ ಬಿಟ್ಟರೆ ಮಿಕ್ಕ ಕರ್ನಾಟಕದ ಅನೇಕ ಕಡೆಗಳಲ್ಲಿ 'ಥರ್ಮಲ್' ವಿದ್ಯುತ್ ಕೇಂದ್ರಗಳು ಸ್ಥಾಪನೆಯಾದವು.

ಈ ಬಗೆಯಲ್ಲಿ ಕೈಗಾರಿಕಾ ಪ್ರಗತಿ ಉಂಟಾಗುತ್ತಿದ್ದರೂ ಅವೆಲ್ಲವೂ ಬಹುಪಾಲು ಇಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಒಂದು ಹಂತದವರೆಗೆ ಸಂಸ್ಕರಿಸಿ, ಇಂಗ್ಲೆಂಡಿನಲ್ಲಿದ್ದ ಸಿದ್ಧವಸ್ತುಗಳ ಹಾಗೂ ಅನುಭೋಗಿ ವಸ್ತುಗಳ ತಯಾರಿಕಾ ಕೈಗಾರಿಕೆಗಳಿಗೆ ಕಚ್ಚಾವಸ್ತು ಒದಗಿಸುವ ಎರಡನೇ ಸಾಲಿನ ಕೈಗಾರಿಕಾ ಮಾದರಿಗಳಾಗಿಯೇ ಬೆಳೆದವು. ವಸಾಹತುಶಾಹಿ ಆರ್ಥಿಕ ನೀತಿಯು ಮೊದಲು ಇಲ್ಲಿನ ಸಂಪನ್ಮೂಲಗಳನ್ನು ತನ್ನ ದೇಶಕ್ಕೆ ಸಾಗಿಸಿ, ಅಲ್ಲಿಯೇ ಸಂಸ್ಕರಿಸಿ, ಸಿದ್ಧ ವಸ್ತುಗಳಾಗಿ ಮಾರ್ಪಡಿಸಿ, ಅವುಗಳನ್ನು ತಂದು ಇಲ್ಲಿನ ಮಾರುಕಟ್ಟೆಗೆ ಸುರಿಯುವ ಪದ್ಧತಿಯನ್ನು ಅನುಸರಿಸುತ್ತಿತ್ತು.

ನಂತರದ ಹಂತಗಳಲ್ಲಿ ಇಲ್ಲಿನ ಕಚ್ಚಾವಸ್ತುಗಳನ್ನು ಇಲ್ಲಿಯೇ ಸಂಸ್ಕರಿಸಿ, ಕೈಗಾರಿಕಾ ಸರಕಿಗೆ ಮೂಲವಸ್ತುವಾಗಿ ಮಾರ್ಪಡಿಸಿ ನಂತರ ತಮ್ಮ ದೇಶಕ್ಕೆ ಕೊಂಡೊಯ್ಯುವ ಹೊಸ ಹಂತವನ್ನು ಆರಂಭಿಸಿದವು. ಮೊದಲು ಕಚ್ಚಾವಸ್ತುಗಳನ್ನು ಕೃಷಿ , ಕಾಡು ಹಾಗೂ ಗಣಿಗಳಿಂದ ಅಕುಶಲೀ ಶ್ರಮಿಕರ ದುಡಿಮೆಯ ಮೂಲಕ ಪಡೆದುಕೊಳ್ಳುತ್ತಿದ್ದ ವಸಾಹತುಶಾಹಿಯು, ಕ್ರಮೇಣ ಇಲ್ಲಿನ ಕೆಲವು ದಲ್ಲಾಳೀ ಶ್ರೀಮಂತ ವರ್ಗಗಳಾದ ರಾಜರು, ಭೂಮಾಲೀಕರು, ಬ್ರಿಟಿಷ್ ಸರಕುಗಳ ಏಜೆಂಟರಾಗಿದ್ದ ದಲ್ಲಾಳಿ ವರ್ತಕರು ಮುಂತಾದವರ ಸಹಯೋಗದೊಡನೆ, ತಮ್ಮ

ದೇಶದ ಬಂಡವಾಳದೊಂದಿಗೆ ಇಲ್ಲಿ ಎರಡನೇ ಸಾಲಿನ ಉತ್ಪಾದನಾ ಪ್ರಕ್ರಿಯೆಯ ಕಾರ್ಖಾನೆಗಳನ್ನು ಸ್ಥಾಪಿಸಿ, ಇಲ್ಲಿನ ಕಾರ್ಮಿಕರಿಂದ ಅತ್ಯಂತ ಹೀನಾಯ ಪರಿಸ್ಥಿತಿಯಲ್ಲಿ ಕಡಿಮೆ ಕೂಲಿ ದರಗಳನ್ನು ಕೊಟ್ಟು ದುಡಿಸಿ, ಅವುಗಳನ್ನು ತಮ್ಮ ದೇಶಕ್ಕೆ ಒಯ್ಯುವ ವಿಧಾನವನ್ನು ಆರಂಭಿಸಿದರು. ಮೈಸೂರು ರಾಜ್ಯದಲ್ಲಿ ೧೯ನೇ ಶತಮಾನದ ಕೊನೆಯ ಭಾಗ ಹಾಗೂ ೨೦ನೇ ಶತಮಾನದ ಆರಂಭ ಭಾಗದಲ್ಲಿ ಉಂಟಾದ ಕೈಗಾರಿಕೆಗಳ ಹೆಚ್ಚಳವೆನ್ನುವುದು ಕರ್ನಾಟಕದಲ್ಲಿ ವಸಾಹತುಶಾಹಿಯು ಈ ಪದ್ಧತಿ ಅನುಷ್ಠಾನಗೊಳಿಸಿದುದನ್ನು ನಾವು ಕಾಣುತ್ತೇವೆ. ಇದಕ್ಕೆ ಇದ್ದ ಪ್ರಬಲವಾದ ಕಾರಣವೇನೆಂದರೆ, ವಸಾಹತುಶಾಹಿ ದೇಶದಲ್ಲಿ ಅದು ಪ್ರಪಂಚದ ವಿವಿಧ ಕಡೆಗಳಿಂದ ಲೂಟಿ ಮಾಡಿ ತಂದ ಹಣದಿಂದ, ಅವರ ದೇಶದಲ್ಲಿನ ಜನರ ಜೀವನ ಮಟ್ಟವು ಆಧುನಿಕಗೊಳ್ಳುತ್ತಾ ಸುಧಾರಿಸುತ್ತಾ ಹೋದಂತೆ, ಅಲ್ಲಿ ಶ್ರಮಿಕರ ಕೂಲಿದರಗಳು ಹಾಗೂ ಇತರೆ ಸೌಕರ್ಯಗಳ ಬೇಡಿಕೆಗಳು ಏರುತ್ತಾ ಹೋದವು. ಇದರಿಂದ ಉತ್ಪಾದನಾ ವೆಚ್ಚ ಹೆಚ್ಚಿ ಇತರೆ ಕೈಗಾರಿಕಾ ಬಂಡವಾಳಶಾಹಿ ದೇಶಗಳ ಸರಕುಗಳೊಂದಿಗೆ ಸ್ಪರ್ಧಿಸುವಾಗ ತೊಂದರೆಯಾಗುತ್ತಿತ್ತು. ಅದಕ್ಕೆಂದು ಅದು ಸರಕಿನ ದರಗಳನ್ನು ಅಗ್ಗವಾಗಿ ಇರಿಸಿದರೆ ಲಾಭಾಂಶ ಕಡಿಮೆಯಾಗಿ ಅದರ ಮೂಲ ಉದ್ದೇಶವೇ ಪೆಟ್ಟು ತಿನ್ನುತ್ತಿತ್ತು. ಇದಕ್ಕೆಂದು ಅದು ಕಂಡುಕೊಂಡ ಸುಲಭವಾದ ಮಾರ್ಗವೆಂದರೆ, ಒಂದು ಹಂತದ ತಯಾರಿಕಾ ಪ್ರಕ್ರಿಯೆಯನ್ನು ಬಿಡಿಗಾಸಿನ ಬೆಲೆಗೆ ಕೊಂಡುಕೊಂಡ ಶ್ರಮದ ಮುಖಾಂತರ ವಸಾಹತುಶಾಹಿ ದೇಶದಲ್ಲೇ ಪೂರೈಸುವುದು.

ಎರಡನೆಯ ಕಾರಣವೆಂದರೆ, ಮೂಲಕಚ್ಚಾವಸ್ತುಗಳನ್ನು ತನ್ನ ದೇಶದ ವರೆಗೂ ಸಾಗಿಸುವುದಕ್ಕೆ, ಅದು ಅಸಂಸ್ಕರಿತವಾದುದಾದ್ದರಿಂದ ದುಬಾರಿ ಖರ್ಚು ಹಾಗೂ ಸಮಯ ತಗಲುತ್ತಿದ್ದಿತು. ಅದನ್ನು ಸಂಸ್ಕರಿಸಿ ಕಾರ್ಖಾನೆಗೆ ತಲುಪುವ ಮೂಲ ವಸ್ತುಗಳನ್ನಾಗಿ ಇಲ್ಲಿಯೇ ತಯಾರಿಸುವುದರಿಂದ, ಅದಕ್ಕೆ ಆ ಖರ್ಚು ಉಳಿತಾಯವಾಗಿ ಮತ್ತಷ್ಟು ಲಾಭ ದೊರೆಯುತ್ತಿತ್ತು.

ಮೂರನೆಯ ಕಾರಣವೆಂದರೆ, ಕಚ್ಚಾವಸ್ತುವನ್ನು ಸಂಸ್ಕರಿಸುವ ಹಂತದಿಂದ ಹಿಡಿದು ಸಿದ್ಧ ಸರಕುಗಳನ್ನು ತಯಾರಿಸುವವರೆಗೆ ಅದು ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದರೆ, ಅದು ಸಿದ್ಧವಸ್ತುವಿನ ತಯಾರಿಕೆಯಲ್ಲಿ ಕೊಡಬಹುದಾದ ಗಮನ ಕೇಂದ್ರೀಕರಣ ತಪ್ಪುತ್ತದೆ. ಅದರ ಬದಲು ಪ್ರಯಾಸಕರವಾದ ಕಚ್ಚಾವಸ್ತು ಸಂಸ್ಕರಣೆಯ ಪ್ರಕ್ರಿಯೆಯನ್ನು ವಸಾಹತು ದೇಶದಲ್ಲೇ ಪೂರೈಸಿಬಿಟ್ಟರೆ, ತನ್ನ ದೇಶದ ಕಾರ್ಖಾನೆಗಳಲ್ಲಿ ಸಿದ್ಧವಸ್ತುವನ್ನು ಹೆಚ್ಚಿನ ಪ್ರಮಾಣದಲ್ಲಿ, ಹೆಚ್ಚಿನ ಕೌಶಲ್ಯದೊಂದಿಗೆ ತಯಾರಿಸಬಹುದಾಗಿತ್ತು. ಆ ಮೂಲಕವೂ ಅದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇತರ ಕೈಗಾರಿಕಾ ಬಂಡವಾಳಿಗ ದೇಶಗಳೊಡನೆ ಸ್ಪರ್ಧೆಯಲ್ಲಿ ಅಗ್ರಗಣ್ಯವಾಗಿ ನಿಲ್ಲಬಹುದಾಗಿತ್ತು.

ಮೈಸೂರು ರಾಜ್ಯದಲ್ಲಿ ಸ್ಥಾಪನೆಯಾದ ಆಧುನಿಕ ಕೈಗಾರಿಕೆಗಳು, ಈ ಮೇಲ್ಕಂಡ ಅಂಶಗಳುಳ್ಳ, ಅಂತಾರಾಷ್ಟ್ರೀಯ ಶ್ರಮವಿಭಜನೆಯ ಮುಖಾಂತರ ಇಲ್ಲಿನ ಸಂಪನ್ಮೂಲಗಳನ್ನು ಮತ್ತಷ್ಟು ವಿಸ್ತೃತ ಪ್ರಮಾಣದಲ್ಲಿ, ಶೀಘ್ರವಾಗಿ ದೋಚುವ , ವಸಾಹತುಶಾಹಿಯ ಲೂಟಿಯನ್ನು ಬಲಪಡಿಸುವ ನೀತಿಯಾಗಿತ್ತೇ ಹೊರತು, ಯಾವ ಕಾರಣಕ್ಕೂ ಕೈಗಾರಿಕಾ ವಸ್ತುಗಳ ಉತ್ಪಾದನೆಯಲ್ಲಿ ಕರ್ನಾಟಕದ ಸಮಾಜವನ್ನು ಸ್ವಾವಲಂಬಿಗೊಳಿಸುವಂತಹದ್ದಾಗಿರಲಿಲ್ಲ.

ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳ ಸ್ಥಾಪನೆ ಹೆಚ್ಚುತ್ತಾ ಹೋದಂತೆ, ಇಲ್ಲಿನ ಜನಜೀವನದಲ್ಲಿ ಆಮದು ವಸ್ತುಗಳ ಪಟ್ಟಿ ಇಳಿಮುಖವಾಗಲಿಲ್ಲ ಎಂಬ ಅಂಶ ಕೈಗಾರಿಕಾ ಸ್ಥಾಪನೆಗಳ ಹಿಂದಿದ್ದ ವಸಾಹತುಶಾಹಿ ಲೂಟಿಯ ಉದ್ದೇಶವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ. ಎ.ಪಿ. ಶ್ರೀನಿವಾಸಮೂರ್ತಿ ಆ ಅವಧಿಯಲ್ಲಿ ಹೆಚ್ಚುತ್ತಲೇ ಹೋದ ಆಮದು ವಸ್ತುಗಳ ಪಟ್ಟಿಯನ್ನು ಕೊಡುತ್ತಾರೆ :

''ಕಲ್ಲಿದ್ದಲು, ಹಿತ್ತಾಳೆ, ತಾಮ್ರ, ತವರ, ಖನಿಜತೈಲಗಳು, ಪೆಟ್ರೋಲ್, ರಾಸಾಯನಿಕ ಗೊಬ್ಬರ, ಯಂತ್ರ ಹಾಗೂ ಬಿಡಿಭಾಗಗಳು, ಚರ್ಮದ ವಸ್ತುಗಳು, ಉಡುಪು ಹಾಗೂ ಉಡುಗೆ ತೊಡುಗೆಗಳು, ಸೈಕಲ್ಲು, ಮೋಟಾರುಕಾರು, ಔಷಧಿಗಳು, ಬೆಂಕಿಪೊಟ್ಟಣಗಳು, ಕಾಗದ, ವೈಜ್ಞಾನಿಕ ಉಪಕರಣಗಳು ಮತ್ತು ಅನೇಕ ಸಿದ್ಧಪಡಿಸಿದ ವಸ್ತುಗಳು, ಆಮದು ಸರಕುಗಳ ಪಟ್ಟಿಗೆ ಸೇರಿಕೊಂಡವು. ಜನರ ಹೊಸ ಜೀವನಮಟ್ಟಕ್ಕೆ ಸೇರಿದ ರೇಡಿಯೋ, ಗಡಿಯಾರ, ಫೌಂಟನ್ ಪೆನ್ನು, ಬೈಸಿಕಲ್ಲು, ಸಿನಿಮಾ ಇತ್ಯಾದಿಗಳೆಲ್ಲವೂ ಆಮದು ವ್ಯಾಪಾರವನ್ನು ಅವಲಂಬಿಸಿದ್ದವು''.[9]

ಈ ಕಾಲಘಟ್ಟದಲ್ಲಿ ಕನ್ನಡ ಭಾಷಿಕ ಸಮುದಾಯದೊಳಗೆ, ವಸಾಹತು ಶಾಹಿಯ ಬಂಡವಾಳಶಾಹಿ ಕಾರ್ಯಾಚರಣೆಯಿಂದ ಎರಡು ಹೊಸ ಸಾಮಾಜಿಕ ವರ್ಗಗಳು ಉಗಮವಾದುದನ್ನು ನಾವು ಕಾಣಬಹುದಾಗಿದೆ. ಅದು ಆಧುನಿಕ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ರೈಲ್ವೇ, ಸೇತುವೆ ನಿರ್ಮಾಣ ಮುಂತಾದವುಗಳಲ್ಲಿ ತೊಡಗಿದ್ದ, ಗಣಿಗಳಲ್ಲಿ ತೊಡಗಿಕೊಂಡಿದ್ದ ಕಾರ್ಮಿಕ ವರ್ಗ, ಮತ್ತೊಂದು ಕಾಫಿ ಇತ್ಯಾದಿ ತೋಟಗಳಲ್ಲಿ ಕೂಲಿ ಕೆಲಸಕ್ಕೆ ಸೇರಿಕೊಂಡ ಕೃಷಿ ಕಾರ್ಮಿಕ ವರ್ಗ. ಇದರ ಜೊತೆಗೆ ಹಳೆಯ ರೈತಾಪಿ ವರ್ಗವು ವಸಾಹತುಶಾಹಿ ಕೃಷಿ ವಾಣಿಜ್ಯೀಕರಣದೊಂದಿಗೆ, ಮಾರುಕಟ್ಟೆಯೊಂದಿಗೆ ಸಂಯೋಜಿತವಾದ ಹೊಸ ಬಗೆಯ ರೈತವರ್ಗವಾಗಿ ಸೃಷ್ಟಿಯಾಯಿತು.

ಈ ಕಾರ್ಮಿಕ ವರ್ಗ ಹಾಗೂ ರೈತಾಪಿ ವರ್ಗ ಹೊಸ ಸನ್ನಿವೇಶಗಳ ಆರ್ಥಿಕ ಸಂಬಂಧಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಾಗ ರಾಷ್ಟ್ರೀಯತಾ ಭಾವನೆಗಳಿಗೆ ತಕ್ಕುದಾದ ಪರಿಸ್ಥಿತಿಗಳಲ್ಲಿ ನಿಂತುಕೊಂಡವರಾಗಿದ್ದರು. ಅವರು ಅನುಭವಿಸುತ್ತಿದ್ದ ದುಸ್ಥಿತಿಗಳಿಗೂ, ಯಾತನೆಗಳಿಗೂ ವಸಾಹತುಶಾಹಿ ಆಳ್ವಿಕೆಯು ಪ್ರತ್ಯಕ್ಷವಾದ

ಕಾರಣವಾಗಿತ್ತು. ಇವರ ಸಾಮಾಜಿಕ ವಹಿವಾಟು ಹೊಸ ಸನ್ನಿವೇಶದಲ್ಲಿ ಮತ್ತೊಮ್ಮೆ ತಮ್ಮ ರಾಷ್ಟ್ರೀಯತಾ ಸಾಮುದಾಯಿಕ ಕಲ್ಪನೆಯನ್ನು ಬೆಳೆಸಿಕೊಳ್ಳಲು ಅಥವಾ ಪುನರುಜ್ಜೀವಿತಗೊಳಿಸಿಕೊಳ್ಳಲು ಭೌತಿಕ ಅವಕಾಶ ನಿರ್ಮಿಸಿದ್ದಿತು. ಸಾಮಾಜಿಕ ಪ್ರಕ್ರಿಯೆಗಳ ಒಡನಾಟದಲ್ಲಿ ಈ ವರ್ಗಗಳು ತಮ್ಮನ್ನು ರಾಷ್ಟ್ರೀಯತಾ ಭಾವಕ್ಕೆ ವಾಹಕವನ್ನಾಗಿಸಿಕೊಂಡವು.

ಕರ್ನಾಟಕತ್ವದ ಬೆಳವಣಿಗೆಯ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಉದಯವೆನ್ನುವುದು, ನೇರವಾಗಿ ಕನ್ನಡ ರಾಷ್ಟ್ರೀಯತಾಭಾವಕ್ಕೆ ತಳಹದಿ ಯೊದಗಿಸುವ ಒಂದು ಹೊಸ ವರ್ಗವಾಗಿ ಆವಿರ್ಭಾವವಾಯಿತು ಎಂಬ ಸರಳ ಸಮೀಕರಣಕ್ಕೆ ಬರುವುದು ಕಷ್ಟಕರವಾಗಿದೆ. ಯಾಕೆಂದರೆ ಈ ಹೊಸ ಕಾರ್ಮಿಕ ವರ್ಗವು, ವಸಾಹತುಶಾಹಿ ಬಂಡವಾಳ ಕಾರ್ಯಾಚರಣೆಯ ಪ್ರಕ್ರಿಯೆಯಿಂದ ಸೃಷ್ಟಿಸಲ್ಪಟ್ಟ ಕಾರ್ಮಿಕವರ್ಗವಾದುದರಿಂದ, ಅದಕ್ಕೆ ಒಂದು ನಿಶ್ಚಿತವಾದ ಭಾಷಾವಾರು ರಾಷ್ಟ್ರೀಯತೆಯ ಬೇರುಗಳು ಇರಲಿಲ್ಲ. ಅಂದರೆ ಕರ್ನಾಟಕದ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ವರ್ಗವೆಲ್ಲವೂ ಕನ್ನಡ ರಾಷ್ಟ್ರೀಯತೆಯ ಮೂಲದವರಾಗಿರಲಿಲ್ಲ. ಕರ್ನಾಟಕದ ಕುಶಲಕರ್ಮಿ ಕಸುಬುದಾರ ವರ್ಗಗಳಿಂದ ಅಥವಾ ನೆಲೆತಪ್ಪಿದ ಕೃಷಿ ಕೂಲಿಕಾರ ವರ್ಗಗಳಿಂದ ಬಂದು ಕೈಗಾರಿಕಾ ಕಾರ್ಮಿಕರಾಗಿ ರೂಪುಗೊಂಡವರಾಗಿರಲಿಲ್ಲ.

ಈ ಅಂಶವನ್ನು ಎ.ಪಿ. ಶ್ರೀನಿವಾಸಮೂರ್ತಿ ಈ ರೀತಿ ವಿವರಿಸಿದ್ದಾರೆ :

''ಆಧುನಿಕ ಕೈಗಾರಿಕೆ ಉಗಮವಾದುದರ ಜೊತೆಯಲ್ಲಿಯೇ ರಾಜ್ಯದಲ್ಲಿ ಕೈಗಾರಿಕೆ ಕಾರ್ಮಿಕರ ಒಂದು ಹೊಸ ಪಂಗಡವು ಅವರದೇ ಆದ ವಿಶೇಷ ಸಮಸ್ಯೆಗಳೊಡನೆ ಉದಯವಾಯಿತು. ರಾಜ್ಯದ ಈ ಆಧುನಿಕ ಕೈಗಾರಿಕೆಗಳಿಗೆ ಸೇರಿಕೊಂಡ ಕಾರ್ಮಿಕರು ಬಹುಮಟ್ಟಿಗೆ ಇತರ ಕಡೆಗಳಿಂದ ಬಂದವರಾಗಿಯೂ, ಅವರ ಸ್ವಂತ ಗ್ರಾಮಗಳ ವ್ಯವಸಾಯಜೀವನದೊಡನೆ ಸಂಪರ್ಕವನ್ನು ಉಳಿಸಿ ಕೊಂಡವರಾಗಿಯೂ ಇದ್ದರು. ಬಟ್ಟೆ ಗಿರಣಿಗಳಲ್ಲಿ ಶೇಕಡಾ ೫೦ರಷ್ಟು ಭಾಗ ಮತ್ತು ಕೋಲಾರದ ಚಿನ್ನದ ಗಣಿಯಲ್ಲಿ ಶೇಕಡಾ ೪೩ರಷ್ಟು ಭಾಗ ಕಾರ್ಮಿಕರು ರಾಜ್ಯದ ಹೊರಗಡೆಯಿಂದ ಬಂದವರಾಗಿದ್ದರೆಂದು ಕೆಲವು ವಿಶೇಷ ಪರಿಶೀಲನೆಗಳಿಂದ ತಿಳಿದುಬಂದಿದೆ. ಗಿರಣಿಗಳಿಗೆ ಕಾರ್ಮಿಕರನ್ನು ಒದಗಿಸಲೋಸುಗ 'ಜಾಬರ್' ಪದ್ಧತಿಯು ಜಾರಿಯಲ್ಲಿದ್ದಿತು. ಬ್ರಿಟಿಷ್ ಇಂಡಿಯಾದಲ್ಲಿ 'ಸರ್ದಾರ್' ಇದ್ದ ಹಾಗೆ ಮೈಸೂರು ರಾಜ್ಯದಲ್ಲಿ 'ಮೇಸ್ತ್ರಿ'ಗಳಿದ್ದರು. ಇವರುಗಳ ಮೂಲಕ ಗಿರಣಿಗಳು ಕಾರ್ಮಿಕರನ್ನು ಒದಗಿಸಿಕೊಳ್ಳುತ್ತಿದ್ದವು''. [10]

ಇದರಿಂದ ಈ ಕಾರ್ಮಿಕ ವರ್ಗವು ವಸಾಹತುಶಾಹಿ ವಿರೋಧವಾಗಿ ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ್ದು, ಅಖಿಲ ಭಾರತೀಯ ರಾಷ್ಟ್ರೀಯ

ಭಾವನೆಗೆ ಬಲವಾಗಿ ಪ್ರಭಾವಿತಗೊಂಡಿದ್ದು ಸಂಭವಿಸಿತು. ಇದರೊಂದಿಗೆ ಅವರಲ್ಲಿ ಬಹುಪಾಲು ಜನ ತಮ್ಮ ಮೂಲರಾಜ್ಯಗಳ ವ್ಯವಸಾಯದೊಂದಿಗೆ ಇನ್ನೂ ಸಂಬಂಧವನ್ನು ಉಳಿಸಿಕೊಂಡವರಾದುದರಿಂದ, ಅವರು ಇಲ್ಲಿನ ಕನ್ನಡ ರಾಷ್ಟ್ರೀಯತೆಯ ಭಾವನೆಗಳೊಂದಿಗೆ ಸಮ್ಮಿಳಿತಗೊಳ್ಳದೇ ಒಂದು ಪ್ರಮಾಣದಲ್ಲಿ ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳುವುದು ಹಾಗೂ ಕರ್ನಾಟಕತ್ವದ ಮುಖ್ಯ ಧಾರೆಯ ನಡುವೆ ದ್ವೀಪಗಳಂತೆ ಉಳಿಯುವ ಪ್ರವೃತ್ತಿಗೆ ಅವಕಾಶವಾಯಿತು. ಇವರಿಂದ ಕನ್ನಡ ರಾಷ್ಟ್ರೀಯತೆಯ ಬೆಳವಣಿಗೆಗೆ ಉಂಟಾದ ದೊಡ್ಡ ತಡೆ ಏನೂ ಇಲ್ಲದಿದ್ದರೂ, ಆಧುನಿಕವರ್ಗ ಪ್ರಜ್ಞೆಯುಳ್ಳ ಕಾರ್ಮಿಕವರ್ಗದಂತಹ ಪ್ರಮುಂಚೂಣಿ ವರ್ಗವು ಕನ್ನಡ ರಾಷ್ಟ್ರೀಯತೆಯ ಮೂಲವನ್ನು ಪ್ರಧಾನವಾಗಿ ಹೊಂದಿರದಿದ್ದುದ ರಿಂದ, ಕನ್ನಡ ರಾಷ್ಟ್ರೀಯತಾ ಬಿಡುಗಡೆಯ ಹೋರಾಟಕ್ಕೆ ಅದರ ಸಕ್ರಿಯ ನಾಯಕತ್ವ ದೊರೆಯಲಿಲ್ಲ. ಎರಡನೆಯದಾಗಿ, ಅಷ್ಟು ಸಂಖ್ಯೆಯಲ್ಲಿ ಕನ್ನಡ ರಾಷ್ಟ್ರೀಯತಾ ಮೂಲದವರೇ ಕಾರ್ಮಿಕ ವರ್ಗವಾಗಿ ಪರಿವರ್ತನೆಗೊಂಡಿದ್ದರೆ, ಆ ರಾಷ್ಟ್ರೀಯತಾ ಸಮುದಾಯದ ಪ್ರಜಾತಾಂತ್ರೀಕರಣದ ಪ್ರಕ್ರಿಯೆಗೆ ಅಷ್ಟರ ಮಟ್ಟಿಗಿನ ಹೆಚ್ಚು ಬಲ ಒದಗಿದಂತಾಗುತ್ತಿತ್ತು.

ರೈತಾಪಿ ವರ್ಗದ ಬಗ್ಗೆ ಹೇಳಬೇಕೆಂದರೆ, ಆ ವರ್ಗವು, ಕೃಷಿ ಪ್ರಕ್ರಿಯೆಯ ನಡುವೆ ವಸಾಹತುಶಾಹಿ ಬಂಡವಾಳವು ಪ್ರವೇಶಿಸಿದ್ದರಿಂದ, ತನ್ನ ಭೌಗೋಳಿಕ ರಾಜ್ಯವು ಘಟಕಗಳಾಗಿ ಒಡೆದುಹೋಗಿದ್ದುದರಿಂದ, ಅದರ ಉತ್ಪಾದನಾ ಚಟುವಟಿಕೆಯಲ್ಲಿ ಅದರದೇ ರಾಷ್ಟ್ರೀಯತಾಸಮುದಾಯದ ಇತರ ಪ್ರಾಂತ್ಯ ಗಳೊಂದಿಗೆ ಶ್ರಮವಿಭಜನೆಯನ್ನು, ಆರ್ಥಿಕ ಏಕತೆಯನ್ನು ಕಳೆದುಕೊಂಡಿತ್ತಾದ್ದರಿಂದ ಅದು ರಾಷ್ಟ್ರೀಯತಾ ಚಳುವಳಿಯನ್ನು ಪ್ರಜಾತಾಂತ್ರೀಕರಣದ ಚಳುವಳಿಯಾಗಿ ಸಾಕಷ್ಟು ಸಶಕ್ತವಾಗಿ ಮುನ್ನಡೆಸಲು ಅವಕಾಶಗಳನ್ನು ಕಳೆದುಕೊಂಡಿತ್ತು. ಈ ರೈತ ವರ್ಗವು ಒಟ್ಟಾರೆಯಾಗಿ ಕನ್ನಡ ರಾಷ್ಟ್ರೀಯತಾಪ್ರಜ್ಞೆಗೆ ತಳಹದಿಯನ್ನು ತನ್ನ ಮನೋರಚನೆಯಲ್ಲಿ ಬೆಳೆಸಿಕೊಂಡಿತ್ತಾದರೂ , ಅದರ ಮೇಲೆ ಉಪಪ್ರಾಂತೀಯ ಛಾಯೆ ಉಳಿದುಕೊಂಡೇ ಬರುವುದಕ್ಕೆ, ವಸಾಹತುಶಾಹಿಯು ಏರ್ಪಡಿಸಿದ್ದ ಕರ್ನಾಟಕ ಛಿದ್ರೀಕರಣವು ಕಾರಣಗಳನ್ನು ನಿರ್ಮಿಸಿತ್ತು.

ಆ ಕಾಲಾವಧಿಯಲ್ಲಿ ಬಂದ ಕೃಷಿ ವಾಣಿಜ್ಯ ಹಾಗೂ ಔದ್ಯಮಿಕ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಂದಿನ ಕರ್ನಾಟಕದ ಪರಿಸ್ಥಿತಿಯನ್ನು ಸೂಚಿಸಬೇಕಾದರೆ ''ಭಾರತದ ಇತರ ಪ್ರದೇಶಗಳಂತೆಯೇ ಕರ್ನಾಟಕವು ಅದರ ಹುದುಗಿರುವ ಆರ್ಥಿಕ ಸಂಪತ್ ಸಾಧನಗಳನ್ನು ಸಾಕಷ್ಟು ಮಟ್ಟಿಗೆ ರೂಢಿಸದ ಅನಭಿವೃದ್ಧ ಆರ್ಥಿಕ ಹಂತದಲ್ಲಿಯೇ ಉಳಿದಿದ್ದಿತು''.[11]

ಹೀಗಿದ್ದರೂ ವಸಾಹತುಶಾಹಿ ಬಂಡವಾಳದ ಕಾರ್ಯಾಚರಣೆಯಿಂದ, ಕನ್ನಡ ರಾಷ್ಟ್ರೀಯತಾ ಸಮುದಾಯವು ತನ್ನ 'ಕರ್ನಾಟಕತ್ವ'ದ ಮನೋಭಾವನೆಯನ್ನು ಪುನಶ್ಚೇತನಗೊಳಿಸಿಕೊಳ್ಳಲು ಅಗತ್ಯವಾದ ಆರ್ಥಿಕ, ಸಾಮಾಜಿಕ ಸನ್ನಿವೇಶವನ್ನು ಈ ಸಮಯದಲ್ಲಿ ಎದುರ್ಗೊಂಡಿತು ಎಂಬುದನ್ನು ಮಾತ್ರ ಚರಿತ್ರೆಯ ಗತಿತಾರ್ಕಿಕತೆಯಲ್ಲಿ ನಾವು ಗುರುತಿಸಬಹುದಾಗಿದೆ.

ಅಡಿಟಿಪ್ಪಣಿಗಳು

1. ಪ್ರೊ. ನಿಖಿಲೇಶ್ ಗುಹಾ - ಕರ್ನಾಟಕದ ಒಳನಾಡ ಮತ್ತು ಹೊರನಾಡ ವ್ಯಾಪಾರ, ಕರ್ನಾಟಕ ಚರಿತ್ರೆ, ಸಂ. ೬, ಪು. ೨೧೭-೨೧೮.
2. ಅದೇ, ಪು. ೨೨೩.
3. ಬೆಂಜಮಿನ್ ಲೂಯಿರೈಸ್, ಉಲ್ಲೇಖಿತ, ಅದೇ ಪು. ೨೨೪
4. [illegible]ೋರ್ನ್ ಹೆಟ್ನೆ, ಉಲ್ಲೇಖಿತ - ಅದೇ, ಪು. ೨೨೫.
5. [illegible]ಖಿಲೇಶ್ ಗುಹಾ - ಅದೇ, ಪು. ೨೨೭.
6. ಉಲ್ಲೇಖಿತ, ಅದೇ ಪು. ೨೨೭.
7. ಉಲ್ಲೇಖಿತ, ಅದೇ ಪು. ೨೨೮.
8. ಉಲ್ಲೇಖಿತ, ಪ್ರೊ. ನಿಖಿಲೇಶ್ ಗುಹಾ - ಅದೇ, ಪು. ೨೨೮-೨೨೯.
9. ಎ.ಪಿ. ಶ್ರೀನಿವಾಸಮೂರ್ತಿ, ಆರ್ಥಿಕ ಸ್ಥಿತಿಗಳ ಸಮೀಕ್ಷೆ (ಆಧುನಿಕ ಕಾಲ), ಕರ್ನಾಟಕದ ಪರಂಪರೆ - ಸಂ. ೨, ಪು. ೩೮೬.
10. ಅಧೇ ಪು. ೩೮೬
೧೧. ಅದೇ ಪು. ೩೮೯.

✤ ✤ ✤ ✤

ಅಧ್ಯಾಯ -೧೦

೧೯ನೇ ಶತಮಾನದ ಉತ್ತರಾರ್ಧ

ಆಧುನಿಕ ಕರ್ನಾಟಕತ್ವಕ್ಕೆ ಪೂರ್ವಾವಶ್ಯಕತೆಗಳ ನಿರ್ಮಾಣ

ಕರ್ನಾಟಕದಲ್ಲಿ ವಸಾಹತುಶಾಹಿ ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿದ್ದ ಮೈಸೂರು ರಾಜ್ಯದಲ್ಲಿ, ೧೮೩೩ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರಿನಲ್ಲಿ ತೆರೆದ ಇಂಗ್ಲಿಷ್ ಶಾಲೆಯಿಂದ ಇಂಗ್ಲಿಷ್ ವಿದ್ಯಾಭ್ಯಾಸವು ಮೊದಲುಗೊಂಡಿತು. ಶಾಲೆಗಳನ್ನು ತೆರೆಯುವ ಕ್ರೈಸ್ತ ಮಿಷನರಿಗಳ ಪ್ರಯತ್ನಕ್ಕೆ ಸರ್ಕಾರವು ನೆರವು ನೀಡಿತು. ೧೮೪೦-೫೪ರ ಅವಧಿಯಲ್ಲಿ ವೆಸ್ಲಿಯನ್ ಮಿಷನ್ ಕೆಲವು ಜಿಲ್ಲಾ ಕೇಂದ್ರಗಳಲ್ಲಿ ಇಂಗ್ಲಿಷ್ ಶಾಲೆಗಳನ್ನು ಸ್ಥಾಪಿಸಿತು. ಅವುಗಳಲ್ಲಿ ಬೆಂಗಳೂರು ಸ್ಕೂಲ್ ೧೮೫೧ರಲ್ಲಿ ಆರಂಭವಾಯಿತು.

೧೮೫೪ರ 'ವುಡ್ಸ್ ಡಿಸ್‌ಪ್ಯಾಚ್, ಪ್ರಕಟಗೊಂಡ ಮೇಲೆ ಕೊಡಗಿನಲ್ಲಿ ಮತ್ತು ಮೈಸೂರಿನಲ್ಲಿ ವಿದ್ಯಾಭ್ಯಾಸದ ವಿಸ್ತರಣೆಗೆ ಒಂದು ಯೋಜನೆಯನ್ನು ಸಿದ್ಧಪಡಿಸಲಾಯಿತು. ಈ ಯೋಜನೆಗಳಿಗನುಗುಣವಾಗಿ ಸರ್ಕಾರ ಬೆಂಗಳೂರಿನಲ್ಲಿ ೧೮೫೮ರಲ್ಲಿ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಸ್ಥಾಪಿಸಿತು. ಆನಂತರ ಅದೇ ಸೆಂಟ್ರಲ್ ಕಾಲೇಜ್ ಆಯಿತು. ತುಮಕೂರು, ಶಿವಮೊಗ್ಗ, ಮೈಸೂರು ಮತ್ತು ಹಾಸನಗಳಲ್ಲಿದ್ದ ಮಿಷನರಿ ಶಾಲೆಗಳನ್ನು ಸರ್ಕಾರ ವಹಿಸಿಕೊಂಡಿತು. ಬೆಂಗಳೂರಲ್ಲಿ ೧೮೬೧ರಲ್ಲಿ ಒಂದು ನಾರ್ಮಲ್ ಸ್ಕೂಲ್ ಮತ್ತು ೧೮೬೨ರಲ್ಲಿ ಒಂದು ಎಂಜಿನಿಯರಿಂಗ್ ಸ್ಕೂಲ್ ಆರಂಭವಾದವು. ಆಗ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ಬಿ.ಎಲ್. ರೈಸ್ ಅವರ ಯೋಜನೆಯಂತೆ ೧೮೬೮ರಲ್ಲಿ ಪ್ರತಿಯೊಂದು ಹೋಬಳಿಯಲ್ಲಿಯೂ ಶಾಲೆಗಳು ಆರಂಭವಾದವು. ೧೮೭೧-೭೨ರಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ದೇಶಭಾಷೆಯ ಒಂದು ಉನ್ನತ ಶಾಲೆ ಇತ್ತು.

೧೮೮೧ರಲ್ಲಿ ಕಮಿಷನರುಗಳ ಆಡಳಿತದಿಂದ ಮತ್ತೆ ಮಹಾರಾಜರಿಗೆ ಅಧಿಕಾರವು ವಹಿಸಿಕೊಡಲ್ಪಟ್ಟಾಗ, ಸ್ತ್ರೀಯರ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಿ, ವಿಸ್ತರಿಸಿ, ರಾಷ್ಟ್ರಮಟ್ಟದಲ್ಲಿ ಅದನ್ನು ನಡೆಸಿ ಜನತೆಯ ಅಭಿಮಾನಕ್ಕೆ ಒಳಪಡಿಸಬೇಕು, ಉನ್ನತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿ ತರುಣರನ್ನು ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಮೊದಲಾದ ವೃತ್ತಿಗಳಿಗೆ ತಯಾರು ಮಾಡಬೇಕು ಎಂಬ ಈ ಉದ್ದೇಶಗಳೊಂದಿಗೆ ಕನ್ನಡದಲ್ಲಿ ಸ್ಥಳೀಯ ಪರೀಕ್ಷೆಯೊಂದನ್ನು ಏರ್ಪಡಿಸಲಾಯಿತು ಮತ್ತು ೧೮೮೬ರಲ್ಲಿ 'ಕರ್ನಾಟಕ ಭಾಷೋಜ್ಜೀವಿನೀ ಸಭೆ' ಸ್ಥಾಪಿತವಾಯಿತು. ದಕ್ಷಿಣ ಭಾರತದಲ್ಲೆಲ್ಲ ಪ್ರಪ್ರಥಮ ಸಂಸ್ಥೆಯಾದ ಮಹಾರಾಣಿ ಗರ್ಲ್ಸ್ ಹೈಸ್ಕೂಲ್ ಮೈಸೂರಿನಲ್ಲಿ ಪ್ರಾರಂಭವಾಯಿತು. ಮಹಾರಾಜಾ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜಾಗಿ ಪರಿವರ್ತಿಸಲಾಯಿತು. ಮೈಸೂರು, ಚಿತ್ರದುರ್ಗ ಮತ್ತು ಕೋಲಾರಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲಾಯಿತು. ಸಂಸ್ಕೃತ ಮತ್ತು ಕನ್ನಡ ತಾಳೆಗರಿ ಗ್ರಂಥಗಳನ್ನು, ಹಸ್ತಪ್ರತಿಗಳನ್ನು ಸಂಗ್ರಹಿಸುವ ಸಲುವಾಗಿ ಮೈಸೂರಿನಲ್ಲಿ 'ಪ್ರಾಚ್ಯ ಪುಸ್ತಕ ಭಾಂಡಾರ'ವೊಂದನ್ನು ಸ್ಥಾಪಿಸಲಾಯಿತು. ಮೈಸೂರು ಮತ್ತು ಹಾಸನಗಳಲ್ಲಿ ತಾಂತ್ರಿಕ ಶಾಲೆಗಳನ್ನು ತೆರೆಯಲಾಯಿತು. ಹಿಂದುಳಿದ ಪಂಗಡದವರ ಮಕ್ಕಳ ವಿದ್ಯಾಭ್ಯಾಸಕ್ಕೂ ಗಮನಹರಿಸಲಾಯಿತು. ಕೆ. ಸಂಪದ್ಗಿರಿರಾವ್ ಹೇಳುವ ಪ್ರಕಾರ ''ಈ ಶತಮಾನದ ಪ್ರಾರಂಭದಲ್ಲಿ ವಿದ್ಯಾಭ್ಯಾಸದ ಅಭಿವೃದ್ಧಿಯಲ್ಲಿ ನಡೆದ ಗಮನಾರ್ಹ ಸಂಗತಿಯೆಂದರೆ ತಾಂತ್ರಿಕ ವಿದ್ಯಾಭ್ಯಾಸಕ್ಕೂ, ಸ್ತ್ರೀಯರ ವಿದ್ಯಾಭ್ಯಾಸಕ್ಕೂ ವಿಶೇಷ ಅವಕಾಶ ಒದಗಿಸುವುದು''.[1]

ಮೈಸೂರಿನಲ್ಲಿ ಒಂದು ಇಂಜಿನಿಯರಿಂಗ್ ಶಾಲೆ, ಜಿಲ್ಲಾ ಕೇಂದ್ರಗಳಲ್ಲಿ ಹೆಚ್ಚು ತಾಂತ್ರಿಕ ಶಾಲೆಗಳು ಪ್ರಾರಂಭವಾದವು. ಮೈಸೂರು ದೇಶದಿಂದ ಹೊರಗೆ ಹೋಗಿ ತಾಂತ್ರಿಕ ಶಿಕ್ಷಣವನ್ನು ವ್ಯಾಸಂಗ ಮಾಡಲು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕಲ್ಪಿಸಲಾಯಿತು. ೧೯೦೨ರಲ್ಲಿ ಮಹಾರಾಣಿ ಹೈಸ್ಕೂಲನ್ನು ಮೈಸೂರಿನಲ್ಲಿ ಕಾಲೇಜಾಗಿ ವಿಸ್ತರಿಸಲಾಯಿತು.

೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಶಾಸನಬದ್ಧವಾಯಿತು. ೧೯೧೧ರಿಂದ ೧೬ರವರೆಗೆ ನಡೆದ ಗಮನಾರ್ಹವಾದ ಅಭಿವೃದ್ಧಿ ಕಾರ್ಯಗಳೆಂದರೆ ಎಸ್.ಎಸ್.ಎಲ್.ಸಿ. ಏರ್ಪಾಡನ್ನು ಜಾರಿಗೆ ತಂದದ್ದು, ೭ ಕನ್ನಡ ಹೈಸ್ಕೂಲ್‌ಗಳನ್ನು ತೆರೆದದ್ದು, ಕಡ್ಡಾಯ ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟು ಎಲಿಮೆಂಟರಿ ವಿದ್ಯಾಭ್ಯಾಸ ನಿಯಮವನ್ನು ಜಾರಿಗೆ ತಂದದ್ದರ ಜೊತೆಗೆ ಸರ್ಕಾರಿ ವಾಣಿಜ್ಯ ಶಾಲೆಗಳನ್ನು ಬೆಂಗಳೂರು ಮತ್ತು ಮೈಸೂರುಗಳಲ್ಲಿ ತೆರೆಯಲಾಯಿತು. ೧೯೧೩ರಲ್ಲಿ ತೆರೆದ ಹೆಬ್ಬಾಳದ ವ್ಯವಸಾಯಶಾಲೆ ರಾಜ್ಯದಲ್ಲಿ ವ್ಯವಸಾಯ ಶಿಕ್ಷಣದ ಪ್ರಾರಂಭದ ಒಂದು ದಾಖಲೆಯನ್ನು ಸ್ಥಾಪಿಸಿತು. ೧೯೦೩ಕ್ಕೆ ಮೊದಲೇ ವಯಸ್ಕರಿಗಾಗಿ ರಾತ್ರಿಶಾಲೆಗಳನ್ನು

ತೆರೆಯುವ ಪ್ರಯತ್ನಗಳು ನಡೆದಿದ್ದವು. ೧೯೪೧ರಲ್ಲಿ ಮೈಸೂರು ಪ್ರಾಂತ್ಯ ವಯಸ್ಕರ ಶಿಕ್ಷಣ ಸಮಿತಿ ರೂಪಿತವಾಯಿತು.

೧೯೨೧ಕ್ಕೂ ಮೊದಲು ವಿದ್ಯಾರ್ಥಿಗಳನ್ನು ಕನ್ನಡ ಲೋಯರ್ ಸೆಕೆಂಡರಿ ಪರೀಕ್ಷೆಗೆ ಸಿದ್ಧಪಡಿಸುವ ೫ ಪ್ರಾಥಮಿಕ ತರಗತಿಗಳನ್ನುಳ್ಳ ದೇಶಭಾಷೆಯ ಮಾಧ್ಯಮಿಕ ಶಾಲೆಗಳಿದ್ದವು.

೧೮೬೦ರಷ್ಟು ಹಿಂದೆಯೇ ಮೈಸೂರಿನಲ್ಲಿ ಪ್ರಾಥಮಿಕ ಶಾಲೆಯ ಅಧ್ಯಾಪಕರುಗಳಿಗಾಗಿ ಅಧ್ಯಾಪಕ ತರಬೇತಿ ಶಾಲೆಯೊಂದು ತೆರೆಯಲ್ಪಟ್ಟಿತು. ಆನಂತರದ ಕಾಲದಲ್ಲಿ ೧೯೧೨-೧೩ರಲ್ಲಿ ಮಾಧ್ಯಮಿಕ ಶಾಲೆಗಳ ಅಧ್ಯಾಪಕರ ತರಬೇತಿಗಾಗಿ ಮೈಸೂರಿನಲ್ಲಿ ಶಾಲೆಯೊಂದು ಆರಂಭವಾಯಿತು. ಇದರಂತೆಯೇ ಅಧ್ಯಾಪಕಿಯರ ತರಬೇತಿಯು ೧೯೨೮-೨೯ರಲ್ಲಿ ಆರಂಭವಾಯಿತು.

ಈಗ ಮೈಸೂರು ಸಂಸ್ಥಾನದ ಹೊರತಾಗಿ ಕರ್ನಾಟಕದ ಇತರ ಪ್ರಾಂತ್ಯಗಳಲ್ಲಿ ನಡೆದ ಶೈಕ್ಷಣಿಕ ಪ್ರಗತಿಯನ್ನು ಗಮನಿಸೋಣ.

ಕ್ರಿ.ಶ. ೧೮೨೩ರ ಅಂಕಿ-ಅಂಶ ಮಾಹಿತಿಯ ಪ್ರಕಾರ, ದಕ್ಷಿಣ ಮರಾಠ ಪ್ರಾಂತ್ಯದಲ್ಲಿ ಹಳ್ಳಿಯ ಶಾಲೆ ಎಂದು ಕರೆಯಲ್ಪಡುತ್ತಿದ್ದ ಖಾಸಗೀ ಒಡೆತನದ ೧೪೬ ಮರಾಠಿ ಪ್ರಾಥಮಿಕ ಶಾಲೆಗಳು ಮತ್ತು ೧೧೨ ಕನ್ನಡ ಶಾಲೆಗಳನ್ನು ಆರಂಭಿಸಿತು. ಮರಾಠಿಯೇ ಏಕೆ ? ಆಡಳಿತದಲ್ಲಿ ಮರಾಠಿಯ ಪ್ರಾಬಲ್ಯವೇ ಹೆಚ್ಚಾಗಿದ್ದುದರಿಂದ ಸರ್ಕಾರದೊಂದಿಗಿನ ಸಂಪರ್ಕಕ್ಕೆ ಅದೇ ಸುಲಭ ಭಾಷೆ ಎಂಬ ಭಾವನೆ ಸರ್ಕಾರಕ್ಕಿದ್ದಿರಬೇಕು. ಆದರೆ ಎಲಿಯಟ್ ಬೇರೆ ರೀತಿಯಲ್ಲಿ ಯೋಚಿಸಿದ. ಬಹುತೇಕ ಜನಸಮೂಹ ಸಂಪರ್ಕಭಾಷೆಯು ಕನ್ನಡವೇ ಆಗಿದ್ದುದರಿಂದ ಆಡಳಿತಕ್ಕೆ ಅನುಕೂಲವಾಗುತ್ತದೆ ಎಂದು ಭಾವಿಸಿದ. ಅದರ ಫಲವಾಗಿ ಅವನು ೧೮೩೦ರಲ್ಲಿ ಧಾರವಾಡದಲ್ಲಿ ಕನ್ನಡ ಶಾಲೆಯೊಂದರ ಆರಂಭಕ್ಕೆ ಅಪ್ಪಣೆ ಕೋರಿ ಮುಂಬಯಿ ಸ್ಥಳೀಯ ವಿದ್ಯಾಸಂಸ್ಥೆಗೆ ಪತ್ರ ಬರೆದ. ಸಂಸ್ಥೆಯು ಕನ್ನಡ ಶಾಲೆಯ ಆರಂಭಕ್ಕೆ ಅನುಮತಿ ನೀಡಿ ಶಿಕ್ಷಕರನ್ನು ಆಯ್ಕೆ ಮಾಡಲು ಸೂಚಿಸಿತು. ಎಲಿಯಟ್ ಕನ್ನಡ ಶಿಕ್ಷಕರೊಬ್ಬರನ್ನು ನೇಮಿಸಿಕೊಂಡು ಶಾಲೆಯನ್ನಾರಂಭಿಸಿದ.

ಆದರೆ ಅದಕ್ಕೆ ಸರ್ಕಾರದ ಅನುಮತಿ ದೊರೆಯಲಿಲ್ಲ. ಆರೆ ಸರ್ಕಾರಿ ಸಂಸ್ಥೆಯಾಗಿದ್ದ 'ಬಾಂಬೆ ನೇಟಿವ್ ಎಜ್ಯುಕೇಶನ್ ಸೊಸೈಟಿ'ಯ ಶಿಫಾರಸ್ಸು ಸರ್ಕಾರದ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ೧೮೩೩ರ ವರೆಗೆ ಅಂದರೆ ಮೂರು ವರ್ಷಗಳ ಕಾಲ ಎಲಿಯಟ್ ಕನ್ನಡ ಶಾಲೆಯನ್ನು ತನ್ನ ಖರ್ಚಿನಲ್ಲೇ ನಡೆಸಿದ. ಹಲವಾರು ಗಣ್ಯ ಬ್ರಿಟಿಷ್ ಅಧಿಕಾರಿಗಳ ಮೆಚ್ಚುಗೆ ಪಡೆದಿದ್ದ ಕನ್ನಡ ಶಾಲೆಯನ್ನು, ಎಲಿಯಟ್ ಧಾರವಾಡವನ್ನು ಬಿಟ್ಟು ಹೊರಡುವಾಗ ಕಲೆಕ್ಟರನ ವಶಕ್ಕೆ ಒಪ್ಪಿಸಿದ. ನಂತರ ಸರ್ಕಾರ ಮಂಜೂರು ಮಾಡಿತು. ದುಸ್ಥಿತಿಯಲ್ಲಿದ್ದ ಹಲವಾರು ಮರಾಠೀ

ಶಾಲೆಗಳನ್ನು ಕನ್ನಡ ಶಾಲೆಗಳನ್ನಾಗಿ ಪರಿವರ್ತಿಸಿ ಸುಸ್ಥಿತಿಗೆ ತರಲು ಪ್ರಯತ್ನಿಸಿದ ಸರ್ ವಾಲ್ಟರ್ ಎಲಿಯಟ್ ಉತ್ತರ ಕರ್ನಾಟಕವನ್ನು, ವಿಶೇಷವಾಗಿ ಧಾರವಾಡ ಮತ್ತು ಹುಬ್ಬಳ್ಳಿಗಳನ್ನು ಮರಾಠೀ ಪ್ರಭಾವದಿಂದ ಮುಕ್ತಗೊಳಿಸಲು ಪ್ರಯತ್ನಿಸಿದ ಮೊದಲಿಗ ಎನ್ನಬಹುದು. ಧಾರವಾಡದ ಕನ್ನಡ ಶಾಲೆಗೆ ೧೮೩೩ರಲ್ಲಿ ಮಂಜೂರಾತಿ ನೀಡಿದ ಸರ್ಕಾರವು ನಂತರ ಹುಬ್ಬಳ್ಳಿಯಲ್ಲೂ ಕನ್ನಡ ಶಾಲೆಯೊಂದನ್ನು ಆರಂಭಿಸಿತು. ೧೮೩೪ರಲ್ಲಿ ಸರ್ಕಾರದ ಕಾರ್ಯದರ್ಶಿಯು ದಕ್ಷಿಣ ಮರಾಠ ಪ್ರಾಂತ್ಯದ ಎಲ್ಲಾ ಕಲೆಕ್ಟರ್‌ಗಳಿಗೆ ಪತ್ರ ಬರೆದು, ಅವರ ಅಭಿಪ್ರಾಯದಲ್ಲಿ ಮರಾಠೀ ಅಥವಾ ಕನ್ನಡ ಭಾಷೆಗಳಲ್ಲಿ, ಸಾರ್ವಜನಿಕ ಮತ್ತು ಖಾಸಗೀ ವ್ಯವಹಾರಗಳಲ್ಲಿ ಯಾವ ಭಾಷೆ ಹೆಚ್ಚು ಉಪಯುಕ್ತ ಎಂಬ ಬಗ್ಗೆ ವಿವರ ಕೇಳಿದ. ಅಭಿಪ್ರಾಯಗಳು ಕನ್ನಡದ ಪರವಾಗಿ ಹೆಚ್ಚು ಪ್ರೋತ್ಸಾಹದಾಯಕವಾಗಿದ್ದವು.

ಸರ್ ವಾಲ್ಟರ್ ಎಲಿಯಟ್ ಆರಂಭಿಸಿದ ಕೆಲಸವನ್ನು ಮುಂದುವರಿಸಿದವರು ಡೆಪ್ಯೂಟಿ ಚೆನ್ನಬಸಪ್ಪನವರು.

ತರಬೇತಿ ಶಾಲೆಯಲ್ಲಿ ಕನ್ನಡ ಅಧ್ಯಾಪಕರನ್ನು ತರಬೇತುಗೊಳಿಸಲು ರಸಲ್‌ರವರಿಂದ ಚೆನ್ನಬಸಪ್ಪನವರಿಗೆ ಪ್ರೋತ್ಸಾಹ ದೊರೆಯಿತು. ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರಾಗಿದ್ದಾಗಲೇ 'ಮಠಪತ್ರಿಕೆ' ಎಂಬ ಕನ್ನಡ ಮಾಸಪತ್ರಿಕೆಯನ್ನಾರಂಭಿಸಿದ ಚೆನ್ನಬಸಪ್ಪನವರು ಆ ಮೂಲಕವೂ ಕನ್ನಡದ ಸೇವೆ ಮಾಡಿದರು. ೧೮೬೬ರಲ್ಲಿ ರಸಲ್ ಅವರು ಚೆನ್ನಬಸಪ್ಪನವರನ್ನು ಡೆಪ್ಯೂಟಿ ಎಜ್ಯುಕೇಶನ್ ಇನ್‌ಸ್ಪೆಕ್ಟರ್ ಎಂದು ನೇಮಿಸಿದರು. ಅಂದಿನಿಂದ ಚೆನ್ನಬಸಪ್ಪನವರ ಹೆಸರಿನ ಜೊತೆಗೆ ಡೆಪ್ಯೂಟಿ ಪದ ಅಂಟಿಕೊಂಡಿತು. ಗುಜರಾತಿ ಮತ್ತು ಮರಾಠೀ ಪಠ್ಯಪುಸ್ತಕಗಳಿಗೆ ಸರಿಸಮನಾಗಿ ಕನ್ನಡದಲ್ಲು ಪಠ್ಯಪುಸ್ತಕಗಳನ್ನು ಬರೆಸಿ, ಕನ್ನಡ ಪಂಡಿತರುಗಳಿಗೆ ಪ್ರೋತ್ಸಾಹ ನೀಡಿ ಲೆಕ್ಕಪತ್ರಗಳನ್ನು, ಅಂಕಿ-ಮಗ್ಗಿಗಳನ್ನು ಕನ್ನಡದಲ್ಲಿಯೇ ಬರೆಯಲು ಉತ್ತೇಜನ ನೀಡಿ 'ಕನ್ನಡದ ಹುಲಿ' ಎನಿಸಿಕೊಂಡ ಚನ್ನಬಸಪ್ಪನವರ ಪ್ರಯತ್ನದಿಂದಾಗಿ ೧೮೫೫-೫೯ನೆಯ ಸಾಲಿನಲ್ಲಿ ಬೆಳಗಾವಿ, ಬಿಜಾಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಅನುಕ್ರಮವಾಗಿ ೧೩, ೯ ಮತ್ತು ೧೨ ಕನ್ನಡ ಶಾಲೆಗಳಿದ್ದವು.

೧೮೩೦ರಲ್ಲಿ ಧಾರವಾಡದಲ್ಲೊಂದು ಪ್ರೌಢಶಾಲೆ ಆರಂಭವಾಯಿತು. ಬೆಳಗಾವಿಯಲ್ಲಿ ೧೮೩೦ರಲ್ಲೇ ಒಂದು ಪ್ರೌಢಶಾಲೆಯನ್ನು ಮಹಾರಾಷ್ಟ್ರ ಸರಕಾರದವರು ಸ್ಥಾಪಿಸಿದ್ದು, ಮುಂದೆ ಅದು ಸರಕಾರೀ ಶಾಲೆಯಾಯಿತು. ೧೮೮೩ರ ವೇಳೆಗೆ ಮುಂಬಯಿ ಕರ್ನಾಟಕ ಪ್ರಾಂತ್ಯದಲ್ಲಿ ಕೇವಲ ೨ ಪ್ರೌಢಶಾಲೆಗಳಿದ್ದವು ಎಂಬುದು ಗಮನಾರ್ಹ ವಿಚಾರವಾಗಿದೆ. ಧಾರವಾಡದಲ್ಲಿ ಒಂದು ತರಬೇತಿ ಶಾಲೆ, ಒಂದು ಕೈಗಾರಿಕಾ ಶಾಲೆ, ಒಂದು ಪೊಲೀಸ್ ಶಾಲೆಗಳಿದ್ದವು.

''ಕನ್ನಡಿಗರ ರಾಜ್ಯವು ಹೋದೊಡನೆ ರಾಜಕೀಯ ಸಂಸ್ಥೆಗೆ ಸಂಬಂಧಪಟ್ಟ

ಪಾರಿಭಾಷಿಕ ಶಬ್ದಗಳನ್ನು ಜನರು ಮರೆತುಬಿಟ್ಟರು. ವಿಜಾಪುರ ರಾಜ್ಯದಲ್ಲೆಲ್ಲ ಸ್ವಲ್ಪ ಹೆಚ್ಚು ಕಡಿಮೆ ಇದೇ ಸ್ಥಿತಿಯಾಗಿದ್ದಿತು. ಆನಂತರ ಪೇಶ್ವೆ ರಾಜ್ಯದ ಉದಯದಿಂದ ಮರಾಠಿಯೇ ಸಾರ್ವತ್ರಿಕವಾದ ಬರಹದ ಭಾಷೆಯಾಯಿತು. ಕನ್ನಡವು ಬರೀ ಮಾತನಾಡುವ ಭಾಷೆಯಾಗಿ ಸಂತೆ, ಪೇಟೆ, ಹಳ್ಳಿ ಮನೆಮಾರುಗಳಲ್ಲಿ ಮಾತ್ರ ಉಳಿಯಿತು. ಬಾಲಕರ ಅಕ್ಷರಾಭ್ಯಾಸವಾಗುವುದು ಕೂಡ ಮೋಡಿಯಲ್ಲಿ ಮೊದಲಾಯಿತು. ಇದರಿಂದ ಜನರಿಗೆ ಕನ್ನಡ ಅಕ್ಷರಾಭ್ಯಾಸವಾಗುವುದು ಇಲ್ಲದಂತಾಯಿತು''.[2] ವ್ಯವಹಾರಸ್ಥ ಜನ ಮರಾಠೀ ಕಲಿತರು. ಬ್ರಾಹ್ಮಣರು ಮರಾಠಿಗೆ ಮನಸೋತು ಕನ್ನಡವನ್ನು ತಿರಸ್ಕಾರದಿಂದ ಕಂಡರು. 'ಬಣಜಿಗರಂತೆ ಕನ್ನಡೇನು ಕಲಿತಿ' ಎನ್ನುವ ಪರಿಸ್ಥಿತಿಯನ್ನು ಕನ್ನಡದ ಬಗೆಗೆ ಪ್ರೀತಿ ಇರಿಸಿಕೊಂಡಿದ್ದ ಜನ ಎದುರಿಸುತ್ತಿದ್ದರು. ಮಠಗಳಲ್ಲಿಯ ಜಂಗಮರು ಮತ್ತು ಅಯ್ಯನವರು ತಮ್ಮ ಉಪಜೀವನದ ಸಾಧನವೆಂದು ಕನ್ನಡವನ್ನು ಕಲಿಯುತ್ತಿದ್ದರು.

೧೮೮೭-೮೮ರಲ್ಲಿ ಕರ್ನಾಟಕ ಭಾಗದ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮ ಕನ್ನಡವೇ ಆಗಿರಬೇಕೆಂದೂ ಸರ್ಕಾರ ಆಜ್ಞೆ ಹೊರಡಿಸಿತು. ಕುಲ್ಬರ್ಗಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀನಿವಾಸಾಚಾರ್ಯ ಎಂಬುವರು ಕನ್ನಡಿಗರಿಗೆ ಮೊದಲು ಕನ್ನಡವನ್ನೇ ಕಲಿಸಬೇಕೆಂದು, ಅದಕ್ಕೆ ಸಹಾಯಕವಾಗಲು ಆಡಳಿತ ಭಾಷೆ ಕನ್ನಡವೇ ಆಗಿರಬೇಕೆಂದು ಸರ್ಕಾರದ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರ ನಡೆಸಿದರು. ಆದರೆ ಮರಾಠಿಯೇ ಆಡಳಿತ ಭಾಷೆಯಾಗಿ ಮುಂದುವರೆಯಿತು. ಅವರನ್ನು ಅನುಕರಿಸುವುದರಿಂದ ತಮಗೂ ಗೌರವ ಲಭಿಸುವುದೆಂದು ತಿಳಿದಿದ್ದ ಮೇಲ್ವರ್ಗದ ಕನ್ನಡಿಗರ ಸಂಖ್ಯೆಯೂ ಕಡಿಮೆ ಇರಲಿಲ್ಲ. ಸಾರ್ವಜನಿಕ ಕಾರ್ಯದಲ್ಲಿ ಮರಾಠಿ ಜನರು ಮುಂಚೂಣಿಯಲ್ಲಿ ನಿಲ್ಲುತ್ತಿದ್ದರು.

ಬಳ್ಳಾರಿ ಜಿಲ್ಲೆಯಲ್ಲೂ ಮೊದಲಿಗೆ ದೇವಾಲಯಗಳ ಅಧೀನದಲ್ಲಿ ದೇಶೀ ಶಾಲೆಗಳನ್ನು ಗ್ರಾಮಸ್ಥರ ನೆರವಿನಿಂದ ಆಸಕ್ತರೊಬ್ಬರು ನಡೆಸುತ್ತಿದ್ದರು. ಅವುಗಳನ್ನು ಅಯ್ಯಗಳ ಮಠ ಎನ್ನುತ್ತಿದ್ದರು. ಅವೇ ಪಿಯ್ಯಲ್ ಶಾಲೆ ಎಂಬ ಹೆಸರಿನಿಂದಲೂ ಪರಿಚಿತವಿದ್ದವು. ಶಿಕ್ಷಣದ ಬಗ್ಗೆ ಆಸಕ್ತಿ ಹೊಂದಿದ್ದ ಸರ್ ಥಾಮಸ್ ಮುನ್ರೋ ಮದರಾಸ್ ಸರ್ಕಾರದಲ್ಲಿ ೧೮೩೩ರಲ್ಲಿ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಿದ ನಂತರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ದೊರೆಯಿತು. ೧೮೩೩ರ ವೇಳೆಗೆ ಶಿಕ್ಷಣ ಕ್ಷೇತ್ರವನ್ನು ಪ್ರವೇಶಿಸಿದ್ದ ಕ್ರೈಸ್ತ ಮಿಷನರಿ ಸಂಸ್ಥೆಗಳು ಮದರಾಸ್ ಆಧಿಪತ್ಯದ ಮಂಗಳೂರು, ಉಡುಪಿ ಮತ್ತು ಬಳ್ಳಾರಿಗಳಲ್ಲಿ ಶಾಲೆಗಳನ್ನು ಸ್ಥಾಪಿಸಿದವು. ೧೮೫೫-೫೬ರ ವೇಳೆಗೆ ಸರ್ಕಾರವೇ ಬಳ್ಳಾರಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಶಾಲೆಗಳನ್ನು ಸ್ಥಾಪನೆ ಮಾಡಿತು. ೧೮೬೦-೬೧ನೆಯ ವರ್ಷಾಂತ್ಯಕ್ಕೆ ಬಳ್ಳಾರಿ ಜಿಲ್ಲೆಯಲ್ಲಿ ೭೨೬ ಶಾಲೆಗಳಿದ್ದು ಅವುಗಳಲ್ಲಿ ೨೬೭ ಪ್ರಾಥಮಿಕ ಶಾಲೆಗಳಿದ್ದವು. ಅಂತೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ೧೪೮ ಶಾಲೆಗಳಲ್ಲಿ ೧೨೩ ಪ್ರಾಥಮಿಕ ಶಾಲೆಗಳಾಗಿದ್ದವು.

೧೮೫೪ರ ವೇಳೆಗೆ ಕೊಡಗಿನಲ್ಲಿ ೨೧ ಕನ್ನಡ ಶಾಲೆಗಳಿದ್ದವು.

ಈ ಬಗೆಯಲ್ಲಿ ೧೯ನೇ ಶತಮಾನದ ಉತ್ತರಾರ್ಧದ ಹೊತ್ತಿಗೆ ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ಆಧುನಿಕ ಶಿಕ್ಷಣವನ್ನು ಪಡೆದ ಮೊದಲ ಸುಶಿಕ್ಷಿತ ವರ್ಗ ಕನ್ನಡ ಸಮುದಾಯದ ಜನತೆಯೊಳಗೆ ರೂಪುಗೊಂಡಿತು. ಇವರಲ್ಲಿ ಬಹುಪಾಲು ಜನ ಸಮಾಜದ ಉನ್ನತ ಹಾಗೂ ಮಧ್ಯಮ ವರ್ಗಗಳಿಂದ ಬಂದವರಾಗಿದ್ದರು. ಆದರೆ ಇಂಗ್ಲಿಷ್ ಆಧುನಿಕ ಶಿಕ್ಷಣಕ್ಕೆ, ಪಾಶ್ಚಾತ್ಯ ವಿಚಾರಗಳ ಬೆಳಕಿಗೆ ತಮ್ಮನ್ನು ತೆರೆದು ಕೊಂಡವರಾಗಿದ್ದರು.

ಈ ಮೊದಲೇ ನಾವು ಗಮನಿಸಿರುವ ಹಾಗೆ, ಆಧುನಿಕ ಶಿಕ್ಷಣದ ಮುಖಾಂತರ ರಕ್ತ ಮಾಂಸದಲ್ಲಿ ಭಾರತೀಯರಾಗಿದ್ದರೂ ಸ್ವಭಾವದಲ್ಲಿ ಹಾಗೂ ಆಲೋಚನೆಯಲ್ಲಿ ಇಂಗ್ಲಿಷರಂತಿರುವ ವ್ಯಕ್ತಿಗಳನ್ನು ತಯಾರಿಸಬೇಕೆಂಬುದು ಈ ಆಧುನಿಕ ಶಿಕ್ಷಣದ ಮೂಲ ಉದ್ದೇಶವಾಗಿತ್ತು. ಕರ್ನಾಟಕದಲ್ಲಿ ಏರ್ಪಡುತ್ತಾ ಬಂದ ರೈಲ್ವೆಗಳು, ಕಾರ್ಖಾನೆಗಳು, ಅಂಚೆ ಮತ್ತು ತಂತಿ ವ್ಯವಸ್ಥೆಗಳು ಹಾಗೂ ಯೂರೋಪೀಕರಣ ಗೊಂಡ ಆಡಳಿತ ವ್ಯವಸ್ಥೆ ಸ್ಥಳೀಯರನ್ನು ಪಾಲುದಾರರನ್ನಾಗಿ ಮಾಡಿಕೊಳ್ಳಬೇಕಾದ ಅನಿವಾರ್ಯತೆಯನ್ನು ಬ್ರಿಟಿಷ್ ವಸಾಹತುಶಾಹಿಗೆ ತಂದಿಟ್ಟಿದ್ದವು. ಈ ಸ್ಥಳೀಯರ ಪಾಲುದಾರಿಕೆ ಎನ್ನುವುದು ಪಾಲುದಾರಿಕೆಯಾಗಿರದೆ ಸ್ಥಳೀಯ ಜನರ ಕಡೆಯಿಂದ 'ಅಧೀನ ಸೇವೆ' ಬೇಕಾಗಿತ್ತು ಎಂಬುದನ್ನು ನಾವು ನೆನಪಿಡಬೇಕು. ಈ ಬಗೆಯಲ್ಲಿ ೧೮೩೩ರ ನಂತರ ತಯಾರಾಗುತ್ತಾ ಬಂದ ಮೊದಲ ಸುಶಿಕ್ಷಿತ ವರ್ಗ, ಬ್ರಿಟಿಷ್ ಬಂಡವಾಳಶಾಹಿ ಕಾರ್ಯಾಚರಣೆಯ ವಿವಿಧ ರಂಗಗಳ ಉದ್ಯೋಗಗಳಲ್ಲಿ ನಿರತವಾಯಿತು.

ಇಂಗ್ಲಿಷರು ಇವರನ್ನೆಲ್ಲ ಆಲೋಚನೆಯಲ್ಲಿ ಇಂಗ್ಲಿಷ್‌ರಂತಾಗಿಸಬೇಕೆಂಬ ಉದ್ದೇಶದಿಂದ ಕೊಟ್ಟ ಶಿಕ್ಷಣವು, ಇವರಲ್ಲಿ ಮೇಲುವರ್ಗದ ಒಂದು ವಿಭಾಗವನ್ನು ಯೂರೋಪಿಯನ್ನರಂತೆ ಮಾಡಿ, ಸ್ಥಳೀಯವಾದುದೆಲ್ಲ ಕನಿಷ್ಠ ಎಂಬಂತಹ ಮನೋಭಾವವನ್ನು ಸೃಷ್ಟಿಸಿ, ಅವರೆಲ್ಲ ತಮ್ಮದೇ ಸಮಾಜಕ್ಕೆ ಪರಕೀಯರಾದ ಜನರಾಗಿ ಉಳಿಯುವಂತೆ ಮಾಡಿತೇನೋ ಹೌದು. ಆದರೆ ಈ ದ್ವಿಭಾಷಿಕತ್ವದ ತಿಳುವಳಿಕೆ ಪಡೆದ ಮೊದಲ ಸುಶಿಕ್ಷಿತ ವರ್ಗವು, ಸ್ಥಳೀಯ ಆಚಾರ ವಿಚಾರಗಳ ಬಗ್ಗೆ ಅಸಹನೆಯನ್ನು, ಯೂರೋಪಿನ ಮಾದರಿಗಳಾದ ವಿಚಾರವಾದ, ವ್ಯಕ್ತಿ ಸಮಾನತೆ ಮುಂತಾದ ಆಲೋಚನೆಗಳ ಬಗ್ಗೆ ಮೆಚ್ಚುಗೆಯನ್ನು, ಹಾಗೆಯೇ ಮೂಢನಂಬಿಕೆ, ಜಾತಿ ಕಂದಾಚಾರಗಳ ಬಗ್ಗೆ ವಿಮರ್ಶಾತ್ಮಕವಾದ ಅಭಿಪ್ರಾಯಗಳನ್ನು ಜನತೆಯ ಒಂದು ಜನರ ವಿಭಾಗದಲ್ಲಿ ಹರಡಿತು. ಯೂರೋಪಿನ ಹಲವಾರು ದೇಶಗಳು ಯಾವ ರೀತಿ ರಾಷ್ಟ್ರಗಳಾಗಿ ಮುಂದುವರಿಯುತ್ತಿವೆ, ಅವುಗಳ ಸಾಮಾಜಿಕ ವಿನ್ಯಾಸ ಹಾಗೂ ಶೈಲಿಗಳು ಯಾವ ರೀತಿಯಲ್ಲಿವೆ ಎಂಬುದರ ಬಗ್ಗೆಯೂ ಕನ್ನಡ ನಾಡಿನ ಈ ಸುಶಿಕ್ಷಿತ ಸಮುದಾಯವು ಎಚ್ಚರಗೊಳ್ಳತೊಡಗಿತು.

ಜಾತಿವಿರೋಧ, ವ್ಯಕ್ತಿಸಮಾನತೆಯ ಆಶಯಗಳು, ಸ್ವತಂತ್ರವಾಗಿ ಉದ್ದಿಮೆಗಳಲ್ಲಿ ತೊಡಗಬೇಕೆಂಬ ಆಲೋಚನೆಗಳು ಹಾಗೂ ಪ್ರವೃತ್ತಿಗಳು, ಈ ಮೊದಲೇ ನಾವು ಗಮನಿಸಿದಂತೆ ೧೨ರಿಂದ ೧೮ನೇ ಶತಮಾನದ ಕೊನೆಯ ಭಾಗದವರೆಗೆ ಕನ್ನಡ ಭಾಷಿಕ ಸಮುದಾಯದ ಆಂತರಿಕವಿಕಾಸದಲ್ಲಿ ಒಡಮೂಡಿ ಕೊಂಡು ಬಂದವುಗಳಾಗಿದ್ದವು. ವಸಾಹತುಶಾಹಿಯ ಆಕ್ರಮಣವೆಂಬುದು ಆ ಬೆಳವಣಿಗೆಯ ನೆಲೆಗಳನ್ನು ಆಘಾತಕ್ಕೀಡುಮಾಡಿ ಒಂದು ಕಾಲದವರೆಗೆ ಸ್ಥಗಿತತೆಗೆ ಗುರಿಮಾಡಿತ್ತು. ಆನಂತರದಲ್ಲಿ ಅದು ತನ್ನ ಲೂಟಿಯ ಅಗತ್ಯಗಳಿಗಾಗಿ ಈ ನಾಡಿನೊಳಗೆ ಆಡಳಿತಾತ್ಮಕ, ವಾಣಿಜ್ಯಾತ್ಮಕ, ಕೈಗಾರಿಕಾ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ಆರಂಭಿಸಿದೊಡನೆ, ಈ ಸಮುದಾಯದ ಒಳಗಡೆ ವಸಾಹತುಶಾಹಿ ಆಕ್ರಮಣದಿಂದ ಆಘಾತಕ್ಕೊಳಗಾಗಿ ಪ್ರಜ್ಞಾಹೀನ ಸ್ಥಿತಿಗತಿ ತಲುಪಿದ್ದ ಈ ಪ್ರವೃತ್ತಿಗಳು, ಹೊಸ ಸನ್ನಿವೇಶದಲ್ಲಿ ವಿದೇಶೀ ಆಳ್ವಿಕೆಯ ವಿರುದ್ಧ ರಾಷ್ಟ್ರೀಯತಾ ಸ್ವಾಭಿಮಾನದ ರೂಪದಲ್ಲಿ ವಿಕಸಿತಗೊಂಡವು. ಸುಶಿಕ್ಷಿತ ವರ್ಗವು ಯಾವಾಗಲೂ ಒಂದು ರಾಷ್ಟ್ರೀಯತ್ವದ ಆರಂಭಿಕ ಕಾಲಘಟ್ಟದಲ್ಲಿ, ಅದರ ಆಲೋಚನೆಯ ಎಚ್ಚರಕ್ಕೆ ಮುಂಗೋಳಿಯಾಗಿ ವರ್ತಿಸಿದ್ದನ್ನು ನಾವು ಪ್ರಪಂಚದ ಇತರ ರಾಷ್ಟ್ರೀಯತೆಗಳ ಸಂದರ್ಭದಲ್ಲಿ ಗಮನಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಈ ವರ್ಗವು ಒಂದು ರಾಷ್ಟ್ರೀಯ ಸಮುದಾಯವನ್ನು, ನಿಜಕ್ಕೂ ಅದರ ರಾಷ್ಟ್ರೀಯತ್ವದ ಕಲ್ಪನೆಯಲ್ಲೇ ಒಂದಾಗಿ ಬೆಸೆಯುವ ವಿಚಾರಗಳನ್ನು ಮಂಡಿಸುವ ಹಾಗೂ ಹರಡುವ ಮುಖ್ಯ ವಾಹಕ ಶಕ್ತಿಯನ್ನಾಗಿ ರೂಪುಗೊಳಿಸಿತ್ತು. ಇದರಲ್ಲಿ ಬಹುಪಾಲು ಜನ ಸಮಾಜದ ಮೇಲ್ವರ್ಗದಿಂದ ಬಂದವರಾಗಿದ್ದರೂ ಕೂಡ, ಅದರಲ್ಲಿ ಇತರೆ ಶೂದ್ರ ಜಾತಿಗಳವರು, ಮಹಿಳೆಯರು ಪಾಲುಗೊಳ್ಳತೊಡಗಿದ್ದರಿಂದ ತಾವೆಲ್ಲ ಒಂದು ಪರಂಪರೆಯನ್ನು ಹೊಂದಿದ್ದ ಜನರಾಗಿದ್ದು ಅದು ಈಗ ನಿರಾಕರಿಸಲ್ಪಟ್ಟಿದೆ ಎಂಬ ಆಶಯಗಳನ್ನು ಜನತೆಯ ನಡುವೆ ಹರಡಿಕೊಳ್ಳಲು ಅವಕಾಶ ಏರ್ಪಟ್ಟಿತು.

ಈ ಹಿಂದಿನ ಸಾಂಪ್ರದಾಯಿಕ ಸಮಾಜವು ತನ್ನ ಕಸುಬುಗಳನ್ನು ಹಾಗೂ ವಿದ್ಯೆಯನ್ನು ಜಾತಿ ಪಂಗಡಗಳ ಮುಖಾಂತರವೇ ಒದಗಿಸುತ್ತಿತ್ತು. ಆದರೆ ಆಧುನಿಕ ಶಿಕ್ಷಣ, ಕಾರ್ಖಾನೆ, ಕಛೇರಿ ಮತ್ತು ಇತರ ಸಾಮಾಜಿಕ ವಹಿವಾಟಿನ ಕ್ಷೇತ್ರಗಳು, ಬೇರೆ ಬೇರೆ ಜಾತಿಯವರನ್ನು ಒಂದೇ ಬಗೆಯ ಶಿಕ್ಷಣಕ್ಕೆ, ಔದ್ಯೋಗಿಕ ಸನ್ನಿವೇಶಗಳಿಗೆ, ಆಡಳಿತಾತ್ಮಕ ಜವಾಬ್ದಾರಿಗಳಿಗೆ ಒಳಪಡಿಸುತ್ತಿದ್ದುದರಿಂದ, ಹಾಗೂ ಇವೆಲ್ಲದರ ಹಿಂದೆ ಬ್ರಿಟಿಷರ ಕಡೆಯಿಂದ ಇವರಿಗೆಲ್ಲ ಒಂದೇ ಬಗೆಯ 'ಎರಡನೇ ದರ್ಜೆ' ಮಾನ್ಯತೆ ದೊರಕುತ್ತಿದ್ದುದರಿಂದ, ಇವರೊಳಗಿನ ರಾಷ್ಟ್ರೀಯತಾ ಸಮುದಾಯದ ಕಲ್ಪನೆಗಳನ್ನು ಪುನಶ್ಚೇತನಗೊಳಿಸತೊಡಗಿತು.

ಈ ಶಿಕ್ಷಣ ಕ್ಷೇತ್ರದಲ್ಲಿ, ಮೊದಲ ಸುಶಿಕ್ಷಿತ ವರ್ಗವನ್ನು ಶಿಕ್ಷಕರನ್ನಾಗಿ, ಉದ್ಯೋಗಿಗಳನ್ನಾಗಿ ಅವರ ಹಿಂದಿನ ಪ್ರಾಂತ್ಯ ಮಿತಿಗಳಾಚೆಯೂ ಕರ್ನಾಟಕದ ಬೆ

ಬೇರೆ ಭಾಗಗಳಲ್ಲಿ ನಿಯುಕ್ತಗೊಳಿಸುತ್ತಿದ್ದುದರಿಂದ, ಅದು ಕನ್ನಡ ಭಾಷಿಕ ಸಮಾಜದೊಳಗೆ ರೂಪುಗೊಂಡಿದ್ದ ವಿವಿಧ ಸಮುದಾಯಗಳ ನಡುವೆ ಒಂದು ಮನೋನಿಷ್ಠ ಐಕ್ಯತೆಯನ್ನು ರೂಪಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ಈಗಾಗಲೇ ರೈಲು, ಅಂಚೆ ಮುಂತಾದ ಸಂಪರ್ಕ ಮಾಧ್ಯಮಗಳು, ಅಂತಾರಾಷ್ಟ್ರೀಯ ವಸಾಹತು ಹಿತಾಸಕ್ತಿಯೊಂದಿಗೆ ಬೆಸೆದುಕೊಂಡಿದ್ದ ವಾಣಿಜ್ಯ ಹಾಗೂ ಉತ್ಪಾದಕ ಚಟುವಟಿಕೆಗಳು, ಕನ್ನಡ ಭಾಷಿಕ ಸಮುದಾಯಗಳಿಗೆ ಅಗತ್ಯವಾದ ಸಾಮಾಜಿಕ ಚಲನೆಯ ಭೌತಿಕ ಸನ್ನಿವೇಶಗಳನ್ನು ಒದಗಿಸತೊಡಗಿದ್ದವು. ಹೀಗಾಗಿ ೧೯ನೆಯ ಶತಮಾನದ ಕೊನೆಯ ಹೊತ್ತಿಗೆ ಒಂದು ಆಧುನಿಕ ರಾಷ್ಟ್ರತ್ವದ ಪರಿಕಲ್ಪನೆಯ ಬೀಜಗಳು ಈ ಸಮಾಜದೊಳಗೆ ಬಿತ್ತಲ್ಪಟ್ಟಿದ್ದವು.

ಹೊಸದಾಗಿ ವಿದ್ಯಾವಂತರಾದ ಕರ್ನಾಟಕದ ಮಧ್ಯಮವರ್ಗವು, ಅದರಲ್ಲಿ ಪ್ರಧಾನವಾಗಿ ಬ್ರಾಹ್ಮಣ ಮತ್ತು ಲಿಂಗಾಯತ ಜಾತಿಗಳವರು ಇದನ್ನು ಸಾಂಸ್ಕೃತಿಕ ಚಟುವಟಿಕೆಗಳನ್ನಾಗಿ ಮಾರ್ಪಡಿಸಲು ಸಕ್ರಿಯರಾದರು. ಪತ್ರಿಕೆಗಳು, ಪುಸ್ತಕಗಳು, ಸಭೆ-ಸಂಘಟನೆಗಳು ಮುಂತಾದವೆಲ್ಲ ಇವರ ಮುಂದಾಳುತನದಲ್ಲಿ ೨೦ನೇ ಶತಮಾನದ ಮೊದಲ ದಶಕಗಳಲ್ಲಿ ಸಕ್ರಿಯಗೊಳ್ಳಲಿದ್ದವು. ಹಾಗೆ ಅವರು ಸಕ್ರಿಯಗೊಳ್ಳಲಿದ್ದ ಚಟುವಟಿಕೆಗಳಲ್ಲಿ ಪಾಲುಗೊಳ್ಳಲು ಹಾಗೂ ಆ ಬಗೆಯ ವಿಚಾರಗಳನ್ನು ಗ್ರಹಿಸಿ ಸ್ಪಂದಿಸಲು ಅಗತ್ಯವಾಗಿದ್ದ , ಹೊಸ ಶಿಕ್ಷಣದಡಿಯಲ್ಲಿ ರೂಪುಗೊಂಡಿದ್ದ ಒಂದು ಮಧ್ಯಮ ವರ್ಗಾಧಾರಿತ ಬುದ್ಧಿಜೀವಿ ಹಾಗೂ ಸುಶಿಕ್ಷಿತ ಜನಸಮುದಾಯವು, ೧೯ನೇ ಶತಮಾನದ ಕಡೆಯ ಭಾಗದ ಹೊತ್ತಿಗೆ ಕನ್ನಡ ಭಾಷಿಕ ಸಮುದಾಯಗಳೊಳಗೆ ರೂಪುಗೊಳ್ಳತೊಡಗಿತ್ತು ಎಂಬುದನ್ನು ಈ ಹಂತದಲ್ಲಿ ಗುರುತಿಸಬಹುದಾಗಿದೆ.

ಕರ್ನಾಟಕತ್ವದ ಪರಿಕಲ್ಪನೆಯಲ್ಲಿ ಬ್ರಾಹ್ಮಣ ಹಾಗೂ ಲಿಂಗಾಯತ ಜಾತಿಗಳಿಂದ ಬಂದಿದ್ದ ಸುಶಿಕ್ಷಿತ ವರ್ಗಗಳು ೨೦ನೇ ಶತಮಾನದ ಆದಿಭಾಗದಲ್ಲಿ ಬಹಳ ಸಕ್ರಿಯಗೊಂಡು ಮುಂದುವರೆಯಲು, ಇತರ ಜನವರ್ಗಗಳನ್ನು ಈ ವಿಷಯದೊಳಗೆ ಸಂಘಟಿಸಲು ಪ್ರಯತ್ನಗಳನ್ನು ಆರಂಭಿಸಲು, ಕೆಲ ಭೌತಿಕಾಂಶಗಳ ಪ್ರೇರಣೆ ಇತ್ತು. ಇವೆರಡೂ ಜಾತಿಗಳು ತಮ್ಮ ಪಾರಂಪರಿಕ ಸ್ಥಾನಮಾನಗಳನ್ನು ಹೊಸ ಸನ್ನಿವೇಶದಲ್ಲಿ ಪೂರ್ತಿಯಾಗಿ ಅಲ್ಲದಿದ್ದರೂ ಒಂದು ಹಂತದವರೆಗೆ ಕಳೆದು ಕೊಂಡವರಾಗಿದ್ದರು. ವಸಾಹತುಶಾಹಿ ಏರ್ಪಡಿಸಿದ ಭೌಗೋಳಿಕ ಬೇರ್ಪಡೆಗಳು ಈ ಜಾತಿಗಳನ್ನು ಬೇರೆ ಬೇರೆ ರಾಜ್ಯಗಳ ಬಹುಸಂಖ್ಯಾತರ ನಡುವೆ ಅಲ್ಪಸಂಖ್ಯಾತರನ್ನಾಗಿ ಇರಿಸಿದ್ದು, ಅಲ್ಲಿ ಆಗ ಏರ್ಪಟಿದ್ದ ಔದ್ಯೋಗಿಕ ಹಾಗೂ ಆಡಳಿತಾತ್ಮಕ ಅವಕಾಶಗಳಲ್ಲಿ ಸರಿಯಾದ ಪ್ರಾತಿನಿಧ್ಯವಿಲ್ಲದವರ ಪರಿಸ್ಥಿತಿಗೆ ಗುರಿಮಾಡಿದ್ದವು. ಉದಾಹರಣೆಗೆ ಮೈಸೂರು ಸಂಸ್ಥಾನ ಪ್ರಾಂತ್ಯದ ಬ್ರಾಹ್ಮಣರು ತಮಿಳು ಬ್ರಾಹ್ಮಣರ ಪ್ರಾಬಲ್ಯ ದಡಿಯಲ್ಲಿಯೂ, ಮುಂಬೈ ಕರ್ನಾಟಕದ ಬ್ರಾಹ್ಮಣ ಹಾಗೂ ಲಿಂಗಾಯತರು

ಮರಾಠಾ ಬ್ರಾಹ್ಮಣರ ಪ್ರಾಬಲ್ಯದಡಿಯಲ್ಲಿಯೂ, ಮದ್ರಾಸ್ ಪ್ರಾಂತ್ಯದ ಕನ್ನಡ ಪ್ರದೇಶಗಳಲ್ಲಿ ಅಲ್ಲಿನ ಬ್ರಾಹ್ಮಣರು ತೆಲುಗು ಹಾಗೂ ತಮಿಳು ಬ್ರಾಹ್ಮಣರ ಪ್ರಾಬಲ್ಯದ ನಡುವೆಯೂ ತೀವ್ರ ಸ್ಪರ್ಧೆಗೆ ಹಾಗೂ ಅವಕಾಶವಂಚಿತ ಪರಿಸ್ಥಿತಿಗೆ ಗುರಿಯಾಗಿದ್ದರು. ಇದು ಮುಂಬೈ ಕರ್ನಾಟಕದ ವಿಷಯದಲ್ಲಂತೂ ಮತ್ತಷ್ಟು ಸ್ಪಷ್ಟವಾಗಿ ಕಾಣಬಹುದಾಗಿತ್ತು. ತಮ್ಮ ಪರಂಪರೆಯಿಂದಲೇ ಕನ್ನಡ ಭಾಷೆಯನ್ನು ತಮ್ಮ ಹೊಸ ಆಶಯಗಳ ಸಂವಹನಕ್ಕೆ ಬಳಸುತ್ತಾ ಬಂದಿದ್ದ, ಶರಣ ಚಳುವಳಿ ಪರಂಪರೆಯ ಲಿಂಗಾಯತ ಜಾತಿಗಳು ಆಧುನಿಕ ಸಂದರ್ಭದಲ್ಲಿ ಮರಾಠಿ ಭಾಷೆಯ ಒತ್ತಡಕ್ಕೆ ಗುರಿಯಾದವು. ಅದರೊಂದಿಗೆ ಈಗ ಇಂಗ್ಲಿಷ್ ಭಾಷೆಯ ಒತ್ತಡಕ್ಕೂ ಗುರಿಯಾಗಿದ್ದವು. ಕರ್ನಾಟಕದ ಸಂದರ್ಭದಲ್ಲಿ ನಾವು ಹೇಳುವುದಾದರೆ, ಕನ್ನಡದಲ್ಲಿ ಶಿಕ್ಷಣವನ್ನು ಕೊಡುವ ಜವಾಬ್ದಾರಿಯನ್ನು ೧೨ನೇ ಶತಮಾನದ ನಂತರದ ಅವಧಿಗಳಲ್ಲಿ ನಿರ್ವಹಿಸುತ್ತಾ ಬಂದಿದ್ದು ಈ ಲಿಂಗಾಯತ ಪರಂಪರೆಯ 'ಐಯಗಳ ಮಠ' ಎಂದು ಕರೆಯಲ್ಪಡುತ್ತಿದ್ದ ಕೇಂದ್ರಗಳು. ಸಂಸ್ಕೃತ ಶಿಕ್ಷಣವನ್ನು ಕೊಡುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದವರು ಬ್ರಾಹ್ಮಣರು.

ನಾವು ಈ ಹಿಂದಿನ ಅಧ್ಯಾಯಗಳಲ್ಲಿ ಗುರುತಿಸುವಂತೆ ಕನ್ನಡ ಸಮುದಾಯದ ರಾಷ್ಟ್ರೀಯತಾ ವರ್ತಕ ವರ್ಗಗಳು ರೂಪುಗೊಳ್ಳುತ್ತಾ ಬಂದಿದ್ದು ಈ ಲಿಂಗಾಯತ ಪರಂಪರೆಯ ಪಂಗಡಗಳಿಂದ. ಮುಂಬೈ ಕರ್ನಾಟಕದಲ್ಲಿ ಮರಾಠಾ ವರ್ತಕರ ಸಂಖ್ಯಾ ಬಾಹುಳ್ಯದ ನಡುವೆ, ಲಿಂಗಾಯತ ವರ್ತಕ ಪಂಗಡದವರು ತಮ್ಮ ಮೊದಲಿನ ಪ್ರಾಬಲ್ಯದ ನೆಲೆಗೆ ಏರಲು ತೀವ್ರ ಬಗೆಯ ಪೈಪೋಟಿಯನ್ನು ಎದುರಿಸಬೇಕಾಗಿ ಬಂದಿತ್ತು. ಇಂತಹ ಸನ್ನಿವೇಶದಲ್ಲಿ ಕರ್ನಾಟಕದ ಸ್ಥಳೀಯ ಮಾರುಕಟ್ಟೆ ಹಾಗೂ ಸ್ಥಳೀಯ ಆಡಳಿತಾತ್ಮಕ ಪಾಲು ಮುಂತಾದ ಪ್ರಶ್ನೆಗಳು ಬ್ರಾಹ್ಮಣ ಮತ್ತು ಲಿಂಗಾಯತ ಜಾತಿಗಳ ಮೊದಲ ಸುಶಿಕ್ಷಿತ ಗುಂಪನ್ನು ಕನ್ನಡ 'ಕರ್ನಾಟಕತ್ವ'ದ ಪ್ರಶ್ನೆಗಾಗಿ ಸಕ್ರಿಯಗೊಳ್ಳುವಂತೆ ಪ್ರೇರೇಪಿಸಿತು. ಅದು ಮೊದಲಿಗೆ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪ್ರಯತ್ನಗಳಲ್ಲೇ ಕಂಡು ಬಂದಿತು.

ಕನ್ನಡ ಭಾಷೆಯ ಶಾಲೆಗಳನ್ನು ಹೆಚ್ಚು ಮಾಡುವುದಕ್ಕಾಗಿ ಅಲ್ಲಿ ನಡೆದ ಪ್ರಯತ್ನಗಳನ್ನು ನಾವು ಈ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಹಾಗಾಗಿ ಮೈಸೂರು ಪ್ರಾಂತ್ಯದ ಬ್ರಾಹ್ಮಣ ಮತ್ತು ಲಿಂಗಾಯತರಿಂದ ಮೊದಲು, ತಾವು ಬೇರೆ ಭಾಷಿಕ ಸಮುದಾಯಗಳ ನಡುವೆ ಅಲ್ಪಸಂಖ್ಯಾತರ ಸ್ಥಾನದಲ್ಲಿ ಪೈಪೋಟಿಯನ್ನು ಎದುರಿಸಬೇಕಾಗಿದ್ದ ಮುಂಬೈ ಕರ್ನಾಟಕ ಹಾಗೂ ಮದರಾಸ್ ಪ್ರಾಂತ್ಯದ ಒಳಗಡೆ, 'ಕರ್ನಾಟಕತ್ವ'ದ ಆಶಯ ಅದರ ಆಧುನಿಕ ಪರಿಕಲ್ಪನೆಯಲ್ಲಿ ಮೊದಲ ಬಾರಿಗೆ ಹೆಚ್ಚು ಸಕ್ರಿಯವಾಗಿ, ಹೆಚ್ಚು ನಿಶ್ಚಿತವಾಗಿ ಪ್ರಕಟಗೊಳ್ಳಲು ಅವಕಾಶವಾಯಿತು. ಮೈಸೂರು ಸಂಸ್ಥಾನದಲ್ಲಿ ಈ ಪ್ರಜ್ಞೆ ನಿಧಾನವಾಗಿ ರೂಪುಗೊಳ್ಳಲು ಕಾರಣ ವೇನೆಂದರೆ, ಅದು ಕನ್ನಡ ಭಾಷಿಕರೇ ಬಹುಸಂಖ್ಯಾತರಾಗಿದ್ದ ಸಮುದಾಯವಾಗಿದ್ದು, ಅಲ್ಲಿ

12

'ಕರ್ನಾಟಕತ್ವ'ದ ಪ್ರಜ್ಞೆ ಎಂಬುದು ಭಾಷಾವಾರು ಪ್ರಾಂತ್ಯ ರಚನೆಯ ಬೇಡಿಕೆ ಹಾಗೂ ಕನ್ನಡ ಶಿಕ್ಷಣದ ಹರಡುವಿಕೆ ಎಂಬ ರೂಪಗಳನ್ನು ಪಡೆದುಕೊಳ್ಳದೆ, ೨೦ನೇ ಶತಮಾನದ ಮೊದಲ ದಶಕಗಳಲ್ಲಿ, ಲಿಂಗಾಯತ ಹಾಗೂ ಒಕ್ಕಲಿಗ ಜಾತಿ ಸಮುದಾಯಗಳ ಪ್ರಾತಿನಿಧ್ಯ ಪ್ರಶ್ನೆಯಾಗಿ, ಬ್ರಾಹ್ಮಣ ವಿರೋಧಿ ಆಶಯವಾಗಿ ಕಾಣಿಸಿಕೊಂಡಿತು. ಅದು ತನ್ನ ಸತ್ವದಲ್ಲಿ ರಾಷ್ಟ್ರೀಯತಾಸಮುದಾಯದ ಪ್ರಜಾತಾಂತ್ರೀಕರಣ ಪ್ರಕ್ರಿಯೆಯ ಆಶೋತ್ತರವಾಗಿದ್ದರೂ, ನಿರ್ದಿಷ್ಟವಾಗಿ ಕರ್ನಾಟಕದ ರಚನೆ, ಕನ್ನಡ ಭಾಷೆಗಾಗಿ ಪ್ರಯತ್ನಗಳು ಎಂಬಂತಹ ರೂಪವನ್ನು ಆರಂಭದಲ್ಲಿ ತಳೆಯಲು, ಉತ್ತರ ಕರ್ನಾಟಕ ಹಾಗೂ ಮದರಾಸ್ ಕರ್ನಾಟಕದ ರಾಜಕೀಯ - ಆರ್ಥಿಕ ಸನ್ನಿವೇಶಗಳ ರೀತಿಯ ಪ್ರಚೋದನೆಯನ್ನು, ಆ ನಿರ್ದಿಷ್ಟ ಕಾಲಘಟ್ಟದಲ್ಲಿ ಹೊಂದಿರಲಿಲ್ಲ ಎಂಬುದನ್ನು ನಾವು ಗಮನಿಸಬಹುದು. ಆದರೆ ಇದು ದಿವಾನಗಿರಿಯ ಪ್ರಶ್ನೆಯಲ್ಲಿ ಮಾತ್ರ ಮದರಾಸೀ ಬ್ರಾಹ್ಮಣರ ಏಕಸ್ವಾಮ್ಯಕ್ಕೆ ವಿರುದ್ಧ ವಾಗಿ, ಮೈಸೂರು ಬ್ರಾಹ್ಮಣರು ಎಂಬ ರೂಪವನ್ನು ಪಡೆದುಕೊಂಡಿತ್ತಾದರೂ, ಅದು ಸ್ಥಳೀಯ ಮಾರುಕಟ್ಟೆಯ ಪ್ರಶ್ನೆಯನ್ನು, ವಿಶಾಲ ಜನಸಮೂಹಗಳ ಆಶೋತ್ತರಗಳ ಸಮಸ್ಯೆಯನ್ನು ಒಳಗೊಂಡಿರದೆ, ಊಳಿಗಮಾನ್ಯ ಕುಲೀನ ಜಾತಿಗಳ ನಡುವೆ ಆಡಳಿತಾತ್ಮಕ ಸ್ಥಾನಗಳಿಗಾಗಿ ನಡೆದ ಪೈಪೋಟಿ ಮಾತ್ರವಾಗಿತ್ತಾದ್ದರಿಂದ, ಅದು ದೊಡ್ಡ ಸಾಮೂಹಿಕ ಪ್ರಯತ್ನಗಳ ರೂಪವನ್ನು ಪಡೆದುಕೊಳ್ಳಲಿಲ್ಲ. ಹೀಗಿದ್ದರೂ 'ಮೈಸೂರು ಬ್ರಾಹ್ಮಣರು' ಎಂದು ಮದರಾಸೀ ಬ್ರಾಹ್ಮಣರ ಪ್ರಾಬಲ್ಯದ ಎದುರು ಬೇಡಿಕೆ ಮಂಡಿಸಿದ್ದು ಒಂದು ಸ್ಥಾನಿಕತೆಯ ಆಶಯವನ್ನೇ ಸೂಚಿಸುತ್ತಿದ್ದು, ಅದು 'ಕರ್ನಾಟಕತ್ವ'ದ ಆಶೋತ್ತರಗಳ ಮತ್ತೊಂದು ರೂಪವಾಗಿತ್ತು ಎಂಬುದನ್ನು ಗಮನಿಸಬಹುದಾಗಿದೆ.

ಈ ಬಗೆಯಲ್ಲಿ ಹೊಸ ವಿದ್ಯಾವಂತ ವರ್ಗ ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ರೂಪುಗೊಂಡೊಡನೆ, ಅದು ವಸಾಹತುಶಾಹಿ ಬಂಡವಾಳದ ಅಂಗವಾಗಿ ಬಂಡವಾಳಶಾಹಿ ಸಂಬಂಧಗಳ ಜಾಲದೊಳಕ್ಕೆ ಹೆಣೆಯಲ್ಪಡತೊಡಗಿದ್ದು, ಆಯಾ ಪ್ರಾಂತ್ಯದ ನಿರ್ದಿಷ್ಟ ಸನ್ನಿವೇಶಗಳಿಗನುಸಾರವಾಗಿ 'ಕರ್ನಾಟಕತ್ವ'ದ ಪರಿಕಲ್ಪನೆಯನ್ನು ಆಧುನಿಕ ರೀತಿಯಲ್ಲಿ ಮಂಡಿಸಲು ಪ್ರಯತ್ನಿಸತೊಡಗಿದ್ದುದನ್ನು ಗುರುತಿಸುತ್ತೇವೆ.

ಈ ಅಂಶವನ್ನು ಮುಂಬೈ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಹೀಗೆ ಸೂಚಿಸಬಹುದು : ''ಮುಂಬೈ ಕರ್ನಾಟಕದ ಸಾಮಾಜಿಕ ಹಾಗೂ ಆರ್ಥಿಕ ಅವಸ್ಥಾಂತರಗಳು ಈ ಭಾಗದ ಕನ್ನಡಿಗರಲ್ಲಿ ಸಾಂಸ್ಕೃತಿಕವಾಗಿ ತಮ್ಮತನದ ಅರಿವನ್ನು ಮೂಡಿಸಲು ಕಾರಣವಾದವು. ಕಳೆದ ಶತಮಾನವಿಡೀ ಇವರು ಎದುರುಗೊಂಡ ತೊಡಕುಗಳ ಪರಿಣಾಮವಾಗಿ ೧೯೪೭ರ ಭಾರತದ ಸ್ವಾತಂತ್ರ್ಯ ಹಾಗೂ ೧೯೫೬ರ ವಿಭಜಿತ ಕನ್ನಡ ಪ್ರದೇಶಗಳ ಒಂದುಗೂಡಿಸುವ ಸಾಕಾರತೆಗೆ ಸಜ್ಜುಗೊಳ್ಳಲು ಅನುಕೂಲವಾಯಿತು. ಈ ಭಾಗದಲ್ಲಿ ಆಗುತ್ತಿದ್ದ ಸಾಮಾಜಿಕ ಹಾಗೂ ಆರ್ಥಿಕ

ಪಲ್ಲಟಗಳಿಗೂ ಕನ್ನಡದ ಇತರೆ (ಉಳಿದ ನಾಲ್ಕು ಘಟಕಗಳಲ್ಲಿ) ಛಿದ್ರಗೊಂಡ ಪ್ರದೇಶಗಳಿಗೂ ಸಾಕಷ್ಟು ವ್ಯತ್ಯಾಸಗಳಿದ್ದವು. ಅಂದರೆ ಬ್ರಿಟಿಷ್ ಕರ್ನಾಟಕದಲ್ಲಿನ ಜನರ ತುಡಿತಕ್ಕೂ ಮೈಸೂರು ಸಂಸ್ಥಾನೀ ಜನರ ತುಡಿತಕ್ಕೂ, ಬಹಳ ಭಿನ್ನತೆಗಳಿವೆ. ಮೈಸೂರು ಸಂಸ್ಥಾನವು ಮಹಾರಾಜರ, ದಿವಾನರುಗಳ ಆಡಳಿತದ ಅನೇಕ ಕುಂದುಕೊರತೆಗಳನ್ನು ಮೀರಿ ಅಭಿವೃದ್ಧಿಯ ಕಡೆಗೆ ದಾಪುಗಾಲು ಹಾಕುತ್ತಿತ್ತು. ಇದೇ ಸಂದರ್ಭದಲ್ಲಿ ಮುಂಬೈ- ಕನ್ನಡಿಗರು ಭಿನ್ನ ಭಾಷಿಕರ ನಡುವೆ ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳುವ ತುರ್ತಿನಲ್ಲಿ ಸಿಲುಕಿದ್ದರು. ಹೀಗಾಗಿ ಆರ್ಥಿಕ ಅಭಿವೃದ್ಧಿ ಕಡೆಗೆ ಹೆಚ್ಚಿನ ಗಮನ ಹರಿದಿರಲಿಲ್ಲ. ಆದರೆ ೧೯ನೇ ಶತಮಾನದ ಅಂತ್ಯದ ವೇಳೆಗೆ ರಸ್ತೆ -ರೈಲು ಮಾರ್ಗಗಳಿಂದಾಗಿ ಸಾಮಾಜಿಕ ಆರ್ಥಿಕ ಸುಧಾರಣೆಗಳಾಗುವುದರ ಜೊತೆಗೆ ಸಾಂಸ್ಕೃತಿಕವಾಗಿಯೂ ಪಕ್ವವಾಗುವಂತೆ ಮಾಡಿದ್ದವು''.[3]

ಈ ಬಗೆಯ ಬೆಳವಣಿಗೆಗಳು ಶೈಕ್ಷಣಿಕವಾಗಿ ಕರ್ನಾಟಕದ ಜನ ಸಮುದಾಯದೊಳಗೆ ಉಂಟಾಗುತ್ತಿದ್ದ ಸಮಯದಲ್ಲೇ, ಹೊಸವಿಚಾರಗಳು ಇತರರ ನಡುವೆ, ದೂರದ ಪಶ್ಚಿಮದಿಂದ ಮಾತ್ರವಲ್ಲ, ನೆರೆಯ ಬ್ರಿಟಿಷ್ ಇಂಡಿಯಾ ಪ್ರದೇಶಗಳಾದ ಮುಂಬೈ, ಮದರಾಸುಗಳಿಂದಲೂ ಬಂದವು. ಸುಶಿಕ್ಷಿತ ವರ್ಗ ಸಮರ್ಥವಾಗಿ ತಯಾರಾಗುವುದಕ್ಕೆ ಅನುವಾಗುವಂತೆ ಕನ್ನಡ ಭಾಷೆಗೆ ಆಧುನಿಕ ಮುದ್ರಣದ ಸೌಲಭ್ಯವು ಬಂದು ಕೂಡಿಕೊಂಡಿತ್ತು. ೧೯ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಮುದ್ರಣಯಂತ್ರದ ಆಗಮನದಿಂದ ಕನ್ನಡವು ಆಧುನಿಕ ಮುದ್ರಣ ಮಾಧ್ಯಮವನ್ನು ಪಡೆದುಕೊಂಡು ಆಧುನಿಕ ಮುದ್ರಿತ ಭಾಷೆಗಳ ನೆಲೆಗೆ ಏರಿತು. ಈ ಅಂಶವನ್ನು ಡಾ. ಸೆಬಾಷ್ಟಿಯನ್ ಜೋಸೆಫ್ ಹೀಗೆ ಹೇಳುತ್ತಾರೆ :

''ಮಿಷನರಿಗಳು ಮೈಸೂರಿನ ಜನತೆಗೆ ಮಾಡಿದ ಸೇವೆಗಳಲ್ಲೊಂದು ಮುದ್ರಣಾಲಯದ ಸ್ಥಾಪನೆ. ಇದರ ಕೀರ್ತಿಯು ರೆವೆರೆಂಡ್ ಗ್ಯಾರೆಟ್‌ನಿಗೆ ಸಲ್ಲುತ್ತದೆ. ಮೊದಲನೆ ಮುದ್ರಣಾಲಯವು ಸುಮಾರು ೧೮೪೦ರಲ್ಲಿ ಮಿಷನ್ನಿನ ಶಾಲಾ ಕಟ್ಟಡದಲ್ಲಿ ಕಾರ್ಯಾರಂಭ ಮಾಡಿತು. ಅನೇಕ ಶಾಲಾ ಪುಸ್ತಕಗಳು ಇಲ್ಲಿಂದ ಪ್ರಕಟವಾದವು. ಸ್ಯಾಂಡರ್‌ಸನ್ ಮತ್ತು ಇನ್ನೊಬ್ಬ ಮಿಷನರಿ ಕೂಡಿ ಒಂದು ಕನ್ನಡ - ಇಂಗ್ಲಿಷ್ ನಿಘಂಟನ್ನು ಸಂಪಾದಿಸಿದರು. ಗೌರ್ನಮೆಂಟ್ ಕನ್ನಡ ಪ್ರೆಸ್ ೧೮೪೧-೪೨ರಲ್ಲಿಯೂ, ಇಂಗ್ಲಿಷ್ ಪ್ರೆಸ್ ೧೮೫೮ರಲ್ಲಿಯೂ ಪ್ರಾರಂಭವಾದವು. ಇವುಗಳ ಉದ್ದೇಶ ಅಗ್ಗದ ಬೆಲೆಗೆ ಶಾಲಾ ಮಕ್ಕಳ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದು. ಮುದ್ರಣಾಲಯಗಳು ಬಂದುದರಿಂದ ಪಠ್ಯಪುಸ್ತಕಗಳು ಮತ್ತು ಸಾಮಾನ್ಯಜ್ಞಾನ ವಿಷಯ ಪುಸ್ತಕ ಮಾಧ್ಯಮಗಳ ಮೂಲಕ ಜನತೆಗೆ ಪರೋಕ್ಷವಾಗಿ ಜ್ಞಾನವನ್ನು ನೀಡುವುದು ಸಾಧ್ಯವಾಯಿತು''.[4]

ಮುದ್ರಣಾಲಯದ ಆಗಮನ ಒಂದು ಸಮುದಾಯದ ನಡುವೆ ಭಾಷೆಯೊಂದರ ಸಾಮಾನ್ಯರೂಪ ಹಾಗೂ ಸಾಮೂಹಿಕ ಪ್ರಸಾರಗಳಿಗೆ ಬಹಳ

ಅತ್ಯಗತ್ಯವಾದ ಅವಕಾಶಗಳನ್ನು ಕಲ್ಪಿಸುತ್ತದೆ. ಬೆನೆಡಿಕ್ಟ್ ಆಂಡರ್‌ಸನ್ , ಆಧುನಿಕ ರಾಷ್ಟ್ರತ್ವಗಳ ಕಲ್ಪನೆಯಲ್ಲಿ ಮುದ್ರಣ ಭಾಷೆಯ ಪ್ರಾಮುಖ್ಯತೆಯನ್ನು ಇನ್ನಿಲ್ಲದಷ್ಟು ಒತ್ತಿ ಹೇಳಿದ್ದಾರೆ. ಮುದ್ರಣ ಬಂಡವಾಳಶಾಹಿಯ ಅಸ್ತಿತ್ವವಿಲ್ಲದೇ ಆಧುನಿಕ ರಾಷ್ಟ್ರತ್ವದ ಪರಿಕಲ್ಪನೆ ಹರಡುವುದು ಯುರೋಪಿನಲ್ಲಿ ಸಾಧ್ಯವಿರಲಿಲ್ಲ ಎಂಬುದು ಈತನ ಅಭಿಪ್ರಾಯ. ಅಂತಹ ಒಂದು ಪೂರ್ವಾವಶ್ಯಕತೆ ಕನ್ನಡ ರಾಷ್ಟ್ರೀಯತೆಯ ನಡುವೆ ೧೯ನೇ ಶತಮಾನದ ಪೂರ್ವಾರ್ಧದಲ್ಲಿ ಒದಗಿ, ಈಗಾಗಲೇ ರಾಷ್ಟ್ರೀಯತೆ ಆಶೋತ್ತರಗಳಿಗೆ ವಸಾಹತುಶಾಹಿ ಲೂಟಿಯ ಹಿನ್ನೆಲೆಯಲ್ಲಿ ಸಂಚಲನೆಗೊಳಗಾಗಿದ್ದ ಜನಸಮುದಾಯಗಳಿಗೆ ತಮ್ಮನ್ನು ವಿಸ್ತೃತವಾಗಿ ಸಂವಹನಕ್ಕೊಳಪಡಿಸಿಕೊಳ್ಳಲು, ವಿವಿಧ ಪ್ರಾಂತ್ಯಗಳ ನಡುವೆ ಒಂದು ಸಾಮಾನ್ಯ ಕೇಂದ್ರಬಿಂದುವನ್ನು ರೂಪಿಸಿಕೊಳ್ಳಲು ಹಾಗೂ ಉದಯವಾಗಲಿದ್ದ ಆಧುನಿಕ ಕನ್ನಡ ಶೈಕ್ಷಣಿಕ ಕೇಂದ್ರಗಳಿಗೂ ಕರ್ನಾಟಕದ ಇತರೆ ಪ್ರಾಂತ್ಯಗಳಿಗೂ ಸಂಯೋಜನೆ ಏರ್ಪಡಿಸಿಕೊಳ್ಳುವುದಕ್ಕೂ ಒಂದು ತಳಹದಿ ಸಾಧನ ನಿರ್ಮಾಣವಾಯಿತು.

ಮುದ್ರಣಾಲಯದ ಆಗಮನದೊಂದಿಗೆ ಕನ್ನಡದಲ್ಲಿ ಪತ್ರಿಕೆಗಳ ಪ್ರಕಟಣೆಯೂ ಆರಂಭವಾಯಿತು. ಮೈಸೂರಿನಲ್ಲಿ ಮುದ್ರಣಾಲಯದ ಪ್ರಾರಂಭವಾದದ್ದು ೧೮೫೦ರಲ್ಲಿ. ಮೈಸೂರಿನಲ್ಲಿ ಪ್ರಕಟವಾದ ಮೊದಲ ವೃತ್ತಪತ್ರಿಕೆ 'ಬೆಂಗಳೂರು ಹೆರಾಲ್ಡ್'. 'ಮೈಸೂರು ವೃತ್ತಾಂತ ಬೋಧಿನಿ' ಎಂಬ ಒಂದು ಇಂಗ್ಲಿಷ್ -ಕನ್ನಡ ಪತ್ರಿಕೆಯು ೧೮೫೯ರ ಹೊತ್ತಿಗೆ ಆರಂಭವಾಗಿತ್ತು. ೧೮೬೨ರಲ್ಲಿ 'ಅರುಣೋದಯ' ಎಂಬ ಇಂಗ್ಲಿಷ್-ಕನ್ನಡ ಪತ್ರಿಕೆ, ೧೮೬೩ರಲ್ಲಿ 'ಖಾಸಿಂ-ಅಲ್-ಅಖ್ಬಾರ್' ಎಂಬ ಹಿಂದೂಸ್ಥಾನೀ ಪತ್ರಿಕೆ ಪ್ರಕಟವಾಗುತ್ತಿತ್ತು.

ಮೊತ್ತ ಮೊದಲ ಕನ್ನಡ ವಾರಪತ್ರಿಕೆ 'ಕರ್ನಾಟಕ ಪ್ರಕಾಶಿಕಾ' ೧೮೬೫ರಲ್ಲಿ ಪ್ರಕಟವಾಯಿತು. ಸಂಸ್ಥಾನದ ಒಳಕ್ಕೆ ನುಸುಳಿಕೊಂಡು ಬರುತ್ತಿದ್ದ ಮೈಸೂರೇತರರನ್ನು ವಿರೋಧಿಸಿ ಕೆಲಸ ಮಾಡುತ್ತಿದ್ದ ಮೈಸೂರು ಪಕ್ಷದ ಧೋರಣೆಯನ್ನು ಸಮರ್ಥಿಸುವುದು ಅದರ ನೀತಿ. ಮೈಸೂರು ಸರ್ಕಾರದ ಪತ್ರಿಕೆ 'ಮೈಸೂರು ಗೆಜೆಟ್' ೧೮೬೬ರಲ್ಲಿ ಪ್ರಕಟವಾಯಿತು.

೧೮೮೧ರಲ್ಲಿ ಮೈಸೂರು ಸಂಸ್ಥಾನದ ಆಡಳಿತವು ಕಮಿಷನರ್‌ಗಳ ಕೈಯಿಂದ ಮೈಸೂರು ಒಡೆಯರ ಕೈಗೆ ಮರಳಿದ ಮೇಲೆ ಕನ್ನಡ ಪತ್ರಿಕೆಗಳ ಸಾರ್ವಜನಿಕಾಭಿಪ್ರಾಯ ಹೆಚ್ಚು ಸ್ವತಂತ್ರವಾಗಿ ಪ್ರಕಟವಾಗತೊಡಗಿತು ಎಂದು ನಾಡಿಗ ಕೃಷ್ಣಮೂರ್ತಿ ಅಭಿಪ್ರಾಯಪಡುತ್ತಾರೆ.[5]

ಮೊತ್ತಮೊದಲ ಕನ್ನಡ ಮಾಸಪತ್ರಿಕೆ 'ಹಿತಬೋಧನೆ' ೧೮೮೧ರಲ್ಲಿ ಮೈಸೂರಿನಿಂದ ಪ್ರಕಟವಾಯಿತು. ಸಾಹಿತ್ಯಗುಣದ ಮಾಸಪತ್ರಿಕೆಗಳಾದ 'ಕಾವ್ಯ ಮಂಜರಿ' ಹಾಗೂ 'ಗ್ರಂಥಮಾಲೆ' ಕೂಡ ಈ ಅವಧಿಯಲ್ಲಿ ಆರಂಭವಾದವು.

ಕರ್ನಾಟಕದ ಮೊದಲನೆಯ ದಿನಪತ್ರಿಕೆ ೧೮೮೮ರಲ್ಲಿ 'ಸೂರ್ಯೋದಯ ಪ್ರಕಾಶಿಕಾ' ಎಂಬ ಹೆಸರಿನಿಂದ ಮೈಸೂರಲ್ಲಿ ಆರಂಭವಾಯಿತು. ೧೮೯೪ರಲ್ಲಿ 'ದೇಶಾಭಿಮಾನಿ' ಎಂಬ ಕನ್ನಡ ವಾರಪತ್ರಿಕೆ ಆರಂಭವಾಯಿತು. 'ವೃತ್ತಾಂತ ಪತ್ರಿಕೆ' ಎಂಬುದು ವೆಸ್ಲಿಯನ್ ಮಿಷನ್‌ಅವರಿಂದ ಸ್ಥಾಪಿಸಲ್ಪಟ್ಟಿತು.

೧೯೦೦ರಲ್ಲಿ 'ಸ್ಟಾರ್' ಎಂಬ ಕನ್ನಡ ವಾರಪತ್ರಿಕೆಯನ್ನು ಯಜಮಾನ್ ವೀರಬಸಪ್ಪ ಆರಂಭಿಸಿದರು. ಹಿಂದುಳಿದ ಸಮಾಜಗಳ ಧೋರಣೆಯನ್ನು ಅದು ಬಿಂಬಿಸುತ್ತಿತ್ತು.

ರಾಷ್ಟ್ರೀಯತೆಯ, ದೇಶಭಕ್ತಿಯ, ಪ್ರಜಾಸತ್ತಾತ್ಮಕ ಆದರ್ಶಗಳನ್ನು ಪ್ರಚಾರ ಮಾಡಲು ಎಂ. ವೆಂಕಟಕೃಷ್ಣಯ್ಯನವರು ಕನ್ನಡ ವಾರಪತ್ರಿಕೆ 'ವೃತ್ತಾಂತ ಚಿಂತಾಮಣಿ' ಯನ್ನು ೧೮೮೫ರಲ್ಲಿ ಪ್ರಾರಂಭಿಸಿದರು. ಇವಲ್ಲದೆ ಇಂಗ್ಲಿಷಿನಲ್ಲಿ ಹಲವಾರು ಪತ್ರಿಕೆಗಳನ್ನು ಅವರು ಸ್ಥಾಪಿಸಿದರು. ಅವುಗಳಲ್ಲಿ 'ಮೈಸೂರು ಹೆರಾಲ್ಡ್' ಸಾಕಷ್ಟು ಜನಪ್ರಿಯವಾಗಿತ್ತು.

೧೮೮೫ರಲ್ಲಿ ಬೆಂಗಳೂರಿನಲ್ಲಿ 'ಕನ್ನಡ ನಡೆಗನ್ನಡಿ' ಎಂಬುದು ಸ್ಥಾಪಿತ ವಾಯಿತು. ಅದೊಂದು ಜನಪ್ರಿಯವಾದ ಪತ್ರಿಕೆಯಾಗಿತ್ತು. ಈ ಪತ್ರಿಕೆಯನ್ನು ಆರಂಭಿಸಿದ ಎಂ. ಗೋಪಾಲ ಅಯ್ಯಂಗಾರ್ ಸೋದರರು ಮೈಸೂರು ಕರ್ನಾಟಕದ ಪ್ರಥಮ ಪೂರ್ಣಸಮಯದ ಪತ್ರಿಕೋದ್ಯಮಿಗಳು ಎಂದು ನಾಡಿಗ ಕೃಷ್ಣಮೂರ್ತಿ ಹೇಳುತ್ತಾರೆ.'ವಿಶ್ವಕರ್ನಾಟಕ' ಎಂಬ ರಾಷ್ಟ್ರೀಯ ವಾರಪತ್ರಿಕೆಯನ್ನು ತಿರುಮಲೆ ತಾತಾಚಾರ್ಯ ಶರ್ಮ ೧೯೨೧ರಲ್ಲಿ ಸ್ಥಾಪಿಸಿದರು. ೧೯೨೫ರಲ್ಲಿ 'ತಾಯಿನಾಡು' ಪತ್ರಿಕೆ ಆರಂಭವಾಯಿತು. ೧೯೫೨ರಲ್ಲಿ ತನ್ನ ರಜತೋತ್ಸವವನ್ನು ಆಚರಿಸಿದ ಮೊತ್ತ ಮೊದಲ ಕನ್ನಡ ಪತ್ರಿಕೆ ಅದು.

೧೯೩೪ರಲ್ಲಿ 'ಜನವಾಣಿ' ಆರಂಭವಾಗಿ ದೇಶಭಕ್ತಿ ಹಾಗೂ ರಾಷ್ಟ್ರೀಯತೆಗಳ ಪ್ರಚಾರದಲ್ಲಿ ತೊಡಗಿತು. ೧೯೩೧ರಲ್ಲಿ ಪ್ರಾರಂಭವಾದ 'ಪ್ರಜಾಮತ' ಬಹಳ ಪ್ರಸಿದ್ಧವಾಗಿದ್ದ ವಾರಪತ್ರಿಕೆ.

ಕನ್ನಡ ಭಾಷೆಯ ವೃತ್ತಪತ್ರಿಕೆಗಳು ಮೈಸೂರು ಸಂಸ್ಥಾನದಲ್ಲಿ ಬೆಳೆದಂತೆಯೇ ಮುಂಬಯಿ ಕರ್ನಾಟಕದ ಪ್ರಾಂತ್ಯಗಳಲ್ಲೂ ಈ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಬೆಳೆಯತೊಡಗಿದವು.

ಬೆಳಗಾವಿಯಿಂದ ೧೮೫೧ರಲ್ಲಿ 'ಸುಬುದ್ಧಿ ಪ್ರಕಾಶ' ಆರಂಭವಾಯಿತು. ೧೮೫೭ರ ಸಮಯದಲ್ಲಿ ಕನ್ನಡದ ಸುದ್ದಿ ಹಾಳೆಗಳು ಎಲ್ಲಾ ಕಡೆಯಲ್ಲಿ ಕಂಡು ಬಂದವು. ಬಂಡಾಯಗಾರರ ಸ್ಫೂರ್ತಿಯನ್ನು ಜನತೆಗೆ ತಲುಪಿಸಿದವು.

ಈ ಪ್ರದೇಶದ ಪೂರ್ಣ ವೃತ್ತಪತ್ರಿಕೆಯಾಗಿ ಮೊದಲು ಹೊರಟಿದ್ದು 'ಹಿತೇಚ್ಛು'. ಬಾಗಲಕೋಟೆಯ ಬಳಿಯ ಕಲಾದಗಿಯಿಂದ ಇದು ಪ್ರಾರಂಭವಾಯಿತು.

ಆ ವೇಳೆಗೆ ಧಾರವಾಡದಲ್ಲಿ 'ವಿಜಯ', 'ರಾಜಹಂಸ' ಹಾಗೂ 'ಕರ್ನಾಟಕವೃತ್ತ' ಎಂಬ ಮೂರು ಪತ್ರಿಕೆಗಳಿದ್ದವು. ಬೆಳಗಾವಿಯಲ್ಲೂ ಮೂರುಪತ್ರಿಕೆಗಳಿದ್ದು ಎಲ್ಲವೂ ಅಲ್ಲಿ ಮರಾಠೀ ಭಾಷೆಯ ಆಕ್ರಮಣವನ್ನು ತಡೆಗಟ್ಟಲು ಹುಟ್ಟಿದವು. ಇದೇ ಕಾರಣಕ್ಕಾಗಿ 'ಕರ್ನಾಟಕ ಪತ್ರ' ಎಂಬ ಮತ್ತೊಂದು ಪತ್ರಿಕೆಯೂ ಹುಟ್ಟಿತು. ಸುದ್ದಿ ಪತ್ರಿಕೆಗಳಿಗಿಂತ ಇವು ಅಭಿಪ್ರಾಯ ಪತ್ರಿಕೆಗಳು.

೧೮೮೫ರ ತರುವಾಯ ಹಲವು ವಾರ ಪತ್ರಿಕೆಗಳು ಅಲ್ಲಿ ಆರಂಭವಾದವು. 'ಲೋಕಶಿಕ್ಷಣ', 'ಕರ್ನಾಟಕ ವೃತ್ತ' , 'ಲೋಕಬಂಧು' ಎಂಬ ಈ ಪತ್ರಿಕೆಗಳ ಹಿಂದೆ ಇದ್ದವರು ಮುದವೀಡು ಕೃಷ್ಣರಾಯರು. 'ಕರ್ನಾಟಕ ವೃತ್ತ' ವಾರಪತ್ರಿಕೆಯು ೩೫ ವರ್ಷಗಳ ಕಾಲ ಪ್ರಕಟವಾಯಿತು.

೧೮೯೦ರ ಸುಮಾರಿನಲ್ಲಿ ಗದಗಯ್ಯ ಹೊನ್ನಾಪುರ ಮಠ 'ಕನ್ನಡ ಸಿಂಹ' ಮತ್ತಿತರ ಮೂರು ವಾರಪತ್ರಿಕೆಗಳನ್ನು ಆರಂಭಿಸಿದರು. ಹುಬ್ಬಳ್ಳಿಯಲ್ಲಿ ಬಿಂದೂರಾಯರು 'ಕನ್ನಡ ಕೇಸರಿ' ಎಂಬ ವಾರಪತ್ರಿಕೆ ಆರಂಭಿಸಿದ್ದರು. ವಾಸುದೇವಾಚಾರ್ಯರು 'ಸಚಿತ್ರ ಭಾರತ' ಎಂಬ ಪತ್ರಿಕೆ ಆರಂಭಿಸಿದ್ದರು. ಕರ್ನಾಟಕದ ಪುರಾತನ ವಾರಪತ್ರಿಕೆಗಳಲ್ಲಿ 'ಕರ್ನಾಟಕ ವೈಭವ'ವೂ ಒಂದು. ೧೮೯೨ರಲ್ಲಿ ಇದು ಬಿಜಾಪುರದಲ್ಲಿ ಆರಂಭಿಸಲ್ಪಟ್ಟಿತು.

ಬಳ್ಳಾರಿಯಲ್ಲಿ ೧೮೮೦ರಲ್ಲಿ 'ವಿಜಯಧ್ವಜ' ಎಂಬ ಪತ್ರಿಕೆ ಆರಂಭವಾಗಿತ್ತು. ಧಾರವಾಡದಲ್ಲಿ 'ಕರ್ಮವೀರ' ಆರಂಭವಾಯಿತು. ದಕ್ಷಿಣ ಕನ್ನಡದಲ್ಲಿ ಕ್ರಿಶ್ಚಿಯನ್ ಪಾದ್ರಿಗಳಿಂದ ೧೮೪೨ರಲ್ಲಿ 'ಮಂಗಳೂರು ಸಮಾಚಾರ' 'ಕ್ರೈಸ್ತ ಸದ್ಧರ್ಮದೀಪಿಕೆ' ಎಂಬ ವಾರಪತ್ರಿಕೆಗಳು ಆರಂಭವಾದವು. ಮಂಗಳೂರು ಅನೇಕ ಕನ್ನಡ ವಾರಪತ್ರಿಕೆಗಳ ಜನ್ಮಸ್ಥಳ.

ಇದಲ್ಲದೆ ಹೈದರಾಬಾದ್ ನಗರದಲ್ಲಿ ಎರಡು ಕನ್ನಡ ದಿನಪತ್ರಿಕೆಗಳಿದ್ದವು. 'ಹೈದರಾಬಾದ್ ಸಮಾಚಾರ' ಸರ್ಕಾರಿ ಪತ್ರಿಕೆ. 'ಸಾಧನ' ಎಂಬುದು ಜಿ.ಕೆ. ಪ್ರಾಣೇಶಾಚಾರ್ಯರು ಹೊರತರುತ್ತಿದ್ದ ಜನತೆಯ ಮುಖವಾಣಿ.

ಕರ್ನಾಟಕ ಏಕೀಕರಣವಾಗುವುದಕ್ಕೆ ಮುಂಚೆ ಕೊಡಗಿನಲ್ಲಿ 'ಕೊಡಗು' (೧೯೨೧) ಹಾಗೂ 'ಕೊಡಗು ವೃತ್ತಾಂತ' ಎಂಬ ಎರಡು ವೃತ್ತಪತ್ರಿಕೆಗಳಿದ್ದವು.

ಮೇಲ್ಕಂಡ ಮಾಹಿತಿಯು ಸೂಚಿಸುತ್ತಿರುವಂತೆ ಕರ್ನಾಟಕದ ವಿವಿಧ ಪ್ರಾಂತ್ಯಗಳಲ್ಲಿ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಪತ್ರಿಕೆಗಳು ಬಹಳ ಭರಾಟೆಯಲ್ಲಿ ಆರಂಭವಾದವು. 'ಕರ್ನಾಟಕತ್ವ'ದ ಕಲ್ಪನೆಗೆ ಒಡ್ಡಿಕೊಳ್ಳಲು ಬಹಳ ಅವಶ್ಯಕ ಸಾಧನಗಳಾಗಿ ಪರಿಣಮಿಸಿದವು ಮುದ್ರಣ ಬಂಡವಾಳಶಾಹಿಯ ನೆರವಿಲ್ಲದೆ ಆಧುನಿಕ ರಾಷ್ಟ್ರತ್ವದ ಕಲ್ಪನೆ ಸಾಧ್ಯವಿಲ್ಲದ ವಿಚಾರ ಎಂಬ ಆಂಡರ್ಸನ್‌ನ ಮಾಹಿತಿ ಪ್ರಕಾರ ನೋಡಿದರೆ ಕರ್ನಾಟಕಕ್ಕೆ ಈ ಸೌಲಭ್ಯವೂ ೧೯ನೇ ಶತಮಾನದ

ಉತ್ತರಾರ್ಧದಲ್ಲಿ ಕಲ್ಪಿತವಾಗಿತ್ತು. ಈ ಬಂಡವಾಳಶಾಹಿಯು, ಕರ್ನಾಟಕದ ಸ್ಥಳೀಯ ಮಾರುಕಟ್ಟೆಯನ್ನು ಒಂದಾಗಿ ಸಂಯೋಜಿಸುವ ರಾಜಕೀಯ ಪ್ರಯತ್ನಗಳಿಗಾಗಿ ಪತ್ರಿಕೆಗಳನ್ನು ಸಂವಹನ ಮಾಧ್ಯಮವಾಗಿ ರೂಪಿಸಿತ್ತು. ನಿತ್ಯ ಸಮಾಚಾರಗಳು , ಬದಲಾಗುತ್ತಿರುವ ವಿದ್ಯಮಾನಗಳು, ಒಂದು ಭಾಷಾ ಸಮುದಾಯದ ನಡುವೆ ವಿಶಾಲವಾಗಿ ಹಂಚಿಕೆಯಾಗುತ್ತಾ, ಅದರೊಳಗೆ 'ಕಲ್ಪಿತ ಸಮುದಾಯ'ವೊಂದನ್ನು ಸಾಕಾರಗೊಳಿಸಲು ಇದರಿಂದ ಮಹತ್ತರ ಸಹಾಯವಾಯಿತು'.

ಸಾಮಾನ್ಯವಾಗಿ ಈ ಪತ್ರಿಕೆಗಳನ್ನು ಆರಂಭಿಸಿದವರಲ್ಲಿ ಬಹುಪಾಲು ಜನ, ನಂತರದ ಕರ್ನಾಟಕ ಏಕೀಕರಣ ಚಳುವಳಿಯ ಹಿರಿಯ ಧುರೀಣರಾಗಿ ಬೆಳೆದಿದ್ದನ್ನು ನೋಡಿದರೆ ಮುದ್ರಣ ಮಾಧ್ಯಮವು ತನ್ನ ರಾಷ್ಟ್ರೀಯತಾ ಅಗತ್ಯಗಳಿಗಾಗಿ ಹೇಗೆ ತನ್ನನ್ನು ಸಾಧನವಾಗಿ ಒಡ್ಡಿಕೊಳ್ಳುತ್ತದೆ ಹಾಗೂ ಚಾರಿತ್ರಿಕ ವಿಕಾಸಗತಿಯಲ್ಲಿ ಆ ಮಾಧ್ಯಮದ ಲಭ್ಯತೆಯೆನ್ನುವುದು ಆ ರಾಷ್ಟ್ರೀಯತಾ ಸ್ವಭಾವದಲ್ಲಿ ಬಂದ ಒಂದು ಪಕ್ವ ಸ್ಥಿತಿಯನ್ನು ಸೂಚಿಸುತ್ತದೆ ಎಂಬುದನ್ನು ಗ್ರಹಿಸಬಹುದಾಗಿದೆ.

ಈ ಪತ್ರಿಕೆಗಳ ಸಂಖ್ಯೆ ಸಾಕಷ್ಟಿದ್ದಿರಬಹುದಾದರೂ ಅವುಗಳ ಆಯುಸ್ಸು, ಪ್ರಸಾರವ್ಯಾಪ್ತಿ ಅಖಿಲ ಕರ್ನಾಟಕಕ್ಕೆ ಹೋಲಿಸಿದರೆ ಆಗ ಕಡಿಮೆಯೇ. ಇದಕ್ಕೆ ನಮ್ಮ ರಾಷ್ಟ್ರೀಯ ಬಂಡವಾಳಶಾಹಿಯ ದುಸ್ಥಿತಿಯೇ ಕಾರಣ ಎಂದು ನಾವು ಊಹಿಸಬಹುದು. ವಸಾಹತುಶಾಹಿಯ ಆಕ್ರಮಣದಿಂದಾಗಿ ಕನ್ನಡ ರಾಷ್ಟ್ರೀಯ ವರ್ತಕ ವರ್ಗ ಹಾಗೂ ರಾಷ್ಟ್ರೀಯ ಬಂಡವಾಳ ವರ್ಗವು ಅದು ರೂಪುಗೊಳ್ಳುತ್ತಿದ್ದ ಪ್ರಾಥಮಿಕ ದೆಸೆಯಲ್ಲಿಯೇ, ೧೯ನೇ ಶತಮಾನದ ಮೊದಲ ಭಾಗದಲ್ಲಿ ನಾಶವಾಗಿದ್ದುದನ್ನು ಗಮನಿಸಿದ್ದೇವೆ. ನಂತರದಲ್ಲಿ ಬ್ರಿಟಿಷ್ ಬಂಡವಾಳವು ತನ್ನ ಕಾರ್ಯಾಚರಣೆಯ ಮುಖಾಂತರ ಸಂಪರ್ಕ, ವಾಣಿಜ್ಯ, ಕೈಗಾರಿಕೆಗಳನ್ನು ಸೃಷ್ಟಿಸಿದಾಗ ಅದರಿಂದ ಉಂಟಾದ ಭೌತಿಕ ಅನುಕೂಲತೆಗಳು, ಈ ರಾಷ್ಟ್ರೀಯ ಬಂಡವಾಳಿಗ ವರ್ಗದ ವಕ್ತಾರವರ್ಗವಾದ ಬುದ್ಧಿಜೀವಿ ಹಾಗೂ ಸುಶಿಕ್ಷಿತ ಸಮುದಾಯಗಳಿಗೆ, ತಮ್ಮ ಸ್ಥಳೀಯ ಮಾರುಕಟ್ಟೆಯನ್ನು ಸದೃಢೀಕರಿಸಿ ತಮ್ಮ ನಿಯಂತ್ರಣದಲ್ಲಿ ತಂದುಕೊಳ್ಳಬೇಕೆಂಬ ಆಶಯವನ್ನು ಉಂಟುಮಾಡಿತು. ಅದಕ್ಕೆ ನಿಜಕ್ಕೂ ಆರ್ಥಿಕವಾಗಿ ಚೈತನ್ಯ ಇರಲಿಲ್ಲ. ಕರ್ನಾಟಕದ ಸಂದರ್ಭದಲ್ಲಿ ದಲ್ಲಾಲಿ ಬಂಡವಾಳಿಗ ವರ್ಗವೂ ಸ್ಥಳೀಯವಾಗಿ ಸಾಕಷ್ಟು ಪ್ರಾತಿನಿಧ್ಯ ಹೊಂದಿರಲಿಲ್ಲ. ಹೀಗಿರುವಾಗ ಪುಟ್ಟ ಬಂಡವಾಳಿಗ ವರ್ಗದ ಚೈತನ್ಯ ಬಹಳ ದುರ್ಬಲವಾಗಿತ್ತೆಂಬುದನ್ನು ನಾವು ಊಹಿಸಬಹುದು. ಈ ಹಿನ್ನೆಲೆಯಲ್ಲೇ ಬಹುಸಂಖ್ಯೆಯ ಪತ್ರಿಕೆಗಳು ನಿಜವಾದ ಬಂಡವಾಳದ ಚೈತನ್ಯವಿಲ್ಲದೆ ಅಲ್ಪಾಯುಗಳಾಗುತ್ತಿದ್ದವು . ಮತ್ತೆ ಹೊಸ ಹೆಸರಿನಲ್ಲಿ ಹೊಸ ಪ್ರಯತ್ನ ಆರಂಭವಾಗುತ್ತಿತ್ತು.

ಕನ್ನಡ ಜನತೆಯ ಇತರ ಸಮುದಾಯಗಳು ಕೂಡ, ಅಸಮಗ್ರ ಬೆಳವಣಿಗೆಯ ಕಾರಣದಿಂದಾಗಿ, ವಸಾಹತುಶಾಹಿ ಆಳ್ವಿಕೆಯುದ್ದಕ್ಕೂ ಬಹಳ ದುಸ್ಥಿತಿಯ

ಜೀವನಮಟ್ಟದಲ್ಲೇ ಇದ್ದರು. ಅವರ ನಡುವೆ ಹರಡಿದ ಶೈಕ್ಷಣಿಕ ಮಟ್ಟವು ಸಮಾಜದ ಬಹಳ ಕಡಿಮೆ ಸಂಖ್ಯೆಯ ಜನರಿಗೆ ಮಾತ್ರ ತಲುಪಿತ್ತು. ಆದ್ದರಿಂದ ಪ್ರಸಾರ ವ್ಯಾಪ್ತಿಯಾದರೂ ಬಹಳ ಮಟ್ಟಿಗೆ ಹಿಗ್ಗಿ ಯಾವುದಾದರೊಂದು ಪತ್ರಿಕೆ ನಿಜಕ್ಕೂ ಬಹಳ ಜನಪ್ರಸಾರದ ಪತ್ರಿಕೆಯಾಗಿ ಬೆಳವಣಿಗೆ ಹೊಂದಲು ಅವಕಾಶವಿರಲಿಲ್ಲ. ಕಾರ್ಖಾನೆಗಳಲ್ಲಿ ಕಾರ್ಮಿಕರಾಗಿ ಬಂದ ಹೊಸ ವರ್ಗವು ಓದು, ಪ್ರಕಟಣೆ ಮುಂತಾದ ನವಜಾಗೃತಿಯ ಕಾರ್ಯಕ್ರಮಗಳಿಗೆ ಭದ್ರ ಓದುಗ ಸಮೂಹವನ್ನು ಒದಗಿಸಬಹುದಾಗಿತ್ತು. ಆದರೆ ಆರಂಭಿಕ ಅವಧಿಯ ಬಹುಪಾಲು ಕಾರ್ಮಿಕ ವರ್ಗವು ಕನ್ನಡೇತರ ಹಿನ್ನೆಲೆಯದಾದ್ದರಿಂದ ಅದು ಕೂಡ ಕನ್ನಡ ಭಾಷಾ ಪತ್ರಿಕೆಗಳ ಉತ್ಕರ್ಷಕ್ಕೆ ನೆರವಾಗುವಂತಿರಲಿಲ್ಲ.

ಹೀಗೆ ಏನೇ ದೌರ್ಬಲ್ಯಗಳಿದ್ದರೂ, ಮುದ್ರಣ ಮಾಧ್ಯಮ ೧೯ನೇ ಶತಮಾನದ ಕಡೆಯ ಭಾಗದಲ್ಲಿ 'ಕರ್ನಾಟಕತ್ವ'ದ ಆಶೋತ್ತರಗಳನ್ನು ಬಿಂಬಿಸುತ್ತಾ, ತಾನು ಪ್ರಚಲಿತವಿದ್ದಷ್ಟು ವರ್ಗದಲ್ಲಾದರೂ ಜಾಗೃತಿಯ, ಸಂಯೋಜನೆಯ ಕೆಲಸಗಳನ್ನು ನಿರ್ವಹಿಸಿತು.

ಮರಾಠರ ಪ್ರಾಬಲ್ಯವಿದ್ದ ಪ್ರದೇಶಗಳಿಂದ ಹೊರಡುತ್ತಿದ್ದ ಪತ್ರಿಕೆಗಳು 'ಕನ್ನಡ ಕೇಸರಿ', 'ಸಿಂಹ' ಇತ್ಯಾದಿ ಸಮರಶೀಲ ಹೆಸರುಗಳನ್ನು ಇಟ್ಟುಕೊಂಡಿರುವುದು ಗಮನಿಸಿದಗೆ, ಆ ಪ್ರಾಂತ್ಯದಲ್ಲಿ ಮತ್ತೊಂದು ಭಾಷಿಕ ಸಮುದಾಯದ ಬಲಾಧಿಕ್ಯದ ಎದುರು ಸ್ವಮತನವನ್ನು ಕಾಪಾಡಿಕೊಳ್ಳಲು ಹೊರಟಿದ್ದೇವೆ ಎಂಬ ಭಾವನೆಯ ಹಿನ್ನೆಲೆ ವ್ಯಕ್ತವಾಗುತ್ತದೆ.

ಮೈಸೂರು ಭಾಗದಿಂದ ಹೊರಟ ಪತ್ರಿಕೆಗಳು 'ಕರ್ನಾಟಕ' ಎಂದು ಹೆಸರನ್ನು ಧರಿಸಿರುವುದು, ಹೆಚ್ಚಾಗಿ ಒಂದು ಭೌಗೋಳಿಕ ಹೆಮ್ಮೆಯ ಆಶಯಗಳನ್ನು ಬಿಂಬಿಸುತ್ತಿರುವು ದನ್ನು ಕಾಣುತ್ತೇವೆ. 'ಜನವಾಣಿ', 'ಪ್ರಜಾಮತ' ಇತ್ಯಾದಿ ಹೆಸರುಗಳು ಈ ಪ್ರಾಂತ್ಯದಲ್ಲಿ ಪ್ರಜಾತಾಂತ್ರೀಕರಣ ಪ್ರಕ್ರಿಯೆಯೆಡೆಗೆ ಹೆಚ್ಚು ಸೆಳೆತವಿದ್ದುದನ್ನು ಸೂಚಿಸುತ್ತಿದೆ ಎಂದು ತರ್ಕಿಸಬಹುದಾಗಿದೆ. ಯಾಕೆಂದರೆ ಉತ್ತರ ಕರ್ನಾಟಕವು ಮರಾಠರ ಪ್ರಾಬಲ್ಯದ ನಡುವೆ , ಬ್ರಿಟಿಷರ ನೇರಾಡಳಿತದಲ್ಲಿ ಇದ್ದ ಪ್ರದೇಶವಾದುದರಿಂದ ಅದರ ರಾಷ್ಟ್ರೀಯತಾ ಬೇಡಿಕೆಯ ರಭಸ ಹಾಗೂ ಕೆಚ್ಚು ಸಹಜವಾಗಿ ಹೆಚ್ಚಿದೆ. ಆದರೆ ಮೈಸೂರು ಸಂಸ್ಥಾನವೆಂಬ ಮುಖವಾಡದಲ್ಲಿ ರಾಜರ ಆಡಳಿತಕ್ಕೊಳಪಟ್ಟಿದ್ದ ಹಳೆ ಮೈಸೂರು ಪ್ರಾಂತ್ರ್ಯವು ಆಧುನಿಕ ಕಾಲಘಟ್ಟದ ಆಶಯಾನುಸಾರ ಪ್ರಜಾ ಪ್ರತಿನಿಧೀಕರಣ, ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಮುಂತಾದ ಆಶಯಗಳನ್ನು ಹೆಚ್ಚಾಗಿ ಪ್ರತಿಬಿಂಬಿಸುತ್ತಿದೆ.

ಈ ಪ್ರಾದೇಶಿಕ ವ್ಯತ್ಯಾಸಗಳು, ವಿಶಿಷ್ಟತೆಗಳು ಏನೇ ಇದ್ದರೂ, ಈ ಅವಧಿಯಲ್ಲಿ ಕರ್ನಾಟಕದ ಎಲ್ಲಾ ಪ್ರಾಂತ್ಯಗಳಲ್ಲೂ ಸ್ವಲ್ಪ ಹೆಚ್ಚುಕಡಿಮೆ ಪ್ರಮಾಣದಲ್ಲಿ, ಕರ್ನಾಟಕದ ಹಿತಾಸಕ್ತಿಯನ್ನೇ ಪ್ರಧಾನವಾಗಿ ಆಧಾರ ಮಾಡಿಕೊಂಡಿದ್ದ ರಾಷ್ಟ್ರೀಯ ಭಾವನೆಗಳು ಜಾಗೃತಿಗೊಂಡು ಪ್ರಚಲಿತಕ್ಕೆ ಬರಲು ಈ ಮುದ್ರಣ ಮಾಧ್ಯಮವು ಒಂದು ಉತ್ತಮ ಐತಿಹಾಸಿಕ ಸಾಧನವಾಗಿ ಪರಿಣಮಿಸಿತು.

ಈ ಕಾಲಾವಧಿಯಲ್ಲಿಆಧುನಿಕ ಕನ್ನಡ ಸಾಹಿತ್ಯವೂ ಸಾಕಷ್ಟು ಪ್ರಮಾಣದಲ್ಲಿ ನಿರ್ಮಾಣವಾಯಿತು.

ಮೈಸೂರು ಸಂಸ್ಥಾನದ ಆಸ್ಥಾನ ವಿದ್ವಾನ್ ಬಸವಪ್ಪ ಶಾಸ್ತ್ರಿ (೧೮೪೩-೧೮೯೧) ಹಲವಾರು ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸುವುದರ ಜೊತೆಗೆ ಷೇಕ್ಸ್‌ಪಿಯರ್‌ನ ಒಥೆಲೋ ನಾಟಕವನ್ನು 'ಶೂರಸೇನಚರಿತೆ' (೧೮೮೩) ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಇವರ ಸಂಸ್ಕೃತ ನಾಟಕದ ಅನುವಾದಗಳು ಕನ್ನಡ ನಾಟಕ ಸಾಹಿತ್ಯದ ಮಾರ್ಗದರ್ಶಕ ರೂಪಿಯಾಗಿವೆ ಎಂದು ಎಂ.ಎಸ್. ಸುಂಕಾಪುರ ಅಭಿಪ್ರಾಯಪಡುತ್ತಾರೆ.[6] ಅವರು ಮುಂದುವರಿದು ಹೇಳುವಂತೆ :

''ಬಸವಪ್ಪಶಾಸ್ತ್ರಿಗಳ ಮತ್ತು ಅವರ ಪರಂಪರೆಯ ಕೆಲವರ ಮಾರ್ಗದರ್ಶಕ ಪ್ರಯತ್ನಗಳ ಫಲವಾಗಿ ಷೇಕ್ಸ್‌ಪಿಯರನ ಮತ್ತು ಆಂಗ್ಲ ಸಾಹಿತ್ಯದ ಪ್ರಭಾವವು ಕನ್ನಡ ಸಾಹಿತ್ಯದಲ್ಲಿ ಹೊಸ ಆವಿಷ್ಕಾರ ಹಾಗೂ ಆಲೋಚನೆಗಳಿಗೆ ಅವಕಾಶ ಮಾಡಿ ಕೊಟ್ಟಿತು''.[7]

ಮುದ್ದಣ್ಣನೆಂಬ ಕಾವ್ಯನಾಮದಿಂದ ರಾಮಾಯಣದ ಕಥಾವಸ್ತುವನ್ನು ಬರೆದ ನಂದಳಿಕೆಯ ನಾರಾಣಪ್ಪನು ಆಧುನಿಕ ಕನ್ನಡ ಸಾಹಿತ್ಯದ ಮುಂಬೆಳಗನ್ನು ಸೂಚಿಸುವ ನಕ್ಷತ್ರ ಎನ್ನಬಹುದು. ಗದ್ಯದ ಕಡೆಗೆ ಒಲವನ್ನು ತೋರಿಸತೊಡಗಿದ್ದ ಆ ಕವಿಯು ಬಿ. ವೆಂಕಟಾಚಾರ್, ಗಳಗನಾಥ ಮುಂತಾದ ಸಮಕಾಲೀನ ಕನ್ನಡ ಕಾದಂಬರಿಕಾರರ ಪ್ರಭಾವಕ್ಕೆ ಒಳಗಾಗಿದ್ದನೆಂದು ಹೇಳಬಹುದು. ಆತ ಬರೆದ 'ಗೋದಾವರಿ' ಎಂಬ ಕಾದಂಬರಿಯ ಅಪೂರ್ಣ ಹಸ್ತಪ್ರತಿಯು, ಆತ ಮಡಿಯದೇ ಉಳಿದಿದ್ದರೆ ಸ್ವತಃ ಕಾದಂಬರಿಕಾರನಾಗುತ್ತಿದ್ದ ಎಂದು ಸೂಚಿಸುತ್ತದೆ.

ಕ್ರಿಶ್ಚಿಯನ್ ಮಿಷನರಿಗಳು ''ಆಧುನಿಕ ವಿದ್ಯಾಭ್ಯಾಸ ಮತ್ತು ಕನ್ನಡ ಸಂಸ್ಕೃತಿ ಹಾಗೂ ಸಾಹಿತ್ಯದ ಪ್ರಸಾರ ಮಾಡಿದುದರ ಫಲವಾಗಿ, ಭಾಷಾಂತರಗಳ ಮೂಲಕ ಪಾಶ್ಚಾತ್ಯ ಸಾಹಿತ್ಯದ ಪರಿಚಯದಿಂದಾಗಿ, ಆಧುನಿಕ ಮನಸ್ಸು ರೂಪುಗೊಳ್ಳುವುದಕ್ಕೆ ತುಂಬಾ ಸಹಾಯಕವಾಯಿತು''[8] ಎಂದು ಡಾ. ಸೆಬಾಸ್ಟಿಯನ್ ಜೋಸೆಫ್ ಅಭಿಪ್ರಾಯಪಡುತ್ತಾರೆ. ಇದರ ಜೊತೆಗೆ ವ್ಯಾಕರಣಕಾರರು,ವಿದ್ವಾಂಸ ಮಿಷನರಿಗಳು ಮಹತ್ವಪೂರ್ಣವಾದ ಕೊಡುಗೆಯನ್ನು ನೀಡಿದರು. ವಿಲಿಯಂ ಕೇರಿ ೧೮೧೭ರಲ್ಲಿ ಪ್ರಕಟಿಸಿದ ಮೊದಲನೆಯ ಕನ್ನಡ ವ್ಯಾಕರಣ, ೧೮೨೦ರ ಜಾನ್ ಮೆಕ್ಲಿನ್ ವ್ಯಾಕರಣ, ವಿಲಿಯಂ ರೀವ್ಸ್‌ನ ಕನ್ನಡ - ಇಂಗ್ಲಿಷ್ ನಿಘಂಟು (೧೮೩೨), ರಾಬರ್ಟ್ ಕಾಲ್ಡ್‌ವೆಲ್‌ನ ಕಂಪಾರೆಟಿವ್ ಗ್ರಾಮರ್ ಆಫ್ ದ್ರವಿಡಿಯನ್ ಲ್ಯಾಂಗ್ವೇಜಸ್ (೧೮೫೬), ಫರ್ಗುಸನ್‌ನ ಕೇವ್ ಟೆಂಪಲ್ಸ್ ಆಫ್ ಇಂಡಿಯಾ (೧೮೪೪), ರಾಬರ್ಟ್ ಸಿವೆಲ್‌ನ ಎ ಫರ್‌ಗಾಟನ್ ಎಂಪೈರ್, ರೆವರೆಂಡ್ ಕಿಟ್ಟೆಲ್‌ನ ಕನ್ನಡ -ಇಂಗ್ಲಿಷ್ ನಿಘಂಟು (೧೮೯೪), ಜಾನ್- ಗ್ಯಾರೆಟ್ ಸಂಪಾದಿಸಿ ಪ್ರಕಟಿಸಿದ ಕೇಶಿರಾಜನ ಶಬ್ದಮಣಿದರ್ಪಣ (೧೮೬೮), ಬಿ.ಎಲ್. ರೈಸ್ ಸಂಪಾದಿಸಿದ ಪಂಪರಾಮಾಯಣ (೧೮೭೪), ಬಿ.ಎಲ್. ರೈಸ್ ಸಂಪಾದಿಸಿ ಪ್ರಕಟಿಸಿದ ಅಮರ ಕೋಶ (೧೮೯೩), ಇಂಗ್ಲಿಷಿನಲ್ಲಿ ಬರೆದ ಮೊದಲನೇ ಕನ್ನಡ ಸಾಹಿತ್ಯ ಚರಿತ್ರೆಯಾದ ಇ. ಪಿ. ರೈಸ್‌ನ 'ಎ

ಹಿಸ್ಟರಿ ಆಫ್ ಕನರೀಸ್ ಲಿಟರೇಚರ್' - ಇವು ವಿದ್ಯಾವಂತ ಮಧ್ಯಮವರ್ಗದ ಮನಸ್ಸುಗಳನ್ನು ಕರ್ನಾಟಕ ಸಂಸ್ಕೃತಿ ಮತ್ತು ಇತಿಹಾಸಗಳನ್ನು ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಲು ಸಿದ್ಧಪಡಿಸಿದವು.

ಬೆಳಗಾವಿಯ ನಾರ್ಮಲ್‌ಸ್ಕೂಲ್‌ನಲ್ಲಿ ಉಪಾಧ್ಯಾಯರಾಗಿದ್ದ ವೆಂಕಟ ರಂಗೋ ಕಟ್ಟಿ ಅನೇಕ ಕಥೆಗಳು, ನಾಟಕ, ಪ್ರಬಂಧ, ಜ್ಯೋತಿಷ್ಯ, ವ್ಯಾಕರಣ, ಧರ್ಮ ಮೊದಲಾದ ವಿವಿಧ ವಿಷಯಗಳ ಮೇಲೆ ಕೃತಿಗಳನ್ನು ರಚಿಸಿದರು. ಅವರು ಜೇಮ್ಸ್ ಎ ಕ್ಯಾಂಪ್‌ಬೆಲ್‌ನ 'ಗೆಜೆಟಿಯರ್ಸ್ ಆಫ್ ಬಾಂಬೆ ಕರ್ನಾಟಕ' ಕೃತಿಯನ್ನು ಕನ್ನಡಕ್ಕೆ ಭಾಷಾಂತರ ಮಾಡಿದರು. ಹಾಗೆಯೇ ಗೋಕಾಕದ ಡೆಪ್ಯುಟಿ ಚೆನ್ನಬಸಪ್ಪ ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್, ಕಾಮಿಡಿ ಆಫ್ ಎರರ್ಸ್ ಮೊದಲಾದ ನಾಟಕಗಳನ್ನು ಭಾಷಾಂತರ ಮಾಡಿದರು.

ಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಟ್ಕರ್ 'ಸಂಸ್ಕೃತ ಕನ್ನಡ ಶಬ್ದ ಉತ್ಪತ್ತಿ' ಎಂಬ ಕೃತಿಯನ್ನು ಬರೆದರು.

''ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಆಧುನಿಕ ಕಾಲದಲ್ಲಿ ಕನ್ನಡ ಸಾಹಿತ್ಯವು ರೂಪ ರೀತಿಗಳೆರಡರಲ್ಲಿಯೂ ಒಂದು ಕ್ರಾಂತಿಕಾರಕ ಬದಲಾವಣೆಯನ್ನು ಪಡೆಯಿತು. ಹಳೆಯ ಕಾವ್ಯರೂಪಗಳಾದ ಚಂಪೂ ಇತ್ಯಾದಿಗಳು ಅಕಾಲಿಕವಾಗಿ ಆ ರೀತಿಯಲ್ಲಿ ಬರೆಯುವವರು ಇಲ್ಲವಾಯಿತು. ಕ್ರಮೇಣ ಗದ್ಯವು ಅಭಿವ್ಯಕ್ತಿ ಪ್ರಧಾನ ಮಾಧ್ಯಮವಾಗಿ ನಾಟಕ, ಕಾದಂಬರಿ, ಸಣ್ಣಕಥೆ, ಜೀವನಚರಿತ್ರೆ ಇತ್ಯಾದಿ ಪ್ರಕಾರಗಳಿಗೆ ಕಾರಣವಾಯಿತು''.[9]

ಶಾಂತಕವಿಗಳು ೧೯ನೇ ಶತಮಾನದ ಕೊನೆಯ ಘಟ್ಟದಲ್ಲಿ ವಿವಿಧ ನಾಟಕಗಳನ್ನು ರಚಿಸಿ, ಕನ್ನಡ ಪ್ರಜ್ಞೆಯನ್ನು ಮೂಡಿಸತೊಡಗಿದ್ದರು.

೧೯ನೇ ಶತಮಾನದ ಉತ್ತರಾರ್ಧದಲ್ಲಿ ರಚಿತವಾದ ಪ್ರಾಚೀನ ಸಾಹಿತ್ಯ ರೂಪಗಳಲ್ಲಿ ನಾಟಕವೂ ಒಂದು. ಇದಕ್ಕೆ ಕಾರಣ ಒಂದು ಪ್ರದರ್ಶನ ಕಲೆಯಾಗಿದ್ದ ಇದು ಜನಸಮೂಹವನ್ನು ಒಂದು ಗುಂಪಾಗಿ ಪ್ರಭಾವಿಸುವಂತಹದು ಆಗಿದ್ದುದು. ಬಹುಮಟ್ಟಿಗೆ ಮೊದಮೊದಲ ಕನ್ನಡ ನಾಟಕಗಳ ಮೇಲೆ ಇಂಗ್ಲಿಷ್, ಮರಾಠಿ ಮತ್ತು ಬಂಗಾಳಿ ನಾಟಕಗಳ ಪ್ರಭಾವವಾಯಿತು.

೧೮೯೯ರಲ್ಲಿ ಕಿಂಗ್‌ಲಿಯರ್ ನಾಟಕವನ್ನು ಎಂ.ಎಸ್. ಪುಟ್ಟಣ್ಣ ಮತ್ತು ಆನಂದರಾಯರು 'ಮರ್ಚೆಂಟ್ ಆಫ್ ವೆನಿಸ್' ಕೃತಿಯನ್ನು, ಎಂ.ಎಲ್. ಶ್ರೀಕಂಠೇಶಗೌಡರು 'ಮ್ಯಾಕ್‌ಬೆತ್' ನಾಟಕವನ್ನು ಅನುವಾದಿಸಿದರು,

ಕಾದಂಬರಿಯು, ಸಮಕಾಲೀನ ಜೀವನದ ಚಿತ್ರವಾಗಿದ್ದ ವ್ಯಕ್ತಿ ಮತ್ತು ಪರಿಸರ ಇವುಗಳ ನಡುವಣ ಘರ್ಷಣೆಯನ್ನು ಚಿತ್ರಿಸುವ ವಸ್ತುಗಳನ್ನೊಳಗೊಂಡ ಅತ್ಯಂತ ಜನಪ್ರಿಯವಾದ ಒಂದು ಪ್ರಕಾರವಾಗಿದೆ. ಕನ್ನಡದ ಮೊಟ್ಟಮೊದಲಿನ ಕಾದಂಬರಿಗಳು ಬಹುಪಾಲು ಬಂಗಾಳಿ ಮತ್ತು ಮರಾಠಿಯ ಅನುವಾದಗಳಾಗಿವೆ. ಈ ಶತಮಾನದ ಆದಿಯಲ್ಲಿ ಬಿ. ವೆಂಕಟಾಚಾರ್ಯರು ಮತ್ತು ಗಳಗನಾಥರು ಕಾದಂಬರಿಕ್ಷೇತ್ರದಲ್ಲಿ ಪ್ರಮುಖರಾಗಿದ್ದರು. ಇವರ ಅನುವಾದಗಳು ಮತ್ತು ಕೆಲವು ಸ್ವತಂತ್ರ ಕಾದಂಬರಿಗಳು

ಕರ್ನಾಟಕದಾದ್ಯಂತ ತುಂಬ ಜನಪ್ರಿಯವಾಗಿ ಜನತೆಯಲ್ಲಿ ಓದುವ ಅಭಿರುಚಿಯನ್ನು, ಹೊಸ ಓದುಗರನ್ನು ನಿರ್ಮಿಸಲು ಕಾರಣವಾದವು. ಅಂದು ಅವರು ಬರೆದ ಕಾದಂಬರಿಗಳಲ್ಲಿ ಕೆಲವು ಇಂದಿಗೂ ಮಹತ್ವದ ಕೃತಿಗಳಾಗಿ ಉಳಿದಿವೆ.

ಕಾಲಮಾನದ ದೃಷ್ಟಿಯಿಂದ ಕನ್ನಡದ ಪ್ರಪ್ರಥಮ ಕಾದಂಬರಿ ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' (೧೮೯೯) ಎಂಬುದು. ಅನಂತರ ಬಂದದ್ದು ಬೋಳಾರ ಬಾಬುರಾಯರ 'ವಾಗ್ದೇವಿ' (೧೯೦೫) ಮತ್ತು ಕೆರೂರು ವಾಸುದೇವಾಚಾರ್ಯರರ 'ಇಂದಿರಾ' (೧೯೦೮). ಇವರಲ್ಲಿ ಕೆರೂರು ವಾಸುದೇವಾಚಾರ್ಯರು ಬರೆದ 'ಯದುಮಹಾರಾಜ' (೧೯೧೬) ಕನ್ನಡದ ಮೊತ್ತ ಮೊದಲ ಚಾರಿತ್ರಿಕ ಕಾದಂಬರಿಯಾಗಿದೆ. ಆದರೂ ಎಂ.ಎಸ್. ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಅದರ ಮನಸೆಳೆಯುವ ಹಾಸ್ಯದಿಂದ, ಪಾತ್ರ ವಿರಚನೆಯಿಂದ ಮತ್ತು ಮುಮ್ಮಡಿಕೃಷ್ಣರಾಜ ಒಡೆಯರ ಕಾಲದ ಸಮಾಜದ ನೈಜ ಚಿತ್ರಣದಿಂದ ಸಮಾಜದ ಮೊಟ್ಟಮೊದಲಿನ ಮಹತ್ವದ ಕಾದಂಬರಿಯಾಗಿದೆ. ಕನ್ನಡದ ಮೊದಲನೆಯ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ' ೧೯ನೇ ಶತಮಾನದ ಕೊನೆಯ ವೇಳೆಗೆ ೧೮೯೯ರಲ್ಲಿ ಹೊರಬಂದಿತು. ಕಾದಂಬರಿಯಲ್ಲಿ ಗುಲವಾಡಿಯವರು ಹೆಣ್ಣುಮಕ್ಕಳ ವಿವಾಹ ವಯಸ್ಸನ್ನು ಏರಿಸಬೇಕೆಂದು ಕಳಕಳಿಯ ಮನವಿಮಾಡಿಕೊಳ್ಳುತ್ತಾರೆ. ಅದಕ್ಕಿಂತ ಎರಡುವರ್ಷ ಮೊದಲೇ ಬಂದ 'ಇಗ್ಗಪ್ಪ ಹೆಗಡೆಯ ವಿವಾಹ ಪ್ರಹಸನ' (೧೮೮೭) ಎಂಬ ಕೃತಿಯು ಹವ್ಯಕ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಬಾಲ್ಯವಿವಾಹ ಹಾಗೂ ತೆರಕೊಡುವ ಪದ್ಧತಿಗಳ ಮೇಲೆ ಬೆಳಕು ಚೆಲ್ಲುತ್ತದೆ.

ಇಂದಿರಾಬಾಯಿ ಒಂದು ಸಂಘರ್ಷವನ್ನು ಚಿತ್ರಿಸುತ್ತದೆ. ಅದು ಹಿರಿಯರ ಮತ್ತು ಕಿರಿಯರ ನಡುವೆ, ಸಂಪ್ರದಾಯ ಮತ್ತು ಆಧುನಿಕತೆಗಳ ನಡುವೆ ನಡೆದ ಸಂಘರ್ಷ. ಹೊಸದಾಗಿ ವಿದ್ಯಾವಂತರಾದ ಮಧ್ಯಮ ವರ್ಗದವರ ಮನೋಧರ್ಮವನ್ನು, ಅವರ ಸಾಮಾಜಿಕ ಆರ್ಥಿಕ ಒತ್ತಡಗಳನ್ನು ಅದು ಪ್ರತಿಬಿಂಬಿಸುತ್ತದೆ. ಧರ್ಮಕ್ಕೂ , ಬದಲಾಗುತ್ತಿರುವ ಸಮಾಜಕ್ಕೂ ನಡುವೆ ನಡೆಯುವ ತಿಕ್ಕಾಟವನ್ನು ಅದು ಬಿಂಬಿಸುತ್ತದೆ.

೧೯ನೆಯ ಶತಮಾನದ ಕೊನೆಯ ಭಾಗದ ಹೊತ್ತಿಗೆ ಮೂಡಿಬಂದ ಕಾದಂಬರಿಯ ಪ್ರಕಾರವು ಒಂದು ರಾಷ್ಟ್ರೀಯತ್ವದ ಆಧುನಿಕ ಪರಿಕಲ್ಪನೆಯ ಉಗಮ ಸಂದರ್ಭವನ್ನು ನಮಗೆ ಸೂಚಿಸುತ್ತದೆ. ಇದನ್ನು ಬೆನಡಿಕ್ಟ್ ಅಂಡರ್‌ಸನ್‌ನ ಮಾತುಗಳಲ್ಲಿ ಹೇಳಬೇಕೆಂದರೆ :

''ಕಾದಂಬರಿ ಮತ್ತು ವೃತ್ತಪತ್ರಿಕೆಗಳು- ಈ ಎರಡು ಪ್ರಕಾರಗಳು ರಾಷ್ಟ್ರವೆಂಬ ಕಲ್ಪಿತ ಸಮುದಾಯದ ಬಗೆಯನ್ನು 'ಪುನರ್ ಪ್ರಸ್ತುತಪಡಿಸುವುದಕ್ಕೆ' ಅಗತ್ಯವಾದ ತಾಂತ್ರಿಕ ಸಾಧನಗಳನ್ನು ಒದಗಿಸಿದವು''.[10] ಒಂದು ರಾಷ್ಟ್ರೀಯ ಸಮುದಾಯದೊಳಗಿನ ಸದಸ್ಯರು ಅದು ಎಷ್ಟೇ ಚಿಕ್ಕದಾಗಿರಲಿ ಅವರು ತಮ್ಮ ಸಮುದಾಯದ ಬಹುಪಾಲು ಸದಸ್ಯರ ಬಗ್ಗೆ ವ್ಯಕ್ತಿಗತವಾಗಿ ಏನೂ ಅರಿಯಲಾರರು. ಆದರೂ ಅವನನ್ನು ನಾನು ಬಲ್ಲೆ ಎಂಬಂತಹ ಕಲ್ಪಿತ ಒಡನಾಟದಲ್ಲಿ ಆಧುನಿಕ ರಾಷ್ಟ್ರತ್ವದ ಕಲ್ಪನೆ

ತನ್ನನ್ನೊಂದು ಪರಸ್ಪರ ಸಂಬಂಧಿತ ಸಮುದಾಯವನ್ನಾಗಿ ಪರಿಭಾವಿಸಿಕೊಳ್ಳುತ್ತದೆ. ಈ ರೀತಿ ಪರಿಭಾವಿಸಿಕೊಳ್ಳುವುದಕ್ಕೆ ಕಾದಂಬರಿ ಹಾಗೂ ವೃತ್ತಪತ್ರಿಕೆಗಳು ಅತ್ಯಗತ್ಯ ಸಾಧನಗಳಾಗಿ ಅಥವಾ ಆ ಬಗೆಯ ಕಲ್ಪನೆಯನ್ನು ಬೆಳೆಸಿ ಬೆಂಬಲಿಸುವ ಪ್ರಕಾರಗಳಾಗಿ ೧೮ನೇ ಶತಮಾನದ ಯೂರೋಪ್‌ನಲ್ಲೂ ಬಳಕೆಗೆ ಬಂದವು ಎಂಬುದನ್ನು ನಾವು ಇಲ್ಲಿ ಗುರುತಿಸಿಕೊಂಡರೆ, ಕನ್ನಡ ಭಾಷೆಯಲ್ಲೂ ಕಾದಂಬರಿಗಳ ಹುಟ್ಟೆಂಬುದು ಆ ನಿರ್ದಿಷ್ಟ ಭಾಷಿಕ ಸಮುದಾಯ ತನ್ನ ಭೌತಿಕ ಸನ್ನಿವೇಶಗಳಲ್ಲಿ ತಲುಪಿದ ನಿರ್ದಿಷ್ಟ ಪಕ್ವ ಸ್ಥಿತಿಯನ್ನು ಸೂಚಿಸುತ್ತದೆಯೆಂಬುದನ್ನು ಮನಗಾಣಲು ಸಾಧ್ಯವಾಗುತ್ತದೆ.

ಇದನ್ನು ಬೇರೊಂದು ಸಮರ್ಥನೆಯಿಂದಲೂ ನೋಡಬಹುದು. ಕಾದಂಬರಿ ಪ್ರಕಾರದ ಬಗ್ಗೆ ರಾಲ್ಫ್ ಫಾಕ್ಸ್ ಹೀಗೆ ಹೇಳುತ್ತಾನೆ :

''ಪ್ರಪಂಚದ ಕಲ್ಪನಾ ಸಂಸ್ಕೃತಿಗೆ ಬಂಡವಾಳಶಾಹಿ ನಾಗರಿಕತೆಯು ನೀಡಿದ ಬಹಳ ದೊಡ್ಡ ಕೊಡುಗೆ ಈ ಕಾದಂಬರಿ ಪ್ರಕಾರ... ಕಾದಂಬರಿ ಎಂಬುದು ಬಂಡವಾಳಶಾಹಿ ನಾಗರಿಕತೆ ಕೈಗೊಂಡ ಬಹಳ ದೊಡ್ಡ ಸಾಹಸ ಕೂಡ. ಅಷ್ಟೇ ಅಲ್ಲ ಆ ನಾಗರಿಕತೆ ಮಾನವನಿಗೆ ನೀಡಿದ ಗುರುತಿಸುವಿಕೆ ಕೂಡ''.[11]

ಆತ ಮತ್ತೊಂದು ಕಡೆ ಹೇಳುತ್ತಾನೆ: ''ಕಾದಂಬರಿ ಬಂಡವಾಳಶಾಹಿ ಸಾಹಿತ್ಯ ಸೃಷ್ಟಿಸಿದ ಅತ್ಯಂತ ವಿಲಕ್ಷಣವಾದ ಸಾಹಿತ್ಯ ಪ್ರಕ್ರಿಯೆ. ಅಷ್ಟೇ ಅಲ್ಲ ಅತ್ಯಂತ ಶ್ರೇಷ್ಠವಾದ ಸೃಷ್ಟಿ ಕೂಡ. ಇದು ಆಧುನಿಕ ಕಾಲಕ್ಕೆ ಸಂಬಂಧಿಸಿದ ಪ್ರಕ್ರಿಯೆಯಾಗಿರುವುದರಿಂದ ಬಹಳ ಪ್ರಾಥಮಿಕ ರೂಪದಲ್ಲಿ ಹೊರತು, ಸಾಂಸ್ಕೃತಿಕ ಪುನರುಜ್ಜೀವನದೊಂದಿಗೆ ಪ್ರಾರಂಭವಾದ ಆಧುನಿಕ ಯುಗಕ್ಕೆ ಹಿಂದಿನ ಕಾಲದಲ್ಲಿ ಇದ್ದಿರಲಿಲ್ಲ. ಇತರ ಆಧುನಿಕ ಸಾಹಿತ್ಯ ಪ್ರಕ್ರಿಯೆಗಳಂತೆಯೇ ಕಾದಂಬರಿ ಕೂಡ ಮಾನವನ ಪ್ರಜ್ಞಾಪರಿಧಿಯನ್ನು ವಿಶಾಲಗೊಳಿಸುವುದಕ್ಕೆ, ಆಳಗೊಳಿಸುವುದಕ್ಕೆ ನೆರವಾಯಿತು. ಪ್ರಾಚೀನ ಮಹಾಕಾವ್ಯವು ವೀರಗಾಥೆಗಳ ಕಾವ್ಯವಾಗಿ ಪುನರ್ಜನ್ಮವೆತ್ತಿತು. ವೀರಗಾಥೆಗಳಿಗೆ ಜನ್ಮ ನೀಡಿದ ಸಮಾಜ ಕೂಡ ಅದೃಶ್ಯವಾಗಿ ಹೋದನಂತರ ಕಾದಂಬರಿ ಬಂದಿತು. ಅದೂ ಕೂಡ ಮಹಾಕಾವ್ಯದ ಮಾದರಿಯಲ್ಲಿಯೇ ರೂಪುಗೊಂಡಿತು. ಆದರೆ ಅದು ಹೊಸ ಮಾನವನ ಬಯಕೆಗಳಿಗೆ ರೂಪಕೊಡುವುದಕ್ಕೆ, ಪ್ರಕ್ಷುಬ್ಧವಾಗಿದ್ದ ಹೊಸ ಪ್ರಪಂಚಕ್ಕೆ ಕನ್ನಡಿ ಹಿಡಿಯುವುದಕ್ಕೆ ರೂಪುಗೊಂಡಿತು''.[12]

ಈ ಬಗೆಯಲ್ಲಿ ಒಂದು ಸಮಾಜದೊಳಗೆ ಕಾದಂಬರಿ ಪ್ರಕಾರದ ಆವಿಷ್ಕಾರವೆನ್ನುವುದು ಕೂಡ ಆ ಸಮಾಜದೊಳಗೆ ಮೂಡಿಬಂದ ಒಂದು ನಿರ್ದಿಷ್ಟ ಕಾಲಘಟ್ಟವನ್ನು ಸೂಚಿಸುತ್ತದೆ. ಆ ಕಾಲಘಟ್ಟ ಊಳಿಗಮಾನ್ಯತೆಯಿಂದ ತನ್ನನ್ನು ಹೊರಬೀಳಿಸಿಕೊಂಡ, ಬಂಡವಾಳಶಾಹಿ ಸಂಬಂಧಗಳ ಕಾಲಘಟ್ಟ. ಅದು ಕನ್ನಡ ಭಾಷಿಕ ಸಮಾಜದೊಳಗೆ ಒಡಮೂಡತೊಡಗಿದ್ದನ್ನು ಈ ಕಾದಂಬರಿ ರಚನೆಯ ಕಾಲಘಟ್ಟ ಸಂಕೇತಿಸುತ್ತಿದೆ.

ಅಂದ ಮಾತ್ರಕ್ಕೆ ಕರ್ನಾಟಕವು ಸಂಪೂರ್ಣವಾಗಿ ಬಂಡವಾಳಶಾಹಿ ಸಮಾಜವಾಗಿ ಮಾರ್ಪಟ್ಟಿತೆಂದು ಸೂಚಿಸಲು ಈ ಕಾದಂಬರಿಯ ಸಂಕೇತವನ್ನು ಇಲ್ಲಿ ಬಳಸಿಕೊಳ್ಳಲಾಗಿಲ್ಲ. ಆದರೆ ವಸಾಹತು ಬಂಡವಾಳದ ಕಾರ್ಯಾಚರಣೆಯು ಕನ್ನಡ

ಭಾಷಿಕ ಸಮಾಜದೊಳಗೆ, ನಿರ್ದಿಷ್ಟ ಹಂತದ ಬಂಡವಾಳಶಾಹಿ ಸಂಬಂಧಗಳನ್ನು , ಅದರ ಆಧುನಿಕ ಸಂರಚನೆಗಳನ್ನು ಪರಿಚಯಿಸಿದ್ದರಿಂದಾಗಿ, ಅರೆ-ಊಳಿಗಮಾನ್ಯ ವಸಾಹತು ಸಮಾಜವಾಗಿದ್ದ ಕರ್ನಾಟಕದಲ್ಲಿ, ಅದನ್ನು ನಿದರ್ಶಿಸುವ ಹಾಗೆ ಕಾದಂಬರಿಯು ಉಗಮವಾಗಿದೆ ಎಂಬುದನ್ನು ಸೂಚಿಸಬಹುದಾಗಿದೆ. ಅಂದರೆ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಅದರ ಎಲ್ಲ ಭೌತಿಕ ಪೂರ್ವಾವಶ್ಯಕತೆಗಳ ಆಧಾರದಲ್ಲಿ ನಾವು ಖಚಿತವಾಗಿ ಹೇಳಬಹುದಾದುದೇನೆಂದರೆ, ಈವರೆಗಿನ ಚಾರಿತ್ರಿಕ ವಿಕಾಸ ಪ್ರಕ್ರಿಯೆಯಲ್ಲಿ ೮ನೇ ಶತಮಾನದಿಂದ ಮೊದಲುಗೊಂಡು ೧೮ನೆಯ ಶತಮಾನದವರೆಗೆ ಒಂದು ರಾಷ್ಟ್ರೀಯತಾಸಮುದಾಯ ವಾಗುವ ದಿಕ್ಕಿನಲ್ಲಿ, ಊಳಿಗ ಮಾನ್ಯತೆಯೊಂದಿಗೆ ಸಂಘರ್ಷಿಸುತ್ತಾ, ಬೆಳವಣಿಗೆಯ ಒಂದೊಂದೇ ಮಜಲುಗಳನ್ನು ದಾಟುತ್ತಾ ಬಂದ ಸಮಾಜವು, ೧೮ನೆಯ ಶತಮಾನದ ಕಟ್ಟಕಡೆಯಲ್ಲಿ ಹಾಗೂ ೧೯ನೆಯ ಶತಮಾನದ ಮೊದಲ ಭಾಗದಲ್ಲಿ ಎದುರಿಸಿದ ಆಘಾತಗಳನ್ನು ಜೀರ್ಣಿಸಿಕೊಂಡು, ಆ ಆಘಾತಗಳು ಉಂಟುಮಾಡಿದ ಚಾರಿತ್ರಿಕ ತಿರುಚುವಿಕೆಗಳನ್ನು, ಅದರ ಕಲೆಗಳನ್ನು ಮೈಯಲ್ಲಿ ಒಡಗೂಡಿಸಿಕೊಂಡೇ, ೧೯ನೇ ಶತಮಾನದ ಉತ್ತರಾರ್ಧದ ಕೊನೆಯ ಹೊತ್ತಿಗೆ 'ಕರ್ನಾಟಕತ್ವ'ವು ತನ್ನನ್ನೊಂದು ಆಧುನಿಕ ರಾಷ್ಟ್ರತ್ವವನ್ನಾಗಿ ಪರಿಭಾವಿಸಿಕೊಳ್ಳುವ ಪಕ್ವತೆಗೆ ತಲುಪತೊಡಗಿತ್ತು.

ಅಡಿ ಟಿಪ್ಪಣಿಗಳು

1. ಕೆ. ಸಂಪದ್ಗಿರಿರಾವ್ - ಆಧುನಿಕ ವಿದ್ಯಾಭ್ಯಾಸ, ಕರ್ನಾಟಕದ ಪರಂಪರೆ, ಸಂ. ೨, ಪು. ೩೯೨.
2. ಕಪಟರಾಳ ಕೃಷ್ಣರಾವ್ - ನಮ್ಮ ನಾಡು ನುಡಿಯ ಇತಿಹಾಸ, ಪು. ೨೧೩.
3. ಡಾ. ಸಿ.ಆರ್. ಗೋವಿಂದರಾಜು - ರಾಜನೀತಿ, ಸಮಾಜ ಮತ್ತು ಆರ್ಥಿಕತೆ, ಕರ್ನಾಟಕ ಚರಿತ್ರೆ, ಸಂ. ೬, ಪು. ೧೬೩, ೧೬೪.
4. ಡಾ. ಸೆಬಾಸ್ಟಿಯನ್ ಜೋಸೆಫ್- ಶಿಕ್ಷಣ : ಸಾಂಪ್ರದಾಯಿಕ ರೂಪದಿಂದ ಆಧುನಿಕ ರೂಪದವರೆಗೆ - ಕರ್ನಾಟಕ ಚರಿತ್ರೆ, ಸಂ. ೬, ಪು. ೨೪೭.
5. ನಾಡಿಗ ಕೃಷ್ಣಮೂರ್ತಿ - ಕರ್ನಾಟಕ ಪತ್ರಿಕೋದ್ಯಮದ ಇತಿಹಾಸ, ಕರ್ನಾಟಕದ ಪರಂಪರೆ, ಸಂ. ೨, ಪು. ೪೧೬.
6. ಎಂ.ಎಸ್. ಸುಂಕಾಪುರ - ಕನ್ನಡ ಆಧುನಿಕ ಕಾಲ, ಕರ್ನಾಟಕದ ಪರಂಪರೆ, ಸಂ. ೨, ಪು. ೪೩೩.
7. ಅದೇ ಪು. ೪೩೩.
8. ಡಾ. ಸೆಬಾಸ್ಟಿಯನ್ ಜೋಸೆಫ್- ಶಿಕ್ಷಣ : ಸಾಂಪ್ರದಾಯಿಕ ರೂಪದಿಂದ ಆಧುನಿಕ ರೂಪದವರೆಗೆ - ಕರ್ನಾಟಕ ಚರಿತ್ರೆ, ಸಂ. ೬, ಪು. ೨೪೭.
9. ಎಂ.ಎಸ್. ಸುಂಕಾಪುರ - ಕನ್ನಡ ಆಧುನಿಕ ಕಾಲ, ಕರ್ನಾಟಕದ ಪರಂಪರೆ, ಸಂ. ೨, ಪು. ೪೩೪.
10. Benedict Anderson - Imagined Communities, , ಪು. ೩೦.
11. ರಾಲ್ಫ್ ಫಾಕ್ಸ್ - ನವಲ - ಪ್ರಜಲು. Novel and the Peopleನ ತೆಲುಗು ಅನುವಾದ) ಪು. ೩೩.
12. ಅದೇ ಪು. ೨೨.

✤ ✤ ✤ ✤

ಪರಾಮರ್ಶನ ಗ್ರಂಥಗಳು

೧. ಕರ್ನಾಟಕದ ಪರಂಪರೆ, ಸಂಪುಟ ೧, ಆದಿಕಾಲ (ಪ್ರಾಗೈತಿಹಾಸಿಕ ಕಾಲದಿಂದ ವಿಜಯನಗರ ಸಾಮ್ರಾಜ್ಯ ಕಾಲದವರಗೆ) ೧೯೯೨, ಪ್ರ: ಕರ್ನಾಟಕ ಸರಕಾರ, ಕನ್ನಡ ಸಂಸ್ಕೃತಿ ಇಲಾಖೆ , ಬೆಂಗಳೂರು.

೨. ಕರ್ನಾಟಕ ಪರಂಪರೆ, ಸಂಪುಟ ೨, ಮಧ್ಯಕಾಲ ಮತ್ತು ಆಧುನಿಕ ಕಾಲ. (ವಿಜಯನಗರ ಕಾಲದಿಂದ ಈಚಿನವರೆಗೆ) ೧೯೯೨, ಪ್ರ: ಕರ್ನಾಟಕ ಸರಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೩. ಕರ್ನಾಟಕದ ಚರಿತ್ರೆ, ಸಂ. ೨, (ಕ್ರಿ.ಶ. ೬೪೦-೧೩೩೬) ಸಂಪುಟ ಸಂಪಾದಕರು : ಪ್ರೊ. ಬಿ. ಸುರೇಂದ್ರರಾವ್, ೧೯೯೭, ಪ್ರ : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೪. ಕರ್ನಾಟಕ ಚರಿತ್ರೆ , ಸಂ. ೧, ಸಂಪುಟ ಸಂಪಾದಕರು : ಪ್ರೊ. ಅ. ಸುಂದರ, ೧೯೯೭, ಪ್ರ : ಮೇಲಿನದೇ.

೫. ಕರ್ನಾಟಕ ಚರಿತ್ರೆ, ಸಂ. ೩, (ಕ್ರಿ.ಶ. ೧೩೩೬-೧೭೬೦) ಸಂಪುಟ ಸಂಪಾದಕರು : ಪ್ರೊ. ಕೆ.ಎಸ್. ಶಿವಣ್ಣ , ೧೯೯೭, ಪ್ರ : ಮೇಲಿನದೇ.

೬. ಕರ್ನಾಟಕ ಚರಿತ್ರೆ , ಸಂ.೫ (ಕ್ರಿ.ಶ. ೧೭೬೦-೧೮೦೦) ಪ್ರಧಾನ ಸಂಪಾದಕರು: ಪ್ರೊ. ಬಿ. ಷೇಕ್ ಅಲಿ, ೧೯೯೭, ಪ್ರ : ಮೇಲಿನದೇ.

೭. ಕರ್ನಾಟಕ ಚರಿತ್ರೆ, ಸಂ.೭ (ಕ್ರಿ.ಶ. ೧೮೦೦-೧೯೦೦) ಸಂಪುಟ ಸಂಪಾದಕರು: ಡಾ. ಸೆಬಾಸ್ಟಿಯನ್ ಜೋಸೆಫ್, . ೧೯೯೭, ಪ್ರ : ಮೇಲಿನದೇ.

೮. ಕರ್ನಾಟಕ ಚರಿತ್ರೆ, ಸಂ. ೬ (ಕ್ರಿ.ಶ. ೧೯೦೦-೧೯೫೬) ಸಂಪುಟ ಸಂಪಾದಕರು: ಪ್ರೊ. ಎಸ್. ಚಂದ್ರಶೇಖರ್ , ೧೯೯೭, ಪ್ರ : ಮೇಲಿನದೇ.

೯. ಕರ್ನಾಟಕ ಏಕೀಕರಣ ಇತಿಹಾಸ, ಡಾ. ಎಚ್.ಎಸ್. ಗೋಪಾಲರಾವ್ , ೧೯೯೬, ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸಂಟ್ ರಸ್ತೆ, ಬೆಂಗಳೂರು - ೫೬೦ ೦೦೧

೧೦. ಪ್ರಾಚೀನ ಭಾರತ, ಆರ್.ಎಸ್. ಶರ್ಮಾ, ೧೯೯೭, ಪ್ರ : ನವಕರ್ನಾಟಕ (ಪ್ರೈ) ಲಿ., ಬೆಂಗಳೂರು - ೫೬೦ ೦೦೧.

೧೧. Making History, Karnataka's People and Their Past, SAKI, Volume I, Stone Age to Mercantilism, 1998, Vimukthi Prakashana, P.O. Box 137, Shimoga - 577201.

೧೨. Social Background of Indian Nationalism, A.R. Desai, 1996, Popular Prakashana Private Limited, 35-C, Pandit Madanmohan Malaviya Marg, Popular Press Bldg, Tardeo, Mumbai - 400034.

೧೩. The National Problem in India Today, A.M. Dyakov, 1966. Nauka Publishing House, Central Dept. of Oriental Literature, Moscow

೧೪. Indian National Congress - How Indian how National ? 1988. R.U.P.E. "Peter Marcell" No. 18, Plot 941/941, A Opp. Prabhadevi Temple, Prabhadevi, Bombay - 400 025

೧೫. Politics and Language, Y.D. Phadke, 1979, Himalaya Publishing House, 4-A/16, Sangeetha, 71, Juhu Road, Bombay - 400054.

೧೬. Imagined Communities, Reflections on the Origin and Spread of Nationalism, Benedict Anderson.

೧೭. ನವಲ-ಪ್ರಜಲು ಮೂಲ, ರಾಲ್ಫ್ ಫಾಕ್ಸ್. ಅನು : ವಲ್ಲಂಪಾಟಿ ವೆಂಕಟಸುಬ್ಬಯ್ಯ, ೧೯೯೨, ಪ್ರ : ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್, ವಿಜ್ಞಾನ ಭವನ, ೪.೧.೪೩೯, ಬ್ಯಾಂಕ್ ಸ್ಟ್ರೀಟ್, ಹೈದರಾಬಾದ್ - ೫೦೦೦೦೧

೧೮. The Culture and Civilization of Ancient India in Historical Outline, D.D. Kosambi, 1997, Vikas Publsihing House Pvt. Ltd., 576, Masjid Road, Jangpura, New Delhi- 110 014.

ಕೃತಿಕಾರರ ಪರಿಚಯ



ಶ್ರೀ ಬಂಜಗೆರೆ ಜಯಪ್ರಕಾಶ ಸಂವೇದನಾಶೀಲ ಕವಿಯಾಗಿ ಸಮಕಾಲೀನ ಒಳನೋಟಗಳ ಸಂಸ್ಕೃತಿ ಚಿಂತಕರಾಗಿ, ಜನಪರ ಕಾಳಜಿಗಳ ಹೋರಾಟಗಾರರಾಗಿ ತರುಣ ತಲೆಮಾರಿನವರ ನಡುವೆ ಪ್ರಸಿದ್ಧರಾಗಿರುವವರು.

ಹುಟ್ಟಿದ್ದು ೧೯೬೫ ಜೂನ್ ೧೭ರಲ್ಲಿ ಸ್ವಂತ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಬಂಜಗೆರೆ.

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪತ್ರಿಕೋದ್ಯಮದಲ್ಲಿ ಬಿ.ಎ. ಪದವಿ, ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೮೭ರಲ್ಲಿ ಎಂ.ಎಸ್.ಡಬ್ಲ್ಯೂ ಸ್ನಾತಕೋತ್ತರ ಪದವಿ, ಕನ್ನಡ ವಿಶ್ವವಿದ್ಯಾನಿಲಯ ಹಂಪಿಯಿಂದ ೧೯೯೯ರಲ್ಲಿ ಡಾಕ್ಟರ್ ಆಫ್ ಲಿಟರೇಚರ್ (ಡಿ.ಲಿಟ್) ಪದವಿ.

ಪ್ರಸ್ತುತದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ, ಕನ್ನಡ ವಿಶ್ವವಿದ್ಯಾಲಯ ಕೈಗೊಂಡಿರುವ 'ಕನ್ನಡ ದೇಸೀಯತೆಯ ನಿರ್ಮಾಣ-ಜನಪದ ಮಹಾಕಾವ್ಯಗಳ ಜೊತೆ ಅನುಸಂಧಾನ' ಯುಜಿಸಿ ಪ್ರಧಾನ ಸಂಶೋಧನಾ ಯೋಜನೆಯಲ್ಲಿ ಸಂಶೋಧನಾ ನಿರತ. ಹಲವಾರು ಪತ್ರಿಕೆಗಳಲ್ಲಿ ಸಾಹಿತ್ಯ ವಿಮರ್ಶೆ ಹಾಗೂ ಅಂಕಣ ಬರವಣಿಗೆ.

ಪ್ರಕಟಿತ ಕೃತಿಗಳು: ಪದಾರ್ಪಣ, ಮಹೂವಾ, ಇದೇ ರಾಮಾಯಣ, ನಾಳೆಗಾದರೂ ಸಿಗದೆ ನಿನ್ನ ತಾವಿನ ಗುರುತು, ಕನ್ನಡ ರಾಷ್ಟ್ರೀಯತೆ, ಬಾಗ್ ಬಹಾದುರ್‌ನ ಸಾವು, ಉಲಿಯ ಉಯ್ಯಲೆ.


ಅನುವಾದಗಳು: ಇಂಗ್ಲಿಷ್‌ನಿಂದ 'ಪ್ರವಾದಿ', 'ತಲೆಮಾರು', 'ಜಾತಿ-ರಾಷ್ಟ್ರದೊಳಗೊಂದು ರಾಷ್ಟ್ರ' 'ಅಗೆತವಿಲ್ಲದ ತೋಟಗಾರಿಕೆ'. ತೆಲುಗಿನಿಂದ- 'ಸಮುದ್ರ ಮತ್ತು ಇತರ ಕವಿತೆಗಳು', 'ಮತ್ತೊಂದು ಪ್ರಸ್ಥಾನ' 'ಲಾಲ್ ಬನೋ ಗುಲಾಮಿ ಛೋಡೋ ಬೋಲೋ ವಂದೇ ಮಾತರಂ', 'ವಸಂತ ಮೇಘ ಘರ್ಜನೆ'

ವಿಳಾಸ: ಡಾ.ಬಂಜಗೆರೆ ಜಯಪ್ರಕಾಶ್
ಕುಂಬಾರ ಕಾಲೋನಿ
ಹಾರೋಹಳ್ಳಿ - ೫೬೨ ೧೧೨ ,
ಕನಕಪುರ ತಾಲ್ಲೂಕು
ಬೆಂಗಳೂರು ಗ್ರಾಮಾಂತರ ಜಿಲ್ಲೆ
ದೂರವಾಣಿ. ೯೪೪೮೨೩೩೮೨೫

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೨ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮